
ಕಸ್ತೂರಿ

ಮನೆಮಂದಿಗೆಲ್ಲ ಮುದ ನೀಡುವ ಮಾಸಿ

ಪ್ರೇಮಪತ್ರ

ಪ್ರಣಯಿ
ಬರೆಯುವ
ಮಹಾಕಾವ್ಯ




ೀಗಿಲೆ ಸೈನ್ಯದ ನಾಯಕ

ವು ! ಕೊಲ್ಲುವಿರೇಕೆ ?

ವಿಶೇಷ ಲೇಖನ

ದಿಯಲ್ಲಿ ಸ್ತ್ರೀ ಬದುಕು





M. K. Publicity

ಚಿಂತನೆ

"'ಅಜ್ದಕ್ ನ್ಯಾಯ'ವೆಂದೂ ಅನ್ಯಾಯವಲ್ಲ. ಅನುಪಮ ಆತನ ನ್ಯಾಯದಾನದ ರೀತಿ. ಅಪೂರ್ವ ಆತನ ತೀರ್ಪು. ಹೊರಗೆ ಹುಚ್ಚನಂತೆ ಕಂಡರೂ ಒಳಗೊಳಗೇ ಆತ ನೀತಿ-ನೇತಿಗಳನ್ನು ತೂಗಿ ನೋಡಬಲ್ಲ..."

ಜಗದ್ವಿಖ್ಯಾತ ನಾಟಕಕಾರ ಬರ್ಟೋಲ್ಟ್ ಬ್ರೆಖ್ಟ್‌ನ 'ದಿ ಕಕೇಶಿಯನ್ ಚಾಕ್ ಸರ್ಕಲ್'ನ ಪ್ರಖ್ಯಾತ ಪಾತ್ರ, ಈ ಅಜ್ದಕ್.

ಅಜ್ದಕ್‌ನಂಥವರಿದ್ದರೆ ನಮಗೆ ಇಂಥ 'ಉಗಾದಿ ಉಡುಗೊರೆ' ಖಂಡಿತ ಸಿಕ್ಕುತ್ತಿರಲಿಲ್ಲ. ಕನ್ನಡಿಗರು ಕಾವೇರಿಗೆ ಕೃಷ್ಣಾರ್ಪಣ ಅನ್ನಬೇಕಿರಲಿಲ್ಲ. ಕಾವೇರಿ ನೀರಿನ ವಿಷಯದಲ್ಲಿ ಕನ್ನಡಿಗರು ಕುಂತಿಯ ಮಕ್ಕಳು. ಇನ್ನೂರು ವರ್ಷಗಳಿಂದ ಈ ಸಂಬಂಧದಲ್ಲಿ ತಪ್ಪುದಾಳಗಳನ್ನೆಸೆಯುತ್ತಲೇ ಬಂದಿದ್ದಾನೆ ಶಕುನಿ. ಹೀಗಾಗಿ ಸಮತಟ್ಟಿನ ಬದಲು ತಗ್ಗಿದ್ದೆಡೆಗೇ ಒಲ್ಲದ ಮನಸ್ಸಿನಿಂದ ನುಗ್ಗಬೇಕಾಗಿದೆ ಕಾವೇರಿ.

"ನಿಮ್ಮಂಗಳದ ತೆಂಗಿನಮರ ನಮ್ಮಂಗಳದ ಮೇಲೆ ಬಾಗಿಕೊಂಡಿದೆ; ಕಾಯಿ ಕೀಳುವುದಾದರೆ ನಮ್ಮನ್ನು ಕೇಳಿ," ಎಂಬುದು ತಮಿಳರ ಹಟ್ಟು.

"ಹಾಗಲ್ಲ, ಹಂಚಿಕೊಳ್ಳೋಣ ಬೇಕಿದ್ದರೆ. ಹಂಚಿಕೊಂಡು ಬಾಳೋಣ" - ಕನ್ನಡಿಗರ ಔದಾರ್ಯದ ನುಡಿ.

"ಹಾಗೇ ಆಗಲಿ. ಹಂಚಿಕೊಳ್ಳೋಣ ಅದಕ್ಕೇನಂತೆ. ಕೊಬ್ಬರಿ ನಮಗೆ - ಕರಟ ನಿಮಗೆ" ಎನ್ನುತ - ಚೊನ್ನಡಗಳ ಮೊಂಡುವಾದ.

ನ್ಯಾಯಮಂಡಲಿಯ ಮಧ್ಯಂತರ ತೀರ್ಪು ಈಗ ಅಂತಿಮ ತೀರ್ಮಾನವಾಗಿ ಹೊರಬಿದ್ದಿದೆ. ನಮ್ಮ ಕೈಗೆ ಕರಟ ಬಂದಿದೆ. ಕೇಂದ್ರ ಮಧ್ಯಸ್ತಿಕೆ ವಹಿಸಬೇಕೆಂಬ ಆಶಯ ವ್ಯಕ್ತಪಟ್ಟಿದೆ. ಕಾವೇರಿಯಲ್ಲಿ ನೀರು ಹರಿಯುವ ವರೆಗೂ ಕಾದು ನೋಡುವ ದೌರ್ಭಾಗ್ಯವಂತೂ ತಪ್ಪಿದ್ದಲ್ಲವೇನೋ. ಯಾಕೆಂದರೆ ಇಂಥ ಹಲವಾರು 'ಕಾದು ನೋಡುವಿಕೆ'ಗಳು ನಿರಂತರ ನಡೆದೇ ಇವೆ.

ನಾವು ಕಳೆದುಕೊಳ್ಳುತ್ತಲೇ ನಡೆದಿದ್ದೇವೆ: 'ಜ್ಞಾನಗಂಗೋತ್ರಿ,' ನಿರಂಜನರನ್ನ, 'ಕ್ರಾಂತಿಕೂಟ'ದ ಕರ್ತೃ ಕಡಿದಾಳ ಮಂಜಪ್ಪನವರನ್ನ......

ನೀರು ಜತೆಗೆ ಕಣ್ಣೀರು ಕಳಕೊಂಡವರಾಗಬೇಕೆ ಕನ್ನಡಿಗರು ?

● ವ್ಯವಸ್ಥಾಪಕ ಸಂಪಾದಕರು



ಡಯಾಬಿಟಿಸ್ ಲೇಖನದಲ್ಲಿ (ಫೆಬ್ರವರಿ92) 'ಮೇದೋಜನಕವು ಉತ್ಪತ್ತಿ ಮಾಡುವ ಇನ್ಸುಲಿನ್ ಕೊರತೆಯೇ ಮಧುಮೇಹಕ್ಕೆ ಕಾರಣ. ಮೇದೋಜನಕದ ತಾಟಸ್ಥ್ಯಕ್ಕೆ ಕಾರಣ ತಿಳಿದಿಲ್ಲ' ಎಂದಿದೆ. ಈ ದೆಸೆಯಲ್ಲಿ ಕಾರಣ ಕೊಡುವ ಪ್ರಯತ್ನ-

ಚಿಕ್ಕಂದಿನಿಂದ ವ್ಯಾಯಾಮ ಅಥವಾ ಶ್ರಮದ ದುಡಿಮೆಯಲ್ಲಿ ಬೆಳೆದವರಿಗೆ (ಕಾರ್ಮಿಕರು, ರೈತರು, ಅಲೆಮಾರಿಗಳು, ಗ್ರಾಮೀಣ ಮಹಿಳೆಯರು, ಭಿಕ್ಷುಕರು ಇತ್ಯಾದಿ) ಈ ಕಾಯಿಲೆ ಬಂದ ಉದಾಹರಣೆಗಳು ಕಡಿಮೆ. ಶರೀರದ ಯಾವುದೇ ಅಂಗಕ್ಕೆ ನಿಯಮಿತ ಕೆಲಸವಿಲ್ಲದಾಗ ಅದು ಸುಮ್ಮನಾಗುತ್ತದೆ. ಪೋಷಕಾಂಶಗಳ ಆಹಾರ ಸೇವಿಸಿದರೂ ಅದು ಜೀರ್ಣಾಂಗಗಳ ಪ್ರಯತ್ನದಿಂದಲೇ ಜೀರ್ಣವಾಗುವ ಅವಕಾಶ ನೀಡದೆ, ಜೀರ್ಣಕಾರಕಗಳ ಬಳಕೆ ಮಾಡಿದಾಗ ಅನೇಕ ಅಂಗಗಳು ತಟಸ್ಥವಾಗುತ್ತವೆ. ಗಡಿಯಾರಕ್ಕೆ ಕೀ ಕೊಟ್ಟಾಗಲೇ ಚಲನೆಯಾಗುವಂತೆ, ಶರೀರಕ್ಕೆ ದುಡಿಮೆ ಅಥವಾ ವ್ಯಾಯಾಮವೇ ಕೀಲಿಕೈ. ಈ ದಿಸೆಯಲ್ಲಿ ವಿಜ್ಞಾನಿಗಳು ಗಮನಹರಿಸಿಯಾರೆ?

ಗುಡಿಬಂಡೆ — **ಸುರೇಶ್ ಜೈನ್**

○

'ಹಳ್ಳಿಯ ಜಲಶಿಲ್ಪಿಗಳು'(ಏಪ್ರಿಲ್92) ಆಧಾರಭೂತವಾದದ್ದು. ಭೂಗರ್ಭಶಾಸ್ತ್ರಜ್ಞರು ನಿರ್ಜಲ ಪ್ರದೇಶ ಎಂದು ಪ್ರಮಾಣೀಕರಿಸಿದ ಎಷ್ಟೋ ಕಡೆ ಸಂಗಯ್ಯನವರು ತಮ್ಮ ಬೇವಿನಕಡ್ಡಿಯ ಸಹಾಯದಿಂದ ನಾಲ್ಕು ಇಂಚಿನಷ್ಟು ನೀರನ್ನು ಹೊರತಂದಿದ್ದಾರೆ. ವಿಜ್ಞಾನಕ್ಕೂ ಸವಾಲಾಗಿರುವ ಇವರ ಜ್ಞಾನದ ಬಗ್ಗೆ ಭೂಗರ್ಭಶಾಸ್ತ್ರಜ್ಞರು ಪರಿಶೀಲಿಸುವುದು ಅಗತ್ಯ.

ಕಮ್ಮತ್ತಹಳ್ಳಿ — **ಕಲಿವೀರ ಕಳ್ಳಿಮನಿ**

○

ಕವಲು ಕಡ್ಡಿಯ ತಿರುಗುವಿಕೆ (ಬಾಗುವಿಕೆಗಳೇ) ನೀರುಳ್ಳ ಭೂಪದರುಗಳ ಸಂಕೇತವಲ್ಲ. ಕಡ್ಡಿ ಬಾಗುವಲ್ಲೆಲ್ಲಾ ನೀರು ಸಿಗುವುದಿಲ್ಲ. ಕಡ್ಡಿ ಬೇರೆ ಬೇರೆ ಕಾರಣಗಳಿಂದಲೂ ಬಾಗಬಹುದು. ಅನೇಕ ವಿಧದ ಹುಸೀ ಸಸ್ಯಗಳ ಕವಲಿನ ಸಹಾಯದಿಂದ ಅತ್ಯಂತ ಕರಾರುವಕ್ಕಾಗಿ ನೀರು ಸಿಗುವ ಜಾಗೆಯನ್ನು ನುರಿತ ಜಲಶಿಲ್ಪಿ ಗುರ್ತಿಸಬಲ್ಲ. ಆರು ವರ್ಷಗಳಿಂದ ಈ ಬಗೆಗೆ ಆಸಕ್ತನಾಗಿ ಕುತೂಹಲದಿಂದ ಕೆದಕಿ ಕೆದಕಿ ಅರಿತುಕೊಂಡದ್ದರ ಆಧಾರದಿಂದ ಮೇಲಿನ ಮಾತುಗಳನ್ನು ಹೇಳಿದ್ದೇನೆ.

ಹುಳಿಯಾರು — **ಚಿ. ಈಶ್ವರಪ್ಪ**

○

'ಜೀವ ಹಿಂಡುವ ಕ್ರಿಮಿನಾಶಕಗಳು' (ಏಪ್ರಿಲ್ 92) ಲೇಖನದಲ್ಲಿ ಹಸುರೆಲೆ ಗೊಬ್ಬರದ ಉಪಯೋಗಕ್ಕೂ ಕ್ರಿಮಿನಾಶಕಗಳ ಬಳಕೆಗೂ

ಕಸ್ತೂರಿ

'ಟಿ.ವಿ. ಚಾಣಕ್ಯನ ಸುತ್ತಮುತ್ತ' (ಕಸ್ತೂರಿ, ಮಾರ್ಚ್ 92) ಲೇಖನಕ್ಕೆ ಪ್ರತಿಕ್ರಿಯಾರೂಪವಾಗಿ ಬಂದ ಪತ್ರಗಳನ್ನು ಪುಟ 113ರಲ್ಲಿ ಪ್ರಕಟಿಸಲಾಗಿದೆ.

– ಸಂಪಾದಕ

ಸಂಬಂಧ ಕಲ್ಪಿಸಲಾಗಿದೆ. ಬೆಳೆ ಉತ್ಪಾದನೆಯಲ್ಲಿ ಇವೆರಡರ ಪಾತ್ರ ಬೇರೆ ಬೇರೆಯಾಗಿದ್ದು, ಇವುಗಳೊಳಗೆ ಯಾವ ಸಂಬಂಧವೂ ಇರುವುದಿಲ್ಲ. ಹಸುರೆಲೆಗೊಬ್ಬರವನ್ನು ಉಪಯೋಗಿಸಿ ಕೀಟನಾಶಕಗಳ ಬಳಕೆಯನ್ನು ಕಡಿಮೆ ಮಾಡಬಹುದೇ?

ಮಂಗಳೂರು ಪಿ.ಎಸ್. ರೈ

O

ಮಾರ್ಚ್ ಸಂಚಿಕೆಯ 'ದೇವರು' (ಒಂದು ಪುಸ್ತಕ) ಲೇಖನದೊಂದಿಗೆ ಪ್ರಕಟವಾದಂತೆ ಎ.ಎನ್.ಮೂರ್ತಿರಾಯರ ಬೆಂಗಳೂರು ವಿಳಾಸದ ಪಿನ್ ಕೋಡ್ 560 024 ಅಲ್ಲ. 560094 ಸರಿ.

ಬೆಂಗಳೂರು ಬಿ.ಎನ್. ನಂಜುಂಡಯ್ಯ

O

ಎಪ್ರಿಲ್ ಸಂಚಿಕೆಯ ಮುಖಪುಟದ ಮೇಲೆ 'ಅಸ್ತಮಾಕ್ಕಿಲ್ಲಿದೆ ನೆಮ್ಮದಿಯ ಮದ್ದು?' ಎಂಬ ನಿರಾಶಾದಾಯಕ ಶೀರ್ಷಿಕೆ ಇದೆ. ಆದರೆ ಒಳಗೆ 'ಅಸ್ತಮಾ' ಅದಕ್ಕಿಲ್ಲಿದೆ ಮದ್ದು' ಎಂದು ಪ್ರತಿಪಾದಿಸುತ್ತದೆ ಲೇಖನ. ಇದು ಅನಗತ್ಯ ಗೊಂದಲವಲ್ಲವೆ?

ಕಾಡ್ರೊಳ್ಳಿ ವೈ.ಸಿ. ಮೇಲಿನಮನಿ

O

ಮುಖಪುಟದ ಪ್ರಶ್ನೆಗೆ ಒಳಪುಟದಲ್ಲಿ ಪರಿಹಾರ ದೊರಕುತ್ತದೆ. ಗೊಂದಲವೆಲ್ಲಿಯದು?

– ಸಂ.

O

ಪ್ರತಿ ತಿಂಗಳು ಉತ್ತಮ ಪುಸ್ತಕ ಪರಿಚಯವಾಗಲಿ. ಆಧುನಿಕ ಭಾರತೀಯ ಸಾಹಿತಿಗಳ, ಕಲಾವಿದರ ಪರಿಚಯ ಲೇಖನಗಳು ಬರಲಿ.

ಕಡಪ ಪಾವಮದ್ದಿ ಹನುಮದ್‌ಶಾಸ್ತ್ರಿ

O

ಜಿ.ಆರ್. ರಂಗಸ್ವಾಮಯ್ಯನವರು ಇಂಡೋನೇಶಿಯಾದ ಆದಿವಾಸಿಗಳು ಸಾಗೋಪಾಮ್ ಹಿಟ್ಟನ್ನು ತಿನ್ನುತ್ತಾರೆಂದು (ಮಾರ್ಚ್ 92) ಆಶ್ಚರ್ಯ ವ್ಯಕ್ತಪಡಿಸಿದ್ದಾರೆ. ಆದರೆ ಕರ್ನಾಟಕದ ಕೆಲವು ಬಡಜನರು ತಾಳೆ ಮರದ ಹಿಟ್ಟನ್ನು ತಿನ್ನುತ್ತಾರೆ. ಇತ್ತೀಚೆಗೆ ಇದು ಸ್ವಲ್ಪ ಕಡಿಮೆಯಾಗಿದೆ. ತಾಳೆಮರ ಹಾಗೂ ಸಾಗೊಪಾಮ್ ಒಂದೇ ಕುಟುಂಬಕ್ಕೆ ಸೇರಿವೆ.

ಶಿವಮೊಗ್ಗೆ ಕೆ.ಎಂ. ಭಟ್

O

''ಅತ್ಯಂತ ಚಿಕ್ಕ ಶಿಶು ಮತ್ತು ಅತ್ಯಂತ ಕಿರಿಯ ತಾಯಿ'' ಲೇಖನದಲ್ಲಿ (ಮಾರ್ಚ 92) ವಿವರಿಸಿದಂತೆ ಈ ಮಗುವಿನ ತಾಯಿ (ಒಂಬತ್ತು ವರ್ಷ) ಅತ್ಯಂತ ಚಿಕ್ಕವಳಲ್ಲ.

ಕೇವಲ ಐದು ವರ್ಷದ 'ತಾಯಿ'ಯ ಕುರಿತು ಕಸ್ತೂರಿಯ 1960 ಮಾರ್ಚ್ ಸಂಚಿಕೆಯಲ್ಲಿ 'ಐದು ವರ್ಷದ ತಾಯಿ' ಎಂಬ ಶೀರ್ಷಿಕೆಯಡಿ ಪ್ರಕಟವಾಗಿತ್ತು. ಲೀನಾ ಎಂಬ ಹೆಸರಿನ ಈ ಬಾಲೆ ಪೆರು ದೇಶದ ಚಿಕ್ರಾಪೋ ಗ್ರಾಮದ ರೈತನ ಮಗಳು. 1939ರಲ್ಲೇ ಜನಿಸಿದ ಈ ಮಗು ಯಾವ ಕುಂದು-ಕೊರತೆಯಿಲ್ಲದೆ ಇತರ ಹುಡುಗರಂತೆಯೇ ಬೆಳೆದನೆಂದು ಪ್ರಕಟವಾಗಿತ್ತು.

ಕಾರ್ಕಳ ಕೆ. ಶ್ರೀಧರ ಪೈ

ಈ ಸಂಚಿಕೆಯ ಪುಟ 94ರಲ್ಲಿ ಪ್ರಕಟವಾದ 'ಮನಸ್ಸನ್ನು ಓದುವ ಕುದುರೆ' ಲೇಖನದ ಜೊತೆ ಈ ವಿವರಗಳನ್ನು ಓದಿಕೊಳ್ಳಿ:

ದೇವರು ದೆವ್ವ ವಿಜ್ಞಾನ
(ಡಾ. ಕೋವೂರ್ ಲೇಖನಗಳು)

ಸಂಪಾದಕ:
ಡಾ. ಪುರುಷೋತ್ತಮ ಬಿಳಿಮಲೆ

ಪ್ರಕಾಶನ:
ನವಕರ್ನಾಟಕ ಪ್ರಕಾಶನ ಪ್ರೈ.ಲಿ.,
ಎಂಬೆಸಿ ಸೆಂಟರ್, ಕ್ರೆಸೆಂಟ್ ರಸ್ತೆ,
ಬೆಂಗಳೂರು–560 001
ಬೆಲೆ: ರೂ. 18–00

ಸಂಪುಟ : 36 ಸಂಚಿಕೆ : 9

ಮೇ 1992

ಕಸ್ತೂರಿ

ಕನ್ನಡ ಡೈಜೆಸ್ಟ್

ವ್ಯವಸ್ಥಾಪಕ ಸಂಪಾದಕ :

ಕೆ.ಶಾಮರಾವ್

○

ಸಂಪಾದಕ :

ಎನ್.ವಿ. ಜೋಶಿ

○

ನಿರ್ವಹಣೆ :

ರವಿ ಬೆಳಗೆರೆ

ಚಂದಾದಾರರಿಗೆ ಸೂಚನೆ

'ಕಸ್ತೂರಿ' ತಿಂಗಳ 1ನೇ ದಿನಾಂಕದೊಳಗೆ ಪ್ರಕಟವಾಗುವುದು. ತಿಂಗಳ 5ನೇ ದಿನಾಂಕದೊಳಗೆ ತಲುಪದೇ ಹೋದರೆ ಚಂದಾದಾರರು ತಮ್ಮ ಟಪಾಲು ಕಚೇರಿಯಲ್ಲಿ ಮೊದಲು ವಿಚಾರಿಸಿ ಅನಂತರ ನಮಗೆ ತಿಳಿಸಬೇಕು. ಪತ್ರ, ವ್ಯವಹಾರ ಮಾಡುವಾಗ ಚಂದಾ ನಂಬರು ಹಾಕಿರಬೇಕು.

○○○○○

ಹೊಸ ಚಂದಾ ದರಗಳು

ಬಿಡಿ ಸಂಚಿಕೆ	....	ರೂ. 5-00
1 ವರ್ಷಕ್ಕೆ	ಅಂಚೆ ಸೇರಿ	ರೂ.60-00
2 ವರ್ಷಕ್ಕೆ	ಅಂಚೆ ಸೇರಿ	ರೂ.110-00
3 ವರ್ಷಕ್ಕೆ	ಅಂಚೆ ಸೇರಿ	ರೂ.150-00

ಕಸ್ತೂರಿ ಕಾರ್ಯಾಲಯ,
ಕೊಪ್ಪೀಕರ ರಸ್ತೆ,
ಹುಬ್ಬಳ್ಳಿ - 580020

ಅಂತರಂಗ

ಬೆಳಕಿಂಡಿ

- ★ ಮನುಷ್ಯ ಇರುವುದೇ ಸೃಷ್ಟಿಸಲೆಂದು; ಕವಿಯಿಂದ ಕುಂಬಾರನವರೆಗೆ ಇದು ಅನ್ವಯಿಸುತ್ತದೆ.

  – ಬೆಂಜಾಮಿನ್ ಡಿಸ್ರೇಲಿ

- ★ ಅಪರಾಧವನ್ನು ಹಿಂಬಾಲಿಸುವ ಭಯವೇ ಒಂದು ಬಗೆಯ ಶಿಕ್ಷೆ.

  – ವಾಲ್ಟೇರ್

- ★ ಕ್ರೌರ್ಯಕ್ಕೆ ಕ್ರೌರ್ಯದ ಹೊರತು ಬೇರ ಉದ್ದೇಶವಿರಬೇಕೆಂದೇನಿಲ್ಲ: ಅದಕ್ಕೊಂದು ಅವಕಾಶ ಒದಗಬೇಕಷ್ಟೆ.

  – ಜಾರ್ಜ್ ಇಲಿಯಟ್

- ★ ತಣ್ಣಗೆ ಕೂಡುವ ವ್ಯಕ್ತಿಗಿಂತ ತಪ್ಪಿಸಿಕೊಂಡು ಓಡಲು ಯತ್ನಿಸುವವನೇ ಅಪಾಯವನ್ನು ಹೆಚ್ಚು ತೀವ್ರವಾಗಿ ಎದುರಿಸಬೇಕಾಗುತ್ತದೆ.

  – ಜವಾಹರಲಾಲ್ ನೆಹರೂ

- ★ ತನ್ನ ಮೂಲಭೂತ ತತ್ವಗಳ ಬಗ್ಗೆ ತಾನೇ ಸಂಶಯ ಎಬ್ಬಿಸಿಕೊಳ್ಳುವುದು ನಾಗರಿಕ ವ್ಯಕ್ತಿಯ ಲಕ್ಷಣ.

  – ಒಲಿವರ್ ವೆಂಡೆಲ್ ಹೋಮ್ಸ್


ಪುಸ್ತಕ ವಿಭಾಗ

ಆರೋಗ್ಯದಂಗಳ

ತಿಂಗಳ ವ್ಯಕ್ತಿ

ಡಾ. ಗಂಗೂಬಾಯಿ ಹಾನಗಲ್

ಎಂಭತ್ತರ ಅಂಚಿನಲ್ಲಿ ಧುಮುಕುತ್ತಿರುವ ಸಂಗೀತ ಗಂಗಾವತಾರ



• ಎಸ್ಕೆ

'ಎನಗಿಂತ ಕಿರಿಯರಿಲ್ಲ' ಎಂಬ ತುಸು ಕುಬ್ಜ ನಿಲುವಾದರೂ 'ಮೂರ್ತಿ ಚಿಕ್ಕದಾದರೂ ಕೀರ್ತಿ ದೊಡ್ಡದು' ಎಂಬ ನಾಣ್ಣುಡಿ ಇವರನ್ನೇ ಕುರಿತು ಪ್ರತೀತಿ ಪಡೆದಂತಿದೆ. ಆಸೇತು-ಹಿಮಾಚಲ ಪರ್ಯಂತವಷ್ಟೇ ಅಲ್ಲ, ಸಮುದ್ರದಾಚೆಗೂ ಅವರ ಕೀರ್ತಿವಿಮಾನ ಪಯಣಗೈದಿದೆ. ಪ್ರಶಸ್ತಿ ಪುರಸ್ಕಾರಗಳ ತರತರದ ಸರಮಾಲೆಗಳು ಈ 'ಭಾರತೀಕಂಠ'(1948ರ ಪ್ರಶಸ್ತಿ)ವನ್ನಲಂಕರಿಸಿದ್ದರೂ ಯಾರಾದರೂ ಸಂದರ್ಶಕರು ಇವರ ಸಿದ್ಧಿ-ಪ್ರಸಿದ್ಧಿ, ಬಿರುದು ಬಾವಲಿಗಳ ಬಗ್ಗೆ ಮಾತೆತ್ತಿದರೆ ಅವರಿಗೆ 'ಎಂಬರಾಸ್ಸಿಂಗ್' ಎನಿಸಿ ಉಪಾಯದಿಂದ ವಿಷಯಾಂತರಮಾಡಿಬಿಡುತ್ತಾರೆ. ಇಷ್ಟು ಸರಳ, ಇಷ್ಟು ಸಾದಾ, ಇಷ್ಟು ಸೀದಾ ಇವರ ಇರವು. ಪ್ರಶಸ್ತಿ ಬಂದಾಗೊಮ್ಮೆ, ಹುಟ್ಟುಹಬ್ಬಕ್ಕೊಮ್ಮೆ, ಅವಾರ್ಡ್ ದೊರೆತಾಗೊಮ್ಮೆ ಸಂದರ್ಶಕರು ಮುಗಿಬೀಳುತ್ತಾರೆ. ಹಾಗೆಂದು ಯಾರನ್ನೂ ದೂರಮಾಡುವುದಿಲ್ಲ. ಆದರೆ- ''ಮತ್ತ ಮತ್ತ ಹೇಳಿದ್ದ ಹೇಳಲಿಕ್ಕ ಬ್ಯಾಸರಾ'' ಅನ್ನುತ್ತಾರೆ. ಎಂದರೆ ಸ್ವಪ್ರಸಿದ್ಧಿಯ ಬಗ್ಗೆ ಉತ್ಸುಕತೆಯೆಂಬುದೇ ಇಲ್ಲ. ಇಷ್ಟೇ ಅಲ್ಲ ಒಂದು ಬಗೆಯ ಉದಾಸೀನತೆ, ಅಲರ್ಜಿ ಎನ್ನೋಣ ಬೇಕಾದರೆ.

ಡಾ. ಗಂಗೂಬಾಯಿ ಹಾನಗಲ್ ತಮ್ಮ ವಯಸ್ಸಿನ ಎಂಭತ್ತನ್ನು ಪ್ರವೇಶಿಸಿದ್ದಾರೆ. ತಮ್ಮ ಎಂಭತ್ತರ ಹುಟ್ಟುಹಬ್ಬವನ್ನವರು ಆಚರಿಸಿದುದು ಜರ್ಮನಿಯಲ್ಲಿ! ಎಂಭತ್ತರ ಖ್ಯಾತಿ ಇಂದು ಪ್ರಪಂಚವನ್ನೇ ವ್ಯಾಪಿಸಿದೆ!

ಗಂಗೂಬಾಯಿ ಅವರಲ್ಲಿ ನಾನು ಕಂಡ ಅತ್ಯಂತ ಮೌಲಿಕ ಗುಣವೆಂದರೆ ಅವರ ಮಾನವೀಯತೆ. ಇಂದು ಎಷ್ಟೋ ಹಿಂದುಳಿದ ಜಾತಿಯ ನಿರುದ್ಯೋಗಿ ತರುಣರಿಗೆ ಅವರೊಂದು ಆಶಾದೀಪವಾಗಿದ್ದಾರೆ. ಭರವಸೆಯ ತರುಣರಿಗೊಂದು ನೌಕರಿ ದೊರಕಿಸಲು ಗಂಗೂಬಾಯಿ ತಾವು ಗಳಿಸಿದ ಪುಣ್ಯವನ್ನು 'ತುಳಸಿಯ ಉದಕ'ದಂತೆ ವೆಚ್ಚಮಾಡುತ್ತಾರೆ. ಕಲೆಯ ಕ್ಷೇತ್ರಗಳಲ್ಲಿ ಎಲ್ಲೆಲ್ಲಿ ಅನ್ಯಾಯವಾಗಿದೆಯೊ ಅಲ್ಲೆಲ್ಲಾ ಅವರು ಗುಡುಗು ಹಾಕಿ ಸರಕಾರವನ್ನು ಎಚ್ಚರಿಸುತ್ತಾರೆ; ಅಕಾಡೆಮಿಗಳಲ್ಲಿ ಅರಿವು ಮೂಡಿಸುತ್ತಾರೆ.

ಕಳೆದ ಕೆಲದಿನಗಳಿಂದ ಡಾ. ಗಂಗೂಬಾಯಿ ಹಾನಗಲ್ ಅವರು ರಾಜ್ಯ ವಿಧಾನ ಪರಿಷತ್ತಿನ ನಾಮಿನೇಟೆಡ್ ಸದಸ್ಯೆಯಾಗಿ ಕಾರ್ಯ ಮಾಡುತ್ತಿದ್ದಾರೆ. ಅನಾಥ ನಟನಟಿಯರು, ದಿಕ್ಕಿಲ್ಲದ ಕಲಾವಿದ ಕಲಾವಿದೆಯರು, ವಾದ್ಯಕಾರರು,

ಸಂಗೀತಗಾರರು, ಸಂಗೀತಗಾತಿಯರು ಇಂಥವರೆಲಯಲ್ಲ ಹಸಿದ ಹೊಟ್ಟೆಯಿಂದ ಸಂಗೀತಸ್ವರಗಳನ್ನು ಹೊರಡಿಸುವುದು ಹೇಗೆ? ಡಾ.ಗಂಗೂಬಾಯಿ ಇಂತಹ ಅಸಹಾಯ ಕಲಾಲೋಕಕ್ಕೆ 'ಬಾಯಿ' ಆಗಿದ್ದಾರೆ. ಅವರ ಶೋಚನೀಯ ಪರಿಸ್ಥಿತಿಯನ್ನು ಸರಕಾರಕ್ಕೆ ಕೇಳಿಸಿ ಶ್ರುತಿಮಾಡುತ್ತಾರೆ (ಅರ್ಥಾತ್ ಕಿವಿ ಹಿಂಡುತ್ತಾರೆ).

"ಇತ್ತಿತ್ತಲಾಗಿ ನಾನು ಸಂಗೀತಕ್ಕಿಂತಾ ಭಾಷಣ ಮಾಡೋದ ಹೆಚ್ಚಾಗೇದ" ಎಂದು ಹೇಳುತ್ತಾರೆ ಗಂಗೂಬಾಯಿ. ಅದು ಸುಳ್ಳಲ್ಲ. ತಂಬೂರಿಯನ್ನು ಕೆಲಕಾಲ ತೆಗೆದಿಟ್ಟು ತಬ್ಬಲಿ ಕಲಾವಿದರ ಕೈವಾರಿಯಾಗಿ ಕಾರ್ಯ ಮಾಡುತ್ತಿರುವ ಈ ತಾಯಿ ಹೃದಯಕ್ಕೆ ಅದೆಷ್ಟು ಹವ್ಯಾಸಿ ಕಲಾವಿದರು ಋಣಿಯಾಗಿದ್ದಾರೆ! ಗಂಗೂಬಾಯಿ ಅವರದು ತಾಯಿಯಿಂದ ಪಡೆದ ತಾಯಿ ಹೃದಯ!

1971ರಲ್ಲಿ ಗಂಗೂಬಾಯಿ ಅವರಿಗೆ ಪದ್ಮಭೂಷಣ ಪ್ರಶಸ್ತಿ ಘೋಷಿಸಲ್ಪಟ್ಟಾಗ ಫೋನ್ ಮಾಡಿ ಅವರಿಗೆ ಅಭಿನಂದನೆ ಹೇಳಿದೆ. ಅವರು ಗದ್ಗದಿತರಾಗಿ ಮಾತಾಡುವುದನ್ನು ಕಂಡು ಗಾಬರಿ ಆಯಿತು. "ಹಿಂಗ್ಯಾಕ್ರಿ?" ಎಂದೆ. "ಏನು ಮಾಡ್ಲಿ ಚೂರು-ಚಾರಕ್ಕೆಲ್ಲ ತಾಯಿ ನೆನಪಾಗಿಬಿಡತದ. ಸಂತೋಷಪಡುವವರು ಮನೆಯೊಳಗಿದ್ದರ ಇಂಥಾ ಪ್ರಶಸ್ತಿಗಳು ಸಿಕ್ಕದ್ದಕ್ಕ ಛಂದ...." ಎಂದು ತಮ್ಮ ತಾಯಿ, ಮಾಮಾ, ಗುರುಗಳನ್ನು ನೆನೆದು ಭಾವೋದ್ಗಾರ ತೆಗೆದರು. "ಈ ಕಾಲಕ್ಕ ನಮ್ಮ ಗುರುಗಳು ಇದ್ದಿದ್ದರ ಅವರಿಗೆ ಎಷ್ಟೆಷ್ಟು ಬಿರುದಾವಳಿ, ಅವಾರ್ಡುಗಳು ಬರುತ್ತಿದ್ವೊ ಏನೊ! ಏನೂ ಇಲ್ಲದೆ- ನಮ್ಮ ಗುರುಗಳ ವಿದ್ಯಾದೊಳಗ ನಾಲ್ಕಾಣೆಯಷ್ಟು ಕೂಡಾ ನಮ್ಮೊಳಗಿಲ್ಲ. ಅಂಥಾದ್ದು ಇಷ್ಟೆಲ್ಲಾ ನಮ್ಮ ಸಡಗರ...." ಎಂದೆಲ್ಲಾ ಗಂಗೂಬಾಯಿ ನುಡಿದಾಗ ಅವರ ಸ್ಫಟಿಕದಂತಹ ಮನಸ್ಸು ಆ ಮಾತಿನ ಕನ್ನಡಿಯಲ್ಲಿ ಮೂಡಿತ್ತು.

ಗಂಗೂಬಾಯಿ ಬದುಕಿನ ಕಷ್ಟನಿಷ್ಠುರಗಳೊಳಗಿಂದ ಹಾಯ್ದು ಬಂದವರು. ಪ್ರತಿಷ್ಠಿತ ಸಮಾಜದ ಕಣ್ಣಿಗೆ ಕಡಿಮೆಯವರಾಗಿ ಕಂಡವರು ಇವರ ಮನೆತನದವರು. "ಧಾರವಾಡದಾಗ ಮಡಿವಂತರ ಮನೀಗೆ ಊಟಕ್ಕ ಕರೆದಾಗ ನಮಗ ಹೊರಗೇ ಪ್ರತ್ಯೇಕವಾಗಿ ಎಲೆಬಡಿಸುತ್ತಿದ್ದರು. ಊಟ ಆದಮ್ಯಾಲೆ ಕೈಸಂಗತೀಲೆ ನಮ್ಮ ಎಲೆ ನಾವು ಬಳಕೊಂಡ ಹೋಗತಿದ್ವಿ." ಗಂಗೂಬಾಯಿ ನಗುನಗುತ್ತಲೆ ಈ ಮಾತು ಹೇಳುತ್ತಿದ್ದರೂ ಉಚ್ಚಜಾತಿಯವರಿಂದ ಬಾಲ್ಯದಲ್ಲಿ ಅವರು ಅನುಭವಿಸಿದ ಅವಹೇಳನೆ ಒಳಗೆ



ಎಲ್ಲಿಯೊ ಕುಟುಕುತ್ತಿದ್ದಿರಬೇಕು. ಹೊರಗೆ ನಗೆಯಿದ್ದರೂ ಒಳಗೆ ಹೊಗೆ ಸುತ್ತಿಕೊಂಡಿರುತ್ತಿತ್ತು.

"ಧಾರವಾಡದಾಗ ಶುಕ್ರವಾರ ಪ್ಯಾಟಿಯೊಳಗ ನಮ್ಮ ತಾಯಿ ಜೋಡಿ ನಾವೆಲ್ಲ ಇರಬೇಕಾದರ ಆ ಓಣಿಯವರ ಹಾಂಗ ನಮ್ಮ ತಾಯಿ ಮನೆಯ ಶಿಸ್ತು ಇಟ್ಟಿರುತ್ತಿದ್ದಳು. ಮುತ್ತಲ ಎಲಿ ಸುಗ್ಗಿಯೊಳಗ ಮನಿಯೊಳಗ ಎಲೆ ಹಚ್ಚೂದು - ಸಣ್ಣಾಗಿ ರಾಟಿ ಟಬ್ಬಿ ಹಾಕಿಧಾಂಗ ನಮ್ಮ ತಾಯಿ ತಯಾರಿಸಿದ ಸಣ್ಣ ಸಿಬರಿನಿಂದ ಹಚ್ಚುತ್ತಿದ್ದಳು. ಮತ್ತ ಒಲೆ ಮಣ್ಣು ತಂದು ಒಂಟೋಲಿ, ಕೋಡೋಲಿ ಹಾಕುತ್ತಿದ್ದಳು. ವೆಂಕಟೇಶ್ವರ ಗುಡಿ ಹತ್ತಿಲೆ ನಾವು ಇರತಿದ್ವಿ. ಒಂದು ದಿವಸ ಮಧ್ಯಾನ್ಹ ಒಬ್ಬ ಬ್ರಾಹ್ಮಣ ಬಿಸಿಲಾಗ ನೀರಡಿಸಿ ಬಂದು - 'ಒಂದಿಷ್ಟು ಕುಡಿಯೋ ನೀರು ಕೊಡ್ರಿ



ತಾಯಿ,' ಅಂದ. ನಮ್ಮ ತಾಯಿ, ತಾನು ಗಂಗಾ ಬ್ರಾಹ್ಮಣರ ಕುಲದವಳು ಇಂಥ ಉಚ್ಚ ಬ್ರಾಹ್ಮಣಗ ಹ್ಯಾಂಗ ನೀರು ಕೊಡೋದು ಅಂತ ಹೇಳಿ, - 'ಇಲ್ಲಾ ನಮ್ಮ ಮನ್ಯಾಗ ನಿಮ್ಮಂಥವರು ನೀರು ಕುಡಿಯಬಾರದು,' ಅಂತ ಹೇಳಿದರ ಆ ಬ್ರಾಹ್ಮಣಗ ನಂಬಿಗೆ ಆಗಲಿಲ್ಲ; 'ಏನು ತಾಯಿ ಎದ್ದು ಒಂದು ಥಾಲಿ ನೀರು ಕೊಡಲಾರದ ಹೀಂಗ ಹೇಳಬೇಕ? ನಿಮ್ಮ ಮನ್ಯಾಗ ನೀರು ಕುಡೀಬಾರದು ಅಂದರ ನೀವೇನು ಬ್ರಾಹ್ಮಣರಲ್ಲ?' - ಎಂದ. ನಮ್ಮ ತಾಯಿಗೆ ಧರ್ಮಸಂಕಟಕ್ಕ ಇಟ್ಟುಕೊಂಡಿತು. ಕಡೀಕೆ ಆದದ್ದಾಗಲಿ ನೀರಡಿಸಿದ ಬ್ರಾಹ್ಮಣಗ ನೀರು ಕೊಟ್ಟದ್ದಕ್ಕ ಪಾಪ ಬಂದರ ಬರಲಿ, ಅಂದುಕೊಂಡು ನೀರು ಕೊಟ್ಟು ಬಿಟ್ಟಳು ನಮ್ಮವ್ವ,'' ಎಂದು ಗಂಗೂಬಾಯಿ ನಕ್ಕು ನುಡಿದರೂ ನನಗೆ ಒಳಗೊಳಗೆ ಸೂಜಿ ಚುಚ್ಚಿದಂತಾಯಿತು.

★

ಈಗಿನ ತಮ್ಮ ಅಂತಸ್ತೇನು, ಹಿಂದಿನ ಹೀನಾಯಸ್ಥಿತಿಯ, ಅವಸ್ಥೆಯ ಮಾತನ್ನು ಹೇಳಬೇಕ ಬೇಡವೆ ಎಂಬ ಕೃತ್ರಿಮವಿಲ್ಲ ಈ ತಾಯಿಗೆ. ವಿಶ್ವಾಸದಿಂದ ಮಾತನಾಡಿಸಿದವರ ಮುಂದೆ ಹೃದಯಬಿಚ್ಚಿ ಯಾವ ಸಂಕೋಚವೂ ಇಲ್ಲದೆ ಮುಕ್ತ ಮನಸ್ಸಿನಿಂದ ಮಾತನಾಡುವ ಮುಗ್ಧ ಮಗುವಿನ ಮನಸ್ಸು ಈ ಸೋದರಿಯದು. ಎಷ್ಟೊಂದು ಮುಗ್ಧತೆಯೊ ಅಷ್ಟೊಂದು ವಿದಗ್ಧತೆ - ಸಂಗೀತಕಲೆಯಲ್ಲಿ. ವಿದಗ್ಧತೆಯೊಡನೆ ಮುಗ್ಧತೆಯೂ ಬೆರೆತಾಗ ಎಷ್ಟೋ ಮಹಾಸಭೆಗಳಲ್ಲಿ, ವಿಶೇಷ ಪ್ರಸಂಗಗಳಲ್ಲಿ ಈ ಪುಟ್ಟ ಮೂರ್ತಿಯ ಹಿಂದಿನ ಕೀರ್ತಿ ಪ್ರಭಾವಳಿಯನ್ನು ಕಾಣದ ಗಾವಿಲರು ಒಂದಿಷ್ಟು ಅಸಡ್ಡೆಯಿಂದ ನಡೆದುಕೊಂಡುದೂ ಉಂಟು. ಸಂಗೀತ ಸಾಧನೆಯ ಪ್ರಾರಂಭದ ದೆಸೆಯಲ್ಲಿ ವೇಷ-ಭೂಷಣಗಳ ಮೇಕಪ್‌ನಲ್ಲೂ ಸವಾಯಿ ಗಂಧರ್ವರ ಈ ಶಿಷ್ಯೆ, ಧಾರವಾಡ ಶುಕ್ರವಾರ ಪೇಟೆಯ ಮಡಿಸೀರೆಯ ಮುತ್ತೈದೆಯಂತೆ ಸಾದಾಸೀದಾ. 1940ರ ಹಿಂದು ಮುಂದೆ ಇರಬೇಕು. ಆಲ್ ಇಂಡಿಯಾ ರೇಡಿಯೊ ದಿಲ್ಲಿ ಕೇಂದ್ರದಿಂದ ಇವರ ಕಾರ್ಯಕ್ರಮ! ಕಿರಾನಾ ಘರಾಣೆಯ ಈ ಹುಬ್ಬಳ್ಳಿಯ ಹೂ ಇನ್ನೂ ತನ್ನ ಗಂಧವನ್ನು ನಾಲ್ಕು ದಿಕ್ಕಿಗೆ ಹರಡದೆ ಎಲೆಮರೆಯಿಂದ ಇದೇ ದಿಲ್ಲಿಯ ರಾಜಧಾನಿ ಪ್ರವೇಶ ಮಾಡಿದೆ. AIR ಸ್ಟುಡಿಯೋ ಅಟೆಂಡರರಿಗೆ ಗಾಡಕ್ಕೆ ಹಚ್ಚದ ಈ ರತ್ನ (uncut diamond)ದ ಮೌಲ್ಯ ಏನು ಗೊತ್ತು? ಎಲ್ಲೋ ಕೂಡಿಸಿದರು. ಹೇಗೋ ನಡೆಸಿಕೊಂಡರು. ಒಳಗಿನ ಮ್ಯೂಜಿಕ್ ಸುಪರ್‌ವೈಜರರೂ ಅಷ್ಟೆ. ಅವರೇನೂ ವೈಜರ್ (wiser) ಅಲ್ಲದಿದ್ದರೂ ರೀತಿ-ರಿವಾಜು ಬೇಡವೆ? ಆಮೇಲೆ ಇವರ ಗಂಧರ್ವ ಸಂಗೀತ ಕೇಳಿ ನಿರ್ದೇಶಕರು ದೂರವಾಣಿಯಲ್ಲಿ ಅಭಿನಂದನೆ ಹೇಳಿದ ಮೇಲೆಯೆ ಡ್ಯೂಟಿ ಆಫಿಸರ್ ಮೊದಲು ಮಾಡಿಕೊಂಡು ಎಲ್ಲರಿಗೂ ಕಣ್ಣು ತೆರೆದದ್ದು ಸ್ವಲ್ಪ ಹೊತ್ತಿನ ಮೇಲೆ ನಿರ್ದೇಶಕರು ತಮ್ಮ ಕಾರು ಹಾಕಿಕೊಂಡು ಬಂದು ಇವರೆದುರು ಕೈಜೋಡಿಸಿಕೊಂಡು ನಿಂತಾಗ, ಅಲ್ಲಿ ನಿಂತುಕೊಂಡವರೆಲ್ಲಾ ಪ್ಯಾಂಟಿನಲ್ಲಿ ನಡುಗಿಹೋಗಿದ್ದರು!

ಈ ಮೊದಲೊಮ್ಮೆ ಕಲಕತ್ತಾ ಮ್ಯೂಜಿಕ್ ಕಾನ್‌ಫರನ್ಸ್‌ಗೆ ಸೋದರಮಾವ ರಾಮಣ್ಣ (ಆಗ ಅವರೇ ಗಂಗೂಬಾಯಿಯ ಕೇರ್-ಟೇಕರ್!) ಅವರನ್ನು escort ಮಾಡಿಕೊಂಡು ಹೋದಾಗ ಅಲ್ಲಿಯ ಸಂಚಾಲಕರಿಗೆ ಸ್ವಲ್ಪ

ತಬ್ಬಿಬ್ಬಾಗಿತ್ತು- ಈ ಪೋರಿ ಇಂಥಾ ಮಹಾಸಭೆಯ ಮಹಾರಸಿಕರನ್ನು ಹಿಡಿದಾಯೆ? ಎಂದು. ಮೊದಲು ಶ್ರುತಿಮಾಡಿಕೊಳ್ಳ ಹೇಳಿದರು. ಷಡ್ಜ ಹಚ್ಚಿ ಸ್ವಲ್ಪ ಸ್ಯಾಂಪಲ್ ಕೇಳಿಸ ಹೇಳಿದರು. ''ಆಯಿತು ಹದಿನೈದು ನಿಮಿಷ ಹಾಡಿರಿ'' ಎಂಬ ಔದಾರ್ಯದ ಅನುಗ್ರಹ! ಗಂಗೂಬಾಯಿ ಕಾರ್ಯಕ್ರಮಕ್ಕೆ ತೊಡಗಿ ಸಂಗೀತ ಗಂಗಾಪ್ರವಾಹವನ್ನೇ ಹರಿಸಿ, ಓಂಕಾರನಾಥರಂತಹ ಮಹಾರಥಿಗಳು 'ವಾ ಬೇಟಿ' ಎಂದು ಹರ್ಷೋದ್ಗಾರ ತೆಗೆದಾಗ ಸಂಚಾಲಕರು ಚಲವಿಚಲರಾಗಿದ್ದರು.

''ನಾನು ದೊಡ್ಡವಳಾಗಿ ಒಂದಿಷ್ಟು ಹೆಸರು ಮಾಡೋತನಕ ಸಾಮಾಜಿಕ ಹಿಂಸಾ ಅನುಭೋಗಿಸೇ ಬೆಳದೀನಿ. 1924ರಾಗ ಬೆಳಗಾವಿ ಕಾಂಗ್ರೆಸ್ಸು. ಆಗ ನಾವು ರಾಷ್ಟ್ರೀಯ ಶಾಲಾ ವಿದ್ಯಾರ್ಥಿನಿಯರು. ಬೇಂದ್ರೆ ಅವರು ಖಾಸೋಳಕರರು ನಮ್ಮ ಗುರುಗೋಳು. ಆಗ ನನಗ ಬೆಳಗಾವಿಯೊಳಗ ಗಾಂಧೀಜಿ ಅಧ್ಯಕ್ಷತೆಯೊಳಗ 'ಉದಯವಾಗಲಿ ನಮ್ಮ ಚೆಲುವ ಕನ್ನಡನಾಡು' - ಈ ಪ್ರಸಂಗಕ್ಕಾಗೇ ಹುಯಿಲಗೋಳ ನಾರಾಯಣರಾಯರು ರಚಿಸಿದ್ದು- ಸಭಾದಾಗ ಸಾಮೂಹಿಕ ಸ್ವಾಗತಗೀತ ಹಾಡುವ ಅವಕಾಶ. ಆದರ ಬೆಳಗಾವಿಗೆ ಹೋಗೋದು, ಎರಡು ದಿನಾ ಅಲ್ಲೇ ಇರೋದು ಅಂದರ ಒಳಗೋಳಗ ಒಂದು ಭಯ. ಅಲ್ಲಿನೂ ನನ್ನ ಬ್ಯಾರೆ ಕೂಡಿಸಿ ಊಟಕ್ಕ ಎಲ್ಲಿ ಹಾಕತಾರೂ ಅಂತ. ಆದರ ಮಹಾತ್ಮಾ ಗಾಂಧಿ ಅವರ ಪುಣ್ಯ. ನನಗ ಅಂಥ



ಹೀನಾಯ ಏನೂ ಒದಗಲಿಲ್ಲ.''

ಗಂಗೂಬಾಯಿ ಒಂದು ಸಂದರ್ಶನದಲ್ಲಿ ನುಡಿದ ಈ ಮಾತು ಅವರ ಬಾಲ್ಯಕಾಲದ ಸಾಮಾಜಿಕ ವ್ಯವಸ್ಥೆ ಎಷ್ಟೊಂದು ನಿಷ್ಠುರದ್ದಾಗಿತ್ತು ಎಂಬ ಬಗ್ಗೆ ಸೂಚನೆ ಕೊಡುತ್ತದೆ. ಆಗ ಕಲೆ, ಕಲಾವಿದರು ಅಂದರೆ ಶಿಷ್ಟ ಸಮಾಜದ ಕಣ್ಣಲ್ಲಿ ಎಷ್ಟೊಂದು ಕಡಿಮೆಯದಾಗಿ ಎಣಿಸಲ್ಪಡುತ್ತಿತ್ತು ಎಂಬುದನ್ನು ನೆನೆದಾಗ ಇಂತಹ ಕಠಿಣ ಪರಿಸರದಲ್ಲೂ ತಮ್ಮ ಸಂಗೀತ ವ್ಯಾಸಂಗವನ್ನು ಒಂದು ತಪಸ್ಸೆಂದು ಬಗೆದು ಬಂದ ಎಡರುತೊಡರುಗಳನ್ನು ಎದುರಿಸಿ, ಹಣಕಾಸಿನ ಮುಗ್ಗಟ್ಟನ್ನು ಸಹಿಸಿ, ಮನೆತನದ ಸುತ್ತಲಿನ ಸಮಾಜದ ವಿಷವಾತಾವರಣವನ್ನು ವಿಷದಂತೆ ನುಂಗಿಕೊಂಡು ಸಂಗೀತಸಾಧನೆಯಲ್ಲಿ ಮುನ್ನಡೆದದ್ದೆಂದರೆ ಅದೊಂದು ಭೀಷ್ಮವ್ರತವೆಂದೆ ಹೇಳಬೇಕು- ನೋವನ್ನು ನೋಂಪಿಯಾಗಿ ಮಾಡಿಕೊಂಡದ್ದು.


1938ರಿಂದ 1952ರವರೆಗೂ ಎಂದರೆ ಗುರು ಸವಾಯಿ ಗಂಧರ್ವರು ಸ್ವರ್ಗಸ್ಥರಾಗುವವರೆಗೂ ಹದಿನಾಲ್ಕು ವರುಷದ ವನವಾಸಾನುಭವವೆ ಸಂಗೀತ ಶಿಕ್ಷಣದ ಅಂತೇವಾಸಿತ್ವ. ಆರಂಭದ ಐದಾರು ವರ್ಷ ನಿತ್ಯ ಹುಬ್ಬಳ್ಳಿ-ಕುಂದಗೋಳ ಸಂಚಾರವೂ ಒಂದು ನೋಂಪಿಯೆ ಎನಿಸಿತು.

ಶಿಷ್ಯರ ಆಯ್ಕೆಯಲ್ಲಿ ಗುರು ಸವಾಯಿ ಗಂಧರ್ವರ ಚಿಕಿತ್ಸಕ ಬುದ್ಧಿ ಹೆಸರಾದುದು. ಶಿಷ್ಯನ ಅಥವಾ ಶಿಷ್ಯೆಯ ಸತ್ವವನ್ನು ಅಲ್ಲಾಡಿಸಿ, ಜಾಲಾಡಿಸಿ ಒರೆಗೆ ಹಚ್ಚಿ ನೋಡುವರು. ಈ ಸತ್ವಪರೀಕ್ಷೆಯಲ್ಲಿ ಪಾಸಾದರೆ ಮಾತ್ರ, ಗಂಡಾಕಟ್ಟುವರು. ಗಂಗೂಬಾಯಿ ಆಗಲಿ, ಭೀಮಸೇನ ಜೋಶಿ ಅವರಾಗಲಿ ಈ ಸತ್ವಪರೀಕ್ಷೆಯಲ್ಲಿ ತಮ್ಮ ಸರ್ವಸ್ವವನ್ನೂ ಪಣಕ್ಕೆ ಹಚ್ಚಿ ಹೆಣಗಾಡಿದ್ದಾರೆ.

ಗುರುದೀಕ್ಷೆ ದೊರೆತು ಪಥ್ಯಕ್ಕೆ ಶ್ರೀಕಾರವಾದ ಮೇಲೆ ಒಂದೇ ಒಂದು ಪೂರಿಯಾ ರಾಗವನ್ನು ಗಂಗೂಬಾಯಿ ತಾಸುಗಟ್ಟಲೆ ರಿಯಾಜ್ ಮಾಡಿ ವರ್ಷಾನುಗಟ್ಟಲೆ ಗುರುಗಳಡಿಯಲ್ಲಿ ರೂಢಿ ಮಾಡಿಕೊಂಡಿದ್ದುಂಟು. ಆದರೇನು, ವರ್ಷವಿಡಿ ಕಲಿತದ್ದು ಒಂದೇ ರಾಗವಾದರೂ ಅದರ ಹಿಂದೆ ತಯಾರಾದ ಕಲೆಯ ನೆಲೆಗಟ್ಟು ಚಿರಕಾಲ ತಡೆಯುವ ಕಾಂಕ್ರೀಟ್ ಇದ್ದಂತೆ. ಸ್ವರದ ಪ್ರಭುತ್ವ ಸಾಧಿಸುವವರೆಗೂ ರಿಯಾಜ್ ಮಾಡಿದ್ದೇ ಮಾಡಿದ್ದು. ಜೇನಸ್ವರಸಾಧನೆಯ ಕಿರಾನಾದ ಸರ್ವಸ್ವ ಸಾಧನೆ. ಸ್ವರವೇ ಉಸಿರು. ಈ ಒಂದು ಪೂರಿಯಾ ಉಪಾಸನೆಯ ಉಪಸಾಧನೆಗಳಾಗಿ ಕೈಗೂಡಿದವು ತೋಡಿ, ಅಸಾವರಿ, ಯಮನ, ಶುದ್ಧಕಲ್ಯಾಣ, ಇವರ ವೈಶಿಷ್ಟ್ಯಪೂರ್ಣವಾದ ಮಾರೂ ಬಿಹಾಗ್, ಮಾಲಕಂಸ, ಮಿಯಾ ಮಲ್ಹಾರ, ದರ್ಬಾರೀ ಕಾನಡಾ, ಜೋಗಿಯಾ ಇತ್ಯಾದಿ. ಸ್ವರಸಾಧನೆ ಕರಗತವಾಗುತ್ತಿದ್ದಂತೆ ಕಿರಾನಾ ವೈಲಕ್ಷಣ್ಯಗಳಾದ ಆಲಾಪ, ಮೀಂಡ್, ಲೋಚ್, ಬಢತ್, ಬೋಲ್ತಾನ, ಖಟ್ಕಾ, ಮುರ್ಕಿ ಇತ್ಯಾದಿಗಳು ರಾಗದಿಂದ ರಾಗಕ್ಕೆ ಪರಿವರ್ತಿಯಾಗುತ್ತ ಬಂದವು.

ಐದು ವರ್ಷ ಕುಂದಗೋಳ ಸಂಚಾರ ಶಿಕ್ಷಣ ಪೂರೈಸುವ ಹೊತ್ತಿಗೇ ಗಂಗೂಬಾಯಿ ಅವರಿಗೆ ಆಕಾಶವಾಣಿಯಲ್ಲಿ ಕಾರ್ಯಕ್ರಮ ಮಾಡಬೇಕು, ಮುಂಬಯಿ HMV ಯಲ್ಲಿ ಧ್ವನಿಮುದ್ರಿಕೆಗಳನ್ನು ತಯಾರಿಸಬೇಕು ಎಂಬ ಹಂಬಲ, ಚಪಲ. ಮುಂಬಯಿ ಆಕಾಶವಾಣಿಗೆ ಅರ್ಜಿ ಹಾಕಿಕೊಂಡರು. ಅರ್ಜಿ ಫಾರ್ಮಿನಲ್ಲಿ ತಮಗೆ ಬರುವ ರಾಗಗಳನ್ನೆಲ್ಲ ನಮೂದಿಸಬೇಕಲ್ಲ! ಸುಹಾಸುಗರಾಯಿ ತುಂಬುವ ಹಂಬಲು. ಆದರೆ ಸುಹಾ ಅನ್ನಬೇಕೋ ಸುಗರಾಯಿ ಅನ್ನಬೇಕೊ? ಗುರುಗಳನ್ನು ಕೇಳಲು ಭಯ. ಅರ್ಜಿಫಾರ್ಮು ಹಿಡಿದುಕೊಂಡು ಗುರುಸಮ್ಮುಖದಲ್ಲಿ ಸುಮ್ಮನೆ ನೆಲ ನೋಡುತ್ತ ಕುಳಿತಾಗ ಗುರುಗಳೇ ಮಾತಾಡಿಸಿದರು- ''ಏನದು ಕೈಯೊಳಗಿಂದು?'' ಬಾಯಿಬಿಟ್ಟಳು ಶಿಷ್ಯೆ ''ಆಕಾಶವಾಣಿ ಧ್ವನಿ ಪರೀಕ್ಷಾಕ್ಕ ಅರ್ಜಿ ಹಾಕಬೇಕಂತೀನಿ. ಸುಹಾ ಅಂತ ಬರೀಬೇಕೋ ಸುಗರಾಯಿ ಅನಬೇಕೊ?'' ಗುರುಗಳು ಮೌನ. ಶಿಷ್ಯೆಗೆ ಭಯ. ತಮಗಿದು ಪಸಂದಿಲ್ಲವೆಂದು ಮೌನಮುದ್ರೆಯಿಂದ ತೋರಿಸಿಕೊಟ್ಟರು. ಕೊನೆಗೆ ಶಿಷ್ಯೆಯ ದೀನವದನ ನೋಡಿ,

ಕೂರಿ



''ಸುಹಾ ಅಂತ ತುಂಬಿ ಕಳಿಸು'' ಎಂದು cuit ಆಗಿ ಹೇಳಿದರು. ಶಿಷ್ಯೆಗೆ ಖಜೀಲ್ ಅನಿಸಿಯೂ ಖುಷಿ ಆಯಿತು.

★

ಆಕಾಶವಾಣಿಯಲ್ಲಿ ಸಂಗೀತ ಪ್ರಸಾರಕ್ಕೆ ಮೊದಲಾಯಿತು. HMV ಯಲ್ಲಿ ಧ್ವನಿಮುದ್ರಿಕೆಗಳೂ ಹೊರಬಂದವು. ಮೊದಮೊದಲಿಗೆ 'ಹಾನಗಲ್ ಗಾಂಧಾರಿ' ಎಂಬ ಹೆಸರಿನಲ್ಲಿ ಮರಾಠಿ ಹಾಡುಗಳು - 'ಆಯೀಕಾ ಚಕುಲಾ ಚಿಮುಕಲಾ', 'ಬಾಲಿಕಾ ಕಾಲ ಕಸಲಾ' ಇತ್ಯಾದಿ. ಆಮೇಲೆ ಕ್ಲಾಸಿಕಲ್ ಚೀಜ್‌ಗಳು, ಜೋಗಿಯಾದಲ್ಲಿ 'ರಾಮ ಹರಿಕಾ ಭೇದ ನ ಪಾಯೊ' ಅಂತೂ ಒಳ್ಳೇ ಹಿಟ್ ಆಯಿತು. ಮಿಯಾಮಲ್ಹಾರದ 'ಕಹೆಲಾಡಲೀ'ಯೂ ಅಷ್ಟೆ. ಗ್ರಾಮಾಫೋನ್ ರೆಕಾರ್ಡುಗಳ ಜನಪ್ರಿಯತೆಯನ್ನನುಸರಿಸಿ ಸಾರ್ವಜನಿಕ ಕಾರ್ಯಕ್ರಮಗಳು - ವೇದಿಕೆಯಿಂದ ವೇದಿಕೆ; ವೇದಿಕೆಯ ಮೇಲೆ ವೇದಿಕೆ. ಮಾಮಾ ವರೇರಕರರ 'ವಿಜಯಾಚೀ ಲಗ್ನ' ಎಂಬ ಚಲನಚಿತ್ರದಲ್ಲಿ ಒಬ್ಬ ಸಂಗೀತಾರ್ಥಿಯಾಗಿ ಕಾಣಿಸಿಕೊಂಡು ಹದಿನೈದು ನಿಮಿಷಗಳವರೆಗೆ ಹಿಂದುಸ್ತಾನೀ ಖಯಾಲ್ ಗಾಯಕಿ ಮಾಡಿದ್ದೇ ಒಂದು ದಾಖಲೆ. ಈ ಲೋಕಪ್ರಿಯತೆಗೆ ಉತ್ತರ ರೂಪವಾಗಿ ಮೇಲಿಂದ ಮೇಲೆ ಆಕಾಶವಾಣಿ ಕಾರ್ಯಕ್ರಮಗಳು! ಎಷ್ಟೆಂದರೆ ಗುರುಗಳ ಪ್ರಸಾರ ಕಾರ್ಯಕ್ರಮಗಳಿಗಿಂತ ಶಿಷ್ಯೆಗೇ ಹೆಚ್ಚು ಚಾನ್ಸ್ ಏನೋ ಎನ್ನುವ ಮಟ್ಟಿಗೆ.

ಒಮ್ಮೆ ಆಕಾಶವಾಣಿಯಲ್ಲಿ 'ಬಿಭಾಸ' ರಾಗ ಬಿತ್ತರಿಸಿಬಂದ ಈ ಶಿಷ್ಯೆಗೆ ಗುರುಗಳಿಂದ ಬಿಸಿ ತಾಗಿತು. ''ಗಂಗೂ ನೀ ಏನಾರ ಹಾಡಿಬರತೀದಿ. ಮಂದಿ ನನ್ನ ಕೇಳತಾರ. ನಮ್ಮ ಘರಾಣೇದಾಗ ಬಿಭಾಸಕ್ಕ ತೀವ್ರ ಧೈವತ ಹಚ್ಚತೀವಿ. ನೀನು ಕೋಮಲಧೈವತ ಹಚ್ಚಿ ಹಾಡಿಬಿಟ್ಟಿ. ನಿ ತಪ್ಪ ಹಾಡಿದ್ದಕ್ಕ ನಾ ತಪ್ಪಿತಸ್ಥ ಆಗಿಬಿಡತೀನಿ'' - ಎಂದು ಮುಂಬಯಿಯಿಂದ ಪುಣೆಗೆ ಬರುವಾಗ ರೈಲಿನಲ್ಲೇ ಈ ತಪ್ಪು-ಒಪ್ಪಿನ ಪಾಠ ನಡೆದು ರೈಲಿನಲ್ಲೇ ತೀವ್ರ ಧೈವತದ ಬಿಭಾಸಕ್ಕೆ ಮೊದಲಾಯಿತು ಗುರುಮುಖೇನ. ಖಟ್ಟಾ ಗುರು, ನಮ್ರ ಶಿಷ್ಯ ಇದ್ದುದರಿಂದಲೆ ಶಿಕ್ಷಣ ಸರಾಗವಾಗಿ ಸಾಗಿತು ಮುಂಬೈ-ಪುಣೆ ಇಲೆಕ್ಟ್ರಿಕ್ ರೈಲಿನಂತೆ.

ಹೀಗೆ ಶಿಷ್ಯೆಯ ಪ್ರತೀತಿ ಪ್ರತಿಸಲಕ್ಕೂ ವರ್ಧಿಸುತ್ತ - ಸ್ವಾತಂತ್ರ್ಯ ಪೂರ್ವದ ಲಾಹೋರ್, ಪೇಶಾವರ, ದಿಲ್ಲಿ, ಕಲಕತ್ತಾ, ಲಖನೌ, ಬರೋಡಾ, ಹೈದರಾಬಾದ, ಮೊದಲಾದ AIR ಕೇಂದ್ರಗಳಿಂದ ಪ್ರಸಾರವಲ್ಲದೆ ಸಂಗೀತ ಸಮ್ಮೇಳನಗಳಿಗಾಗಿ ಕಲಕತ್ತಾ, ಗ್ವಾಲೇರ್, ಪ್ರಯಾಗ, ಅಮೃತಸರ, ಕರಾಚಿ, ಗಯಾ, ಡೆಹರಾಡೂನ್, ಆಗ್ರಾ- ಮುಂದೆ ನೇಪಾಳ-ಭೂತಾನ್‌ಗಳಿಗೆಲ್ಲಾ ರಸಯಾತ್ರೆ.

ಸ್ವಾತಂತ್ರ್ಯೋತ್ತರದಲ್ಲಿ ಗುರುಗಳು ಪಾರ್ಶ್ವವಾಯುವಿಗೆ ಗುರಿಯಾಗಿ ಅವರ ಪ್ರಾಣವೆನಿಸಿದ ಶಾರೀರ ತ್ರಾಣವೆ ಕುಸಿದು ಹಾಸಿಗೆ ಹಿಡಿದಾಗ ಈ ಸ್ವರಪಂಜರದ ಭೀಷ್ಮರನ್ನು ಶಿಷ್ಯೆ ಗಂಗೂಬಾಯಿ ಮನೆಯಲ್ಲಿಟ್ಟುಕೊಂಡು ತಂದೆಯನ್ನು ಶುಶ್ರೂಷೆ ಮಾಡುವಂತೆ ನೋಡಿಕೊಂಡರು. ಇಂತಹ ಪರಿಸ್ಥಿತಿಯಲ್ಲೂ ಗುರುಗಳು ಸಾಧ್ಯವಿದ್ದ ಅಪರೂಪದ ಅಭಿಜಾತ ರಾಗ-

ವಿರಹದುರಿ

ಮಾವಿನ ಮರದಾಗ। ಮದರಂಗಿ ಮುಗುಳು ಮತ್ತೇರಿ ನಗುವ ಗೀಜೋದಿ। ಗೊತ್ತೇನು ನಿಮಗ ಪನ್ನಿದಿ ಉರಿ।


● ಬಸವರಾಜ ಹಂಚಿ

ಚೀಜ್‌ಗಳನ್ನು ಶಿಷ್ಯಗೆ, ಅಂತ್ಯಕಾಲದ ತಂದೆ ದಿಂಬಿನ ಬುಡದ ರತ್ನಾಭರಣಗಳನ್ನು ದಾನ ಮಾಡುವಂತೆ ವಿತರಣೆ ಮಾಡಿದರು.

1952. ಅವಿಧವಾನವಮಿಯಂದು ಸವಾಯಿ ಗಂಧರ್ವರು ಸ್ವರ್ಗೀಯ ಗಂಧರ್ವರಾದರು! ಗಂಗೂಬಾಯಿ ಸಂಗೀತ ಕ್ಷೇತ್ರದಲ್ಲಿ ಒಂಟಿ ಹೆಜ್ಜೆ ಹಾಕಬೇಕಾಯಿತು. ಮೊದಲು ತಾಯಿಯ ಕಣ್ಮರೆ, ಆಮೇಲೆ ಗುರುಗಳ ಕಣ್ಮರೆ, ಮತ್ತೆ ಸೋದರಮಾವ ಮರೆಯಾಗಿ ಹೋದರು. ಈ ಜೀವಿಗಳಿಲ್ಲದ ತನಗೆ ಎಷ್ಟು ಪ್ರಶಸ್ತಿಗಳು ಬಂದ ರೇನು ಎಂಬ ವೈರಾಗ್ಯಭಾವ ಒಮ್ಮೊಮ್ಮೆ ಪ್ರಬಲವಾಗಿ ಮೂಡುವುದು. ಆದರೂ ಸಾಧನೆ, ಸಂಚಾರಗಳು ಬೆಳೆದಂತೆ ಪ್ರಶಸ್ತಿ, ಪುರಸ್ಕಾರಗಳು, ಪುಂಖಾನುಪುಂಖವಾಗಿ ಅಟ್ಟಿಸಿಕೊಂಡು ಬಂದವು: 1948ರಲ್ಲಿ 'ಭಾರತೀ ಕಂಠ' ಪ್ರಶಸ್ತಿ, 1962ರಲ್ಲಿ ಮೈಸೂರು ಸಂಗೀತ ನಾಟಕ ಅಕಾಡಮಿ ಪ್ರಶಸ್ತಿ, 1969ರಲ್ಲಿ 'ಸ್ವರಶಿರೋಮಣಿ', ಎಂಬ ಬಿರುದು, 1970 ನವೆಂಬರ್ । ರಾಜ್ಯ ಪ್ರಶಸ್ತಿ, 1971 ಪದ್ಮಭೂಷಣ ಪ್ರಶಸ್ತಿ, 1973 ಸೆಂಟ್ರಲ್ ಅಕಾಡಮಿ ಪ್ರಶಸ್ತಿ, 1974 ಬೇಗಂ ಅಕ್ತಾರ ಅವಾರ್ಡ್, 1978 ಕರ್ನಾಟಕ ವಿಶ್ವವಿದ್ಯಾಲಯದ ಡಾಕ್ಟರೇಟ್ ಪದವಿ, 1977 ಆಕಾಶವಾಣಿ ಸುವರ್ಣಮಹೋತ್ಸವದ ಮಿಮಿಂಟೊ ಪ್ರದಾನ ಆಗಿನ ಪ್ರಧಾನಿ ಶ್ರೀ ಮೊರಾರ್ಜಿ ಅವರಿಂದ, 1980 ಕರ್ನಾಟಕ ವಿಶ್ವವಿದ್ಯಾಲಯದ ನಾಮಿನೇಟೆಡ್ ಸಿನೇಟ್ ಸದಸ್ಯತ್ವ, 1978 ರಾಜ್ಯ ಸಂಗೀತ ಅಕಾಡಮಿ ಸದಸ್ಯತ್ವ, 1981 ರಾಜ್ಯದ ನೃತ್ಯ ಸಂಗೀತ ಅಕಾಡಮಿ ಅಧ್ಯಕ್ಷೆ, 1982 ಇಂಡಿಯನ್ ಟೊಬ್ಯಾಕೊ ಕಂಪನಿಯಿಂದ ಪ್ರಶಸ್ತಿ, 1984 ತಾನಸೇನ್ ಪ್ರಶಸ್ತಿ!

5 ಮಾರ್ಚ್ 1992! ಡಾ. ಗಂಗೂಬಾಯಿ ಹಾನಗಲ್ ಸಹಸ್ರಚಂದ್ರದರ್ಶನಕ್ಕೆ ಅಣಿಯಾಗಿ ವಯಸ್ಸಿನ ಎಂಭತ್ತನ್ನು ಪ್ರವೇಶಿಸಿದ್ದಾರೆ. ಈ ಎಂಭತ್ತನೆಯ ಹುಟ್ಟುಹಬ್ಬವನ್ನು ಅವರು ಆಚರಿಸಿದುದು ಜರ್ಮನಿಯಲ್ಲಿ! ಇದನ್ನು ಕೇಳಿ ಸಂತೋಷಿಸಿದ್ದು ನಾವು, ನಮ್ಮ ಮನೆಯಲ್ಲಿ! ಎಂಭತ್ತರ ಖ್ಯಾತಿ ಇಂದು ಪ್ರಪಂಚವನ್ನೇ ವ್ಯಾಪಿಸಿದೆಯೆಂದರೆ ಅತಿಶಯೋಕ್ತಿಯೇನಲ್ಲ.

ಪ್ರಪಂಚ ಪರ್ಯಟನ ಮಾಡಿಯೂ, ಎಂಭತ್ತರ ಪ್ರವೇಶ ಮಾಡಿಯೂ ಗಂಗೂಬಾಯಿ ಅವರ ಕಂಠಶ್ರೀಯ ಮೇಲೆ ವಯಸ್ಸು ತನ್ನ ದಾಳಿಯನ್ನು ಮಾಡಿಲ್ಲ. ಅವರನ್ನು ನೋಡಿದರೇನೆ ಇವರು ಎಂಭತ್ತು ಎಂದು ಯಾರಿಗೂ ಅನಿಸದು. ಕೆಲವೆ ದಿನಗಳ ಹಿಂದೆ ಬೆಂಗಳೂರಿನಲ್ಲಿ ಗಂಗೂಬಾಯಿ ಅವರ ಎರಡು ಸಂಗೀತ ಕಚೇರಿಗಳನ್ನು ಕೇಳಿ ಸಂತೋಷಿಸುವ ಸುಯೋಗ ನನ್ನದಾಗಿತ್ತು. ಧಾರವಾಡದ ಖ್ಯಾತ ಗಾಯಕ ದಿ. ಗುರುರಾವ್ ದೇಶಪಾಂಡೆಯವರ ಪುಣ್ಯತಿಥಿ ಬೆಂಗಳೂರಿನಲ್ಲಿ ಜರುಗಿದಾಗ ಡಾ. ಗಂಗೂಬಾಯಿ ಮತ್ತು ಪುತ್ರಿ ಕು. ಕೃಷ್ಣಾ ಹಾನಗಲ್ ಜೊತೆಗೂಡಿ ಸಾದರಪಡಿಸಿದ ಆ ತೋಡಿ ರಾಗ! ಆ ರಾಗ ಕಾವೇರಿದಂತೆ ಸಿಡಿಲಿನ ಮರಿಗಳಂತೆ ಸುರಿದ ಆ ತಾನಬಾಜಿಯ ತುಣುಕುಗಳು! ಓ ಅದ್ಭುತ! ಮತ್ತೊಂದು ಬೆಂಗಳೂರಿನದೇ ಕಾರ್ಯಕ್ರಮ. ಅಲ್ಲಿಯೂ ಗಾಯನ ಸಭಾದ ಆ ಸಂಜೆಯ ಅವಿಸ್ಮರಣೀಯ ರಂಜನೆಯ ಆ ಮಾರವಾ ರಾಗ! ಒಂದೊಂದು ಸ್ವರದ ಮೇಲೂ ಅದೆಷ್ಟು ಜೋಕೆ ತೂಕಗಳಿಂದ ಕೆಲಸಮಾಡಿದರು! ಒಂದೊಂದು ಆಯಕಟ್ಟಿನ ಸ್ವರದಿಂದ ಒಂದಿಷ್ಟು ವಾಲಿದರೆ ಇನ್ನೊಂದು ರಾಗದ ಕಕ್ಷೆಯೊಳಗೆ ಕಾಲಿರಿಸುವ ಭಯ. ಇಷ್ಟೊಂದು ಕೌಶಲದಿಂದ ಧ್ವನಿಯ ಸಾಥ್ ನೀಡಿದ ಕೃಷ್ಣಾ ಜೊತೆಗೂಡಿ ಮಾರವಾ ರಾಗವನ್ನು ಮರೆಯದಂತೆ ಮಾಡಿದ ಈ ಸ್ವರಶಿರೋಮಣಿಗೆ ಸಾವಿರ ನಮನ. ●



All the perfumes in Arabia will not sweeten this little hand

- Macbeth

ಶೇಕ್ಸ್‌ಪಿಯರ್‌ನ ಈ ಪಾತ್ರದ ಮಿದುಳಲ್ಲಿ ಪಾಪ ಪ್ರಜ್ಞೆಯ ಹುಳು ಮಿಸುಗಾಡುತ್ತಿತ್ತು. ಆದರೆ ಅಂಥ ಯಾವ ಅಪರಾಧದಲ್ಲೂ ಭಾಗಿಯಾಗದ ಸೌದಿ ಅರೇಬಿಯಾದ ಸ್ತ್ರೀಯರ ಬದುಕಿನೊಳಗೇಕೆ ಸ್ವಾತಂತ್ರ್ಯದ ಸುಗಂಧ ದ್ರವ್ಯ ಸೂಸುವುದಿಲ್ಲ? ಅರೇಬಿಯಾದ ಸುಗಂಧಕ್ಕೆ ಜಗತ್ತಿನಾದ್ಯಂತ ವಿಶೇಷ ಮನ್ನಣೆ ಇದೆ. ಆದರೆ ಅದೇ ದೇಶದ ಸ್ತ್ರೀಯರದು ಮಾತ್ರ ಮಲ್ಲಿಗೆಯ ಬಸದಲ್ಲಿ ನಿಂತು ನಿರಾಳ ಉಸಿರಾಡದಂಥ ಬದುಕು. ಬುರ್ಖಾದ ಕಟ್ಟಳೆಯೊಳಗಿನಿಂದ ಸೋಸಿ ಬಂದಷ್ಟೇ ಸೌರಭ ಅವರ ಪಾಲಿಗೆ.

ಕಾಲನ ಚಲನೆಯೊಂದಿಗೆ ಬದಲಾವಣೆಯ ಮೈಲಿಗಲ್ಲುಗಳು ಈ ಪುರುಷ ಪ್ರಧಾನ ಸಂಸ್ಕೃತಿಯನ್ನು ತಟ್ಟುತ್ತಿರುವುದು ನಿಜವಾದರೂ ಈ ನಿಟ್ಟಿನಲ್ಲಿ ಕ್ರಮಿಸಬೇಕಾದ ಹಾದಿ ಹೆಬ್ಬಾವಿನಂತೆ ಬಿದ್ದುಕೊಂಡಿದೆ. ಪುರಾತನವೂ ವಿಶಿಷ್ಟವೂ ವಿಸ್ಮಯಕಾರಿಯೂ ಆದ ಅರೇಬಿಯನ್ ಸಂಸ್ಕೃತಿಯೊಳಗೆ ಪ್ರವೇಶಿಸಿ ಸ್ತ್ರೀಬದುಕಿನ ವಿವಿಧ ಸ್ತರಗಳನ್ನು ಸ್ಪರ್ಶಿಸುವುದು ಸುಲಭ ಸಾಧ್ಯವಲ್ಲ. ಅಮೇರಿಕೆಯ ಮೇರಿ ಅನ್ನೆ ಅಲಿರೇಜಾ ಎಂಬಾಕೆ ಸೌದಿ ಯುವಕನನ್ನು ಮದುವೆಯಾಗಿ ಅಲ್ಲಿಯ ಸಂಸ್ಕೃತಿಯ ನೆಲೆಗಳನ್ನು ದಾಖಲಿಸುವ ಪ್ರಯತ್ನ ಮಾಡಿದಳು. ಸ್ವೇಚ್ಛೆಯ ಹಂತದ ಅತಿ ಆಧುನಿಕತೆಯ ಧ್ರುವವೊಂದು ಸನಾತನ ಸಂಪ್ರದಾಯದ ಮತ್ತೊಂದು ತುದಿಯನ್ನು ತಲುಪಿದ ಈ ಪ್ರಸಂಗ ಹಾಗೂ ಆಕೆಯ ಅನುಭವಗಳು ಅಪೂರ್ವವೇ ಸರಿ.

ಮೇರಿ ಪ್ರಥಮ ಬಾರಿಗೆ ಗಂಡನ ಮನೆ ಸೇರಿದಾಗ ಅವಳತ್ತೆ ಆಸ್ಮಾ ನುಡಿದಿದ್ದಳು: ''ನನ್ನ ಮಗನಷ್ಟೆ ನಿನ್ನನ್ನು ಪ್ರೀತಿಸುತ್ತೇವೆ.'' ಆ ಕುಟುಂಬ ನುಡಿದಂತೆಯೇ ನಡೆದುಕೊಂಡಿತು. ಸೊಸೆಯ ಮೇಲಿನ ಅವರ ಮಮತೆ ಆಕೆಯ ಕ್ರಿಸ್‌ಮಸ್ ಆಚರಣೆಗೆ ಸಹಕರಿಸುವಷ್ಟು ಪ್ರಬುದ್ಧವಾಗಿತ್ತು.

1932ರಲ್ಲಿ ಸೌದಿ ಅರೇಬಿಯಾ ರಾಜ್ಯ ಉದಯಿಸುವ ಮುಂಚೆ ಬರಿ ಅರೇಬಿಯಾ ಎಂದು ಕರೆಸಿಕೊಳ್ಳುತ್ತಿದ್ದ ಈ ಭೂಭಾಗ ಮರಳ ಬೆಟ್ಟಗಳು, ಬರಡು ಬಯಲು, ಕಣಿವೆ ಕೊಳ್ಳಗಳಂದೊಡಗೂಡಿ ಹೊರಗಿನವರ ಸುಲಭ ಪ್ರವೇಶಕ್ಕೆ ಆಸ್ಪದವಿಲ್ಲದಂತೆ ನೈಸರ್ಗಿಕ ರಕ್ಷಣೆಯನ್ನು ಒದಗಿಸಿಕೊಂಡಿತ್ತು. ಕಠಿಣತಮ ಬದುಕಿನ ಬಿಲದಲ್ಲೇ ಸಂಸ್ಕೃತಿಯೂ ಸುರಕ್ಷಿತವಾಗಿತ್ತು.

ನಗರಗಳಲ್ಲಿ ವಾಸಿಸುವ ಸೌದಿ ಸ್ತ್ರೀಯರ ಏಕೈಕ ಚಟುವಟಿಕೆಯೆಂದರೆ ತಮ್ಮ ಮನೆಯ ಹೊಸ್ತಿಲನ್ನು ದಾಟಿ ಪರಿಚಿತ ಮಹಿಳೆಯರೊಂದಿಗೆ (ಅವರ ಮನೆಯೊಳಗೆ) ಕಾಲ ಕಳೆಯುವುದು ಮಾತ್ರವಾಗಿತ್ತು. ಮನೆಯ ಅಗತ್ಯ ವಸ್ತುಗಳನ್ನು ಖರೀದಿಸುವ ಜವಾಬ್ದಾರಿಯೆಲ್ಲ ಕುಟುಂಬದ ಪುರುಷ ಸದಸ್ಯರು ಅಥವಾ ಮನೆಯ ಕೆಲಸಗಾರರ ಮೇಲೆ. ತರುಣಿಯರಿಗೆ ಅಲ್ಪ ಸ್ವಲ್ಪ ಮನೆಯ ಆಗುಹೋಗುಗಳನ್ನು ವಹಿಸಿ ಸಂಪೂರ್ಣ ಹೊಣೆಗಾರಿಕೆಯನ್ನು ಕುಟುಂಬದ ವೃದ್ಧ ಸ್ತ್ರೀಯರು ವಹಿಸಿಕೊಳ್ಳುತ್ತಿದ್ದರು. ಇಂದು ಶತಮಾನಗಳ ಹಿಂದಿನ ಸ್ಥಿತಿ ಮುಕ್ಕಿಲ್ಲದೆ ಉಳಿದಿಲ್ಲ. ಅದಕ್ಕೆ ಬಹುಮುಖ್ಯ ಕಾರಣವೆಂದರೆ ಭೂಗರ್ಭದಿಂದ ಎದ್ದುಬಂದ ಇಂಧನ. 1930ರಲ್ಲಿ ನೀರನ್ನು ನಿರೀಕ್ಷಿಸಿ ತೋಡಿದ ಬಾವಿಗಳಲ್ಲಿ ಪೆಟ್ರೋಲಿನ ಕಣಜಗಳು ಪತ್ತೆಯಾದಂದಿನಿಂದ ಅರೇಬಿಯಾ ತನ್ನ ಕಾಲಿಗೆ ಚಲನೆಯ ಚಕ್ರ ಕಟ್ಟಿಕೊಂಡಿತೆನ್ನಬೇಕು. ಪರಿಣಾಮವಾಗಿ 1950ರಷ್ಟೊತ್ತಿಗೆ ಮರುಭೂಮಿಯ ದಾಹ ಹಿಂಗಿಸಲೆಂದು ಡಾಲರುಗಳು ಹರಿದು ಬರತೊಡಗಿದವು. ಅಲ್ಲಿನವರ ಬದುಕಿನೊಳಗೆ ನುಗ್ಗಿದ ಮಾರುತದಲ್ಲಿ ಪ್ರಗತಿ, ಆಧುನಿಕತೆ, ಯಾಂತ್ರೀಕರಣ, ಶಿಕ್ಷಣ.... ಇತ್ಯಾದಿ ಬದಲಾವಣೆಯ ಅನಿಲಗಳು ಧಾಳಾಗಿಯೇ ಸೇರಿಕೊಂಡಿದ್ದವು. ಇದೀಗ ಹೊಸದೊಂದು ವಾಸ್ತವ ಅರೇಬಿಯಾದ ಹೊಸ್ತಿಲಲ್ಲಿ ನಿಂತು ಕೈಚಾಚಿದೆ. ಈ ವಾಸ್ತವದ ಅರ್ಥ ಹಾಗೂ ನಿರ್ದೇಶನ ಇನ್ನೂ ಪೂರ್ಣ ಅಳತೆಗೆ ನಿಲುಕಿಲ್ಲವಾದರೂ ಇದು ಅಲ್ಲಿಯ ಮಹಿಳೆ ಮತ್ತು ಇಸ್ಲಾಂ ಧರ್ಮಕ್ಕೆ ಸಂಬಂಧಿಸಿದ್ದೆಂಬುದು ಮಾತ್ರ ಖಾತ್ರಿ.

ಸೌದಿಯಲ್ಲಿ ಪಾಲಿಸುತ್ತಿರುವ ಸುನ್ನಿ ಮುಸಲ್ಮಾನ ಧರ್ಮಕ್ಕೆ ಪರಂಪರಾಗತ ಪುರೋಹಿತಶಾಹಿ ವರ್ಗದ ಹಿನ್ನೆಲೆ ಇಲ್ಲವಾದರೂ ನಿರ್ದಿಷ್ಟ ಧಾರ್ಮಿಕ ಮಾರ್ಗಸೂತ್ರಗಳ ಕೊರತೆಯೇನಿಲ್ಲ. ಉಲೇಮಾ ಎಂದು ಕರೆಯಲಾಗುವ ಧರ್ಮ ಪಂಡಿತರನ್ನೊಳಗೊಂಡ ಸಮಿತಿ ನೀತಿಸಂಹಿತೆಗಳನ್ನು ರೂಪಿಸುವ, ಜಾರಿಗೊಳಿಸುವ ಜವಾಬ್ದಾರಿ ನಿರ್ವಹಿಸುತ್ತದೆ. ಮಹಿಳೆಯ ಸಭ್ಯತೆ ಹಾಗೂ ನೈತಿಕ ವರ್ತನೆಯ ನಿಯಂತ್ರಣವೇ ಈ ನೀತಿಸಂಹಿತೆಯ ಬಹುಮುಖ್ಯ ಅಂಶ. ರಸ್ತೆಗಳಲ್ಲಿ ಗಸ್ತು ತಿರುಗುವ ವಿಶೇಷ ಪೊಲೀಸ್

ಪಡೆ ಪ್ರಾರ್ಥನಾ ವೇಳೆಯಲ್ಲಿ ವಾಣಿಜ್ಯವ್ಯವಹಾರಗಳು ಬಂದ್ ಆಗುವಂತೆ ನೋಡಿಕೊಳ್ಳುತ್ತದೆ. ಹಾಗೆಯೇ ಮಹಿಳೆಯರು ಸೂಕ್ತ ರೀತಿಯಲ್ಲಿ ಬುರ್ಖಾ ಧರಿಸಿ ನಿಷೇಧಗಳ ಮಿತಿಯೊಳಗೆ ಇರುವರೇ ಎಂಬುದನ್ನು ಖಾತ್ರಿಪಡಿಸಿಕೊಳ್ಳುವುದು ಈ ಪೊಲೀಸರ ಕರ್ತವ್ಯ. ಅತ್ಯಂತ ಆಧುನಿಕ ನಗರವಾದ ಜಿದ್ದಾದಲ್ಲೂ ಪುರುಷ ಸಂಬಂಧಿಯೊಬ್ಬನ ಲಿಖಿತ ಪರವಾನಿಗೆ ಇಲ್ಲದೆ ಮಹಿಳೆ ವಿಮಾನವನ್ನು ಏರುವಂತಿಲ್ಲ ಹಾಗೂ ವಸತಿಗೃಹದಲ್ಲಿ ವಾಸಿಸುವಂತಿಲ್ಲ. ಇಂಥ ಯಾವುದೇ ಉಲ್ಲಂಘನೆಯನ್ನು ಗಂಭೀರವಾಗಿ ಗಣಿಸಿ ಅವಮಾನಿಸಲು ಪೊಲೀಸರು ಸದಾ ಜಾಗ್ರತರಾಗಿರುತ್ತಾರೆ.

ಬಾಲಕಿಯರ ಸಾರ್ವಜನಿಕ ಶಿಕ್ಷಣ ಸಂಸ್ಥೆ ಕೂಡ ಉಲೇಮಾದ ಆದೇಶಗಳನ್ನು ಪಾಲಿಸದಿರಲು ಸಾಧ್ಯವಿಲ್ಲ. ಒಟ್ಟಾರೆ ಎಲ್ಲ ಕ್ರಿಯೆಗಳು ಧಾರ್ಮಿಕ ಎಳೆಗಳನ್ನು ಇನ್ನಷ್ಟು ಹುರಿಗೊಳಿಸಬಹುದೇ ಹೊರತು ಆಧುನಿಕತೆಯ ಹೆಸರಿನಲ್ಲಿ ಸಾಮಾಜಿಕ ನೇಯ್ಗೆಯನ್ನು ಶಿಥಿಲಗೊಳಿಸಲಾಗದು.

ಅರೇಬಿಯಾದಲ್ಲಿ ಛಾಯಾಚಿತ್ರ ತೆಗೆಯುವುದು ಸುಲಭಸಾಧ್ಯವಲ್ಲ. ನೆರಳು ಬೆಳಕಿನ ಸಂಯೋಜನೆಯಾದ ಛಾಯಾಚಿತ್ರಗಳು ದೇವರ ಸೃಷ್ಟಿಗೆ ಯಾವ ಅಪಚಾರವನ್ನೂ ಬಗೆಯುವುದಿಲ್ಲ ಎಂಬುದಾಗಿ ಉಲೇಮಾಗೆ ಮನವರಿಕೆ ಮಾಡಿಕೊಡುವಲ್ಲಿ ಹಿಂದಿನ ರಾಜ ಅಬ್ದುಲ್ ಅಜೀಜ್ ಯಶಸ್ವಿಯಾಗಿದ್ದ. ಆದರೆ ಇಂದು ಹಿಂದೆಂದಿಗಿಂತಲೂ ಫೋಟೋ ತೆಗೆಯುವುದು ಕಠಿಣವಾಗಿದೆ. ಸೌದಿಯ ಸಮಾಚಾರ ಸಚಿವಾಲಯದ ಇಜ್ಜತ್ ಮುಫ್ತಿ ಈ ಕುರಿತು ಸ್ಪಷ್ಟೀಕರಣ ನೀಡಿ ರಕ್ಷಣಾ ಕಟ್ಟಡಗಳ ಹೊರತು ಇತರೆಡೆ ಚಿತ್ರ ತೆಗೆಯಲು ನಿಷೇಧವಿಲ್ಲವೆಂದು ಹೇಳಿದರು. ಆದರೆ ಸೌದಿಯ 'ಅಮೇರಿಕನ್ ಸೊಸೆ' ಮೇರಿ ಅನ್ನೆ ಅಲಿರೇಜಾ ಹಾಗೂ ಆಕೆಯ ಗೆಳತಿ ಜೂಡಿ ಕೋಬ್ ಅವರು ಚಿತ್ರ ತೆಗೆಯಲು ಪ್ರಯತ್ನಿಸಿದಾಗ ಪಡಿಪಾಟಲು ಪಡಬೇಕಾಯ್ತು.

ಪುರುಷಪ್ರಧಾನ ಸಂಸ್ಕೃತಿಯ ಸೌದಿ ಅರೇಬಿಯದಲ್ಲಿ ಶತಮಾನಗಳಿಂದಲೂ ಅವಗುಂಠನದ ಹಿಂದೆಯೇ ಬದುಕಿ ಬಂದಾಕೆ ಅಲ್ಲಿಯ ಸ್ತ್ರೀ. 'ಪುರುಷನ ಭಾಗ್ಯ ಸ್ತ್ರೀ ಚರಿತ್ರದ ಮೇಲೆ ಅವಲಂಬಿತ' ಎಂಬ ಸೂಕ್ತಿ ಎಲ್ಲಿಗಿಂತ ಇಲ್ಲಿ ಹೆಚ್ಚು ಅನ್ವಯಿಸುತ್ತದೆ. ಹೌದು. ಕಾಲ ಬದಲಾಗುತ್ತಿದೆ - ಸೌದಿಯ ಸ್ತ್ರೀ ಬದುಕೂ ಬದಲಾಗಿದೆ. ಆದರೆ ಆ ಅವಗುಂಠನ ಮಾತ್ರ ನಿಶ್ಚಲವಾಗುಳಿದಿದೆ.

ಜಿದ್ದಾದ ಹೊಸ ಕದಲಿಕೆಯೆಂದರೆ ನಾಗರಿಕರು ಕಡಲ ದಂಡೆಯಲ್ಲಿ ಕುಟುಂಬದೊಂದಿಗೆ ವಾರಾಂತ್ಯದ ಸಂತೋಷವನ್ನು ಹಂಚಿಕೊಳ್ಳುತ್ತಿರುವುದು. ಸಾರ್ವಜನಿಕ ಸ್ಥಳಗಳಲ್ಲಿ ಬರಿ ಗಂಡಸರು ಸೇರುವುದೂ, ಹೆಂಗಸರು ಕೇವಲ ಹೆಂಗಸರೊಂದಿಗೆ ನಾಲ್ಕುಗೋಡೆಗಳ ನಡುವೆ ಕಾಲ ತಳ್ಳುವುದೂ ಈ ಹಿಂದಿನ ಪದ್ಧತಿಯಾಗಿತ್ತು. ಒಂದರ್ಥದಲ್ಲಿ ಕಡಲ ತಡಿಯ ಸಹಭೋಜನ ಮಹಿಳೆಯರ ಕಟ್ಟುಪಾಡುಗಳನ್ನೆಲ್ಲ ಕಳಚೇನೂ ಇಡುವುದಿಲ್ಲ. ಈ ವಿಹಾರ ಸಂದರ್ಭದಲ್ಲೂ ಹೆಂಗಸರ ಮುಖವನ್ನು ಮುಸುಕುಗಳು ಕಡ್ಡಾಯವಾಗಿ ಬಳಸುತ್ತಿರಬೇಕು.

ಹಳ್ಳಿಗಾಡಿನ ಹೆಂಗಸರು ಹಾಗೂ ಅಲೆಮಾರಿ ವರ್ಗದ ಮಹಿಳೆಯರು ನಗರದವರಿಗಿಂತ ಹೆಚ್ಚು ಸ್ವಾತಂತ್ರ್ಯ ಅನುಭವಿಸುತ್ತಾರೆ. ಸೌದಿಯಲ್ಲಿ ವಾಹನಗಳನ್ನು ಚಲಾಯಿಸುವಷ್ಟು 'ಆಧುನಿಕತೆ'ಯನ್ನು ರೂಢಿಸಿಕೊಂಡವರೆಂದರೆ ಬಡಾವಿಯತ್ ಎಂಬ ಮರಳುಗಾಡಿನ ಅಲೆಮಾರಿಗಳು. ಅದೂ ಜನದಟ್ಟಣೆ ಕಡಿಮೆ ಇರುವ ಹಾಗೂ ಸಂಸ್ಕೃತಿ ರಕ್ಷಕ ಪೊಲೀಸರಿಂದ ಮುಕ್ತವಾದ ಪ್ರದೇಶಗಳಲ್ಲಿ ಮಾತ್ರ ವಾಹನ ಚಾಲಕಿಯರು



ಕಾಣಸಿಕೊಳ್ಳುತ್ತಾರೆ. ಈ ಮಹಿಳೆಯರು ಮುಖದ ಮುಸುಕನ್ನು ಕಡ್ಡಾಯವಾಗಿ ಧರಿಸುತ್ತಾರಾದರೂ ಇತರ ದಿರಿಸುಗಳಲ್ಲಿ ನಗರದವರಿಗಿಂತ ಹೆಚ್ಚು ಉದಾರತೆ ಹೊಂದಿದ್ದಾರೆ.

ಹೊಸ ಪೀಳಿಗೆಯ ಸುಶಿಕ್ಷಿತ ಮಹಿಳೆಯರು ಬುರ್ಖಾ ಧರಿಸಿ ಹಿಂದಿನವರಂತೆಯೇ ತಾಯಿಯಾಗಿ, ಹೆಂಡತಿಯಾಗಿ ದಿನ ದೂಡುವುದರೊಂದಿಗೆ ತಮ್ಮ ಲಕ್ಷ್ಮಣ ರೇಖೆಯಾಚೆಗೂ ಕಾಲಿರಿಸುತ್ತಿರುವುದೊಂದು ವಿಶೇಷ. ಉಪಾಧ್ಯಾಯಿನಿ, ಕಂಪ್ಯೂಟರ್ ತಂತ್ರಜ್ಞೆ, ಪ್ರಯೋಗಾಲಯ ತಂತ್ರಜ್ಞೆ, ವೈದ್ಯೆ, ಇಂಜಿನಿಯರ್, ಬ್ಯಾಂಕ್ ನೌಕರಿದಾರಳು ಇತ್ಯಾದಿಯಾಗಿ ಮಹಿಳೆ ಕಾಣಿಸಿಕೊಳ್ಳುವುದು ಕ್ರಾಂತಿಕಾರಿ ಬದಲಾವಣೆಯಲ್ಲವೆ? ಇದೆಲ್ಲಾ ಸಾಧ್ಯವಾಗುತ್ತಿರುವುದು 1960ರ ನಂತರ ಸರ್ಕಾರ ಮಹಿಳಾ ಶಾಲೆಗಳನ್ನು ತೆರೆಯಲು ಅನುಮತಿ ನೀಡುತ್ತಿರುವುದರಿಂದ.

''ದೇವರೇ, ನಮನಗಳು.... ಕೊನೆಗೂ ನಮ್ಮ ದಿನಗಳು ಬದಲಾಗುತ್ತಿವೆ!'' ಈ ಉದ್ಗಾರ ಆಧುನಿಕತೆಯ ಸೆಳವಿಗೆ ಸಿಕ್ಕ ಸುಶಿಕ್ಷಿತ ಯುವತಿಯದೆಂದು ನೀವು ಭಾವಿಸುವುದು ಸಹಜ. ಆದರೆ ಈ ನಿಟ್ಟುಸಿರು ಬಿಟ್ಟವಳು ಏಳು ಮಕ್ಕಳ ತಾಯಿಯಾದ ಒಬ್ಬ ವಿಧವೆ! ಮಕ್ಕಳ ದೇಖರೇಖಿಯನ್ನು ನೋಡಿಕೊಳ್ಳುತ್ತಲೇ ಸರ್ಕಾರದ ವಯಸ್ಕರ ಶಿಕ್ಷಣ ಕಾರ್ಯಕ್ರಮದಡಿ ಅಕ್ಷರ ಕಲಿಯುತ್ತಿರುವ ಉಮೇದಿನ ಮಹಿಳೆ ಈಕೆ.

ಜೆದ್ದಾದ ಆಸ್ಪತ್ರೆಯೊಂದರಲ್ಲಿ ದಾದಿಯಾ-ರುವ ಸಾಬಾಹ್‌ಳಿಗೆ ಡಾಕ್ಟರ್ ಆಗುವ ಅಭಿಲಾಷೆಯಿತ್ತಂತೆ. ಆದರೆ ಕಾಲೇಜಿನ ಪ್ರವೇಶಕ್ಕೆ ಅರ್ಜಿ ಹಾಕುವಷ್ಟರಲ್ಲಿ ಕೊನೆಯ ದಿನ ಮುಗಿದಿದ್ದರಿಂದ ಈಕೆ ಡಾಕ್ಟರ್ ನಂತರದ ಅತ್ಯುತ್ತಮ ವೃತ್ತಿಯನ್ನು ಆಯಬೇಕಾಯ್ತು. ಸೌದಿಯಲ್ಲಿ ನೌಕರಿಗಳಿಗೆ ಪ್ರವೇಶಿಸಿರುವ ಅನೇಕರು ಅತ್ಯಂತ ಸಾಂಪ್ರದಾಯಿಕ ಕುಟುಂಬದ ಹಿನ್ನೆಲೆಯಿಂದ ಬಂದಂಥವರು. ಆರಂಭದಲ್ಲಿ ಮನೆಯವರ ಪ್ರತಿರೋಧವನ್ನು ಎದುರಿಸಿದವರೇ. ಸಾಬಾಹ್ ಹೇಳುವಂತೆ ಮನೆಯವರ ಈ ವಿರೋಧಕ್ಕೆ ಅವರ ಸಂಕುಚಿತ ಸ್ವಭಾವ ಮಾತ್ರವೇ ಕಾರಣವಲ್ಲ; ಸಮಾಜ ತಮ್ಮನ್ನು ಕೀಳಾಗಿ ಕಂಡೀತು ಎಂಬ ಭಯದಿಂದ ಇಂಥ ನಿಲುವಿಗೆ ಬರುವುದೇ ಹೆಚ್ಚು. ಬಹುಪಾಲು ಸ್ತ್ರೀಯರು 'ಪೂರ್ಣ ಮಹಿಳಾ ವಾತಾವರಣ'ದಲ್ಲಿಯೇ ಕೆಲಸ ಮಾಡುವುದು. ಆದಾಗ್ಯೂ ಕೆಲವು ವೈದ್ಯೆಯರು, ನರ್ಸ್‌ಗಳು, ಆಕಾಶವಾಣಿ ಅನೌನ್ಸರ್‌ಗಳು, ಪತ್ರಕರ್ತೆಯರು ಪುರುಷ ಸಹೋದ್ಯೋಗಿಗಳೊಂದಿಗೆ ಕೆಲಸ ಮಾಡುತ್ತಾರೆ. ನೀಳ ತೋಳಿನ ನಿಲುವಂಗಿ, ತಲೆ ಮುಸುಕು ಮಾತ್ರ ನೌಕರಿ ಮಾಡುವ ಮಹಿಳೆಯರಿಗೆ ಕಡ್ಡಾಯ.

ಆಸ್ಪತ್ರೆಯಲ್ಲಿ ನೌಕರಿ ಮಾಡುವ ಮಹಿಳೆಯೊಬ್ಬಳು ಈ ಸಮವಸ್ತ್ರ ಪದ್ಧತಿಯನ್ನು ವಿಶಾಲ ಮನದಿಂದಲೇ ಸ್ವೀಕರಿಸಿ ಬೇರೊಂದು ರೀತಿಯಲ್ಲಿ ಸಮರ್ಥಿಸುತ್ತಾಳೆ: ''ಪುರುಷರಷ್ಟೇ ವೇತನ ಪಡೆಯುವ ನಮ್ಮನ್ನು ಸರಿಯಾಗಿಯೇ ನಡೆಸಿಕೊಳ್ಳುತ್ತಾರೆ. ನಮ್ಮ ಪ್ರಯತ್ನಶೀಲತೆ ಬಗ್ಗೆ ಗೌರವಿಸಿಕೊಂಡ ಗಂಡಸರು ಹೆಚ್ಚು ಹೆಚ್ಚು ಹೆಂಗಸರು ನೌಕರಿ ಸೇರುವುದನ್ನು ಅಪೇಕ್ಷಿಸುತ್ತಾರೆ.''

ಲಿಂಗಭೇದ ಎಣಿಸದೆ ಅಕ್ಕಪಕ್ಕದಲ್ಲಿ ಕೂತು ಕೆಲಸ ಮಾಡುವುದನ್ನು ಅರೇಬಿಯಾದ ಪ್ರತಿಯೊಬ್ಬರೂ ಆರೋಗ್ಯಕರವಾಗಿ ಸ್ವೀಕರಿಸಲಾರರು. ಒಬ್ಬಾತನಂತೂ ವೃತ್ತಪತ್ರಿಕೆಗಳಿಗೆ ಪತ್ರ ಬರೆದು, ''ನಮ್ಮ ಹುಡುಗಿಯರು ಗಂಡಸರೊಂದಿಗೆ ಕೆಲಸ ಮಾಡಲು ಹೇಗೆ ಸಾಧ್ಯ?'' ಎಂದು

ಪ್ರಶ್ನಿಸಿ - ವಿವಾದ ಸೃಷ್ಟಿಸಲು ವಿಫಲ ಯತ್ನ ನಡೆಸಿದ.

ಅರೇಬಿಯಾದಲ್ಲಿ ಸಹ ಪರೀಕ್ಷೆಗಳಲ್ಲಿ ಹುಡುಗಿಯರದೇ ಮೇಲುಗೈ. ಇದಕ್ಕೆ ನಮ್ಮಲ್ಲಿಯಂತಹವೇ ಹಲವು ಕಾರಣಗಳನ್ನು ಗುರುತಿಸಬಹುದು. ಹುಡುಗರ ಮನಸ್ಸನ್ನು ಚಂಚಲಗೊಳಿಸಲು ಹಲವಾರು ಮಾರ್ಗಗಳಿವೆ. ಬೀದಿಬೀದಿ ಸುತ್ತಲು ಹುಡುಗರ ಬಳಿ ಕಾರುಗಳಿವೆ. ಆದರೆ ಹುಡುಗಿಯರಿಗೆ ಈ 'ಅನುಕೂಲ'ಗಳಿಲ್ಲವಲ್ಲ! ಅವರೇನಿದ್ದರೂ ಮನೆಯಲ್ಲಿ ಕುಳಿತು ಪುಸ್ತಕಗಳಿಗೆ ದೃಷ್ಟಿ ಕೀಲಿಸಬೇಕಷ್ಟೆ. ಪತ್ರಿಕೆಗಳಿಗೆ ಬರುವ ವಾಚಕರ ವಾಣಿ ಪತ್ರಗಳನ್ನು ಪರಿಗಣಿಸಿ ಹೇಳುವುದಾದರೆ ಅರೇಬಿಯಾದ ಎಷ್ಟೋ ಯುವತಿಯರಿಗೆ ವಾಹನ ಚಲಾಯಿಸುವ ಅಭಿಲಾಷೆಯಿದೆ; ಅನುಮತಿಗಾಗಿ ದೊರೆಯನ್ನು ಕೋರುತ್ತಲೇ ಇದ್ದಾರೆ.

ಸೌದಿ ಮಹಿಳೆಯರು ಮೊಟ್ಟಮೊದಲು ವಿಶ್ವವಿದ್ಯಾಲಯದ ಪದವಿ ಪಡೆಯಲು ಸಾಧ್ಯವಾದದ್ದು 1977ರಲ್ಲಿ. ಆ ವರ್ಷ ಪದವಿ ಪಡೆದವರ ಸಂಖ್ಯೆ ಹನ್ನೆರಡು!

ಅರೇಬಿಯಾದ ರಾಜಧಾನಿಯಾದ ರಿಯಾದ್ ನಗರದಲ್ಲಿ ಮಹಿಳಾ ಕಾಲೇಜೊಂದಿದೆ. ಬುರ್ಖಾಧಾರಿಯಾಗಿ ಬರುವ ವಿದ್ಯಾರ್ಥಿನಿಯರು ತಮ್ಮ ಚಾಲಕ ಸಹಿತ ಕಾರುಗಳನ್ನು ಮುಂಬಾಗಿಲಲ್ಲೇ ಬಿಟ್ಟು ಒಳಪ್ರವೇಶಿಸಬೇಕು. ಕಾಲೇಜು ಆವರಣ ಹೊಕ್ಕ ನಂತರ ಕಪ್ಪು ಬುರ್ಖಾಗಳನ್ನು ಕಳಚುವ ಹುಡುಗಿಯರು ತಮ್ಮ ತಮ್ಮ ಅಭಿರುಚಿಗೆ ತಕ್ಕ ಬಣ್ಣದ ಬಟ್ಟೆಗಳಲ್ಲಿ ನಿರಾತಂಕವಾಗಿರಬಹುದು ಸಂಜೆ ಕಾಲೇಜು ಮುಗಿಯುವವರೆಗೆ. ಪುರುಷ ಅಧ್ಯಾಪಕರ ಕಣ್ಣಿಗೆ ಬುರ್ಖಾರಹಿತ ಯುವತಿಯರು ಕಾಣಿಸುತ್ತಾರಲ್ಲ ಎಂಬ ಸೂಕ್ಷ್ಮ ಪ್ರಶ್ನೆ ಏಳುವುದು ಸಹಜ. ಸೌದಿಗಳು ತಮ್ಮ ಸಂಪ್ರದಾಯ ರಕ್ಷಿಸಲು ಆಧುನಿಕತೆಯ ಗರ್ಭದಿಂದಲೇ ಉಪಾಯವೊಂದನ್ನು ಕಂಡುಕೊಂಡಿದ್ದಾರೆ. ಪುರುಷ ಅಧ್ಯಾಪಕರು ತರಗತಿಯಲ್ಲಿರಿಸಿದ ದೂರದರ್ಶನದ ಪರದೆಯಲ್ಲಿ ಕಾಣಿಸಿಕೊಂಡು

ಅಭಿಜಾತೆ

ಅಭಿಜಾತೆ
ನೀ ಬೆಳೆದ ಪ್ರಬಂಧಕಿದೋ
ಚಂಪೂವಿನ ರಗಳೆ
ವಚನದ ಯೋಚನೆ
ಷಟ್ಪದಿಯ ಸಾಂಗತ್ಯ

● ಎಂ. ಟಿ. ಉಪಾಧ್ಯೆ

ಉಪನ್ಯಾಸ ಮಾಡುತ್ತಾರೆ. ವಿದ್ಯಾರ್ಥಿನಿಯರಿಗೆ ವಿಷಯದಲ್ಲಿ ಅನುಮಾನಗಳೇನಾದರೂ ಉದಯಿಸಿದರೆ ತಮಗೆ ಒದಗಿಸಿದ ದೂರವಾಣಿಯ ಮೂಲಕ ಅಧ್ಯಾಪಕರನ್ನು ಸಂಪರ್ಕಿಸಿ ಅದನ್ನು ಪರಿಹರಿಸಿಕೊಳ್ಳಬಹುದು. ಮಹಿಳೆಯರಿಗಾಗಿಯೇ ಪ್ರತ್ಯೇಕ ಕಾಲೇಜುಗಳು ಆರಂಭವಾಗುವುದಕ್ಕೂ ಪೂರ್ವದಲ್ಲಿ ಸೌದಿ ಸ್ತ್ರೀಯರಿಗೆ ಅಂಚೆ ತೆರಪಿನ ಶಿಕ್ಷಣವೇ ಗತಿಯಾಗಿತ್ತು. ಪ್ರಸ್ತುತ ಸೌದಿಯಲ್ಲಿರುವ ಎಂಟು ಸಾವಿರ ಶಿಕ್ಷಣ ಸಂಸ್ಥೆಗಳಲ್ಲಿ ಇಪ್ಪತ್ತು ಲಕ್ಷ ಶಿಕ್ಷಣಾಕಾಂಕ್ಷಿಗಳು ಕಲಿಯುತ್ತಿದ್ದಾರೆ; ಅವರಲ್ಲಿ ಏಳು ಲಕ್ಷ ಮಹಿಳೆಯರು.

ಸೌದಿ ಸ್ತ್ರೀಯರು ತಮ್ಮ ವೈವಾಹಿಕ ಬದುಕಿನ ಹೊಸ್ತಿಲು ತುಳಿಯಲು ಹಿಂದೆಂದಿಗಿಂತಲೂ ಈಗ ತುಸು ತಡವಾಗಲು ಅವರು ಸುಶಿಕ್ಷಿತರಾಗುವುದರೆಡೆ ಗಮನವೀಯುತ್ತಿರುವುದೂ ಒಂದು ಕಾರಣ. ಕಟ್ಟುಪಾಡುಗಳಿಂದ 'ಬಿಡುಗಡೆ'ಯಾಗುವುದು ಒತ್ತಟ್ಟಿಗಿರಲಿ ಮದುವೆ 'ಬಂಧನ'-ದಲ್ಲಿ ಸಿಲುಕುವುದು ಕೂಡ ಅರೇಬಿಯಾದ ಮಹಿಳೆಗೆ ಸುರಳೀತವಲ್ಲ. ಭಾರೀ ವರದಕ್ಷಿಣೆ ಹಾಗೂ ದುಂದು ವೆಚ್ಚದ ಮದುವೆಗಳು ಇಲ್ಲಿ ಸಾಮಾನ್ಯ. ವರದಕ್ಷಿಣೆಯ ಪಿಡುಗು ಮಿತಿ ಮೀರಿದಾಗ (160,000ಸೌದಿ ರಿಯಲ್‌ಗಳಿಗೂ ಮಿಕ್ಕಿ) ಹತ್ತು ಪಂಗಡಗಳ ಅಧಿಪತ್ಯಹೊಂದಿದ ಶೇಖನೊಬ್ಬ ಇದನ್ನು ನಿಯಂತ್ರಿಸಲು ಪ್ರಯತ್ನಿಸಿದ. ಕನ್ಯೆಯ

ಮೊದಲ ವಿವಾಹಕ್ಕೆ ಹತ್ತು ಸಾವಿರ ರಿಯಲ್‌ಗಳು ಹಾಗೂ ತುಸು ಆಭರಣ, ಒಂದು ಬಂಗಾರದ ವಾಚನ್ನೂ; ವಿವಾಹ ವಿಚ್ಛೇದಿತೆ ಅಥವಾ ವಿಧವೆಗೆ ಐದು ಸಾವಿರ ರಿಯಲ್‌ಗಳನ್ನು ಆತ ನಿಗದಿ ಮಾಡಿದ. ಆದರೆ 1986ರ ವರದಿಯೊಂದರ ಪ್ರಕಾರ ದೇಶಾದ್ಯಂತ ಪ್ರಚಲಿತವಿರುವ ಸರಾಸರಿ ವರದಕ್ಷಿಣೆ ಮೊತ್ತ ಒಂದು ಲಕ್ಷ ರಿಯಲ್‌ಗಳು!

ಕಿಂಗ್ ಸೌದ್ ಮಹಿಳಾ ಕಾಲೇಜಿನ ವಿದ್ಯಾರ್ಥಿನಿಯೊಬ್ಬಳು ವ್ಯಕ್ತಪಡಿಸಿದ ಅಭಿಪ್ರಾಯಗಳು ಅತ್ಯಂತ ಪ್ರಾತಿನಿಧಿಕವೆನ್ನಿಸುತ್ತವೆ. ಸೌದಿ ಸ್ತ್ರೀ ಸಮುದಾಯದ ಆತ್ಮದಂತೆ ಆಕೆ ಹೇಳುತ್ತಾಳೆ;

''ನಿಜ, ನಮ್ಮ ಸಮಾಜ ವ್ಯವಸ್ಥೆಯಲ್ಲಿ ಬದಲಾಗಬೇಕಾದ ಅನೇಕ ಸಂಗತಿಗಳಿವೆ. ವಾಹನ ಚಾಲನೆಯಂತಹ ಸೌಲಭ್ಯಗಳ ಅಗತ್ಯವಿದೆಯಾದರೂ ಅವೇ ಬದುಕಿನ ಬಹುಮುಖ್ಯ ಭಾಗಗಳಲ್ಲ. ನಾನಂತೂ ಸಮಾಜ ಬದಲಾವಣೆಗೆ ಸಿದ್ಧವಾಗುವವರೆಗೆ ಕಾಯುತ್ತೇನೆ. ಈಗ ಕಾಲಿರಿಸುತ್ತಿರುವ ಬದಲಾವಣೆ ನಮ್ಮ ಬದುಕಿನ ಅಂಗವೆಂಬುದೂ ಸರಿ. ಇದು ಪೂರ್ಣ ಪ್ರಮಾಣದಲ್ಲಿ ಸಾಕಾರಗೊಳ್ಳಲು ಬಹುಕಾಲ ಕಾಯಬೇಕಾಗಬಹುದು ಅಥವಾ ಕೆಲ ದಿನಗಳಲ್ಲೇ ಘಟಿಸಬಹುದು. ಆದರೆ ನಾವು ಆಶಿಸುತ್ತಿರುವ ಬದಲಾವಣೆ ನಮ್ಮ ಧಾರ್ಮಿಕ ನೈತಿಕ ಚೌಕಟ್ಟಿನೊಳಗೆಯೇ ಇರುವುದು ಬಹಳ ಮುಖ್ಯ.''

ಪ್ರಗತಿಪರ ಆಶಯಗಳು ಅನುಷ್ಠಾನಗೊಳ್ಳಬೇಕೆಂದು ಹಂಬಲಿಸುವುದರ ಹಿಂದಿನ ಅರ್ಥವಂತಿಕೆಯನ್ನು ಅಲ್ಲಗಳೆಯಲಾಗದಾದರೂ ಈ ದಿಸೆಯಲ್ಲಿ ಒಂದು ಸಮಾಜದ ಪಚನಶಕ್ತಿ ಯಾವ ಮಟ್ಟದ್ದೆಂಬುದು ಮಹತ್ವ ಪಡೆಯುತ್ತದೆ. ಇಂದು ಸೌದಿ ಅರೇಬಿಯಾ ಇಂಥದೊಂದು ಕವಲು ದಾರಿಯಲ್ಲಿ ನಿಂತು ಆಲೋಚಿಸುತ್ತಿದೆ, ಅವಲೋಕಿಸುತ್ತಿದೆ. ನಾಳೆ ಅದರ ದಿಕ್ಕು ಖಚಿತಗೊಳ್ಳಲೂಬಹುದಲ್ಲವೆ? ●

''ಜೀವಿಸಿರುವವರೆಗೂ ಅನಂತ ಕಲಿಕೆ''

ಸ್ವಾಮಿ ರಾಮತೀರ್ಥರು ಜಪಾನಿಗೆ ಯಾತ್ರೆ ಹೊರಟಿದ್ದರು. ಸಹಜನಲ್ಲಿ ಒಬ್ಬ ಜಪಾನಿನ ಪ್ರಜೆ ಇದ್ದ. ಆತನ ವಯಸ್ಸು ಸುಮಾರು 90 ವರ್ಷಗಳು ಇರಬಹುದು. ಅವನ ಕೈಕಾಲುಗಳು ಒಂದೇ ಸಮನೆ ನಡುಗುತ್ತಿದ್ದವು. ದೃಷ್ಟಿ ಮಂದವಾಗಿತ್ತು. ಆದರೂ ಆತ ಚೀನೀ ಭಾಷೆಯನ್ನು ಕಷ್ಟಪಟ್ಟು ಕಲಿಯುತ್ತಿದ್ದ.

ಇದನ್ನು ಕಂಡ ಸ್ವಾಮೀಜಿ ಆ ವೃದ್ಧ ಮಹಾಶಯನ ಭಾಷೆ ಕಲಿಕೆಯಲ್ಲಿನ ಆಸ್ಥೆ ಶ್ರದ್ಧೆಯನ್ನು ಕಂಡು ಆಶ್ಚರ್ಯದಿಂದ ಕೇಳಿದರು- ''ತಾವು ಇಷ್ಟು ವೃದ್ಧರಾದ ಮೇಲೂ ಇನ್ನೊಂದು ಭಾಷೆಯನ್ನು ಕಲಿಯುತ್ತಿದ್ದೀರಿ. ನೀವು ಯಾವೊತ್ತಿಗೆ ಈ ಕಲಿಕೆಯನ್ನು ಮುಗಿಸುತ್ತೀರಿ? ಯಾವೊತ್ತಿಗೆ ನಿಮಗೆ ಈ ಭಾಷೆಯಿಂದ ಉಪಯೋಗವಾದೀತು?''

ಆಗ ಆ ವೃದ್ಧ ಮಹಾಶಯ ಹೀಗೆ ಉತ್ತರಿಸಿದ: '' ನಾನು ಜೀವಿಸಿರುವವರೆಗೆ ಒಂದಲ್ಲ ಒಂದು ಕಲಿಯುತ್ತಲೇ ಇರುತ್ತೇನೆ. ಅದು ಏನೇ ಇರಲಿ. ನನಗೆ ತಿಳಿಯದ ವಿಷಯ ಇದ್ದರೆ ಸಾಕು. ಅದು ತಿಳಿಯುವವರೆಗೆ ಕಲಿತೇ ತೀರುತ್ತೇನೆ. ಹಾಗೆ ಮಾಡದೇ ಇದ್ದರೆ ನನ್ನ ಜೀವನ ವ್ಯರ್ಥ ಎಂದು ಪರಿಗಣಿಸುತ್ತೇನೆ. ಯಾವೊತ್ತಾದರೂ ಒಂದು ದಿನ ಸಾಯಲೇಬೇಕು. ಅದೊಂದು ಅನಿವಾರ್ಯ ಘಟನೆ ಆದರೆ ಮೃತ್ಯುವಿಗೆ ಹೆದರಿಕೊಂಡರೆ ಮನುಷ್ಯ ತನ್ನ ಜೀವಿತ ಕಾಲದಲ್ಲಿ ಯಾವ ಕೆಲಸವನ್ನೂ ಮಾಡಲಾರ. ಜೀವನ ವಾಸ್ತವವಾಗಿ ಅನಂತ ಅಬಾಧಿತ ಪ್ರವಾಹ''.

ಸಂಗ್ರಹ: **ಶಂಕರಗೌಡ ವಾಯ್. ಪಾಟೀಲ**

ನಾಸ್ಟಾಲ್ಜಿಯಾ

ನಟಸಾರ್ವಭೌಮ ಪೃಥ್ವಿರಾಜ್ ಕಪೂರ್

• ಖಜಾನೆ ಕೃಷ್ಣಮೂರ್ತಿ

ಈ ಶತಮಾನದ ಮೂವತ್ತರ ದಶಕವು ಚಲನಚಿತ್ರ ಜಗತ್ತಿನ ಒಂದು ಮನ್ವಂತರದ ಕಾಲ. 1912ರ ಸುಮಾರಲ್ಲಿ ಜನ್ಮತಾಳಿದ್ದ ಚಲನ ಚಿತ್ರ, ಅದುವರೆಗೆ ಮೂಕಿಯಾಗಿದ್ದು ಮಾತು ಆರಂಭಿಸುವುದರಲ್ಲಿತ್ತು. ಖಾನ್‌ಬಹದ್ದೂರ್ ಆರ್ದೇಶಿರ್ ಇರಾನಿ ಎಂಬ ಒಬ್ಬ ಸಾಹಸಿ ಚಿತ್ರ ನಿರ್ಮಾಪಕ-ನಿರ್ದೇಶಕ ತನ್ನ ಮೊದಲ ಟಾಕೀ ಚಿತ್ರಕ್ಕೆ 'ಹೊಸ ಮುಖ'ಗಳಿಗಾಗಿ ಸಂದರ್ಶನ ನಡೆಸುತ್ತಿದ್ದ ಕಾಲದ ಕತೆ ಇದು. ಈ ವೇಳೆಗಾಗಲೇ ಮೂಕಿ ಕಾಲದಿಂದ ಖ್ಯಾತರಾದ ಸುಲೋಚನಾ, ಲಲಿತಾ ಪವಾರ್, ಎರ್ಮೆಲೀನ್, ಜಲ್ಲು, ಜುಬೇದಾ ಮೊದಲಾದ ನಟಿಮಣಿಯರೂ ಮಾಸ್ಟರ್ ವಿಠಲ್, ನಿಸಾರ್, ಜಾನಿ ಬಾಬು, ಜಾಲ್‌ಮರ್ಚೆಂಟ್, ಈ ಬಿಲ್ಮೋರಿಯಾ, ಡಿ. ಬಿಲ್ಮೋರಿಯಾ ಮೊದಲಾದ ನಟ ನಾಯಕರುಗಳೂ ಚಿತ್ರಜಗತ್ತಿನ ಮುಂಚೂಣಿಯಲ್ಲಿದ್ದರು. ಇವರೆಲ್ಲ ಅಲ್ಲಿ 'ಕ್ಯೂ'ನಲ್ಲಿ! ಸಂದರ್ಶನ ನಡೆದಿತ್ತು. ತುಂಬ ಜನಕ್ಕೆ ನಿಂತು ನಿಂತು ಕಾಲುಗಳು ಬಿದ್ದು ಹೋಗುತ್ತಿದ್ದುವೋ ಏನೊ! ಅಲ್ಲಿ ನಿಂತಿದ್ದ ಧೀರ ಗಂಭೀರ ಯುವಕನೊಬ್ಬನಿಗೆ ಎಷ್ಟು ಕಾದಿದ್ದರೂ ಆ ನಿರ್ದೇಶಕನ ಗಮನ ತನ್ನ ಮೇಲೆ ಬೀಳದೆ ಹೋದುದಕ್ಕಾಗಿ ಒಂದು ಉಪಾಯ ಹೊಳೆಯಿತು. ಆತ ಅಲ್ಲಿ ಮೇಜಿನ ಮೇಲಿದ್ದ ಒಂದು ಗಾಜಿನ ಪೇಪರ್ ವೇಯ್ಟ್‌ನ್ನು ಎತ್ತಿ ಬೀಳಿಸಿ ಒಡೆದು ಹಾಕಿದ. ಅಲ್ಲಿದ್ದವರೆಲ್ಲ ಈ ಕಡೆ ತಿರುಗಿದರು. ಆ ನಿರ್ಮಾಪಕನೂ ಈ ಯುವಕನೆಡೆಗೆ ಉಗ್ರದೃಷ್ಟಿ ಬೀರಿ ನಿಂದನೆಯ ಮಾತಾಡಿದ. "ಕ್ಷಮಿಸಬೇಕು ಮಹಾಶಯರೇ - ಈ ಖ್ಯಾತ ನಟ ಎಷ್ಟು ಹೊತ್ತಿನಿಂದ ಅಲ್ಲ- ಎಷ್ಟು ದಿನಗಳಿಂದ ಇಂಥ ಕ್ಯೂನಲ್ಲಿ ನಿಂತು ನಿಮ್ಮ ಸಂದರ್ಶನಕ್ಕಾಗಿ ನಿಮ್ಮ ಅನುಗ್ರಹಕ್ಕಾಗಿ ಕಾಯುತ್ತಿದ್ದಾನೆಂಬುದು ನಿಮಗೆ ತಿಳಿಯಲೆಂದೇ ನಾನು ಈ ಕೆಲಸ ಮಾಡಿದ್ದು" ಎಂದುಬಿಟ್ಟ ಆ ಗಂಭೀರ ಯುವಕ. ಅವರೇ ನಟಸಾರ್ವಭೌಮ ಪೃಥ್ವಿರಾಜ್ ಕಪೂರ್, 'ಕಪೂರ್ ವಂಶದ ಹಿರಿಯ ತಲೆ.'

ಸಂದರ್ಶನ ಸಿಡಿಮಿಡಿಯಿಂದಲೇ ನಡೆಯಿತು. ನಮ್ಮ ಯುವಕ ಅದರಲ್ಲಿ ನಪಾಸು!


ಕಲಾಲೋಕದಲ್ಲಿ ಕರ್ಪೂರದಂತೆ ಬದುಕು ಸುಟ್ಟುಕೊಂಡವರು ಪೃಥ್ವಿರಾಜ್ ಕಪೂರ್. ಆ ಲೋಕಕ್ಕೊಂದು ಅದ್ಭುತ ಕೊಡುಗೆಯಾಗಿ ನಿಂತ ಈ ಧೀಮಂತ ವ್ಯಕ್ತಿ ತಮ್ಮ ಕುಟುಂಬವನ್ನೇ ಚಿತ್ರಪ್ರಪಂಚದ ಕೈಂಕರ್ಯಕ್ಕೆ ನಿಲ್ಲಿಸಿದರು. ಈ ತಿಂಗಳಿನ 29ಕ್ಕೆ ಅವರ 20ನೇಯ ಪುಣ್ಯತಿಥಿ.

ಕೊನೆಗೇನಾಯಿತೋ ಏನೋ - ಅದರಲ್ಲಿ ಒಂದು ಪ್ರಮುಖ ಪಾತ್ರ ದೊರೆಯಿತು- ಪೃಥ್ವೀರಾಜನಿಗೆ. ಈ ವೇಳೆಗಾಗಲೇ ಅವನಿಗೆ ಎಂಟು ಹತ್ತು ಮೂಕಿ ಚಿತ್ರಗಳಲ್ಲಿಯೂ, ರಂಗ ಮಂಚದ ಮೇಲೆಯೂ ಅಭಿನಯಿಸಿದ ಅನುಭವ ಇತ್ತಲ್ಲ. ''ಆಲಂಆರಾ'' ಟಾಕಿ ಚಿತ್ರದಿಂದ ಮುಂದೆ ಪೃಥ್ವಿರಾಜ್‌ರ ಭಾಗ್ಯ ಬಲಿಯಿತು.

1906ರ ನವೆಂಬರ್ 3ರಂದು ಪೇಷಾವರ್ (ಈಗ ಪಾಕೀಸ್ತಾನ್‌ದಲ್ಲಿ ಸೇರಿಹೋಗಿದೆ) ಬಳಿಯ 'ಸಮುಂದ್ರಿ' ಎಂಬ ಗ್ರಾಮದ ಪಠಾಣ ಮೂಲವೊಂದರ ವಂಶಕ್ಕೆ ಸೇರಿದ ಲಾಲಾ ಬಶೇರನಾಥ್ ಎಂಬ ಗ್ರಾಮ ಮುಖ್ಯರ ಮೊದಲ ಮಗನಾಗಿ ಇವರ ಜನನ. ಹುಟ್ಟು ಹೆಸರು ಪೃಥ್ವಿನಾಥ್. ಮೂರನೆಯ ವರ್ಷದಲ್ಲೇ ಪೃಥ್ವೀಗೆ ಮಾತೃವಿಯೋಗ. ಬಾಲ್ಯ ವಿದ್ಯಾಭ್ಯಾಸಗಳು ಅಲ್ಲಿಯೇ. ಹೈಸ್ಕೂಲು ಶಿಕ್ಷಣ ಮಾತ್ರ ಲ್ಯಾಲ್‌ಪುರದ ಖಾಲ್ಸಾ ಹೈಸ್ಕೂಲಲ್ಲಿ. ಅಕಾಲಿ ದಳದ ನೇತಾ ಮಾಸ್ಟರ್ ತಾರಾಸಿಂಗರು ಅಲ್ಲಿ ಮುಖ್ಯೋಪಾಧ್ಯಾಯರಾಗಿದ್ದರಂತೆ! ಹದಿನಾರನೇ ವರ್ಷಕ್ಕೆ ಮೆಟ್ರಿಕ್ ಪಾಸು. ಅದೇ ವರ್ಷ 'ರಮಾ ಸರಿ' ಎಂಬ ಕನ್ಯೆ ಪೃಥ್ವಿನಾಥರ ಕೈ ಹಿಡಿದು ಶ್ರೀಮತಿ ರಮಾ ಪೃಥ್ವಿನಾಥ್ ಆದರು. ಮುಂದೆ ಪೃಥ್ವಿ ಹೋದದ್ದು ಪೇಷಾವರದ ಎಡ್ವರ್ಡ್ಸ್ ಕಾಲೇಜಿನಲ್ಲಿ ಬಿ.ಎ. ಓದಲು. ಅಲ್ಲಿ ಅವರಲ್ಲಿನ ಕಲಾವಿದನನ್ನು ಗುರುತಿಸಿದ ಪ್ರೊಫೆಸರ್ ಜೈದಯಾಳ್ ಎಂಬುವರು ನಾಟಕರಂಗ ಸೇರಲು ಪೃಥ್ವಿಯವರನ್ನು ಹುರಿದುಂಬಿಸಿದರಂತೆ. ಪೃಥ್ವಿಯವರಿಗೆ ನಾಟಕ-ಅಭಿನಯ-ಸಂಗಿತಗೀಳು ಹಿಡಿದದ್ದು ಹೀಗೆ. ಹಾಡಿ - ನಟಿಸಿ ಕಾಲೇಜಿನ ಉದ್ದಾಮ ನಟರೆಂದು ಖ್ಯಾತರಾದರು. 1927ರ ವೇಳೆಗೆ ಕಾನೂನು ಶಾಸ್ತ್ರವನ್ನು ಅಭ್ಯಸಿಸಲು ಲಾಹೋರಿಗೆ ಹೋದಾಗ ಅಲ್ಲಿ ಅವರ ಜೀವನಕ್ಕೊಂದು ನಿರ್ಣಾಯಕ ತಿರುವು ಬಂತು. ಅಭ್ಯಾಸವನ್ನು ಅಲ್ಲಿಯೇ ಬಿಟ್ಟು ಮುಂಬೈಗೆ ಬಂದು ರಂಗ ಜಗತ್ತಿನ ಬಾಗಿಲು ತಟ್ಟಿದರು. ಷೇಕ್ಸ್‌ಪಿಯರ್ ನಾಟಕಗಳನ್ನಾಡುತ್ತಿದ್ದ ಗ್ರಾಂಟ್ ಆಂಡರ್ಸನ್ ಕಂಪನಿಯಲ್ಲಿ ನಟನಾಗಿ ಸೇರಿಕೊಂಡರು ಥ್ವಿ. ಅಲ್ಲಿ ಸಾಕಷ್ಟು ಪರಿಶ್ರಮ ಪಡೆವ ವೇಳೆಗೆ ಆ ಕಂಪನಿ ತನ್ನದೇ ಆದ ಕಾರಣಗಳಿಂದ ಮುಚ್ಚಿತು. ಆಗ ತಾನೇ ಮುಂಬೈಯಲ್ಲಿ ತಯಾರಾಗುತ್ತಿದ್ದ ಮೂಕಿ ಚಿತ್ರಗಳಲ್ಲಿ ಸಣ್ಣಪುಟ್ಟ ಪಾತ್ರಗಳನ್ನು ಮಾಡುವ ಅನಿವಾರ್ಯತೆ ಪೃಥ್ವಿಗೆ. ಶ್ರದ್ಧೆಯಿಂದ ದುಡಿದರು. ಅಂಗಳದಿಂದ ಅಟ್ಟಕ್ಕೇರಿದರು. ಯಶಸ್ವಿಯಾದರು. ಅವರ ಮೊದಲು ಅಭಿನಯಿಸಿದ ಮೂಕಿಯ ಹೆಸರು 'ಛಾಲೆಂಜ್'. ಅದು ಪೃಥ್ವಿಯವರ ಸಾಮರ್ಥ್ಯಕ್ಕೇ ಒಂದು ಸವಾಲು! ಅದರಲ್ಲಿ ಜಯಶಾಲಿಯಾಗಿ 'ಪೃಥ್ವಿನಾಥ್' ಬದಲಿಗೆ 'ಪೃಥ್ವಿರಾಜ್' ಆದರು. ಚಿತ್ರರಂಗದಲ್ಲಿ ಖ್ಯಾತಿಯ ಸೋಪಾನಗಳನ್ನೇರುತ್ತಲೇ ನಡೆದರು.

ಮುಂಬಯಿಯಲ್ಲಿ ಮೂರು ನಾಲ್ಕು ವರ್ಷಗಳ ಕಾಲ ಕೆಲವು ಖ್ಯಾತ ಸ್ಟುಡಿಯೋ ಹಾಗೂ ಚಿತ್ರ ಸಂಸ್ಥೆಗಳಲ್ಲಿ ಸಂಬಳಕ್ಕೆ ದುಡಿದ (Star Staffer) ಪೃಥ್ವಿರಾಜ್‌ಗೆ 1933ರ ವೇಳೆಗೆ ಕಲ್ಕತ್ತೆಯ ಖ್ಯಾತ ನ್ಯೂ ಥಿಯೇಟರ್ಸ್ ಸಂಸ್ಥೆಯ ಆಹ್ವಾನ. 'ಬಂಗಾಳಿಯಲ್ಲದವರು ಭಾರತೀಯರೇ ಅಲ್ಲ' ಎಂದು ಬೀಗುವ ಮುಖ್ಯ ಬಂಗಾಲಿ ನಟಶ್ರೇಷ್ಠರಿಗೂ ನಿರ್ದೇಶಕ-ನಿರ್ಮಾಪಕರಿಗೂ ಅಲ್ಲಿ ಪೃಥ್ವಿರಾಜ್ ಎಂದರೆ ಅಚ್ಚುಮೆಚ್ಚು. ವಿದ್ಯಾಪತಿ, ಸವೇರಾ, ಪ್ರೆಸಿಡೆಂಟ್, ಮಂಜಿಲ್ ಎಂಬ ಖ್ಯಾತ ಚಿತ್ರಗಳಲ್ಲಿ ಕನ್ನನ್, ಸೈಗಲ್, ಪಂಕಜ್ ಮಲ್ಲಿಕ್ ಮೊದಲಾದವರೊಂದಿಗೆ ಅಭಿನಯಿಸುವ ಅವಕಾಶ.

1939ರಲ್ಲಿ ಮತ್ತೆ ಮುಂಬೈಗೆ ಹಿಂದಿರುಗಿದ ಪೃಥ್ವಿರಾಜ್ ನಟರಾಗಿ ಸೇರಿಕೊಂಡಿದ್ದು ಚಂದೂಲಾಲ್ ಶಾ - ಗೋಹರ್ ಬಾಯಿಯವರ ರಣಜಿತ್ ಸಂಸ್ಥೆಯಲ್ಲಿ. ಅಂದಿನ ಚಿತ್ರಜಗತ್ತಿನ ಶ್ರೇಷ್ಠ ನಟ ನಟಿಯರು ವಾಸವಾಗಿದ್ದ ಮಾಟುಂಗಾದಲ್ಲಿಯೇ ಇವರ ವಾಸ್ತವ್ಯ. ಸುಪ್ರಸಿದ್ಧ ಗಾಯಕ ಸೈಗಲ್ ಕೂಡ ಮುಂದೆ ಮುಂಬೈಗೆ ಬಂದಾಗ ಪೃಥ್ವಿರಾಜರ ಮನೆಗೆ ಸಮೀಪದಲ್ಲೇ



ಋಷಿಯಂತೆ ಕಾಣುವ ಪೃಥ್ವಿ (1940ರ ಸುಮಾರು)



'ಅಲೆಕ್ಸಾಂಡರ್' ವೇಷದಲ್ಲಿ

ಬಿಡಾರ ಹೂಡಿದ್ದನಂತೆ! ಅಲ್ಲದೆ ಕೆ.ಎನ್. ಸಿಂಗ್, ಮುಬಾರಕ್ ಮರ್ಚೆಂಟ್, ನಾಯಂಪಲ್ಲಿ ಮೊದಲಾದವರೆಲ್ಲ ಇದ್ದದ್ದೂ ಅಲ್ಲಿಯೇ. ರಣಜಿತ ಫಿಲಂ ಕಂಪನಿಯ ಮಾಲೀಕ ಚಂದೂಲಾಲ್ ಷಾ, ಅವರ ಪತ್ನಿ ಗೋಹರಬಾಯಿ, ನಿರ್ದೇಶಕ ಕಿದಾರ್ ಶರ್ಮ, ನಂದಾ, ಮಿರ್ಜಾ ಮುಷ್ರಫ್ ಮೊದಲಾದವರಿಗೆಲ್ಲ ಪೃಥ್ವಿ ಎಂದರೆ ಪರಮ ಸಂತೋಷ. 'ಆಜ್ ಕಾ ಹಿಂದೂಸ್ತಾನ್', 'ಹರಿಶ್ಚಂದ್ರ-ತಾರಾಮತಿ', 'ಮಹಾರಥಿ ಕರ್ಣ', 'ನಳ-ದಮಯಂತಿ', ಮೊದಲಾದ ಪೌರಾಣಿಕ ಚಿತ್ರಗಳಲ್ಲದೆ ತಾಜ್‌ಮಹಲ್‌ರವರ 'ಉಜಾಲಾ' ನಂದಾರವರ 'ಇಶಾರಾ', 'ಆಂಖ್‌ಕಿ ಶರ್ಮ್', 'ಪಾಗಲ್' ಮುಂತಾದ ಸಾಮಾಜಿಕ ಚಿತ್ರಗಳಲ್ಲೂ ಅಭಿನಯಿಸಿ ತಮ್ಮ ಅಭಿನಯ ಸಾಮರ್ಥ್ಯದಿಂದ ''ನಟ ಸಾರ್ವಭೌಮ ಪೃಥ್ವಿರಾಜ್'' ಎಂದೆನ್ನಿಸಿಕೊಂಡರು. ಆರು ಅಡಿಗಳಿಗೂ ಮಿಕ್ಕಿದ ಕಾಶ್ಮೀರ ಸೇಬಿನ ಬಣ್ಣ, ಧೀರ ಗಂಭೀರ ನಡಿಗೆಯ ಈ ಭವ್ಯ ಶರೀರಿ ನಟಸಾರ್ವಭೌಮನೊಂದಿಗೆ ನಾಯಕಿಯಾಗಿ ಅಭಿನಯಿಸಲು ರೂಪಸಿಯರ ದಂಡೇ ತುದಿಗಾಲ ಮೇಲಿತ್ತು ಆಗ! 'ಉಜಾಲಾ', 'ಪಾಗಲ್'ಗಳಲ್ಲಿ ಸಾಯಿರಾಬಾನೂನ ತಾಯಿ ಅರ್ಥಾತ್ ದಿಲೀಪ್‌ಕುಮಾರನ ಅತ್ತೆ ನಾಸೀಂ ಬಾನು ಅವರ ನಾಯಕಿ. 'ಮಹಾರಥಿ ಕರ್ಣ', 'ವಿಕ್ರಮಾದಿತ್ಯ', ನಳ-ದಮಯಂತಿ' ಚಿತ್ರಗಳಲ್ಲಿ ಮೊನ್ನೆ ತಾನೆ ಗತಿಸಿದ ನೂತನ್‌ಳ ತಾಯಿ (ನಮ್ಮ ಕಾಲದ ರಾಮ ರಾಜ್ಯ, ಭರತ್ ಮಿಲಾಪ್‌ಗಳ ಸೀತೆ) ಶೋಭನಾ ಸಮರ್ಥ್ ನಾಯಕಿಯಾದರೆ 'ಏಕ್ ರಾತ್'ನಲ್ಲಿ ಸೌಂದರ್ಯ ರಾಣಿ ನೀನಾ, 'ಇಶಾರಾ'ದಲ್ಲಿ ಇನ್ನೂ ಎಳೆಮೊಗ್ಗಾಗಿ ಅರುಳುತ್ತಿದ್ದ ಸುರೈಯ್ಯಾ!

ಪೃಥ್ವಿಯದು ಅಪ್ಪಟ ಹದಿನಾರಾಣೆ ಭಾರತೀಯತೆ. ಹೀಗಾಗಿ ಅವರಿಗೆ 'ಉಜಾಲಾ', 'ಪಾಗಲ್', 'ಇಶಾರಾ'ಗಳಲ್ಲಿ ನಾಯಕ ಪಾತ್ರಗಳಿಗಿಂತ ನಳ- ವಿಕ್ರಮಾದಿತ್ಯ-ಕರ್ಣ - ಹರಿಶ್ಚಂದ್ರದಂಥ ಪಾತ್ರಗಳ ಮೇಲೇ ಬಲು ಮಮತೆ. ಹರಿಶ್ಚಂದ್ರನಾಗಿ, ಕರ್ಣನಾಗಿ, ವಿಕ್ರಮಾದಿತ್ಯನಾಗಿ, ನಳನಾಗಿ ಬಂದ ಅವರನ್ನು ನೋಡಿದ ಮೇಲೆ ಆ ಪಾತ್ರಗಳು ಎಲ್ಲಿ ನೆನಪಿಗೆ ಬಂದರೂ ಅವರ ರೂಪ, ಆಕೃತಿಗಳೇ ಕಣ್ಣಿಗೆ ಕಟ್ಟುತ್ತವೆ. ಇಂಥವರನ್ನು ಗಂಟೆಗಟ್ಟಲೆ ಕ್ಯೂ ನಿಲ್ಲಿಸಿ, ಕಡೆಗಣ್ಣಿಂದಲೂ ನೋಡದೆ ಕೊನೆಗೆ ಬೇಸತ್ತು ಆತ ಗಾಜಿನ ಉಂಡೆ ಕೆಳಗೆ ಬೀಳಿಸಿದ್ದಕ್ಕೆ ಕೆರಳಿ ನಿಂದಿಸಿದ ಆರ್ದೇಶಿರ್ ಇರಾನಿಯವರೇ ಮುಂದೆ ಪೃಥ್ವಿರಾ

ಜರ ಮನೆಯ ಮುಂದೆ - ತಮ್ಮ ಚಿತ್ರದಲ್ಲಿ ಅಭಿನಯಿಸಲು ಕಾಂಟ್ರಾಕ್ಟ್ ಕೈಲಿ ಹಿಡಿದು ಕ್ಯೂ ಕಾಯುವಂತಾಗಿದ್ದರೆ ಈ ಪೃಥ್ವಿರಾಜ್ ಬರಿಯ ಮಹಾರಥರಲ್ಲ; ಅಪ್ರತಿರಥ!

ಅಂದಿನ ದಿನಗಳಲ್ಲಿ ನಟರು ಸ್ವಯಂ ಗಾಯಕರೂ ಆಗಿರಬೇಕಾಗಿತ್ತು. ಭವ್ಯದೇಹಿಗಳಾಗಿದ್ದು ಕುದುರೆ ಸವಾರಿ, ಕತ್ತಿವರಸೆ ಮೊದಲಾದವುಗಳನ್ನು ಕಲಿತಿರಬೇಕಾಗಿತ್ತು. ಎಂಬತ್ತು ಪೌಂಡ್ ತೂಕದ ನಾಯಕಿಯನ್ನು ಅನಾಮತ್ ಎತ್ತಿ ಕುದುರೆ ಮೇಲೆ ಕೂರಿಸಿಕೊಂಡು ದೌಡಾಯಿಸಬೇಕಾಗಿತ್ತು. ಪೃಥ್ವಿರಾಜ್ ಈ ಎಲ್ಲ ಸಾಹಸಗಳಲ್ಲೂ ಸಮರ್ಥರಾಗಿದ್ದರು. ಅಂದಿನ ಚಿತ್ರನಟರಿಗೆ ಇದ್ದ ಮಹದಾಂಕ್ಷೆಗಳಲ್ಲಿ ಒಂದು: ಸೋಹ್ರಾಬ್ ಮೋದಿಯವರ ಚಿತ್ರದಲ್ಲಿ ಅಭಿನಯಿಸಿ ಹೆಸರು ಪಡೆಯಬೇಕು; ಎರಡನೆಯದು: ಶಾಂತಾರಾಂರ ಕೈಲಿ ದುಡಿದು 'ಸೈ' ಎನ್ನಿಸಿಕೊಳ್ಳಬೇಕು. ಇದರಲ್ಲಿ ಒಂದು ಸಿದ್ಧಿಸಿದರೂ ಆತ ಅಥವಾ ಆಕೆ ತನ್ನ ಜನ್ಮ ಸಾರ್ಥಕವಾಯಿತೆಂದು ಭಾವಿಸುತ್ತಿದ್ದರು.

1939ರ ಸುಮಾರಲ್ಲಿ ಸೋಹ್ರಾಬ್ ಮೋದಿಯವರು ಮಿನರ್ವಾ ಲಾಂಛನದಡಿಯಲ್ಲಿ ಜಗತ್ತನ್ನೇ ಜಯಿಸ ಹೊರಟ ಅಲೆಗ್ಸಾಂಡರನ ಜೀವನವನ್ನು ಚಿತ್ರೀಕರಿಸಲು ಹೊರಟಾಗ ನಡೆದ ಒಂದು ಘಟನೆಯನ್ನು ಇಲ್ಲಿ ವಿವರಿಸಲೇಬೇಕು. ಆ ಸಿಕಂದರ್ ಪಾತ್ರಕ್ಕೆ ಯಾರು ಸರಿಯಾದಾರು ಎಂಬುದನ್ನು ಅವರು ಪರೀಕ್ಷಿಸುವಾಗ ನಡೆದ ಘಟನೆಯಿದು. ಬಾಬೂರಾವ್, ವಸಂತರಾವ್ ಮೊದಲಾದ ಖ್ಯಾತ ಮರಾಠಿ ಪೈಲ್ವಾನರುಗಳೂ, ನಾಂದ್ರೇಕರ್, ಅರುಣ್, ಮಾಸ್ಟರ್ ವಿಠಲ್, ಲಾಲಾಯಾಕೂಬ್ ಮೊದಲಾದ ಘಟಾನುಘಟಿಗಳೂ ಈ 'ಸ್ಕ್ರೀನ್ ಟೆಸ್ಟ್' ಗೆ ಬಂದಿದ್ದರಂತೆ. ಅವರೆಲ್ಲ ನಟಿಸಬಲ್ಲರು, ಆಡಬಲ್ಲರು, ಓಡಬಲ್ಲರು, ಚಕ್ರ-ಭಲ್ಲೆ ಎಸೆಯಬಲ್ಲರು. ಕುದುರೆ ಸವಾರಿ ಮಾಡಬಲ್ಲರು. ಆದರೆ ಅಲೆಗ್ಸಾಂಡರನ ಉಡುಪು, ಕವಚ, ಶಿರಸ್ತ್ರಾಣ ಪಾದತ್ರಾಣಗಳನ್ನು ಧರಿಸಿ ಕುದುರೆ ಏರಲಾರರು. ಇನ್ನು ಅದನ್ನು ಆ ಮೇಕ್‌ಅಪ್‌ನಲ್ಲಿ ಓಡಿಸಿಕೊಂಡು ಹೋಗುವುದೇನು ಬಂತು? ಹತ್ತುವುದರಲ್ಲೇ ಜಾರಿಬೀಳುತ್ತಾರೆ. ಇಲ್ಲವೆ ಕೊಂಚ ದೂರ ಕ್ರಮಿಸುವುದರಲ್ಲೇ ಅದೇ ಕುದುರೆ ಅವರನ್ನು ಎತ್ತಿ ಹಾಕುತ್ತದೆ. ಕೈಗೆ ಸಿಗದಂತೆ ಓಡಿಹೋಗುತ್ತದೆ. ಏನು ಮಾಡಬೇಕು?

ಕೊನೆಗೆ ಪೃಥ್ವಿರಾಜ್ ಬಂದರಂತೆ, ಇಂಡೋ-ಗ್ರೀಕ್ ಭವ್ಯ ರೂಪದ ಆ ವ್ಯಕ್ತಿ ಅಲೆಗ್ಸಾಂಡರನ ಉಡುಪು ಧರಿಸಿ, ತಲೆಗೆ, ಆ ಶಿರಸ್ತ್ರಾಣ ಏರಿಸಿ, ಆ ಕುದುರೆ (ಬ್ಯೂಸಿಫೆಲಾಸ್ ಇದ್ದಿರಬೇಕು)ಯ ಅಯಾಲಿನ ಮೇಲೆ ಎರಡು ಬಾರಿ ಮೃದುವಾಗಿ ಕೈಯಾಡಿಸಿ, ಪ್ರೀತಿಯ ಒಂದು ಪೆಟ್ಟು (pat) ತಟ್ಟಿ ಲಗಾಮ ಹಿಡಿದು ಮೇಲೇರಿದವರೇ ಆ ಕುದುರೆಯನ್ನು ಆ ಕಣದಲ್ಲಿ ಎರಡು ಸುತ್ತು ಸುತ್ತಿಸಿ ಸುಸ್ತು ಹೊಡಿಸಿದರಂತೆ. ಸೋಹ್ರಾಬ್ ಮೋದಿಗೆ ಅಲೆಗ್ಸಾಂಡರ್ ಸಿಕ್ಕುಬಿಟ್ಟ! ಪೃಥ್ವಿಯೇ ಸಿಕಂದರ್. ಆಚಾರ್ಯ ಆತ್ರೇಯವರ ಮಡದಿ - ಶ್ರೀಮತಿ ವನಮಾಲಾ ಬಿ.ಎ.ಬಿ.ಟಿ., ರುಕ್ಸಾನಾ; ಸ್ವಯಂ ಸೋಹ್ರಾಬ್ ಮೋದಿ ಪುರೂರವ; 'ಲಾರಲಪ್ಪ ಹುಡುಗಿ' ಮೀನಾ, ಜಹುರ್‌ರಾಜ, ಅಲ್‌ನಜೀರ್ ಮೊದಲಾದವರಲ್ಲ ಇದ್ದ ಸಿಕಂದರ್ 1939-40ರಲ್ಲಿ ಪ್ರದರ್ಶನಕ್ಕೆ ಬಂದು ಪೃಥ್ವಿರಾಜರು ನಿಜಕ್ಕೂ ನಟಸಾರ್ವಭೌಮರೇ ಆಗಿ ಹೋದರು. ಆ 'ಸಿಕಂದರ್'ಗೆ ಸಾಹಿತ್ಯ-ಸಂಭಾಷಣೆ ಬರೆದವರು ಪಂಡಿತ್ ಸುದರ್ಶನ್. ಅವರದೇ 'ಸಿಕಂದರ್' ನಾಟಕ ಪುಸ್ತಕದ ಮೇಲೆ ಇಂದಿಗೂ ಇರುವ ಚಿತ್ರ, ಸಿಕಂದರ್ ರೂಪದಲ್ಲಿರುವ ಪೃಥ್ವಿರಾಜ್‌ರದ್ದು - ಗುಂಗುರು ಕೂದಲಿನ ಕತ್ತಲು ಬೆಳಕಿನ ಚಿತ್ರ.

ಇಂಥ ಅಲೆಗ್ಸಾಂಡರ್, ಇಡೀ ಭಾರತದ ಹೃದಯವನ್ನೇ ಗೆದ್ದರೂ ಶಾಂತಾರಾಮರನ್ನು ಮಾತ್ರ ಗೆಲ್ಲಲಾರದೆ ಹೋದರು. ಆಗಾಗ ಎಲ್ಲಾದರೂ ಯಾವುದಾದರೂ ಥಿಯೇಟರ್ ಬಾಡಿಗೆಗೆ ಪಡೆದು ಪೃಥ್ವಿರಾಜರು 'ಶಾಕುಂತಲಾ' ನಾಟಕ ಆಡುತ್ತಿದ್ದರಂತೆ. ಅದರಲ್ಲಿ ಆ ಭವ್ಯ ಪುರುಷ ದುಷ್ಯಂತನಾಗಿ ಪೃಥ್ವಿ ನಟಿಸಿದರೆ ಜೋಹ್ರಾ,

ಎಂಬ ಮುಸ್ಲಿಂ ಯುವತಿ ಶಕುಂತಲೆಯ ಪಾತ್ರ ಮಾಡುತ್ತಿದ್ದಳಂತೆ. ದುಷ್ಯಂತನ ಪಾತ್ರದಲ್ಲಿ ಅವರನ್ನು ಮೆಚ್ಚಿಕೊಂಡ ಜನ ಸಹಸ್ರ-ಸಹಸ್ರ ಸಂಖ್ಯೆಯಲ್ಲಿ '' ಅವರನ್ನು ದುಷ್ಯಂತರನ್ನಾಗಿ ಮಾಡಿ, ಹೇಗೂ ಜಯಶ್ರೀ ಶಾಕುಂತಲೆಯಾಗೇ ಆಗುತ್ತಾಳಲ್ಲ!'' ಎಂದು ಶಾಂತಾರಾಮರಲ್ಲಿ ಖುದ್ದಾಗಿ ಹಾಗೂ ಪತ್ರ ಮುಖೇನ ಮೊರೆಯಿಟ್ಟರಂತೆ. ಸಂಶಯಗ್ರಸ್ಥ ಶಾಂತಾರಾಂ ಅದಾಗಗೊಡಲೇ ಇಲ್ಲ ಎಂದು ಒಂದು ಸುದ್ದಿ! ಆ ಪಾತ್ರ ಅದಕ್ಕೆ ಎಷ್ಟೂ ಸರಿಹೊಂದದ - ಚಂದ್ರಮೋಹನ್‌ಗೆ ಹೋಯಿತು. ಮುಂದೆ ಅದೇ ಶಾಂತಾರಾಂ ' ದಹೇಜ್' ನಿರ್ಮಿಸಿದಾಗ ಪೃಥ್ವಿರಾಜರನ್ನು ಜಯಶ್ರೀಯ ತಂದೆಯ ಪಾತ್ರದಲ್ಲಿ ನಿಯೋಜಿಸಿದರು. ಆದರೆ ಪೃಥ್ವಿರಾಜರು ಇದಾವುವನ್ನೂ ಮನಸ್ಸಿಗೆ ತಂದುಕೊಳ್ಳದೆ ತಮ್ಮ ಪಾಡಿಗೆ ತಾವಿದ್ದು ಪಾಲಿಗೆ ಬಂದದ್ದನ್ನು ಸಂತೋಷದಿಂದ ಸ್ವೀಕರಿಸಿದರು.

ಕ್ರಮೇಣ ಚಿತ್ರರಂಗದ ರೂಪರೇಖೆಗಳೂ ರಂಗು ಢಂಗುಗಳೂ ಮಾನ ಮೌಲ್ಯಗಳೂ ಬದಲಾದ ಹೊಸ ಸೂಚನೆ ತೋರಿದವು. ಮೋತೀಲಾಲ್, ಈಶ್ವರಲಾಲ್, ಕಾಂತಿಲಾಲ್, ಅಶೋಕಕುಮಾರ್ ಮೊದಲಾದ ಯುವಕರು ಪ್ರವೇಶಿಸಿ ಕರ್ಣ, ವಿಕ್ರಮಾದಿತ್ಯರ ಬೆಲೆ ಇಳಿವ ಸೂಚನೆ ಬಂದಾಗ ಪೃಥ್ವಿಯವರು ಸ್ವಲ್ಪವೂ ವಿಚಲಿತರಾಗದೆ ಮುಂಚೂಣಿಯಿಂದ ಹಿಂದೆ ಸರಿದರು.'ನಿಜವಾದ ಕಲೆ ಇರುವುದು ರಂಗಮಂಟಪದಲ್ಲೇ ವಿನಾ ಚಲನಚಿತ್ರಗಳಲ್ಲಲ್ಲ' ಎಂಬ ಸತ್ಯವನ್ನು ಬಲು ಮೊದಲೇ ಮನಗಂಡ ಅವರು 1944ರ ವೇಳೆಗೇನೇ ಮುಂಬಯಿಯಲ್ಲಿ 'ಪೃಥ್ವಿ ಥಿಯೇಟರ್ಸ್' ಎಂಬ ನಾಟಕ ಸಂಸ್ಥೆ ಹುಟ್ಟು ಹಾಕಿ ನಾಡಿನ ಉದ್ದಗಲಕ್ಕೂ ಅದರೊಂದಿಗೆ ಸಂಚರಿಸಿ ನಾಟಕ ಪ್ರದರ್ಶನ ನೀಡಿದ್ದರು. ದೀವಾರ್, ಗದ್ದಾರ್, ಪಠಾಣ, ಪೈಸಾ ಎಂಬ ಖ್ಯಾತ ನಾಟಕಗಳ ಪ್ರದರ್ಶನ ನೀಡುತ್ತಿದ್ದ ಅವರು 1945-46ರ ಸುಮಾರಿನಲ್ಲಿ ಬೆಂಗಳೂರಿಗೂ ಬಂದು ಇಲ್ಲಿನ (ಅಂದಿನ) ಗುಬ್ಬಿ ವೀರಣ್ಣ ರಂಗ ಮಂದಿರದಲ್ಲಿ ಆ ನಾಟಕಗಳನ್ನು ಪ್ರದರ್ಶಿಸಿದ್ದನ್ನು ನೋಡಿದ್ದವರು ಇಂದಿಗೂ ಇದ್ದಾರೆ. (ಪೃಥ್ವಿ ಥಿಯೇಟರ್ಸ್ ತಂಡದವರು ಬಿಡಾರ ಹೂಡಿದ್ದು ಮಲ್ಲೇಶ್ವರಂ ಸರ್ಕಲ್ ಸಮೀಪದಲ್ಲಿರುವ 'ರತನ್ ಮಹಲ್' ಎಂಬಲ್ಲಿ. ಅದು ಇಂದಿಗೂ ಅಲ್ಲಿದೆ.)

ಈ ಸಂಸ್ಥೆಯಲ್ಲಿ ಕೆಲಸ ಮಾಡಿ ಹೆಸರು ಮಾಡಿದವರ ಪಟ್ಟಿ ತುಂಬಾ ದೊಡ್ಡದು. ಇಂದರ್‌ರಾಜ್ ಆನಂದ್, ರಮಾನಂದ ಸಾಗರ್, ರಮೇಶ ಸೆಹಗಲ್, ಮೋಹನ ಸೆಹಗಲ್ ಮೊದಲಾದ - ನಂತರ ಬಂದ ಚಿತ್ರ ನಿರ್ದೇಶಕರೆಲ್ಲ- ಪೃಥ್ವಿ ಥಿಯೇಟರ್ಸ್‌ನಿಂದ ಹೊರಬಿದ್ದವರು. ಆನಂತರ ಪ್ರವೇಶಿಸಿದ ಯುವ ಪೀಳಿಗೆಯ ಸಜ್ಜನ್, ಚಂದ್ರಾವತಿ ಸಪ್ರು, ಬಿ.ಎಂ. ವ್ಯಾಸ್, ಶಂಕರ್-ಜೈಕಿಷನ್, ರಾಜ್‌ಕಪೂರ್- ಎಲ್ಲ ಪೃಥ್ವಿ ಥಿಯೇಟರ್ಸ್‌ನಲ್ಲಿ ನುರಿತು ಬಂದವರು. ದಕ್ಷಿಣದ ಖ್ಯಾತಿವಂತ ನಿರ್ಮಾಪಕ-ನಿರ್ದೇಶಕ ಎಲ್.ವಿ.ಪ್ರಸಾದ್ ಕೂಡ ಅಲ್ಲಿದ್ದವರು. ಮೊದಮೊದಲು ಪ್ರಮುಖ ಸ್ತ್ರೀ ಪಾತ್ರವನ್ನು ಬಲರಾಜ್ ಸಹಾನಿಯ ಮೊದಲ ಮಡದಿ ದಮಯಂತಿ ಮಾಡುತ್ತಿದ್ದರಂತೆ. ಆಕೆಯ ನಂತರವೆ ಜೋಹ್ರಾ ಬಂದದ್ದು.

ಅವರ ನಾಟಕಗಳು - ಥಿಯೇಟರ್ ದೊರೆಯದ್ದರಿಂದ - ಮಧ್ಯಾಹ್ನ ಹನ್ನೆರಡರಿಂದ ಮೂರರವರೆಗಿನ ಮ್ಯಾಟಿನಿ ಷೋ! ಅಲ್ಲಿಯ ಆಗಿನ ಥಿಯೇಟರುಗಳು ದರಿದ್ರ ದ್ರಾಬೆಗಳು. ತಗಡಿನ ಮೇಲ್ಛಾವಣಿ - ಮುಂಬಯಿಯ ಉರಿ ಬಿಸಿಲು. ಸಹಿಸಲಾರದ ಸೆಕೆ. ಅಷ್ಟಾದರೂ ಪೃಥ್ವಿಯ 'ಶಾಕುಂತಲಾ' ಪ್ರದರ್ಶನ ಹೌಸ್‌ಫುಲ್! ಈ ಧೀರ, ಗಂಭೀರ ಸುಕುಮಾರ ದುಷ್ಯಂತನನ್ನು ನೋಡಲು ಗಂಡುಗಳಿಗಿಂತ ಹೆಣ್ಣುಗಳದ್ದೇ ನೂಕು ನುಗ್ಗಲು. ನೋಡಿದ್ದವರೇ ಮತ್ತೆ ಮತ್ತೆ ಥಿಯೇಟರ್ ಮುಂದೆ ಕ್ಯೂ ನಿಲ್ಲಬೇಕು! ಪೃಥ್ವಿರಾಜ್ ಪ್ರವೇಶಿಸಿದ ಕೂಡಲೇ ರಂಗ ಮಂಚದ ಮೇಲೆಲ್ಲಾ ಹುಚ್ಚೆದ್ದ ಜನ ನೋಟು-ನಾಣ್ಯಗಳನ್ನು - ಪೃಥ್ವಿಗೆ ನಿವಾ



'ಮೊಘಲ್ ಎ ಆಜಂ'ನಲ್ಲಿ ಪೃಥ್ವಿ

ಳಿಸಿ ಎಸೆಯುತ್ತಿದ್ದರಂತೆ. ಅವರ ನಡುವೆ ಶಾಂತಾರಾಮರ ಜಯಶ್ರೀ ಕೂಡ! ತನ್ನ ವ್ಯಾನಿಟಿಬ್ಯಾಗಿನಿಂದ ಹಿಡಿಹಿಡಿ ಬೆಳ್ಳಿನಾಣ್ಯ ತೆಗೆದು ಮುಷ್ಟಿಮುಷ್ಟಿಯಾಗಿ ಪೃಥ್ವಿರಾಜರೆಡೆಗೆ ತೂರುತ್ತಿದ್ದಳಂತೆ. ಇದಾವುದನ್ನೂ ಗಮನಿಸದೆ ಪೃಥ್ವಿರಾಜ್ ತಮ್ಮ ಪಾತ್ರದಲ್ಲೇ ತನ್ಮಯರಾಗಿರುತ್ತಿದ್ದರಂತೆ. ಸೆಕೆತಾಳಲಾರದೆ ಗುಂಪಿನ ಯಾವನೇ ಪ್ರೇಕ್ಷಕ ಫ್ಯಾನ್ ತಿರುಗಿಸಿದರೆ ಸಾಕು ''ಬಂದ್ ಕರೋ ಪಂಖಾ''- ಎಂದು ಗರ್ಜಿಸಿ ಬಿಡುತ್ತಿದ್ದರಂತೆ. ಗರ್,... ಗರ್, ಎಂದು ಶಬ್ದ ಮಾಡುವ ಆ ಫ್ಯಾನ್‌ನಿಂದಾಗಿ ಪಾತ್ರಧಾರಿಗಳ ಏಕಾಗ್ರತೆಗೆ ಭಂಗ ಬರುತ್ತದೆ ಎಂದವರ ಚಿಂತೆ: ಜನ ಅವರಿಗಾಗಿ ಈ ಸೆಕೆಯನ್ನೂ ಸಹಿಸುತ್ತಿದ್ದರು. ಇಷ್ಟಾದರೂ ಪೃಥ್ವಿರಾಜರಿಗೆ 'ತಲೆ ಹೆಗಲ ಮೇಲೇ' ಇತ್ತು.

1945ರ ವೇಳೆಗೆ ಚಿತ್ರರಂಗದಲ್ಲಿ ಮತ್ತೆ ಒಂದು ಮನ್ವಂತರ. ಅಶೋಕಕುಮಾರ್, ಮೋತೀಲಾಲ್, ಈಶ್ವರಲಾಲ್‌ರೂ ಹಿಂದೆ ಸರಿದು ಸುಲೋಚನಾ, ಪ್ರಭಾ, ಮಾಯಾ ಬ್ಯಾನರ್ಜಿ ಬಚ್ಚೊ, ಸುರೇಂದ್ರ, ನಲಿನಿ ಜಯವಂತರ ಕಾಲವೆಲ್ಲ ಮುಗಿದು, ಸೈಗಲ್ ಖುರ್ಷಿದರು ಅದೃಶ್ಯರಾಗಿ, ಶಾಂತಾ ಆಪ್ಟೆ ಸತ್ತು ಆಗಬಾರದ್ದೆಲ್ಲ ಆಗಿ ಹೊಸ ನೀರು ನುಗ್ಗಿತು. ದಿಲೀಪ್, ರಾಜ್, ದೇವಾನಂದ್, ಗುರುದತ್ ಬಂದರು. ಸುರೈಯ್ಯ, ನರ್ಗೀಸ್, ನೂರ್ ಜಹಾನ್, ನಿಗಾರ್, ಮುನವ್ವರ್, ಕಾಮಿನಿ ಕೌಶಲ್, ನಿರೂಪಾರಾಯ್ ನುಗ್ಗಿದರು. ಪೃಥ್ವಿರಾಜ್, ಅಶೋಕ್‌ಕುಮಾರ್, ಕಿಶೋರ್‌ಸಾಹು, ಸೈಗಲ್, ಸುರೇಂದ್ರರಂತೂ ಇನ್ನೂ ಹಿಂದಕ್ಕೆ ಸರಿಯಬೇಕಾಯಿತು. ಚಿತ್ರತಯಾರಿಕೆ ಮೊದಲು ಒಂದು ಮಿಷನ್(Mission) ಆಗಿದ್ದದ್ದು ಬರುಬರುತ್ತ ಮಷಿನ್ ಆಯಿತು. ಹೆಣ್ಣು-ಹೆಂಡ-ದಗ-ಮೋಸಗಳು ಪ್ರತಿಭೆ ಎನ್ನಿಸಿಕೊಂಡವು. ಅದರೊಂದಿಗೆ ರಾಜಿ ಮಾಡಿಕೊಳ್ಳದ ಪೃಥ್ವಿರಾಜರು ತಮ್ಮ ಕಾಲವನ್ನು ಬಹು ಮಟ್ಟಿಗೆ ನಾಟಕರಂಗಕ್ಕೇ ಮೀಸಲಿಟ್ಟರು. ಆದರೂ ಬರುಬರುತ್ತ ಹೆಗ್ಗರುಡನಂತೆ ತನ್ನ ದೈತ್ಯರೆಕ್ಕೆಗಳನ್ನು ಚಾಚುತ್ತಾ ಹೊರಟ ಚಲನಚಿತ್ರ ಜಗತ್ತು ನಾಟಕ ರಂಗವನ್ನೇ ಆಪೋಶನ ತೆಗೆದುಕೊಳ್ಳುತ್ತ ನಡೆಯಿತು. ಕಂಪನಿ ನಷ್ಟ ಅನುಭವಿಸಲಾರಂಭಿಸಿತು. ಅಂಥ ವೇಳೆಗಳಲ್ಲಿ ಪೃಥ್ವಿರಾಜರು ಅಲ್ಲೊಂದು ಇಲ್ಲೊಂದು ಚಿತ್ರಗಳಲ್ಲಿ ಭಾಗವಹಿಸುತ್ತಿದ್ದು ಅದರಿಂದ ಬಂದ ಹಣವನ್ನು ಈ ನಾಟಕ ಸಂಸ್ಥೆಗೇ ಸುರಿದು ಈ ಬೃಹತ್ ಸಂಸಾರದೊಂದಿಗೆ ನಿಜ ಸಂಸಾರವನ್ನೂ ಸರಿದೂಗಿಸುತ್ತ ನಡೆದಿದ್ದರು.

ಅವರ ಜೀವನದಲ್ಲಿ ಘಟಿಸಿದ ಒಂದೆರಡು ವಿಶಿಷ್ಟ ಸಂಗತಿಗಳನ್ನು ನೋಡಿ: ಅವರ ಮನೆಯ ಬಳಿಯೇ ವಾಸಿಸುತ್ತಿದ್ದ ಜಿ. ಮೊಹ್ತಾ ಎಂಬ ಒಬ್ಬ ಚಿತ್ರ ನಿರ್ಮಾಪಕ-ನಿರ್ದೇಶಕರು ಅವರ ಮಿತ್ರರು. 'ಸೇನಾಪತಿ' ಎಂಬ ಒಂದು ಚಾರಿತ್ರಿಕ ಚಿತ್ರಕ್ಕೆ ಪೃಥ್ವಿರಾಜರನ್ನು ಮುಖ್ಯ ಪಾತ್ರಕ್ಕೆ ಆಹ್ವಾನಿಸಿದ್ದರು. ಹಣವೊಂದನ್ನು ಬಿಟ್ಟು ಉಳಿದದ್ದೆಲ್ಲ ಈ ಮೊಹ್ತಾರ ಬಳಿ ಇತ್ತು. ಹಣ ಆದಾಗ ಕೊಡಲಾಗುತ್ತಿತ್ತು. ಯಾರೂ ಹಣ ಕೇಳುತ್ತಿರಲಿಲ್ಲ. ಪಾತ್ರ ಮಾಡಿಕೊಂಡೇ ಹೋಗುತ್ತಿದ್ದರು. ಆದರೂ ಇತರ ಖರ್ಚುಗಳಿಗಾದರೂ ಹಣ ಬೇಕೇ ಬೇಕಲ್ಲ. ಇದರಿಂದಾಗಿ ಚಿತ್ರ ತಯಾರಿಕೆ ಕುಂಟುತ್ತ - ಎಡಹುತ್ತ ನಡೆದಿತ್ತು. ಒಂದು ದಿನ ಪೃಥ್ವಿರಾಜರಿಗೆ ತೀರ ಹಣದ

ಅಗತ್ಯವಾದಾಗ - ಅದೂ ತಡೆಯಲಾರದಾದಾಗ - ಸ್ವಲ್ಪ ಗಟ್ಟಿಯಾಗಿ ಮಾತಾಡಲೇ ಬೇಕಾಯಿತು. ದೊಡ್ಡ ಸೆಟ್ ಹಾಕಿ ಇನ್ನೇನು ಷೂಟಿಂಗ್ ಶುರುವಾಗಲಿದೆ ಎನ್ನುವಾಗಲೂ ಪ್ರಮುಖ ಪಾತ್ರಧಾರಿ ಪೃಥ್ವಿ ಮೇಕ್-ಅಪ್ ಮಾಡಿಕೊಳ್ಳದೆ ಹಾಗೇ ಕೂತಿದ್ದರು. ''ಇಂದು ಐದು ಸಾವಿರ ಕೈಗೆ ಬಾರದೆ ನಾನು ಪಾರ್ಟು ಮಾಡುವುದೇ ಇಲ್ಲ'' ಎಂದು ಮುನಿದುಕೂತರು. ಮೊಹ್ಲಾ ಅಸಹಾಯಕ ನಗುನಕ್ಕು ಕೈ ಹೊಸೆದರೂ ಉಪಯೋಗವಾಗಲಿಲ್ಲ. ''ಆಗಲಪ್ಪ - ನೀನು ಮೇಕ್‌ಅಪ್‌ಗೆ ಕೂತುಕೋ. ಐದು ಸಾವಿರ ಈಗ ತರ್ರೇನೆ,'' ಎಂದು ಮಾಯವಾದರು. ಒಂದೇ ಗಂಟೆಯಲ್ಲಿ ಐದು ಸಾವಿರದೊಂದಿಗೆ ಹಿಂದಿರುಗಿದರು. ಪೃಥ್ವಿಗೆ ಅದನ್ನು ಕೊಟ್ಟೂ ಆಯಿತು. ಅಂದಿನ ಕೆಲಸವೂ ಮುಗಿಯಿತು.

ನಗುನಗುತ್ತ ಮನೆಗೆ ಹೋದ ಪೃಥ್ವಿ ''ರಮಾ ಇಗೋ ಐದು ಸಾವಿರ! ಮೊಹ್ಲಾನಿಂದ ವಸೂಲ ಮಾಡಿದೆ. ತಗೋ! ಹಲ್ವಾ-ಪೂರಿ ಏನು ಬೇಕಾದರೂ ಮಾಡು'' ಎಂದಾಗ ಆಕೆ ಆ ನೋಟಿನ ಕಟ್ಟು ನೋಡಿ ಬಿದ್ದು ಬಿದ್ದು ನಕ್ಕಳು. ಆದದ್ದಿಷ್ಟೆ. ''ಭಾಭಿ... ತುರ್ತಾಗಿ ಐದು ಸಾವಿರ ಬೇಕಾಗಿದೆ. ಇದ್ದರೆ ಕೊಟ್ಟಿರು. ಸಂಜೆ ನಿನ್ನ ಗಂಡನ ಕೈಲೇ ಕಳುಹಿಸುತ್ತೇನೆ'' ಎಂದು ಮಧ್ಯಾಹ್ನ ಆಕೆಯ ಬಳಿ ಮೊಹ್ಲಾ ಆ ಐದು ಸಾವಿರದ ಕಟ್ಟು ಪಡೆದು ಹೋಗಿದ್ದರು. ಅವರು ಸತ್ಯವಂತರು. ಆಡಿದ ಮಾತಿನಂತೆಯೆ ನಡೆದಿದ್ದರು. ಗಂಟೆಯೊಳಗಾಗಿ ಪೃಥ್ವಿರಾಜರಿಗೆ ದುಡ್ಡು ಕೊಟ್ಟಿದ್ದರು. ಹಾಗೆಯೇ ರಮಾ ಎದುರು ಹೇಳಿದ್ದಂತೆ ಸಂಜೆ ಅವರ ಗಂಡನ ಕೈಲೇ ಕೊಟ್ಟು ಭಾಭಿಗೆ ಹಣ ಹಿಂದಿರುಗಿಸಿದ್ದರು!

ರಾಜ್‌ಕಪೂರ್‌ನ 'ಆವಾರಾ'ದಲ್ಲಿ ಅಪ್ಪ ಪಾತ್ರಧಾರಿ - ಮಗ ನಿರ್ದೇಶಕ. ಅದರಲ್ಲಿ ಪೃಥ್ವಿಗೆ ಜಡ್ಜ್ ರಘುನಾಥ್‌ನ ಪಾತ್ರ. ಅದಕ್ಕೆ ಪ್ರತಿಫಲವಾಗಿ ಅಂದಿನ ಎಪ್ಪತ್ತೈದು ಸಾವಿರ ರೂಪಾಯಿ ಪಡೆದರಂತೆ. ಮತ್ತೆ ಅದನ್ನು ಪೃಥ್ವಿ ಥಿಯೇಟರ್ಸ್ ನಿರ್ವಹಣೆಗೇ! ಅಷ್ಟು ಜನರಿಗೂ ಅವರು ಪಾಪಾಜಿ ಆಗಿ ಬಿಟ್ಟರು. ಅವರ ಪಾದ ಮುಟ್ಟಿ ನಮಸ್ಕರಿಸಲು ಜನ ಸ್ಪರ್ಧಿಸುತ್ತಿದ್ದರು.

ಆ ಕಾಲದಲ್ಲಿ ಖ್ಯಾತ ನರ್ತಕಿ-ನಟಿ 'ಅಜೂರಿ'ಯನ್ನು ಒಂದು ಚಿತ್ರದಲ್ಲಿ ಪೃಥ್ವಿ ಬೆನ್ನ ಮೇಲೆ ಹತ್ತಿಸಿಕೊಳ್ಳುವ ದೃಶ್ಯವಿತ್ತು. ಆ ಚಿತ್ರ ಪ್ರದರ್ಶನವಾದಾಗ, ನೋಡಿದವರು ''ಇಂಥ ಮಹಾನ್ ನಟ ಒಬ್ಬ ಮಾಮೂಲಿ



ರಾಜ-ಪೃಥ್ವಿ-ಶಮ್ಮಿ-ಶಶಿ

ನರ್ತಕಿಯನ್ನು ಹೀಗೆ'' ಎಂದೆಲ್ಲ ಆಡಿಕೊಂಡ ರಂತೆ. ಪತ್ರಿಕೆಗಳೂ ಬೊಬ್ಬಿಟ್ಟುವು. 'ಅವಳು ಮೊಮ್ಮಗಳ ಸಮಾನ ನನಗೆ. ಅವಳು ನನ್ನ ಜೆನ್ನೇರಿದರೆ - ಏನು ತಪ್ಪು?'' ಎಂದು ಆತ ಮೆಲುದನಿಯ ಮಾರುತ್ತರ ಕೊಟ್ಟಾಗ ಜನ ಪೃಥ್ವಿಯ ನಮ್ರತೆಗೆ ಬೆರಗಾದರಂತೆ.

ಅಹಂಕಾರ ಅವರ ಬಳಿಯಲ್ಲಿ ಸುಳಿಯಲೇ ಇಲ್ಲ. ಮಗ ರಾಜ್‌ಕಪೂರ ಓದು ಬಿಟ್ಟು ಸಿನಿಮಾ ಸೇರುತ್ತೇನೆಂದಾಗ ಅವರು ಅವನನ್ನು ಮೊದಲು ಸಹಜವಾಗಿ ವಿರೋಧಿಸಿದರೂ ಕೊನೆಗೆ ರಣಜಿತ್ ಮಾಲೀಕ ಚಂದೂಲಾಲ್ ಷಾ, ಮತ್ತು ನಿರ್ದೇಶಕ ಕಿದಾರ್ ಶರ್ಮರ ಬಳಿ ಕಳಿಸಿದರು. ಆಗಲೂ ಹಾಕಿದ ಷರತ್ತುಗಳು ಎಂಥವು? ''ಪೃಥ್ವಿರಾಜನ ಮಗನೆಂದು ಯಾವ ರಿಯಾಯಿತಿಯೂ ಕೂಡದು. ಎಲ್ಲ ಕೆಲಸಗಾರರಂತೆ ಅವನನ್ನೂ ಕಾಣಬೇಕು. ಹೆಚ್ಚು ಸಂಬಳ ಕೊಡಬೇಕಾಗಿಲ್ಲ'' ಎಂದು ಅವರಿಗೆ! ''ಪ್ರತಿದಿನ ಮನೆಯಿಂದ ಟ್ರೈನು ಟ್ರಾಂಗಳಲ್ಲಿ ಬಿಳೀ ಬಟ್ಟೆ ಧರಿಸಿ ಊಟ ಕಟ್ಟಿಕೊಂಡು ಹೋಗಿ ಶ್ರಮ ಪಟ್ಟು ದುಡಿದು ಬಟ್ಟೆ ಹೊಲಸು ಮಾಡಿಕೊಂಡು ಬರಬೇಕು'' ಎಂದು ಮಗನಿಗೆ ತಾಕೀತು ಮಾಡಿದರು. ಇದಕ್ಕಾಗಿ ಮಗನಿಗೆ 15 ರೂ. ಪಾಕೆಟ್ ಮನಿ.

ಇಂತಹ ಮಗ ಮುಂದೆ ಖ್ಯಾತ ನಟ, ನಿರ್ದೇಶಕ, ನಿರ್ಮಾಪಕನಾದ. ಸ್ಟುಡಿಯೋ ಮಾಲೀಕನೂ ಆದ. ಆತನ ನಿರ್ದೇಶನದಲ್ಲಿ ಅಪ್ಪ ನಟಿಸಿದ ಯಾವುದೋ ಷಾಟ್‌ನಲ್ಲಿ ''ಪಾಪಾಜಿ! ನಿಮಗೆ art ಎಂದರೇನೆಂಬುದೂ ಗೊತ್ತಿಲ್ಲ'' ಎಂದೂ ಬಿಟ್ಟ. ಪೃಥ್ವಿ ಸ್ವಲ್ಪವೂ ವಿಚಲಿತರಾಗಲಿಲ್ಲ. ''ಹೌದಪ್ಪ ನನಗೆ ನನ್ನ ಕಾಲದ art ಮಾತ್ರಗೊತ್ತು. ಅದು ನಿನ್ನ ಕಾಲಕ್ಕೆ ತುಂಬ ಬೆಳೆದಿದೆ. ನನಗೆ ಅದು ತಿಳಿಯದೆ ಹೋಯಿತಲ್ಲ!'' ಎಂದು ಮಾತ್ರ ಉತ್ತರ ಕೊಟ್ಟರಂತೆ. 1946ರ ಸುಮಾರಲ್ಲಿ ಮುಂಬಯಿಯ ಜನನಿಬಿಡ ಫುಟ್‌ಪಾತ್‌ಗಳಲ್ಲಿ ಪೃಥ್ವಿರಾಜ್ ಎಲ್ಲೆಲ್ಲಿಗೂ ನಡೆದೇ ಹೋಗುತ್ತಿದ್ದುದನ್ನು ಅಲ್ಲಿನ ಜನ ನೋಡಿ ಓಡಿ ಬಂದು ಅವರ ಪಾದಸ್ಪರ್ಶ ಮಾಡಿ ಹೋಗುತ್ತಿದ್ದರಂತೆ. ಬಿಳಿಯ ಜುಬ್ಬ, ಪಾಯಿಜಾಮಾ ಧರಿಸಿ ಹೆಗಲ ಮೇಲೊಂದು ದೊಡ್ಡ ಓಡಿಯ - ಬೀಡಿ ಬೆಂಕಿ ಪೊಟ್ಟಣ, ಕನ್ನಡಕ, ಕಾಗದ, ಪೆನ್ನು ಇಡುವ ಒಂದು ಕೆಂಪು ಚೀಲ- ಝುರ್,ಝುರ್ ಹೆಜ್ಜೆ ಹಾಕುತ್ತ ಹೋಗುತ್ತಿದ್ದ ಈ ನಿಕಾಟೋರ್ ಅಲೆಗ್ಸಾಂಡರನನ್ನು ನೋಡಿದವರು ''ಓ ದೇಖೋ ಪೃಥ್ವಿರಾಜ್... ಆವಾರಾ ಕಾ ಬಾಪ್ ಜಾರಹಾ ಹೈ'' ಎಂದು ತೋರಿಸುತ್ತಿದ್ದರಂತೆ. ಇದೇ ಜನ ಒಮ್ಮೆ ಬಾಲಕ ರಾಜ್‌ಕಪೂರ್ ಹೋಗುತ್ತಿದ್ದಾಗಲೂ ''ಏ ದೇಖೋ ಪೃಥ್ವಿ ಕಾ ಬೇಟಾ ರಾಜ್ ಜಾರಹಾಹೈ'' ಎಂದು ಮೆಚ್ಚುಗೆಯ ದೃಷ್ಟಿ ಬೀರಿದ್ದೂ ಉಂಟು. ಇಂಥ ಬದಲಾದ ಜನ - ಬದಲಾದ ಮೌಲ್ಯವನ್ನು ಅವರು ಕಂಡು ಎರಡು ಮಾತಿಲ್ಲದೆ ಅನುಭವಿಸಿದರು.

ಮಗ ರಾಜ್‌ಕಪೂರ್‌ನ 'ಆವಾರಾ'ದಲ್ಲಿ ಅಜ್ಜ, ಮಗ, ಮೊಮ್ಮಗ (ಬಶೇರನಾಥ್, ಪೃಥ್ವಿರಾಜ್, ರಾಜ್‌ಕಪೂರ್) ಟ್ರಿಯೋ ಇದ್ದರೆ ಅದೇ ಸಂಸ್ಥೆಯು ಮುಂದೆ ತಯಾರಿಸಿದ 'ಕಲ್ ಆಜ್ ಔರ್ ಕಲ್'ನಲ್ಲಿ ತಾವು ತಮ್ಮ ಮಗ, ತಮ್ಮ ಮೊಮ್ಮಗ (ರಣಧೀರ್ ಕಪೂರ್) ಇರುವ ಆಟೋಬಯಾಗ್ರಫಿಕಲ್ ಚಿತ್ರದಲ್ಲೂ ಕಾಣಿಸಿಕೊಂಡರು. ನಾಟಕ ಕಂಪನಿ ಕಷ್ಟಕ್ಕೇನಾದರೂ ಸಿಕ್ಕಿದಾಗ ಈ ಶ್ರೀಮಂತ ಪುತ್ರರು (ರಾಜ್, ಶಮ್ಮಿ, ಶಶಿ) ಅವರ ನೆರವಿಗೆ ಬಂದದ್ದಿದೆ. ಆದರೆ ಮುಂದೆ ಇದು ತೀರ ನಡೆಯಲಾರದ ಮಟ್ಟ ಮುಟ್ಟಿದಾಗ 1960ರ ಸುಮಾರಿಗೆ ಪೃಥ್ವಿ ಥಿಯೇಟರ್ಸ್ ಮುಚ್ಚಿಹೋಯಿತು. ಅವರ ಸಂಸ್ಥೆ ಬಹಳಷ್ಟು ಪ್ರದರ್ಶನಗಳು ಧರ್ಮಾರ್ಥ ಪ್ರದರ್ಶನಗಳು: ಯುದ್ಧನಿಧಿ - ಪ್ರವಾಹ ಪರಿಹಾರ ನಿಧಿ, ಆರ್ತರಿಗಾಗಿ ನಿಧಿ, ದೀನರಿಗಾಗಿ ನಿಧಿ ಎಂದು. ನಾಟಕ ಪ್ರದರ್ಶನ ಮುಗಿದ ನಂತರ ಮೇಕ್ ಅಪ್‌ನಲ್ಲೇ ಹೊರಬಂದು ತೆರಳುವುದರಲ್ಲಿದ್ದ ಪ್ರೇಕ್ಷಕರ ಮುಂದೆ ಜೋಳಿಗೆ ಚಾಚಿ ''ಚಾರಿಟೀ'' ಎಂದು ಭಿಕ್ಷೆ ಬೇಡಿ ಆ ನಿಧಿಗಳಿಗೆ ಕೊಟ್ಟವರು.



ಗತಿಸಿದ ಪ್ರಧಾನ ಮಂತ್ರಿ ನೆಹರೂರಿಗೆ ಪೃಥ್ವಿರಾಜರಲ್ಲಿ ಅಪಾರ ಗೌರವ, ಭಕ್ತಿ. ಅವರನ್ನು ರಷ್ಯಾ, ಚೈನಾ ದೇಶಗಳಿಗೆ ಹೊರಟ ಕಲಾವಿದರ ತಂಡದ ಮುಖಂಡರನ್ನಾಗಿ ಜವಾಹರರು ಕಳುಹಿಸಿದ್ದರು. ಜೆಕೊಸ್ಲೊವಾಕಿಯಾದವರು ಅವರಿಗೆ 'ಅಕ್ಯಾಡೆಮಿ ಆಫ್ ಆರ್ಟ್ಸ್ ಅಂಡ್ ಮ್ಯೂಸಿಕ್' ಪರವಾಗಿ ಒಂದು ಸ್ಪೆಷಲ್ ಅವಾರ್ಡ್ ಅರ್ಪಿಸಿದರು. ಭಾರತ ಸರ್ಕಾರದವರು 1969ರಲ್ಲಿ ಪದ್ಮಭೂಷಣ ಪ್ರಶಸ್ತಿಯನ್ನು ಇತ್ತರು. ಸುಮಾರು ಎಂಟು ವರ್ಷಕಾಲ ರೈಲ್ವೆ ಯೂನಿಯನ್ ಅಧ್ಯಕ್ಷರಾಗಿಯೂ ಪೃಥ್ವಿ ದುಡಿದರು. ಹೀಗಾಗಿ ಅವರು ರಂಗ ನಟರಾಗಿ, ಚಿತ್ರ ನಟರಾಗಿ ಎಷ್ಟು ದುಡಿದರೋ ಸಾಮಾನ್ಯವಾಗಿ ಹೊರ ಬಂದು ಈ ರೀತಿಗಳಲ್ಲಿ ಸಾಮಾನ್ಯರಿಗಾಗಿಯೂ ಅಷ್ಟೇ ದುಡಿದರು.

ಕನ್ನಡದ ಪುಟ್ಟಣ್ಣ ಕೂಡ ಪೃಥ್ವಿರಾಜರನ್ನು ನಾಗೇಂದ್ರರಾಯರ ಜೊತೆ ''ಸಾಕ್ಷಾತ್ಕಾರ'' ಚಿತ್ರದಲ್ಲಿ ಕಾಣಿಸಿದರು. (''ಕನ್ನಡ ಮಾತಾಡಿದರೆ ಅವರಿಗೆ ಸ್ವಲ್ಪ ಸ್ವಲ್ಪ ತಿಳಿಯುತ್ತಿತ್ತು. ಕನ್ನಡ ಕಲಿಯಬೇಕೆಂಬ ಅಪೇಕ್ಷೆ ಅವರಿಗಿತ್ತು'' ಎಂದು ಶ್ರೀನಾಗೇಂದ್ರರಾಯರು ನನ್ನ ಮುಂದೊಮ್ಮೆ ಹೇಳಿದರು.) ಕೊನೆಯ ದಿನಗಳಲ್ಲಿ, ಅಸೀಫ್ ಸಾಹೇಬರ 'ಮುಘಲ್-ಎ-ಅಜಂ! ಚಿತ್ರದಲ್ಲಿ ಅಕ್ಬರನ ಪಾತ್ರ ಮಾಡಿ ಖ್ಯಾತರಾದರು ಪೃಥ್ವಿ. ಆ ಭವ್ಯ ಆಳು ಮಹಾಬಲಿ ಅಕ್ಬರ್. ಮೂಕಿ ಕಾಲದ ಸುಲೋಚನಾ ಅವರ ಮಹಾರಾಣಿ. ದಿಲೀಪ್‌ಕುಮಾರ್ ಜಹಾಂಗೀರ್: ಚೆಲುವೆ ಮಧುಬಾಲ ಅನಾರ್ಕಲಿ. ವೀರಮಂಡಿ ಹಾಕಿ ಕುಳಿತ ಪೃಥ್ವಿರಾಜರನ್ನು ನೆನೆದರೆ ಇಂದಿಗೂ ಅಕ್ಬರ್ ಎಂದರೆ ಅವರೇ ಸರಿ ಎನ್ನಿಸುತ್ತದೆ. ಈ ಚಿತ್ರ ಮತ್ತು ಕೆ.ಎ. ಅಬ್ಬಾಸರ 'ಆಸ್ಮಾನ್ ಮಹಲ್'ಗಳು ಅವರನ್ನು ಮತ್ತೊಮ್ಮೆ ಕೀರ್ತಿ ಉತ್ತುಂಗಕ್ಕೆ ಏರಿಸಿದವು. 'ಅಸ್ಮಾನ್ ಮಹಲ್'ನಲ್ಲಿನ ಅವರ ಅಭಿನಯಕ್ಕಾಗಿ ಅಂತಾರಾಷ್ಟ್ರೀಯ ಪಾರಿತೋಷಕ ಬಂದು ಆ ಚಿತ್ರವನ್ನು 1966ರಲ್ಲಿ ವಿದೇಶದಲ್ಲೂ ಪ್ರದರ್ಶಿಸಲಾಯಿತು. ಮುಂಬಯಿಯಲ್ಲಂತೂ ಅಂಥದಕ್ಕೆ ಲೆಕ್ಕವೇ ಇಲ್ಲ. 'ವೈಟ್ ವೇ ಲೇಡ್ ಲಾ' ಕಂಪನಿ (ಮುಂದೆ ಮಗನ್‌ಲಾಲ್ ಡ್ರೆಸ್‌ವಾಲಾ ಆದದ್ದು) ಯವರೂ ಪೃಥ್ವಿರಾಜರಿಗೆ ಒಂದು ಅವಾರ್ಡ್ ಇತ್ತು ಸನ್ಮಾನಿಸಿದ್ದರು.

ಅವರ ಮಗ ತಂದೆಯನ್ನು ಮೀರಿಸಿದ. ಆ ಮಗ - ರಣಬೀರ್ ರಾಜ್‌ಗೆ ತಂದೆಯಲ್ಲಿ ಅಪಾರ ಗೌರವ, ಭಕ್ತಿ. ಪ್ರತಿ ಹೊಸ ಚಿತ್ರ ಆರಂಭಿಸುವ ಮುನ್ನ ತಂದೆ ತಾಯಿ ಹಾಜರಿದ್ದು ಅಲ್ಲಿ ನಡೆಯುವ ಪೂಜೆ ಪುನಸ್ಕಾರಗಳಲ್ಲಿ ಭಾಗ ವಹಿಸಿ ಕೊನೆಗೆ 'Yours faithfully' ಎಂದು ಮಗ ತಂದೆಗೆ ದೀರ್ಘದಂಡ ನಮಸ್ಕಾರ ಹಾಕಿದಾಗ ಈ ತಂದೆ ಆಶೀರ್ವದಿಸದೆ ಚಿತ್ರ ಮುಂದುವರಿಯುತ್ತಲೇ ಇರಲಿಲ್ಲ. ಆರ್.ಕೆ. ಸಂಸ್ಥೆಯ ಲಾಂಛನವನ್ನು ತೋರಿದ ನಂತರ ಶಿವಪೂಜೆ ಮಾಡುತ್ತ ಮಂತ್ರೋಚ್ಚಾರ ಮಾಡುತ್ತ ಕುಳಿತ ಈ ತಂದೆ - ಹಿನ್ನೆಲೆಯಲ್ಲಿ 'ಓಂ ನಮಃ ಶಿವಾಯ' ಮೇಳಗೀತ - ರಾಜ್‌ಕಪೂರನ ಎಲ್ಲ ಚಿತ್ರಗಳಲ್ಲೂ ಇದ್ದೇ ಇರುತ್ತದೆ.

ಮಾದಕ ಪದಾರ್ಥಗಳಿಗೂ ಅವರಿಗೂ ಆಗ ತುಂಬ ದೂರ. ಸಿಗರೇಟು ಸೇದುತ್ತಿರುವ ಚಿತ್ರಗಳು ಅನೇಕವಿವೆ. ಕೊನೆಗೆ ಆರ್ಥಿಕ ಅನುಕೂ

ಪೃಥ್ವಿ : ಅರಸು ಅನುಭವ

ಕನ್ನಡ ಚಿತ್ರರಂಗದ 'ವಿಶಿಷ್ಟ ಧ್ವನಿ' ಎನಿಸಿರುವ ಸುಂದರ ಕೃಷ್ಣ ಅರಸು ಅವರಿಗೆ ಪೃಥ್ವಿರಾಜ್‌ಕಪೂರ್ ''ಪಿತೃಸಮಾನ.'' ಆ ಮಹಾನ್ ನಟನೊಂದಿಗಿನ ಅರಸು ಅನುಭವಗಳು ಇವು:

ನಾನಾಗ ಪುಟ್ಟಣ್ಣಾಜಿಯ ಆಪ್ತಕಾರ್ಯದರ್ಶಿ, ಸಹಾಯಕ ನಿರ್ದೇಶಕ- ಇತ್ಯಾದಿ ಇತ್ಯಾದಿ. 1971ರ ಸುಮಾರು 'ಸಾಕ್ಷಾತ್ಕಾರ' ಚಿತ್ರದಲ್ಲಿ ನಾವೆಲ್ಲ ತಲ್ಲೀನರು. ಪೃಥ್ವಿರಾಜ್ ಕಪೂರ್‌ಗೆ ಅದರಲ್ಲೊಂದು ವಿಶಿಷ್ಟ ಪಾತ್ರ. ಪುಟ್ಟಣ್ಣಾಜಿ ನನಗೊಂದು ವಿಶೇಷ ಕೆಲಸ ವಹಿಸಿದರು- ''ಪೃಥ್ವಿರಾಜ್‌ರೊಂದಿಗೇ ಇರಬೇಕು. ಅವರಿಗೆ ಡೈಲಾಗ್ ಹೇಳಬೇಕು. ದೃಶ್ಯ ವಿವರಿಸಬೇಕು. ಚಿತ್ರೀಕರಣಕ್ಕೆ ಕರೆತರಬೇಕು. ಚಿತ್ರೀಕರಣದ ನಂತರ ಅವರೊಟ್ಟಿಗೇ ಹೋಗಬೇಕು, ರಾತ್ರಿ ಊಟ ಮುಗಿಯುವವರೆಗೂ ಅಲ್ಲಿಯೇ ಇರಬೇಕು.'' ನಾನು ಆ ನಟಸಾರ್ವಭೌಮನೊಂದಿಗೆ ಸಮೀಪದಲ್ಲೇ ಇರುವ ಈ ಅಯಾಚಿತ ಅವಕಾಶವನ್ನು ಹೃತ್ಪೂರ್ವಕವಾಗಿ ಒಪ್ಪಿಕೊಂಡೆ. ಅಂದಿನಿಂದ ನಾನು ಪೃಥ್ವಿರಾಜ್‌ಗೆ 'ಬೇಟಾ'-ಅವರು ನನಗೆ 'ಪಾಪಾಜಿ.'

ಸಮಯ ಪರಿಪಾಲನೆಗೆ ಪೃಥ್ವೀಜಿ ಮತ್ತೊಂದು ಹೆಸರು. ಒಪ್ಪಿಕೊಂಡ ಕೆಲಸವನ್ನು ಪರಿಪೂರ್ಣವಾಗಿ ನಿರ್ವಹಿಸಬೇಕೆನ್ನುವವರು. ಪರ್ಶಿಯನ್, ಅರೇಬಿಕ್‌ಗಳೇ ಮೊದಲಾಗಿ ಹದಿನಾರಕ್ಕೂ ಹೆಚ್ಚು ಭಾಷೆಗಳಲ್ಲಿ ಪರಿಣತ. ಅವರೊಬ್ಬ ಕೇವಲ ನಟನಲ್ಲ- ಪಂಡಿತ. ಸಂಸ್ಕೃತಿ, ಸಜ್ಜನಿಕೆಗಳ ಪ್ರತಿರೂಪ. ಪ್ರತಿಯೊಂದನ್ನೂ ಅರಿತುಕೊಳ್ಳುವ ಅದಮ್ಯ ಆಕಾಂಕ್ಷೆ ಅವರದು. ಆ ದಿಶೆಯಲ್ಲಿ ಮನಃಪೂರ್ವಕ ಪ್ರಯತ್ನವನ್ನು ಮಾಡುವವರು.


ಒಂದು ಸಂಜೆ ಮರುದಿನದ ದೃಶ್ಯವನ್ನು ವಿವರಿಸಿ, ಸಂಭಾಷಣೆಗಳ ಹಾಳೆಯನ್ನು ಕೊಟ್ಟೆ. ನಾನೊಮ್ಮೆ ಆ ಮಾತುಗಳನ್ನು ಓದಿ ಹೇಳಬೇಕು. ಉಚ್ಚಾರ, ಏರಿಳಿತ, ಭಾವನೆಗಳನ್ನವರು ಸೂಕ್ಷ್ಮವಾಗಿ ಗಮನಿಸಬೇಕು. ಹಾಡುಗಳಂತೂ ಅವರನ್ನು ಹುಚ್ಚು ಹಿಡಿಸಿದ್ದವು. 'ಒಲವೆ ಜೀವನ ಸಾಕ್ಷಾತ್ಕಾರ' ಹಾಡಿನ ಬಗ್ಗೆ ಮಾತು ಬಂತು. ''ಒಲವೇ ಪದದಲ್ಲಿ ಯಾವುದು ಸರಿ? ಒಲವೇ ಸರಿಯೊ? ವಲವೆ ಸರಿಯೊ?'' ಎಂದವರ ಪ್ರಶ್ನೆ. ಟೇಬಲ್ ಮೇಲೆ ಬೆರಳಿಂದ 'ಒ' ಮತ್ತು 'ವ' ಎರಡನ್ನೂ ಬರೆದುತೋರಿಸಿ ಕೇಳಿದರು. 'ಒ'ಸರಿ. 'ಒಲವು' ಹಾಗೆಂದರೆ ಪ್ರೀತಿ ಎಂದೆ. ''ಹಾಂ, ಅದಕ್ಕೇ ಅಂದೆ, ನಾನೂ ಒಲವೆ ಸರಿಯೆಂದುಕೊಂಡಿದ್ದೆ. ಆದರೆ ಪಿ.ಬಿ.ಶ್ರೀನಿವಾಸ್ ಅದನ್ನು 'ವಲವೆ' ಎಂದು ಉಚ್ಚರಿಸಿದ್ದಾರಲ್ಲ ಹಾಡುವಾಗ' ಎಂದರು. ನಾನು ತಬ್ಬಿಬ್ಬು. ಮತ್ತೆ ಮತ್ತೆ ಹಾಡಿನ ರೆಕಾರ್ಡ್ ಕೇಳಿದೆ. ಪಾಪಾಜಿ ಸರಿಯಾಗೇ ಅಬ್ಸರ್ವ್ ಮಾಡಿದ್ದರು.

ಎರಡನೆ ಶೆಡ್ಯೂಲ್ ಹೊತ್ತಿಗೆ ಅವರು ಕನ್ನಡದಲ್ಲಿಯೇ ಮಾತಾಡಲಾರಂಭಿಸಿದ್ದರು. ನಾವು ನಮಗೆ ಬರುವ ಹಿಂದಿಯಲ್ಲಿ ಮಾತನಾಡಿದಾಗ

ಲೆಲ್ಲ ಅವರು ಕನ್ನಡದಲ್ಲೇ ಉತ್ತರಿಸುತ್ತಿದ್ದರು. ಅಲ್ಪಾವಧಿಯಲ್ಲೇ ಅವರು ಸರಿಯಾದ ಉಚ್ಚಾರ, ವ್ಯಾಕರಣಗಳನ್ನು ಸಾಧಿಸುವಲ್ಲಿ ಯಶಸ್ವಿಯಾಗಿದ್ದರು! ''ಪಾಪಾಜಿ, ಹ್ಯಾಗೆ ಸಾಧ್ಯವಾಯ್ತು?'' ಎಂದರೆ, ''ನನ್ನ ದೇಹ ದೊಡ್ಡದು. ಆದರೆ ನಾನಿನ್ನೂ ಮಗು. ಏನು ಬೇಕಾದ್ರೂ ಕಲೀಬಲ್ಲೆ.'' ಅಬ್ಬಾ, ಎಂಥ ಆತ್ಮವಿಶ್ವಾಸ! ''ಹೂಂ, ಬೇಗ ಡೈಲಾಗ್ ಕೊಡಪ್ಪಾ... ಬೈಹಾರ್ಟ್ ಮಾಡ್ತೇನೆ... ಇಲ್ದಿದ್ರೆ ಕುಮಾರ್ ನನ್ನನ್ನ ತಿಂದ್‌ಬಿಡ್ತಾರೆ..'' ರಾಜ್‌ಕುಮಾರ್ ಬಗ್ಗೆ ಅವರಿಗೆ ತುಂಬ ಗೌರವ. ''ರಾಜ್‌ಗೆ ಸರಿಯಾಗೆ act ಮಾಡಬೇಕು ನಾನು'' ಎಂಬುದೇ ಪೃಥ್ವೀಜಿ ಸದಾ ಹೇಳುತ್ತಿದ್ದರು. ''ಹೇಡ್‌ಮಾಸ್ಟರ್ ಬರೋದ್ರೊಳ್ಗೆ ತಯಾರಾಗಿರಬೇಕಪ್ಪಾ ನಾನು'' ಎಂಬ ಎಚ್ಚರಿಕೆ ಬೇರೆ. ಪುಟ್ಟಣ್ಣ, ಅವರ ಪಾಲಿನ ಹೆಡ್‌ಮಾಸ್ಟರ್. ಅವರ ಮಾತೆಂದರೆ ಪೃಥ್ವೀಜಿಗೆ ವೇದವಾಕ್ಯ.

ಚಾರ್‌ಮಿನಾರ್ - ಮಿಂಥಾಲ್‌ಕೂಲ್ ಸಿಗರೇಟು, ಗಣೇಶ್ ಬೀಡಿ ಬಂಡಲ್ ಅವರ ಎಡೆಬಿಡದ ಸಂಗಾತಿಗಳು. ಮಧ್ಯಾಹ್ನ ಮೊಸರನ್ನ - ಉಪ್ಪಿನಕಾಯಿ ನಂತರ ಕಿತ್ತಲೆ ಹಣ್ಣು ಸೇವಿಸುತ್ತಿದ್ದ ಪೃಥ್ವೀಜಿ ರಾತ್ರಿಗೆ ಅರೆಬೇಯಿಸಿದ ಮಾಂಸಕ್ಕೆ ಕರಿಮೆಣಸು ಪುಡಿ ಸೇರಿಸಿ ತಿನ್ನುತ್ತಿದ್ದರು. ಜತೆಗೆ ಫುಲ್ ಬಾಟಲ್ ಸ್ಕಾಚ್ ವಿಸ್ಕಿ. ನಾನೇ ಸೋಪಿನಿಂದ ನಾಲ್ಕುನಾಲ್ಕು ಬಾರಿ ಕೈತೊಳೆದುಕೊಂಡು ಅವರಿಗಿದನ್ನೆಲ್ಲ ತಿನ್ನಿಸಬೇಕು. ಆಗ ಅವರ ಕಣ್ಣಲ್ಲಿ ದಳದಳನೆ ನೀರು. ''ಯಾಕೆ ಪಾಪಾಜಿ?'' ಎಂದರೆ, 'ರಾಜ್-ಶಮ್ಮಿ-ಶಶಿ ನೆನಪು ಬರ್‍ತಾ ಇವೆ'' ಎಂದು ಹೇಳಿದವರೆ, ''ನೆನಪು ಬರ್‍ತಾ ಇವೆ ಕರೆಕ್ಟೋ? ಬರ್‍ತಾ ಇದೆ ಕರೆಕ್ಟೋ? ನನ್ನ ಕನ್ನಡ ವ್ಯಾಕರಣ ಸರಿಯಾ?'' ಎಂದು ಕೇಳಿ ಕನ್ನಡ ಪಾಠಕ್ಕೆ ಸಿದ್ಧರಾಗಬೇಕು. ●

ನಿರೂಪಣೆ: ವಾಸನ್



ಲದ ದೃಷ್ಟಿಯಿಂದ ಬೀಡಿ! ಕೊಂಚ ಪುರಸೊತ್ತು ಸಿಕ್ಕಾಗ ಸೊಗಸಾಗಿ ಸಿತಾರ್ ವಾದನಕ್ಕೂ ತೊಡಗುವುದು - ಇದಿಷ್ಟು ಅವರ ದಿನಚರಿ.. ಒಮ್ಮೆ ಅಲೆಗ್ಸಾಂಡರನಾಗಿದ್ದವರು ಮುಂದಿನ ಸಲ ವತ್ತು ವರ್ಷಗಳ ನಂತರ ಮತ್ತೊಮ್ಮೆ ಅದೇ ಚಿತ್ರದಲ್ಲಿ ದಾರಾಸಿಂಗ್ ಅಲೆಗ್ಸಾಂಡರನಾದಾಗ ತಾವು ಪುರೂರವ ಪಾತ್ರ ಮಾಡಿ ತಮ್ಮ ಕರ್ತವ್ಯ ನಿರ್ವಹಿಸಿದರು. ಅವರಿಗೆ ಆ ವೇಳೆಗಾಗಲೇ ಧಡೂತಿ ದೇಹ ಬಂದುಬಿಟ್ಟಿತ್ತು. ಮದ್ಯ ಮುಟ್ಟುವದೇ ಇಲ್ಲ ಎಂದು ಅರವತ್ತು ವರ್ಷಗಳು ಸುಮ್ಮನಿದ್ದವರು ಕೊನೆಯಲ್ಲಿ ಮದಿರೆಯ ಮೊರೆಹೊಕ್ಕರೆಂದು ಅವರ ತಮ್ಮ ತ್ರಿಲೋಕ್ ಕಪೂರ್ (ಮೊನ್ನೆ ಮೊನ್ನೆ) ಹೇಳಿದ್ದರು.

ಅವರಿಗೆ ಯಾರೂ ಕೇಳರಿಯದ ಹಾಡ್ಜ್‌ಕಿನ್ ಡಿಸೀಸ್ ಎಂಬ ಕಾಯಿಲೆ ಬೆನ್ನಟ್ಟಿತಂತೆ. ಟಾಟಾ ಮೆಮೋರಿಯಲ್ ಆಸ್ಪತ್ರೆಗೆ ಅವರನ್ನು ಸೇರಿಸಲಾಗಿತ್ತು. ಇನ್ನು ಕೆಲವರು ಕ್ಯಾನ್ಸರ್ ಆಗಿತ್ತಂತೆ ಎಂದೂ ಹೇಳಿದ್ದರು. 1972ರ ಮೇ 29ರಂದು ಪಾಪಾಜಿ ಸ್ವರ್ಗಸ್ಥರಾದರು. ಅದಾದ ತಿಂಗಳಿಗೇ ಪತ್ನಿ ರಮಾ ಕೂಡ ಅವರನ್ನು ಹಿಂಬಾಲಿಸಿದರು. ●

ದಿಕ್ಸೂಚಿಗಳ ಇತಿಹಾಸ

ಭೂಮಿಯ ಮೇಲೆ ಅಥವಾ ಸಮುದ್ರದಲ್ಲಿ ಸೂರ್ಯ ಹುಟ್ಟುವ ಹಾಗೂ ಮುಳುಗುವ ದಿಕ್ಕು ನೋಡಿ ಪುರಾತನ ಕಾಲದಲ್ಲಿ ಜನರು ದಿಕ್ಕು ಯಾವುದೆಂದು ಗುರುತಿಸುತ್ತಿದ್ದರು. ವಿಶಾಲವಾದ ಸಮುದ್ರ ಹಾಗೂ ಮರಳುಗಾಡಿನಲ್ಲಿ ಪ್ರಯಾಣ ಮಾಡುವ ಯಾತ್ರಿಕರು ರಾತ್ರಿಯ ವೇಳೆ ನಕ್ಷತ್ರಗಳನ್ನು ಗುರುತಿಸಿ ದಿಕ್ಕು ತಿಳಿದು ಪ್ರಯಾಣ ಮುಂದುವರೆಸುತ್ತಿದ್ದರು. ಉತ್ತರದಲ್ಲಿ ಮೂಡುವ ಧ್ರುವ ನಕ್ಷತ್ರ ಅವರಿಗೆ ಮಾರ್ಗದರ್ಶಿಯಾಗಿತ್ತು. ಸಮುದ್ರಯಾನ ಹೆಚ್ಚಿದಾಗ ಗಾಳಿಯ ದಿಕ್ಕು ತಿಳಿದು ತಮ್ಮ ಪ್ರಯಾಣ ಮುಂದುವರೆಸುತ್ತಿದ್ದರು. ಪೂರ್ವದಿಂದ ಬೀಸುವದು ತಂಪುಗಾಳಿ ಹಾಗೂ ದಕ್ಷಿಣದಿಂದ ಬಿಸಿಗಾಳಿ ಎಂದು ಗುರುತಿಸಲಾಗುತ್ತಿತ್ತು. ಈ ರೀತಿಯಲ್ಲಿ ಗಾಳಿಯನ್ನು ಸುಲಭವಾಗಿ ಗುರುತಿಸಿಕೊಳ್ಳುವ 'ವಿಂಡ್ ರೋಸ್' ಎಂಬ ಉಪಕರಣವನ್ನು ಕಂಡು ಹಿಡಿಯಲಾಯಿತು. ಆ ಕಾಲದಲ್ಲಿ 'ನಾವಿಕರ ಮಾರ್ಗದರ್ಶಿ' ಎಂಬ ಪುಸ್ತಕಗಳು ಸುಲಭವಾಗಿ ಎಲ್ಲೆಡೆ ದೊರೆಯುತ್ತಿದ್ದವು. ಅದರಲ್ಲಿ ನಾವಿಕರು ತಾವು ಪ್ರಯಾಣ ಮಾಡಿದ ಹೊಸ ಹೊಸ ಮಾರ್ಗಗಳು, ಅಲ್ಲಿ ಇರುವ ರಾಜ್ಯಗಳು, ಬಿರುಗಾಳಿ ಹಾಗೂ ಅಪಾಯದ ಸ್ಥಳಗಳು ಹಾಗೂ ಹಡಗು ನಿಲ್ಲಿಸಬಹುದಾದ ಸ್ಥಳಗಳ ಬಗ್ಗೆ ವಿವರಣೆ ಇರುತ್ತಿತ್ತು.

ಆದರೆ, ಇವಾವೂ ನಿಖರವಾದ ದಿಕ್ಸೂಚಿಗಳಾಗಿರಲಿಲ್ಲ. 'ಲೋಡ್‌ಸ್ಟೋನ್' ಎಂಬ ಅಯಸ್ಕಾಂತದ ಪತ್ತೆಯಾದ ಬಳಿಕ ಈ ದಿಕ್ಕು ತೋರಿಸುವ ವಿಧಾನ ಬದಲಾಯಿತು. ಅಯಸ್ಕಾಂತದ ಒಂದು ತುದಿ ಯಾವಾಗಲೂ ಉತ್ತರ ದಿಕ್ಕಿಗೆ ಮುಖ ಮಾಡಿಕೊಂಡಿರುವುದರಿಂದ ಚೀನಾದ ತಜ್ಞರು ಕಂಪಾಸ್ ಎಂಬ ದಿಕ್ಸೂಚಿ ಯಂತ್ರವನ್ನು ಕಂಡು ಹಿಡಿದರು. ಮೊದಮೊದಲು ಈ ಉಪಕರಣದ ಸಹಾಯದಿಂದ ಗಾಳಿ ಬೀಸುವ ದಿಕ್ಕನ್ನು ತಿಳಿಯಲಾಗುತ್ತಿತ್ತು. ಆ ಮೇಲೆ ಇದೇ ಉಪಕರಣದಲ್ಲಿ ಎಂಟು ದಿಕ್ಕುಗಳನ್ನು ತಿಳಿಸುವ ಪಾಳಿಯನ್ನು ಜೋಡಿಸಿ ಉಪಯೋಗಿಸತೊಡಗಿದರು.


ಹತ್ತೊಂಬತ್ತನೇ ಶತಮಾನದಲ್ಲಿ ಕಬ್ಬಿಣ ಹಾಗೂ ಇತರ ಲೋಹಗಳಿಂದ ಹಡಗು ನಿರ್ಮಿಸ ತೊಡಗಿದಾಗ ಕಂಪಾಸ್ ಉಪಕರಣ ಹಡಗುಗಳಲ್ಲಿ ಸರಿಯಾಗಿ ಕೆಲಸ ಮಾಡಲಿಲ್ಲ. ಕಬ್ಬಿಣ ಅಯಸ್ಕಾಂತವನ್ನು ಆಕರ್ಷಿಸಿ ಕಾಂತ ಶಕ್ತಿ ಪಡೆಯುವುದರಿಂದ ದಿಕ್ಸೂಚಿಗಳ ದಿಕ್ಕು ತಪ್ಪುತ್ತಿತ್ತು. ಈ ಎಲ್ಲಾ ತೊಂದರೆಗಳಿಂದ ವಿಮುಕ್ತವಾದ ಕಂಪಸ್ ಉಪಕರಣವನ್ನು 1850 ರಲ್ಲಿ ಕಂಡು ಹಿಡಿಯಲಾಯಿತು.

ವಿಮಾನ ಯುಗ ಆರಂಭವಾದಾಗ ಅವರಲ್ಲಿಯೂ ಕಂಪಾಸ್ ಉಪಕರಣಗಳನ್ನು ಬಳಸಲಾಗುತ್ತಿತ್ತು. ಆದರೆ ತುಂಬಾ ಎತ್ತರದಲ್ಲಿ ಅತಿವೇಗದಿಂದ ಸಾಗುವ ವಿಮಾನಗಳಲ್ಲಿ ಕಂಪಾಸ್‌ಗಳು ಸರಿಯಾಗಿ ಕೆಲಸ ಮಾಡುತ್ತಿರಲಿಲ್ಲ. ಆದ್ದರಿಂದ ಇದಕ್ಕಿಂತಲೂ ಉತ್ತಮವಾದ 'ಗೈರೋಸ್ಕೋಪ್' ಎಂಬ ಉಪಕರಣದಲ್ಲಿ ಜೋಡಿಸಿಟ್ಟ ಅಯಸ್ಕಾಂತ ಕಂಪಾಸ್‌ಗಳು ಬಳಕೆಗೆ ಬಂದವು.

ಹಡಗು ಹಾಗೂ ವಿಮಾನಗಳಲ್ಲಿ ಭೂಮಿಯ ಮೇಲೆ ಸ್ಥಾಪಿಸಿರುವ ಕೇಂದ್ರಗಳಿಂದ ಕಳುಹಿಸುವ ರೇಡಿಯೋ ತರಂಗಗಳನ್ನು ಸ್ವೀಕರಿಸಿ ದಿಕ್ಕು ತೋರಿಸುವ ಉಪಕರಣ ಇಂದು ಲಭ್ಯ. ಇದೇ ರೀತಿ ಭೂಮಿಯಿಂದ ಕಳುಹಿಸುವ ಉಪಗ್ರಹಗಳಿಗೆ ರೇಡಿಯೋ ತರಂಗಗಳನ್ನು ರವಾನಿಸಿ ಅಲ್ಲಿಂದ ಹೊರಡುವ ತರಂಗಗಳನ್ನು ಹಡಗು ಹಾಗೂ ವಿಮಾನಗಳಲ್ಲಿನ ರಾಡಾರ್‌ಗಳು ಸ್ವೀಕರಿಸಿ ಸರಿಯಾದ ದಿಕ್ಕು ತಿಳಿಸುತ್ತವೆ. ಅತಿ ದೂರದ ವಸ್ತುಗಳ ಮೇಲೆ ಅಣು ಬಾಂಬುಗಳನ್ನು ಹಾಕಬಲ್ಲ ಕ್ಷಿಪಣಿಗಳೂ ಈಗ ಎಲ್ಲೆಡೆ ಇವೆ. ಕಂಪ್ಯೂಟರ್ ಸಹಾಯದಿಂದ ದಿಕ್ಕು ತಿಳಿಯುವ ಕ್ಷಿಪಣಿಗಳಲ್ಲಿ ಮೊದಲೇ ನಿರ್ಧರಿಸಲಾದ ಗುರಿಯ ವಸ್ತು ಇರುವ ದಿಕ್ಕು ಗುರುತಿಸಲಾಗುತ್ತಿದೆ.

(ವಿವಿಧ ಮೂಲಗಳಿಂದ)

* 'ಗೌರಿಅಭಿ'



ಹಾವು! ಕೊಲ್ಲುವಿರೇಕೆ?

● *ಗೋವಾ*

ಕಶ್ಯಪಮುನಿಯಿಂದ ಕದ್ರು* ವಿನಲ್ಲಿ ಜನಿಸಿ, ಬ್ರಹ್ಮನನ್ನು ತಪಸ್ಸಿನಿಂದ ಮೆಚ್ಚಿಸಿ, ಆತನ ವರದಂತೆ ಭೂಮಿಯನ್ನು ಶಿರೋಧಾರ್ಯವನ್ನಾಗಿಸಿಕೊಂಡು ಕಾಪಾಡುತ್ತಿದ್ದನಂತೆ ಆದಿಶೇಷ. ಈ ಪೌರಾಣಿಕ ಕಲ್ಪನೆ ಕೇವಲ ಕತೆಯಲ್ಲ. ಕಿಂಚಿತ್ ತಥ್ಯವೂ ಇದೆ ಈ ಹೇಳಿಕೆಯಲ್ಲಿ. ಪರಿಸರ ಸಮತೋಲದ ಜವಾಬ್ದಾರಿಯಲ್ಲಿ ಬಹ್ವಂಶವನ್ನು ನಿಭಾಯಿಸುತ್ತದೆ ಹಾವು. ಒಂದು ವೇಳೆ ಹಾವುಗಳೇ ಇಲ್ಲದಿದ್ದರೆ ಒಂದು ವರ್ಷದಲ್ಲಿ ಒಂದರಿಂದ ಐವತ್ತುಸಾವಿರವಾಗಿ ಬೆಳೆದು ನಿಲ್ಲುವ ಮೂಷಿಕ ಸಂತತಿ ತಾನೇತಾನಾಗಿ ಮೆರೆಯುತ್ತಿತ್ತು ಈ ಭೂಮಿಯ ಮೇಲೆ. ಅನ್ನದಾತ ರೈತ ತನ್ನ ಬೆವರ ಮೇಲಿನ ನಂಬಿಕೆಯನ್ನೇ ಕಳೆದುಕೊಳ್ಳುತ್ತಿದ್ದ. ಹಾಗಾಗದಂತೆ ನೋಡಿಕೊಂಡು ಬಂದಿದೆ ಹಾವು. ಈ 'ರೈತನ ಮಿತ್ರ' ನಿಲ್ಲದಿದ್ದರೆ ನಾವೆಲ್ಲ ಹೊಟ್ಟೆಗೆ ಹಿಟ್ಟಿಲ್ಲ, ಹೊಟ್ಟು ತಿನ್ನಬೇಕಾಗುತ್ತಿತ್ತು.

ಹಾವು ಎಲ್ಲಿಲ್ಲ? ಹಾವಿಲ್ಲದ ಜಾಗ ಹುಡುಕುತ್ತೇವೆನ್ನುವುದು ಸಾವಿಲ್ಲದ ಮನೆಯ ಸಾಸಿವೆ ಹುಡುಕಹೊರಟಂತೆಯೆ. ಭೂಮಿಯ ಮೇಲೆ

ಜೀವವಿಕಾಸದ ಹಂತಗಳಲ್ಲಿ ಸಸ್ತನಿಗಳಿಗಿಂತ ಮೊದಲು ಕಾಣಸಿಕೊಂಡ ಈ ಹಾವುಗಳು ಆದಿಯಿಂದಲೂ ನಮ್ಮ ಬದುಕನ್ನು ಆವರಿಸಿಕೊಂಡಿವೆ. ನಮ್ಮಿಂದ ಪೂಜೆಗೊಳ್ಳುವ ಅವುಗಳನ್ನು ಲಾಭದಾಸೆಗೆ ನಾವು ಕೊಲ್ಲಲೂ ಹಿಂದೆ ಮುಂದೆ ನೋಡುವುದಿಲ್ಲ. ಪುರಾಣ-ಕಾವ್ಯಗಳ ಮೂಲಕ ಹರಿದು ಬಂದ ಹಾವಿನ ದಾರಿಯಲ್ಲಿಷ್ಟು ಹೋಗಿ ನೋಡಿ....

ನಮಗಿಂತ ಮೊದಲೆ ಕಾಣಿಸಿಕೊಂಡ ಈ ಸರೀಸೃಪ ಜೀವವಿಕಾಸದ ಹಂತಗಳಲ್ಲಿ ಸಸ್ತನಿಗಳಿಗಿಂತ ಹಳೆಯದಾದದ್ದು. ನಾಗರಿಕತೆಗಳು ಬೆಳೆದು ಬರುವಷ್ಟು ಹೊತ್ತಿಗಾಗಲೇ ಭಯ-ಭಕ್ತಿ-ಕಾಮಗಳ ಸಂಕೇತಗಳಾಗಿ ಸರ್ಪಗಳು ನಮ್ಮ ಚಿತ್ತದಲ್ಲಿ ಹುತ್ತಗಟ್ಟಿದ್ದವು. ಸರ್ಪಪೂಜೆ-ಸರ್ಪಾರಾಧನೆಗಳನ್ನು ಬಹುಶಃ ಜಗತ್ತಿನ ಎಲ್ಲ ನಾಗರಿಕತೆಗಳಲ್ಲೂ, ಎಲ್ಲ ಮಹಾಕಾವ್ಯಗಳಲ್ಲೂ, ಪುರಾಣಗಳಲ್ಲೂ ನಾವು ಕಾಣುತ್ತೇವೆ.

ಭಾರತೀಯ ಪರಂಪರೆಯಲ್ಲಿ ಸರ್ಪಕ್ಕೊಂದು ವಿಶಿಷ್ಟ ಸ್ಥಾನವಿದೆ. ನಮ್ಮ ಪುರಾಣಗಳಲ್ಲಿ ಹಲವಾರು ಸರ್ಪೋಪಾಖ್ಯಾನಗಳಿವೆ. 'ನಾಗಮಂಡಲ'ದಂಥ ಆಚರಣೆಗಳು, ನಾಗಪಂಚಮಿಯಂಥ ಹಬ್ಬಗಳು ಹಾವಿನ ಬಗೆಗಿನ ನಮ್ಮ ಭಯ-ಭಕ್ತಿಗಳನ್ನು ತೋರಿಸುತ್ತವೆ. ಸರ್ಪಸಹವಾಸದ ಸಾಹಸಿಗಳ ಬಗ್ಗೆಯೂ ಕೇಳಿದ್ದೇವೆ. ಇವರನ್ನೆಲ್ಲ 'ಗರುಡನಗೆರೆ'ಯುಳ್ಳವರೆಂದು ಕರೆಯುವಷ್ಟರ ಮಟ್ಟಿಗಿನ ಮೌಢ್ಯವನ್ನು ಬೆಳೆಸಿಕೊಂಡಿದ್ದೇವೆ.

'ಗರುಡನಗೆರೆ' ಎಂದಕೂಡಲೇ ನೆನಪಾಯಿತು. ಗರುಡ ಯಾರು? ಸರ್ಪಗಳ ಸೋದರನಂತೆ. ಕಶ್ಯಪಮುನಿಯ ಇನ್ನೊಬ್ಬ ಪತ್ನಿ ವಿನತೆಯ (ಇವಳೂ ದಕ್ಷಪುತ್ರಿಯೆ) ಮಗ ಈತ. ಅರುಣ ಗರುಡನ ಸೋದರ. ತನ್ನ ಸೋದರಿ ಕದ್ರುವಿನೊಂದಿಗೆ ಇದ್ದ ಮಧುರಬಾಂಧವ್ಯ ಸವತಿ ಮಾತ್ಸರ್ಯವಾಗಿ ಪರಿಣಮಿಸಲು ಇಂದ್ರನ ಪಟ್ಟದ ಕುದುರೆ ಉಚ್ಚೈಶ್ರವಸ್ಸ ಕಾರಣವಾಯಿತಂತೆ. ಇಬ್ಬರೂ ಕ್ಷೀರಸಾಗರದವದಲ್ಲಿ ವಾಯುವಿಹಾರ ಹೊರಟಾಗ ಉಚ್ಚೈಶ್ರವಸ್ಸನ್ನು ನೋಡಿದರು. "ಆಹಾ! ಎಷ್ಟು ಬೆಳ್ಳಗಿನ ಕುದುರೆ!" ಎಂದು ವಿನತೆ ಉದ್ಗರಿಸಿದರೆ "ನಿನ್ನ ಕಣ್ಣಿಗೇನು ಐಬೆ? ಅದರ ಬೆನ್ನಿನ ಮೇಲೆ ಉದ್ದಕ್ಕೂ ಕರಿಗೆರೆಯಿದೆ-ಬಾಲದಿಂದ ಅಯಾಲಿನವರೆಗೂ" ಅಂದುಬಿಟ್ಟಳು ಕದ್ರು. "ಕರಿಗೆರೆಯೆ? ಇಲ್ಲಿಲ್ಲ, ಅದು ಹಿಮಶುಭ್ರ ಅಶ್ವ." ಎಂಬುದು ವಿನತೆಯ ವಾದ. "ಒಂದು ವೇಳೆ ಕರಿಗೆರೆ ಇದ್ದರೆ?" ಕದ್ರು ಸವಾಲು ಹಾಕುತ್ತಾಳೆ.. "ಕರಿಗೆರೆ ಇದ್ದರೆ ನಾನು ನಿನ್ನ ದಾಸಿಯಾಗುವೆ, ಆಯಿತೆ? ಕರಿಗೆರೆ ಇಲ್ಲದಿದ್ದರೆ ನೀನು ನನ್ನ ತೊತ್ತಾಗಬೇಕು." ಅಕ್ಕತಂಗಿ ಇಬ್ಬರೂ ಒಪ್ಪಿಕೊಂಡರು. ಸಂಜೆಯಾದ್ದರಿಂದ ಮನೆಗೆ ನಡೆದರು. ರಾತ್ರಿಯೆಲ್ಲ ಕದ್ರುವಿಗೆ ಕರಿಗೆರೆಯದೇ ಚಿಂತೆ. ಒಂದು ವೇಳೆ ಕರಿಗೆರೆಯಿಲ್ಲದಿದ್ದರೆ ತಾನು ತೊತ್ತಾಗಬೇಕು. ತನ್ನ ಮಕ್ಕಳಾದ ಸರ್ಪಗಳನ್ನು ಆಕೆ ಕರೆದು "ನಿಮ್ಮಲ್ಲಿ ಯಾರಾದರೂ ನಾಳೆ ಉಚ್ಚೈಶ್ರವಸ್ಸದ ಬೆನ್ನಮೇಲೆ ಅಯಾಲಿನಿಂದ ಬಾಲದವರೆಗೆ ಕರಿಗೆರೆಯಂತೆ ಬಿದ್ದುಕೊಳ್ಳಿ" ಎಂದಳು. ಕರ್ಕೋಟಕನನ್ನುಳಿದು ಉಳಿದವರು "ಇದು ಅಧರ್ಮ"ವೆಂದು ನುಡಿದು ತಾಯಿಯ ಶಾಪಕ್ಕೆ ಗುರಿಯಾದರು. ಮರುಮುಂಜಾನೆ ಕರ್ಕೋಟಕ ಕುದುರೆಯ ಮೇಲಿನ ಕರಿಗೆರೆಯಾದ. ವಿನತೆ ಒಪ್ಪಂದದಂತೆ ದಾಸಿಯಾದಳು. ಗರುಡ, ಸೋದರರಾದರೂ ಸರ್ಪಕುಲದ ಮೇಲೆ ಸೇಡು ತೀರಿಸಿಕೊಳ್ಳುತ್ತಲೇ ನಡೆದ.

ಇಂಥ ಹಲವಾರು ಅದ್ಭುತ ಕಲ್ಪನೆಗಳು ಜತೆಗೆ ಪ್ರತಿಮೆಗಳು ನಮಗೆ ಕಾಣಸಿಕ್ಕುತ್ತವೆ. ಸಮುದ್ರಮಥನ ಕಾಲದಲ್ಲಿ ಹಗ್ಗದಂತೆ ನೆರವಾದದ್ದು ಸರ್ಪ. ಭೀಮನಿಗೆ ದುರ್ಯೋಧನ ಉಣಬಡಿಸಿದ ವಿಷವನ್ನು ನಿವಾರಿಸಿ ಸಾವಿರ ಆನೆಗಳ ಬಲವನ್ನು ತಂದುಕೊಟ್ಟಿದ್ದು ಆರ್ಯಕನೆಂಬ ಸರ್ಪ. (ಕುಂತಿ ಈ ಆರ್ಯಕನ ಮಗಳಾದ ಮಾರಿಷೆಯ ಮಗಳಂತೆ.)

ನಮ್ಮ ಜನಪದ ಕತೆಗಳ ತುಂಬ ಹಾವುಗಳೇ ಹರಿದಾಡುತ್ತವೆ. ಉದಾಹರಣೆಗೆ ಗಿರೀಶ್ ಕಾರ್ನಾಡರ 'ನಾಗಮಂಡಲ' ನಾಟಕ. ಅತೃಪ್ತ ಜೀವವೊಂದಕ್ಕೆ ಮನುಷ್ಯರೂಪದಲ್ಲಿ ಬಂದು ಸಹಾಯ ಸಲ್ಲಿಸುವ ನಾಗರಾಜನ ಈ ಕಥೆಯಲ್ಲಿ ಗಿರೀಶರು ಸರ್ಪಸ್ವಭಾವವನ್ನು ತುಂಬ ಸೂಕ್ಷ್ಮವಾಗಿ ನಮಗೆ ಪರಿಚಯಿಸುತ್ತಾರೆ. ಕಾಮದ ಸಂಕೇತವಾಗಿ ನಿಲ್ಲುವ ಈ ಸರ್ಪಕಥೆಗೆ ಸಾರ್ವತ್ರಿಕತೆ - ಸಾರ್ವದೇಶಿಕತೆ - ಸಾರ್ವಕಾಲಿ



ನೆಡ್ತಿಕ್ಕಲ್ಲ ಸ್ವಾಮಿ, ದನಗಳಿಗಾದ್ರೂ ಆದೀತು ಅಂತ...

ಕತೆ ಇದೆಯೆಂಬುದನ್ನು 'ನಾಗಮಂಡಲ'ದ ಪಂಜಾಬಿ, ಮರಾಠಿ, ಜರ್ಮನ್ ಮತ್ತು ಇಂಗ್ಲಿಷ್ ಅನುವಾದಗಳು ಋಜುವಾತುಪಡಿಸುತ್ತವೆ.

ಕಲ್ಲನಾಗರ ಕಂಡರೆ ಹಾಲೆರೆವ ನಾವು ಜೀವಂತ ಹಾವುಗಳನ್ನು ಕೊಲ್ಲುತ್ತಲೇ ಬಂದಿದ್ದೇವೆ. ಇದು ಭಯದ ಕಾರಣವಾಯಿತು ಬಿಡಿ. ಆದರೆ ಲಾಭದಾಶೆಯಿಂದ ಹಾವುಗಳನ್ನು ಕೊಂದು ಅವುಗಳ ಚರ್ಮ ತೆಗೆದು ಮಾರುವ ದೊಡ್ಡ ವ್ಯವಹಾರವೇ ಇದೆಯಲ್ಲ. ಅದೆಷ್ಟು ಟ್ರಾಯ್ ನಗರದ ರಾಣಿಯರು ಈ ಚರ್ಮವನ್ನು ಧರಿಸಿ ಧಿಮಾಕು ತೋರಿಸುತ್ತಾರೊ.

ವಿಷವೇ ವಿಷಕ್ಕೆ ಮದ್ದು ಎಂಬುದನ್ನರಿತ ಮಾನವ ಸರ್ಪದಂಶಕ್ಕೆ ಮದ್ದಾಗಿ ವಿಷವನ್ನು ಬಳಸಲಾರಂಭಿಸಿದಂದಿನಿಂದ ಹಾವುಗಳಿಗೆ ಸುಕಾಲ ಆರಂಭವಾಗಿದೆಯೆನ್ನಬೇಕು. ನಿಯತ ಕಾಲಕ್ಕೆ ವಿಷಚೀಲ ತುಂಬಿಕೊಳ್ಳುವ ಸರ್ಪಗಳನ್ನು ಹಿಡಿದು ವಿಷಕಕ್ಕಿಸಿ ಹಾವುಗಳನ್ನು ಮತ್ತೆ ವಿಷಭರಿತವಾಗಲು ಬಿಡುವ ಸಂಸ್ಥೆಗಳು ಭಾರತದಲ್ಲಿವೆ.

ಎಲ್ಲ ಹಾವುಗಳೂ ವಿಷದ ಹಾವುಗಳಲ್ಲ. ಸುಮ್ಮಸುಮ್ಮನೆ ಯಾವ ಹಾವೂ ಕಡಿಯುವುದಿಲ್ಲ. ಆದರೆ ಹರಿದಾಡುವುದೆಲ್ಲ ಹಾವೆಂದುಕೊಳ್ಳುವ ನಾವು ಅವುಗಳ ಬಗ್ಗೆ ಸರಿಯಾದ ತಿಳುವಳಿಕೆಯುಂಟುಮಾಡಿಕೊಂಡಿಲ್ಲ. ಬದಲಾಗಿ ಕಂಡಂತೆ ಕತೆ ಕಟ್ಟುತ್ತೇವೆ. ಕತೆಗೆ ರೆಕ್ಕೆ ಪುಕ್ಕಗಳು ಹುಟ್ಟಿ ಬೇಕಾಬಿಟ್ಟಿ ಹಾರುತ್ತವೆ - ದಂತಕತೆಗಳ ಪ್ರವಾಹ ಹರಿಯುತ್ತದೆ.

ಮಹಾರಾಷ್ಟ್ರದಲ್ಲಿ ಒಂದು ಹಳ್ಳಿಯಿದೆ- ಬತ್ತೀಸ್ ಶಿರಾಳಾ. ಪುಣೆಯಿಂದ ದಕ್ಷಿಣಕ್ಕೆ ನೂರು ಕಿಲೋಮೀಟರ್ ದೂರದ ಈ ಹಳ್ಳಿಯಲ್ಲಿ ನಾಗಪಂಚಮಿಗೆ ಸಾವಿರ ಸಂಖ್ಯೆಯಲ್ಲಿ ಹಾವುಗಳು ಬರುತ್ತವೆ. ನಾಗಪಂಚಮಿ ಚಾತುರ್ಮಾಸದ ಆರಂಭದ ಹಬ್ಬ. ಹಾವುಗಳನ್ನು ತಲೆಮೇಲೆ ಹೊತ್ತು, ಕತ್ತಿಗೆ ಹಾಕಿಕೊಂಡು, ಕೈಮೇಲೆ ಕೂರಿಸಿಕೊಂಡು ಮೆರವಣಿಗೆ ಹೊರಡುವ ಆ ದೃಶ್ಯವನ್ನು ವಿದೇಶೀಯರೂ ಸೇರಿದಂತೆ ನೋಡಬರುವವರು ಲಕ್ಷಾಂತರ ಜನ. ಆ 'ನಾಗಾಭರಣ'ರಲ್ಲಿ ಐದಾರು ವರ್ಷದ ಬಾಲಕರಿಂದ ಅರವತ್ತರ ವೃದ್ಧರವರೆಗಿನವರಿರುತ್ತಾರೆ. ಹಾವು ಆಡಿಸುವ ಅವರ ಚಮತ್ಕಾರ ನೋಡಬೇಕು. ಭಾವುಕರು ಸಲ್ಲಿಸುವ ಪೂಜೆ, ದಕ್ಷಿಣೆ, ಪ್ರಚಾರಗಳ ಆಶೆ ಒಂದೆಡೆಯಾದರೆ ಸರ್ಪಸಂರಕ್ಷಕ 'ನಾಗಮಂಡಲ'ಗಳಿಗೆ ಸಿಗುವ ಸರಕಾರದ ಖಿಲ್ಲತ್ತು-ಪಾರಿತೋಷಕಗಳ ಆಕರ್ಷಣೆ ಮತ್ತೊಂದೆಡೆ. ಅತಿ ಉದ್ದದ - ಅತಿ ಭಾರದ - ಅತಿ ಎತ್ತರಕ್ಕೆ ಹೆಡೆಯೆತ್ತುವ ನಾಗನಿಗೆ ವಿಶೇಷ ಬಹುಮಾನ.

ನಾಗಪಂಚಮಿಯ ನಂತರ ಈ ಹಾವುಗಳ ಗತಿ? ಈ ಹಬ್ಬಕ್ಕೆಂದೇ ಎಲ್ಲಿಂದ ಹಿಡಿದು ತರುತ್ತಾರೋ ಅಲ್ಲಿಗೇ ಒಯ್ದು ಪೂಜೆ ಸಲ್ಲಿಸಿ ಬಿಟ್ಟುಬಿಡುತ್ತಾರಂತೆ ಹಾವುಗಳನ್ನು. ಮತ್ತೆ ನಾಗಪಂಚಮಿಯವರೆಗೆ ಅವುಗಳ ಸುದ್ದಿಗೆ ಹೋಗುವುದಿಲ್ಲ. ಮಹಾರಾಷ್ಟ್ರ ಸರಕಾರ ತನ್ನ

ನಾಡಿನ ಕಾಡುಗಳಲ್ಲಿ ಅಸಂಖ್ಯವಾಗಿ ಹರಡಾಡಿಕೊಂಡಿರುವ ಈ ಪರಿಸರ ಸಮತೋಲವಾದಿಯ ಸಂರಕ್ಷಣೆಗೆ ಹಲವು ಯೋಜನೆ ಹಾಕಿಕೊಂಡಿದೆ.

★

ಇದೀಗ ಒಂದಷ್ಟು ಭಯಂಕರ ಸರ್ಪಗಳ ಪರಿಚಯ ಮಾಡಿಕೊಳ್ಳೋಣ. ಅಮೇಜಾನ್ ಮತ್ತು ಆಫ್ರಿಕದ ದಟ್ಟ ಕಾಡುಗಳಲ್ಲಿಯೂ ಪೌರಸ್ತ್ಯ ದ್ವೀಪಗಳಲ್ಲಿಯೂ ವಾಸಿಸುವಂಥವುಗಳಿವು.

ಅನಾಕೊಂಡಾ:

ಅಮೇಜಾನಿನ ಮತ್ತು ದಕ್ಷಿಣ ಅಮೆರಿಕದ ಒರಿನೊಕೊ ಪ್ರದೇಶದ 'ನೀರ ಹೆಬ್ಬಾವು' ಜಗತ್ತಿನ ಅತಿ ಉದ್ದದ ಸರೀಸೃಪ. 90ರಷ್ಟಿರುವ ಹೆಬ್ಬಾವು ಪ್ರಭೇದಗಳಲ್ಲೇ ದೊಡ್ಡದು. ಹೆಬ್ಬಾವು ಅತ್ಯಂತ ಪ್ರಾಚೀನ ಸರ್ಪಜಾತಿಯದಂತೆ. ಯಾಕೆಂದರೆ ಸರ್ಪಗಳ ಅಸ್ಥಿಪಂಜರ ಮತ್ತು ಸ್ನಾಯುಗಳ ವಿಕಾಸವನ್ನು ಹೆಬ್ಬಾವುಗಳಲ್ಲಿ ನಾವು ಪೂರ್ತಿಯಾಗಿ ಕಾಣುವುದಿಲ್ಲ. ಅಲ್ಲದೆ ಹಿಂಗಾಲುಗಳಂತಿರುವ ಎದ್ದುಕಾಣದ ಅಂಗಗಳ ಸಹಾಯದಿಂದ ಮುಂದೆ ಸರಿಯುವುದು. ಕಾಲುಗಳುಳ್ಳ ಸರೀಸೃಪಗಳಿಂದಲೇ ಹಾವುಗಳು ವಿಕಾಸಗೊಂಡವು ಎಂಬುದಕ್ಕಿದು ದೊಡ್ಡ ಪುರಾವೆ.

ಅನಾಕೊಂಡಾದ ಸುತ್ತ ಹಲವಾರು ದಂತಕಥೆಗಳು ಹಬ್ಬಿಕೊಂಡಿವೆ. ''ಇದು 138 ಅಡಿ ಉದ್ದವಿರುತ್ತದೆ!'' ಎಂಬುದಂತೂ ಈ ಹೆಬ್ಬಾವಿನ ಭಯಂಕರತೆಯನ್ನು ಅತಿಯಾಗಿಸುವ ಹೇಳಿಕೆ. ಸಾಮಾನ್ಯವಾಗಿ ಇದರ ಗರಿಷ್ಠ ಉದ್ದ 9 ಮೀಟರು (30 ಅಡಿಗಳ ಒಳಗೇ)ಗಳು. ಇಲ್ಲಿಯವರೆಗೆ ದೊರೆತ ದಾಖಲೆಯೆನಿಸಬಲ್ಲ ಉದ್ದದ ಅನಾಕೊಂಡಾ ಎಂದರೆ 31.5 ಅಡಿಗಳದು. ಇದರ ಸಮೀಪ ಸಂಬಂಧಿ ಹಳದಿ ಅನಾಕೊಂಡಾ ಆ ಪ್ರಮಾಣದಿಂದ ನೋಡಿದರೆ ಚಿಕ್ಕದು. ಹೆಚ್ಚೆಂದರೆ 10.1 ಅಡಿ ಉದ್ದ ಬೆಳೆಯುವಂಥದು.

ಸ್ಪಾನಿಶ್ ನಾವಿಕರು ಅನಾಕೊಂಡಾವನ್ನು 'ಗೂಳಿಸಂಹಾರಕ' (Bull-killer) ಎಂದು ಕರೆದಿದ್ದಾರೆ. ಈ ಹೆಬ್ಬಾವಿನ ಗಾತ್ರ, ಶಕ್ತಿಗಳನ್ನು ಪ್ರಥಮೀಕರಿಸುವ ಅತಿಶಯೋಕ್ತಿ ಇದು. ಜಲವಾಸಿಯಾದ ಅನಾಕೊಂಡಾ ನೆಲದ ಮೇಲೂ ವೇಗ ಸಾಧಿಸುತ್ತದೆ. ಸಾಮಾನ್ಯವಾಗಿ 126 ಕೆ.ಜಿ ಭಾರದ ಅನಾಕೊಂಡಾ ಮೊಟ್ಟೆ ಹಾಕುವುದಿಲ್ಲ; 80 ಸೆಂಟಿಮೀಟರು ಉದ್ದದ 4 ರಿಂದ 39 ರವರೆಗೆ ಮರಿಗಳನ್ನು ಹೆರುತ್ತದೆ! ಅನಾಕೊಂಡಾದ ಗರಿಷ್ಠ ಆಯುರ್ಮಾನ 29 ವರ್ಷಗಳು. ನೀರು ಕುಡಿಯಲು ಬರುವ ಬೃಹತ್ ಗಾತ್ರದ ಸಸ್ತನಿಗಳು, ಪಕ್ಷಿಗಳ ಮೇಲೆ ಒಕ್ಕರಿಸಿ ಬಕ್ಕರಿಸಬಲ್ಲದು ಅನಾಕೊಂಡಾ. ಈವರೆಗಿನ ದಾಖಲೆಯಂತೆ ಇದು ನುಂಗಿದ ಅತಿದೊಡ್ಡ ಪ್ರಾಣಿಯೆಂದರೆ 6.5 ಅಡಿ ಉದ್ದದ ಮೊಸಳೆ. ಅತಿ ವೇಗದ ಪ್ರಾಣಿಗಳಾದ ಜಿಂಕೆಯಂಥವು ಅನಾಕೊಂಡಾಕ್ಕೆ ಬಲಿಯಾಗುವುದು ತೀರಾ ಅಪರೂಪ. ಜಲವಾಸಿಯಾದ್ದರಿಂದ ಅನಾಕೊಂಡಾದ ಆಹಾರದಲ್ಲಿ ಮೀನು ಮುಖ್ಯವಾಗಿದೆ.

ತುಂಬ ಬೆಲೆಬಾಳುವ ಅನಾಕೊಂಡಾದ ಸುಂದರ ಚರ್ಮ (ಬಣ್ಣಬಣ್ಣದ ಹೂವು-ಚಿತ್ತಾರಗಳುಳ್ಳದ್ದು)ವೇ ಈ ಹೆಬ್ಬಾವಿಗೆ ಶತ್ರು. ಒಂದು ಅನಾಕೊಂಡಾವನ್ನು ಕೊಂದು ಒಣಗಿಸಿ ಹಿಗ್ಗಿಸಿದ ಚರ್ಮದ ಉದ್ದ ಅದು ಜೀವಂತವಿದ್ದಾಗಿನ ದುಪ್ಪಟ್ಟಂತೆ!

ಕ್ಯೂಬದ ಮರ ಹೆಬ್ಬಾವು:

ಬೊೖಡೀ ಪ್ರಭೇದದ ಹೆಬ್ಬಾವುಗಳಲ್ಲಿ 39 ಜಾತಿಗಳಿವೆ. ಈಶಾನ್ಯ ಅಮೆರಿಕ, ದಕ್ಷಿಣ ಅಮೆರಿಕ, ವೆಸ್ಟ್ ಇಂಡೀಸ್, ಉತ್ತರ ಆಫ್ರಿಕಾ, ನ್ಯೂಗಿನೀ ಹಾಗೂ ಪೆಸಿಫಿಕ್ ಸಾಗರದ ಕೆಲ ದ್ವೀಪಗಳಲ್ಲಿ ಇವುಗಳನ್ನು ಕಾಣಬಹುದು. ಈ ಪೈಕಿ ಐದು ಕೆರಿಬಿಯನ್ ಪ್ರಭೇದಗಳು ತುಂಬ ವಿಶಿಷ್ಟವಾದವುಗಳು; ಆಯಾ ದ್ವೀಪದಲ್ಲಿ ಮಾತ್ರ ಕಾಣಸಿಗುವಂಥವು. ಕೆಲವಂತೂ ತೀರ ಅಪರೂಪದವು, ಸಂರಕ್ಷಣಾ ಯೋಜನೆಗಳನ್ನು ಹಾಕಿಕೊಳ್ಳದೆ ಹೋಗಿದ್ದರೆ ಇವು ಹೇಳಹೆಸರಿಲ್ಲದಂತಾಗುವ ಸಾಧ್ಯತೆಯೂ ಇತ್ತು.

ಕ್ಯೂಬದ ಮರ ಹೆಬ್ಬಾವು ಇಂಥ ವಿಶಿಷ್ಟ ಪ್ರಭೇದಗಳಲ್ಲೊಂದು. ಸಂರಕ್ಷಕ ಯೋಜನೆಯನ್ವಯ ಸುರಕ್ಷಿತವಾಗುಳಿದದ್ದು. ಕ್ಯೂಬದಲ್ಲಿ ಕೃಷಿ ಮತ್ತು ಕಬ್ಬಿನ ತೋಟಗಳಿಗಾಗಿ ಕಾಡು ಕಡಿದದ್ದರಿಂದ ನಿರ್ಗತಿಕವಾಗಿ ವಿನಾಶದಂಚಿಗೆ ತಲುಪಿದ್ದ ಮರಹೆಬ್ಬಾವು 'ಅಪಶಕುನದ್ದು' ಎಂಬ ಅಲ್ಲಿನವರ ನಂಬಿಕೆಯಿಂದಲೂ ಸದಾ ಸಾವಿನ ಭಯದಲ್ಲೇ ಬದುಕಬೇಕಿದೆ.

ಕೆರಿಬಿಯನ್ ಹೆಬ್ಬಾವುಗಳಲ್ಲೇ ಇದು ಉದ್ದವಾದದ್ದು (16.5 ಅಡಿಗಳವರೆಗೆ). ಮರಗಳ ಬಣ್ಣಕ್ಕೆ ಹೊಂದಿಕೊಳ್ಳಬಲ್ಲ ಚರ್ಮದ ಈ ಹೆಬ್ಬಾವು ತನ್ನದೇ ಆದ ಬೇಟೆಯ ವಿಧಾನವನ್ನಳವಡಿಸಿಕೊಂಡಿದೆ. ಇಲಿ, ಮೊಲ, ಹಕ್ಕಿ, ಹಲ್ಲಿ ಜಾತಿಯ ಪ್ರಾಣಿಗಳು, ಕಪ್ಪೆಗಳನ್ನು ತಿನ್ನುವ ಹೆಬ್ಬಾವುಗಳಿವೆಯಾದರೂ ಕ್ಯೂಬದ ಮರ ಹೆಬ್ಬಾವು ಮಾತ್ರ ಬಾವಲಿಗಳ ಬೇಟೆಯಾಡುತ್ತದೆ. ಅದೂ ಪೊಟರೆ, ಗುಹೆಗಳಲ್ಲಿ ವಾಸಿಸುವ ಬಾವಲಿಗಳನ್ನು. ವಾಸಸ್ಥಾನದಿಂದ ಹೊರಗೆ ಹಾರಿಬರುವಷ್ಟರಲ್ಲೇ ಅವುಗಳನ್ನು ಅಲ್ಲಿ ನೇತು ಬಿದ್ದಿರುವ ಮರ ಹೆಬ್ಬಾವು ಬಾಯಗಲಿಸಿ ಗಂಟಲಿಗಿಳಿಸಿಕೊಂಡಿರುತ್ತದೆ. ಆದರೆ ಆ ಗುಹೆಗಳ ಕಾವಳದಲ್ಲಿ ಅದು ಹೇಗೆ ತನ್ನ ಕವಳವನ್ನು ಪತ್ತೆ ಮಾಡುತ್ತದೆಂಬುದೇ ಈವರೆಗಿನ ಅನುತ್ತರಿತ ಪ್ರಶ್ನೆ.

ಇನ್ನೂರು ಗ್ರಾಂ ಭಾರದ ಐದು ಮರಿಗಳನ್ನು ಒಂದು ಸಲಕ್ಕೆ ಹೆರುವ ಮರ ಹೆಬ್ಬಾವು ಎಷ್ಟು ವರ್ಷ ಬದುಕುತ್ತದೆಂಬುದು ಗೊತ್ತಾಗಿಲ್ಲವಾದರೂ ಬಂಧನದಲ್ಲಿ 25 ವರ್ಷಗಳವರೆಗೆ ಜೀವಿಸಿದ ದಾಖಲೆಯಿದೆ.

ಕಾಮನ್ ಕಿಂಗ್ ಸ್ನೇಕ್ :

ಉತ್ತರ ಅಮೆರಿಕದ ಆಗ್ನೇಯ ಪ್ರದೇಶದಲ್ಲಿ ಕಾಣಸಿಕ್ಕುವ ಈ ಹಾವು ತುಂಬ ಆಕರ್ಷಕ. ಆರು ಅಡಿ ಉದ್ದ ಬೆಳೆಯಬಲ್ಲ ಅರ್ಧ ಕೆ.ಜಿ. ತೂಗುವ ಈ ಸಣ್ಣ ತಲೆಯ ಬಣ್ಣದ ಹಾವು ಅಲ್ಲಿ ಹೆಚ್ಚಿನವರ ಮೆಚ್ಚಿನ ಸಾಕುಪ್ರಾಣಿ. ದೂರದಿಂದ ಚಿನ್ನದ ಕರಿಮಣಿ ಸರದಂತೆ ಕಾಣುವ



ಅಬ್ಬಾ! .....ನೀನಾ .....ಸದ್ಯ .....ಆದಾಯ ತೆರಿಗೆ ಅಧಿಕಾರಿಗಳು ಅಂತ ಗಾಬರಿಯಾಗಿತ್ತು !!

ಇದನ್ನು ಅಲ್ಲಿ ಚೇನ್‌ಸ್ನೇಕ್ ಎಂದೂ ಕರೆಯುತ್ತಾರೆ. ನುಣುಪಾದ ಕಂದು ಕಪ್ಪು ಚರ್ಮ. ಮೇಲೆ ಹಳದಿ-ಬಿಳಿ ಸರಪಣಿ ಪಟ್ಟಿಗಳು. ಕಾಮನ್ ಕಿಂಗ್ ಸ್ನೇಕ್ ಒಂದು ರೀತಿಯಲ್ಲಿ ಉಪಕಾರಿ ಹಾವು. ಮನುಷ್ಯನಿಗೆ ಅಪಾಯವನ್ನೆಂದೂ ಮಾಡದ ಇದು ಇತರ ವಿಷಾರಿ ಹಾವುಗಳಿಗೆ ಮಾತ್ರ ಯಮಸ್ವರೂಪಿ. ಅವುಗಳನ್ನು ಇಡಿಯಾಗಿ ನುಂಗಿ ನೊಣೆಯುವ ಕಾಮನ್ ಕಿಂಗ್ ಸ್ನೇಕ್‌ಗೆ ವಿಷ ಪ್ರತಿರೋಧ ಶಕ್ತಿಯನ್ನು ಪ್ರಕೃತಿ ನೀಡಿದೆ.

ಮಾರ್ಚ್‌ನಿಂದ ಅಕ್ಟೋಬರ್‌ವರೆಗಿನ ಅವಧಿಯಲ್ಲಿ ತುಂಬಾ ಚುರುಕಾಗಿರುವ ಈ ಕಿಂಗ್‌ಸ್ನೇಕ್ ವಾಸಿಸುವುದು ನೆಲದ ಮೇಲೆಯೆ; ಬಿಲಗಳಲ್ಲಿ. ಬಾಲದ ಹೊಡೆತದ ಮೂಲಕ ವಿಷಕಾರುವ ರ್‍ಯಾಟಲ್‌ಸ್ನೇಕ್‌ನೊಂದಿಗೆ ಈ ಕಾಮನ್ ಕಿಂಗ್ ಸ್ನೇಕ್ ಹೋರಾಟಕ್ಕಿಳಿಯುವುದನ್ನು ನೋಡಬೇಕು. ತನ್ನ ದೇಹವನ್ನು ಚಕ್ಕುಲಿಯಂತೆ ದುಂಡಾಗಿಸಿ ರ್‍ಯಾಟಲ್ ಸ್ನೇಕ್‌ನ್ನು ಒತ್ತಿ ಓಡಿಯುವ ಕಿಂಗ್ ಸ್ನೇಕ್ ಶತ್ರು, ಬಾಲಬಿಚ್ಚದಂತೆ ಜಾಗ್ರತೆ ವಹಿಸುತ್ತದೆ. ಅದರ ತಲೆಯನ್ನೊಮ್ಮೆ ನುಂಗಿದರಾಯಿತು- ಕ್ಷಣಾರ್ಧದಲ್ಲೇ ಅಂಗುಲಂಗುಲವಾಗಿ ನುಂಗುತ್ತ ಸಾಗುತ್ತದೆ. ಆದರೆ

ತಲೆಯನ್ನುಳಿಸಿಕೊಳ್ಳಲು ರ್ಯಾಟಲ್ ಸ್ನೇಕ್ ನಡೆಸುವ ಭಗೀರಥ ಯತ್ನ, ಅದಕ್ಕಾಗಿ ಜಾಲ ಎತ್ತಿ ಬೀಸಲು ನಡೆಸುವ ಆಟಾಟೋಪಗಳು ಗೊತ್ತಿರುವ ಕಿಂಗ್ ಸ್ನೇಕ್ ತನ್ನ ದೇಹದ ಪ್ರಯೋಜನವನ್ನು ಬಲು ಚಾಲೂಕಿನಿಂದ ಪಡೆಯುತ್ತದೆ.

ಬ್ರಿಟನ್ ಮತ್ತು ಯುರೋಪಿನ ಇನ್ನಿತರ ಕೆಲವೆಡೆ ಕಾಣುವ ಸ್ಮೂತ್ ಸ್ನೇಕ್ ಎಂಬುದು ಉತ್ತರ ಅಮೆರಿಕದ ಈ ಕಾಮನ್ ಕಿಂಗ್ ಸ್ನೇಕ್‌ನ ಸಮೀಪದ ಸಂಬಂಧಿ. ಅರಣ್ಯದಲ್ಲಿ ಇದು ತರಗೆಲೆರಾಶಿ-ಕಡ್ಡಿಕಸಗಳ ಗುಂಪೆಗಳಡಿಯಲ್ಲಿ ಅಳ್ಳಕ್ಕೆ ಮೆತ್ತನೆಯ ತುಪ್ಪಳದಂಥ ಕವಚವುಳ್ಳ 5ರಿಂದ 14 ಮೊಟ್ಟೆಗಳನ್ನಿಟ್ಟು 70 ದಿನಗಳವರೆಗೆ ಕಾವು ಕೊಡುತ್ತದೆ. 9ರಿಂದ 11 ಸೆಂಟಿಮೀಟರು ಉದ್ದದ ಮರಿಗಳು ಆ ಅವಧಿಯ ನಂತರ ಮೊಟ್ಟೆ ಒಡೆದು ಹೊರಬಿದ್ದು ಹರಿದಾಡತೊಡಗುತ್ತವೆ. ಕಿಂಗ್ ಸ್ನೇಕ್‌ನ ಆಯುಸ್ಸು ಆರು ವರ್ಷ. ಇದರ ದೇಹದಲ್ಲಿನ ವಿಶಿಷ್ಟ ಗ್ರಂಥಿಗಳು ಒಸರುವ ಪರಿಮಳದ್ರವ್ಯವನ್ನು ಕಾಮೋತ್ತೇಜಕವಾಗಿ ಬಳಸುವುದುಂಟು.

ಮೊಟ್ಟೆ ತಿನ್ನುವ ಹಾವು: ಹಾವುಗಳೆಲ್ಲಾ ಮೊಟ್ಟೆಯನ್ನು ಇಷ್ಟಪಡುತ್ತವಾದರೂ ಇದು ಮಾತ್ರ ಅದರಲ್ಲಿ 'ವಿಶೇಷಜ್ಞ.' ಉಳಿದವು ಅನಿವಾರ್ಯ ಪ್ರಸಂಗದಲ್ಲಿ ಅಥವಾ 'ಬದಲಿ'ಗೆಂದು ಮೊಟ್ಟೆ ತಿಂದರೆ ಈ ಹಾವಿಗೆ ಅದೇ ಮುಖ್ಯ ಆಹಾರ. ಮೊಟ್ಟೆಯ ಆಕಾರ ಎಷ್ಟೇ ದೊಡ್ಡದಿದ್ದರೂ ಅಷ್ಟಗಲಕ್ಕೆ ಬಾಯಿಯನ್ನು ಹಿಗ್ಗಿಸಬಲ್ಲ ಈ ಹಾವಿಗೆ ಗಂಟಲಿನಲ್ಲೊಂದು ವಿಶೇಷ ಗರಗಸವಿದ್ದು ಮೊಟ್ಟೆಯ ಕವಚವನ್ನದು ಕತ್ತರಿಸಿ ಉದ್ದನೆಯ ಮುದ್ದೆ ಮಾಡಬಲ್ಲದು. ಭ್ರೂಣವನ್ನು ಹೀರಿದ ಮೇಲೆ ಮೊಟ್ಟೆಯ ಕವಚವನ್ನು ತೀರಿ ಹೋದ ಟೂತ್ ಪೇಸ್ಟಿನಂತೆ ಚಪ್ಪಟೆಮಾಡಿ ಹೊರಕ್ಕುಗುಳುತ್ತದೆ.

ಆಫ್ರಿಕದಲ್ಲಿದು ಸಾಮಾನ್ಯವಾಗಿ ಮರಗಳ ಮೇಲೆ, ಪಕ್ಷಿಗಳ ಗೂಡುಗಳ ಸಮೀಪದ ಪೊಟರೆಗಳಲ್ಲಿ ವಾಸಿಸುತ್ತದೆ. ಒಟ್ಟು ಆರು ಪ್ರಭೇದಗಳ ಈ ಜಾತಿಯಲ್ಲಿ ಒಂದು ಮಾತ್ರ ಭಾರತದಲ್ಲಿದ್ದು ಉಳಿದೈದಕ್ಕೂ ಆಫ್ರಿಕವೇ ಮನೆ. ಈ ನಿಶಾಚರ ಕಳ್ಳ ಯಾವ ಹೊತ್ತಿನಲ್ಲಿ ಯಾವ ಗೂಡಿಗೆ ಬಾಯಿಯಿಕ್ಕುತ್ತದೋ. ಸಾಮಾನ್ಯವಾಗಿ ಇದರ ಉದ್ದ ಎರಡೂವರೆಯಿಂದ ಮೂರೂವರೆ ಅಡಿ. ಸಣ್ಣಗೆ ಇರುವ ತಲೆ ಮತ್ತು ಅದಕ್ಕೂ ತೆಳ್ಳನೆಯ ದೇಹದ ಈ ಹಾವು ಸರಸರನೇ ಮರ ಏರುತ್ತದೆ.

ಮೊಟ್ಟೆ ತಿನ್ನುವ ಹಾವು ಉಳಿದಂತೆ ನಿರುಪದ್ರವಿ ನಿರಪಾಯಕಾರಿ. ಆದರೆ ಅಪಾಯ ಕಂಡಾಗ ವಿಷದ ಹಾವುಗಳಂತೆಯೇ ಫೂತ್ಕರಿಸಿ ಸೆಟೆದುನಿಂತು ಎದುರಾಳಿಯನ್ನು ಹೆದರಿಸುತ್ತದೆ.

ಈ ಹಾವು ಮೊಟ್ಟೆಗಳ ಆಯ್ಕೆಯಲ್ಲಿ ತುಂಬ ನಿಷ್ಣಾತ. ಕೆಟ್ಟ, ಒಡೆದ ಮೊಟ್ಟೆಗಳನ್ನೆಂದಿಗೂ ಮುಟ್ಟದು. ತೀರ ಮರಿಗೆ ಬಂದ ಮೊಟ್ಟೆಯೆಡೆ ತಿರುಗಿಯೂ ನೋಡುವುದಿಲ್ಲ. ಮೊಟ್ಟೆ ಸಿಗದಿದ್ದರೆ ಉಪವಾಸವಾದರೂ ಇದ್ದೀತು ವಿನಾ ಅನ್ಯ ಆಹಾರಕ್ಕೆಳಸುವದಿಲ್ಲ.

ಇದು ಕೂಡ 12ರಿಂದ 15 ಮೊಟ್ಟೆಗಳನ್ನಿಕ್ಕುತ್ತದೆ. ಅದರಿಂದ ಮರಿ ಹೊರಬರಲು ನಾಲ್ಕು ತಿಂಗಳು ಬೇಕು. ಆದರೆ ಇವುಗಳ ಮರಿಗಳ ಆಹಾರದ ವಿಷಯವಾಗಿ ಹೆಚ್ಚು ತಿಳಿದಿಲ್ಲ.

ಕಾಳಿಂಗ ಸರ್ಪ:

ಹಲವು ಕಟ್ಟುಕತೆಗಳಿಗೆ ಕಾರಣವಾಗಿ ಭಯದ ಪ್ರವಾಹವನ್ನೇ ಹರಿಸುವ ಕಾಳಿಂಗ ಸರ್ಪ (King Cobra) ಭಾರತ, ದಕ್ಷಿಣ ಚೀನ, ಮಲೇಶ್ಯ, ಮತ್ತು ಫಿಲಿಪೈನ್ಸ್ ದ್ವೀಪಗಳ ಅರಣ್ಯಗಳಲ್ಲಿ ಗೂಡು ಕಟ್ಟಿಕೊಂಡಿರುವಂಥದು. (ಶ್ರೀಲಂಕಾದಲ್ಲಿ ಮಾತ್ರ ಕಾಳಿಂಗ ಸರ್ಪ ಕಾಣಸಿಗದು.) 13ರಿಂದ 18 ಅಡಿ ಉದ್ದದ ಕಾಳಿಂಗ ಇರುವ ದಾಖಲೆಗಳಿವೆ. ಇಂಥದು ಇದ್ದಕ್ಕಿದಂತೆ ಆಳೆತ್ತರಕ್ಕೆ ತಲೆಯೆತ್ತಿ ಹೆಡೆಯರಳಿಸಿ ಬಹು ಹೊತ್ತು ಫೂತ್ಕರಿಸತೊಡಗಿತೆಂದರೆ ಎದುರಾಳಿ ಇದ್ದಲ್ಲೇ ಜೀವ ಬಿಡಬೇಕು. ಇದೇ ಭಂಗಿಯಲ್ಲಿ ಕಾಳಿಂಗ ಸರ್ಪ ಮುಂದೆ ಸರಿಯಬಲ್ಲುದು. ಅವಕಾಶ ಸಿಕ್ಕರೆ ಕ್ಷಣಮಾತ್ರದಲ್ಲಿ ತಪ್ಪಿಸಿಕೊಂಡು ಸರಸರನೇ ಹರಿದು (ನೀರಿದ್ದರಂತೂ

ಅದರಲ್ಲಿ ಈಜಿ) ಕಣ್ಮರೆಯಾಗಿಬಿಡುತ್ತದೆ.

ತುಂಬ ದೊಡ್ಡ ವಿಷಗ್ರಂಥಿಗಳುಳ್ಳದ್ದು ಕಾಳಿಂಗ ಸರ್ಪ. ಸರಿಯಾದ ಚಿಕಿತ್ಸೆಯಾಗದಿದ್ದರೆ ಕಚ್ಚಿದ 15-20 ನಿಮಿಷಗಳಲ್ಲಿ ವ್ಯಕ್ತಿ ಅಥವಾ ಪ್ರಾಣಿ ಸಾಯಬಹುದು. ಭಾರತ ಮತ್ತು ಥೈಲೆಂಡ್‌ಗಳಲ್ಲಿ ಕಾಳಿಂಗ ಸರ್ಪದ ಕಚ್ಚುವಿಕೆಯಿಂದ ಕೆಲಸಗಾರ ಆನೆಗಳು ಸತ್ತ ವರದಿಗಳಿವೆ. ಆನೆಗಳ ಸೊಂಟಕ್ಕೇ ಹೆಚ್ಚಿನ ಸಂದರ್ಭಗಳಲ್ಲಿ ಕಾಳಿಂಗ ಕಚ್ಚಿದ್ದುಂಟು. ಮೊಟ್ಟೆಯಿಕ್ಕಿದ ಹೊಸತಿನಲ್ಲಿಯೇ ಇದು ಹೆಚ್ಚಾಗಿ ಕಚ್ಚುವುದು. ಆಗಂತೂ ಗಂಡು-ಹೆಣ್ಣು ಎರಡೂ ಸೇರಿ ಮೊಟ್ಟೆಗಳನ್ನು ಅಜ್ಜಗಾವಲು ಕಾಯುತ್ತಿರುತ್ತವೆ. ಹೆಣ್ಣು ಸರ್ಪ ಮೊಟ್ಟೆಗಳಿಗೆ ಕಾವು ಕೊಡುವುದಿಲ್ಲವಾದರೂ ಮರಿಗಳು ಹೊರಬೀಳುವವರೆಗೂ ಕಾಯ್ದುಕೊಂಡೇ ಇರುತ್ತದೆ.

ಉಳಿದ ಹಾವುಗಳು, ಹಲ್ಲಿ ಜಾತಿಯ ಪ್ರಾಣಿಗಳು, ಇಲಿ-ಅಳಿಲುಗಳು ಹಾಗೂ ಪಕ್ಷಿಗಳನ್ನು ಬೇಟೆಯಾಡಿ ತಿನ್ನುವ ಕಾಳಿಂಗ ಜನವರಿ-ಫೆಬ್ರವರಿಗಳ ಅವಧಿಯಲ್ಲಿ ಕಾಮಕೇಳಿಗೆ ತೊಡಗುತ್ತದೆ.

ಏಳೆಂಟು ವರ್ಷ ಬದುಕುವ ಕಾಳಿಂಗ ಉರಗಗಳಲ್ಲೆ ಗೂಡುಕಟ್ಟಿಕೊಂಡಿರಬಲ್ಲ ಏಕಮಾತ್ರ ಸರ್ಪ. ತಗ್ಗುಗಳಲ್ಲಿ ಎಲೆ ಮತ್ತು ಕಡ್ಡಿಗಳಿಂದ ಮೆತ್ತನೆಯ ಮನೆ ಮಾಡಿಕೊಳ್ಳುತ್ತದೆ.

ಬ್ಲ್ಯಾಕ್ ಮಂಬಾ:

ಆಫ್ರಿಕದ ಅತ್ಯಂತ ವಿಷಕಾರಿಯಾದ ದೊಡ್ಡ ಹಾವು ಈ ಬ್ಲ್ಯಾಕ್ ಮಂಬಾ. ಕನಿಷ್ಠ 9.8 ಅಡಿ ಹಾಗೂ ಗರಿಷ್ಠ 13 ಅಡಿ ಉದ್ದದ ಮಂಬಾಗಳು ಸರ್ಪ ಸಂಕುಲದಲ್ಲೇ ಅತಿ ವೇಗದವು. ಕಾಲು ಇಂಚು ಉದ್ದದ ವಿಷದ ಹಲ್ಲುಗಳುಳ್ಳ ಇದು ಇರುವದಕ್ಕಿಂತ ಹೆಚ್ಚು ವೇಗದಲ್ಲಿದೆಯೇನೊ ಎಂಬ ಭ್ರಮೆಯುಂಟು ಮಾಡುವಂಥದು. ಸಾಮಾನ್ಯ ವೇಗ ಗಂಟೆಗೆ 11 ಕಿಲೋ ಮೀಟರುಗಳು. ದಾಖಲೆಯ ವೇಗ ಗಂಟೆಗೆ 23 ಕಿಲೋ ಮೀಟರುಗಳಷ್ಟು.

ಇದೇ ವೇಗದಲ್ಲಿ 20 ಇಂಚುಗಳಷ್ಟು ಎತ್ತರಕ್ಕೆ ತಲೆಯೆತ್ತಿಯೂ ಸಾಗಬಲ್ಲ ಮಂಬಾ ಮೂರು ಅಡಿಗಳಷ್ಟು ಹಿಂದಕ್ಕೆ ತಲೆ ಸರಿಸಿ ಪಟ್ಟನೆ ಎದುರಾಳಿಯನ್ನು ಹೊಡೆದು ಕಚ್ಚಿ ವಿಷವುಗುಳುತ್ತದೆ. ಈ ಕ್ರಿಯೆಯಲ್ಲದು ತುಂಬಾ ಕರಾರುವಾಕ್ಕಿನದು.



ನೀವೀಗ ಜನತೆಯನ್ನು ಬಡಿದೆಬ್ಬಿಸುವಂಥ ಭಾಷಣ ಮಾಡಬೇಕು ಸಾರ್.

ಬ್ಲ್ಯಾಕ್ ಮಂಬಾ ಅಚ್ಚುಕಪ್ಪು ಬಣ್ಣದ್ದೇನಲ್ಲ. ನಸುಕಂದು ಅದರ ಮೈ. ಉಳಿದಂತೆ ನಮ್ಮ ಕೇರೆ ಹಾವಿನ ಹಾಗೆಯೆ. ಆ ವೇಗಕ್ಕೆ ತಕ್ಕ ಜೀರ್ಣಶಕ್ತಿಯಿಂದಾಗಿ ಮಂಬಾಕ್ಕೆ ಪದೇ ಪದೇ ಹೊಟ್ಟೆಗೇನಾದರೂ ಬೀಳಲೇಬೇಕು. ಮರದ ಮೇಲೇರಿ ಹಾರುವ ಹಕ್ಕಿಗಳ ಪುಕ್ಕಗಳನ್ನೆಣಿಸುವ ಇದು ಪಕ್ಕನೇ ಅವನ್ನು ಹಿಡಿದು ಕೊಂಬೆಗೆ ಬಡಿದು ನುಂಗಿಬಿಡುತ್ತದೆ. ಮತ್ತೆ ನಾಲ್ಕು ಗಂಟೆಗಳ ಓಟದ ನಂತರ ಇಲಿಯೋ ಮತ್ತಿನ್ನೇನೊ ಇದಕ್ಕೆ ಬಲಿ.

10ರಿಂದ 15 ಮೊಟ್ಟೆಗಳನ್ನಿಕ್ಕುತ್ತದೆ ಮಂಬಾ. ಮರಗಳ ಪೊಟರೆಗಳೇ ಇದು ಮೊಟ್ಟೆಯಿಡುವ ಜಾಗ. 20 ಇಂಚು ಉದ್ದದ ಇದರ ಮರಿಗಳು ಮೊಟ್ಟೆಯೊಡೆದು ಹೊರಬಂದೊಡನೆಯೇ ಇಲಿಗಳಂಥ ಸಣ್ಣ ಪ್ರಾಣಿಗಳ ಬೇಟೆಗೆ ಹೊರಡು

ತ್ತದೆ. ಬಂಧನದಲ್ಲಿ 12 ವರ್ಷ ಬದುಕಬಲ್ಲ ಮಂಬಾ ಮುಕ್ತವಾಗಿದ್ದಲ್ಲಿ ಇನ್ನೂ ಹೆಚ್ಚು ಕಾಲ ಜೀವಿಸುತ್ತದೆ.

ನಂಜುಗುಳುವ ನಾಗ!

ಹೌದು. ಇದು ಬಾಯಿ ತೆಗೆದು ಎರಡು ಸಲ ವಿಷ ಚಿಮ್ಮಿದರೆ ಸಾಕು. ಸಾವೇ ನೆಗೆದು ಬಂದು ಅವುಚಿಕೊಂಡಂತೆ. ಆಫ್ರಿಕದ ವಿಷಕಾರಿ ಹಾವುಗಳಲ್ಲೇ ಇದು ಭೀಕರ. ಕರಿ ಕತ್ತಿನ, ಆರರಿಂದ ಒಂಬತ್ತಡಿ ಉದ್ದದ ಈ ನಾಗರ ಹಾವು ಮೊಟ್ಟೆಯೊಡೆದು ಹೊರಬಿದ್ದ ಕ್ಷಣದಿಂದಲೇ ಹೆಡೆಯೆತ್ತಿ ವಿಷ ಉಗುಳುವ ಆಟವನ್ನಾರಂಭಿಸುತ್ತದೆ.

ತಲೆಯ ಇಕ್ಕೆಲಗಳಲ್ಲೂ ಇರುವ ದೊಡ್ಡ ವಿಷಗ್ರಂಥಿಗಳಿಂದ, ದವಡೆಯೊತ್ತುವ ಮೂಲಕ ಎರಡು ಸಲ ಹೊರಚಿಮ್ಮುವ ವಿಷ ಸುದೂರದವರೆಗೆ ಸಿಂಚನಗೊಳ್ಳುತ್ತದೆ. ವಿಷ ಹಲ್ಲುಗಳ ಬಳಿ ಇರುವ ಚಿಕ್ಕ ರಂಧ್ರಗಳ ಮೂಲಕ ಚಿಮ್ಮಲ್ಪಡುವ ವಿಷದಿಂದ ಪಟಪಟನೆ ಬಿದ್ದು ಒದ್ದಾಡಿ ಸಾಯುತ್ತವೆ ಕ್ಷುದ್ರ ಜೀವಿಗಳು. (ನಾವು ಬಳಸುವ ಕ್ರಿಮಿನಾಶಕ ಸ್ಪ್ರೇಯರ್‌ಗಳನ್ನು ಕಲ್ಪಿಸಿಕೊಳ್ಳಿ.) ಹೀಗೆ ಚಿಮ್ಮಲ್ಪಡುವ ವಿಷ ಎಂಟು ಅಡಿ ದೂರಕ್ಕೆ ಎರಡು ಅಡಿ ಅಗಲದ ವರೆಗೆ ಹರಡಿಕೊಳ್ಳುತ್ತದೆ. ಈ ವಿಷ ಅದೆಷ್ಟು ಮಾರಕವಾದದ್ದೆಂದರೆ, ಒಂದು ಗ್ರಾಂ ಒಣಗಿದ ವಿಷ 165 ಜನರನ್ನು ಇಲ್ಲವೆ ಒಂದೂವರೆ ಲಕ್ಷಕ್ಕಿಂತ ಹೆಚ್ಚು ಇಲಿಗಳನ್ನು ಕೊಲ್ಲಬಹುದು. ಇದೇ ವಿಷವನ್ನು ಮತ್ತೆ ಅದಕ್ಕೆ ಉಣಿಸಿದರೆ ಈ ನಾಗ 350 ಮಿಲಿಗ್ರಾಂಗಳಷ್ಟು ವಿಷ ಸೇವಿಸಬಲ್ಲುದು. ಉಳಿದ ವಿಷಕಾರಿ ಹಾವುಗಳಿಗೆ ಹೋಲಿಸಿದರೆ ಇದು ಅತಿಪ್ರಮಾಣದ್ದು ಅಲ್ಲವೆ?

ಹನ್ನೊಂದು ವರ್ಷಗಳವರೆಗೆ ಬದುಕಬಲ್ಲ ಈ ಕರಿನಾಗರ ಪ್ರಸಂಗಾನುಸಾರ ವಿಷ ಚಿಮ್ಮುವ ಪ್ರಮಾಣವನ್ನು ನಿರ್ವಹಿಸುತ್ತದೆ. ಬಿಟ್ಟೂ ಬಿಡದೆ ಇಪ್ಪತ್ತು ಸಲವೂ ವಿಷ ಉಗುಳೀತು. ಎದುರಾಳಿ ಆ ವಿಷದ ವಾಸನೆಗೇ ನಿಶ್ಚೇಷ್ಟನಾದೀತು. ಇಲ್ಲವೆ ಸಿಡಿದ ವಿಷದ ಅತ್ಯಲ್ಪ ಪ್ರಮಾ

ಉರಗ ಭೋಜನ!

ಉರಗ ಸಂಕುಲದಲ್ಲಿ ಕಾಳಿಂಗ ಸರ್ಪಕ್ಕೆ ವಿಶಿಷ್ಟವೂ ಭಯಾನಕವೂ ಆದ ಸ್ಥಾನ ಸದಾ ಮೀಸಲು.

ಮಾನವನನ್ನೊಳಗೊಂಡು ಜೀವ ಜಂತುಗಳ ಎದೆಯಲ್ಲಿ ನಡುಕದಲೆ ಎಬ್ಬಿಸಲು ಅದರ ಹೆಸರೇ ಸಾಕು. ಇತರ ಜಾತಿಯ ಹಾವುಗಳ ಪಾಲಿಗಂತೂ ಕಾಳಿಂಗ ಸರ್ಪ ಸಾವಿನ ಪ್ರತಿರೂಪ! ಏಕೆಂದರೆ ಈ ದೈತ್ಯ ಸರ್ಪದ ಬಹುಮುಖ್ಯ ಆಹಾರವೇ ಹಾವು! ಚಿತ್ರದಲ್ಲಿರುವ ಹದಿನೆಂಟು ಅಡಿ ಉದ್ದದ ಕಾಳಿಂಗ ಏಳಡಿಯ ಕೇರೆ ಹಾವನ್ನು ಹಂತ ಹಂತವಾಗಿ ಭಕ್ಷಿಸುತ್ತಿದೆ. ಎದೆ ನಡುಕ ಹುಟ್ಟಿಸುವ ಈ ಭೀಕರ ಭೋಜನ ನಲವತ್ತೆರಡು ನಿಮಿಷಗಳ ತನಕ ನಿರಾತಂಕವಾಗಿ ಸಾಗಿತು. ಅಪರೂಪದ 'ಉರಗ ಭೋಜನ'ವನ್ನು ಕ್ಯಾಮೆರಾ ಕಣ್ಣುಗಳಲ್ಲಿ ಸೆರೆ ಹಿಡಿದವರು ದಕ್ಷಿಣ ಕನ್ನಡದ **ಈಶ್ವರ ದೈತೋಟ.**

ಇತ್ತೀಚೆಗೆ ಭಾರತದಲ್ಲಿ ಅಪರೂಪವಾಗುತ್ತಿರುವ ಕಾಳಿಂಗ ಸಂತತಿ ಪಶ್ಚಿಮ ಘಟ್ಟ, ಉತ್ತರಗುಡ್ಡಗಾಡು ಹಾಗೂ ಅಸ್ಸಾಂನ ದಟ್ಟ ಮಳೆಕಾಡುಗಳಲ್ಲಿ ಕಾಣಸಿಗುತ್ತದೆ.

ನಾಗರಹಾವಿನಷ್ಟು ವಿಷಕಾರಿಯಲ್ಲದಿದ್ದರೂ ಕಾಳಿಂಗದ ವಿಷಗ್ರಂಥಿಗಳು ಒಂದು ಆನೆಯನ್ನು ಯಮಲೋಕಕ್ಕಟ್ಟಲು ಸಮರ್ಥ. ಕಾಳಿಂಗಸರ್ಪದ ಸುತ್ತ ಹೆಣೆದುಕೊಂಡ ದಂತಕತೆಗಳಿಗೇನೂ ಕೊರತೆಯಿಲ್ಲ. ಹಾವುಗಳಲ್ಲಿ ಸಾಮಾನ್ಯವಾಗಿ ಕಂಡುಬರದ ಬುದ್ಧಿವಂತಿಕೆ ಹಾಗೂ ಜಾಗ್ರತಿಯನ್ನು ಕಾಳಿಂಗ ಧಾರಾಳ ಪ್ರದರ್ಶಿಸುತ್ತದೆ.



[illegible]

ಇಂದು ಪ್ರಪಂಚದಲ್ಲಿ 3000 ಜಾತಿಯ ಹಲ್ಲಿಗಳಿವೆ. 2700 ಜಾತಿಯ ಹಾವುಗಳಿವೆ. 220 ಜಾತಿಯ ಆಮೆಗಳಿವೆ. 21 ಜಾತಿಯ ಮೊಸಳೆಗಳಿವೆ.

ಪಳೆಯುಳಿಕೆಗಳ ಆಧಾರದಿಂದ 16 ವರ್ಗದ ಸರೀಸೃಪಗಳಿವೆಯೆಂದು ಪ್ರಾಣಿಶಾಸ್ತ್ರಜ್ಞರು ಹೇಳುತ್ತಾರೆ. ''ಸ್ಕ್ವಾಮಾಟಾ'' ಎಂಬುದು ಹಲ್ಲಿ ಹಾಗೂ ಹಾವುಗಳನ್ನು ಸೇರಿಸುವ ಕೊಂಡಿಯೆನಿಸಿವೆ. ಇದರಲ್ಲಿಯ 5700 ಜಾತಿಗಳಲ್ಲಿ ಕೇವಲ ಒಂದೇ ಜಾತಿ ಉಳಿದುಕೊಂಡಿದೆ. ಸರೀಸೃಪಗಳಲ್ಲಿ ಕೇವಲ 4 ವರ್ಗಗಳು ಉಳಿದುಕೊಂಡಿವೆ.

ವಿಶ್ವದಲ್ಲಿ ಉಳಿದಿರುವ ಏಕಮೇವ ಜಾತಿಯ ಹಲ್ಲಿ 'ಟುಆಟುರಾ'

200 ದಶಲಕ್ಷ ವರ್ಷಗಳ ಹಿಂದೆ ಇದ್ದ ಹಲ್ಲಿ ''ಟುಆಟುರಾ'' ಈಗ ಬದುಕುಳಿದ ಏಕಮೇವ ಜಾತಿ. ಇವುಗಳ ಸಂಖ್ಯೆ ಕೇವಲ 23. 1831ರಲ್ಲಿ ನ್ಯೂಝೀಲ್ಯಾಂಡ್‌ದಲ್ಲಿ ಮೊದಲ ಬಾರಿಗೆ ಕಂಡು ಬಂತು. ಈ ಜಾತಿ ಮರೆಯಾದುದರ ಕಾರಣವೇ ತಿಳಿದು ಬಂದಿಲ್ಲ. ಪ್ರಾಣಿಗಳಲ್ಲೇ ''ಟುಆಟುರಾ''ಹಲ್ಲಿ ದೀರ್ಘಾಯುಷಿ ಎಂದು ಗಣಿಸಲಾಗಿದೆ.

ಹುಟ್ಟಿ 20 ವರ್ಷದ ವರೆಗೂ ಪ್ರಾಯಕ್ಕೆ ಬಾರದ ಈ ಹಲ್ಲಿ ಗಂಡಿನೊಡನೆ ಸೇರಿ ಒಂದು ವರ್ಷಾನಂತರ ತತ್ತಿಯನ್ನು ಇಡುತ್ತದೆ. 15 ತಿಂಗಳ ನಂತರ ತತ್ತಿಯನ್ನು ಒಡೆದು ಮರಿ ಹೊರಗೆ ಬರುತ್ತದೆ. ಜನನಕ್ಕೆ ಇತರ ಎಲ್ಲ ಸರೀಸೃಪಗಳಿಗಿಂತ ಹೆಚ್ಚು ಕಾಲ ತೆಗೆದುಕೊಳ್ಳುವ ಈ ಜಾತಿಯ ಗಂಡು ನೂರಕ್ಕೂ ಹೆಚ್ಚು ವರ್ಷ ಬದುಕಿದ ದಾಖಲೆ ಇವೆ. ಚಿಕ್ಕ ಮರಗಳ ಬೇರಿನ ಬುಡದಲ್ಲೇ ಟುಆಟುರಾ ಹಲ್ಲಿಗಳು ವಾಸಿಸುತ್ತವೆ.

● ಮೋಹನ ಗ. ಹೆಗಡೆ

ಣದ ಹನಿಯಿಂದ ಕುರುಡಾದೀತು.

ಇನ್ನೆರಡು ಅತಿವಿಷದ ಹಾವು (Vipers) ಗಳನ್ನು ನೋಡೋಣ. ಇವುಗಳಲ್ಲಿ ಒಂದು ಸಾ-ಸ್ಕೇಲ್ಡ್ ವೈಪರ್, ಇನ್ನೊಂದು ಗಬೂನ್ ವೈಪರ್.

ಯುರೋಪು, ಏಶ್ಯ ಮತ್ತು ಆಫ್ರಿಕ ಖಂಡಗಳಲ್ಲಿ ಸುಮಾರು 150 ಜಾತಿಯ ವೈಪರ್‌ಗಳು ಸಿಕ್ಕುತ್ತವೆ. ಇವುಗಳಲ್ಲಿ ಭೂಮಿಯ ಮೇಲೆ, ಮರಗಳ ಮೇಲೆ ಮತ್ತು ನೆಲದಾಳದ ಹುತ್ತಗಳಲ್ಲಿ ವಾಸಿಸುವಂಥವುಗಳು ಇವೆ. ಎಲ್ಲವೂ ವಿಷಕಾರಿಯೆ. ಎಲ್ಲವೂ ಕಶೇರುಕ-ಜೀವಿಗಳನ್ನು ಬೇಟೆಯಾಡಿ ಬದುಕುವಂಥವೇ. ಈ ಪೈಕಿ ಆಫ್ರಿಕ (ಭೂಮಧ್ಯರೇಖೆಯ ಉತ್ತರ ಭಾಗಗಳಲ್ಲಿ), ಮಧ್ಯಪ್ರಾಚ್ಯ, ಭಾರತ, ಶ್ರೀಲಂಕಾಗಳಲ್ಲಿ ಕಾಣಸಿಗುವ ಸಾ-ಸ್ಕೇಲ್ಡ್ ವೈಪರ್ ಮುಖ್ಯವಾದದ್ದು. ಹೊಲಗದ್ದೆಗಳಲ್ಲೂ, ಜನವಸತಿಯಿರುವಲ್ಲಿಯೂ ಹೆಚ್ಚಾಗಿ ಇರುವ ಇದು ಬೆಕ್ಕು-ಮೊಲ-ನಾಯಿಮರಿಗಳಂಥವುಗಳನ್ನು ಹೆಚ್ಚು ಇಷ್ಟಪಡುತ್ತದೆ. ಕಾಳಿಂಗ ಸರ್ಪಕ್ಕಿಂತಲೂ ಭಯಂಕರ ಇದರ ಕಡಿತದ ಪರಿಣಾಮ.

ಇದರ ಕರಿಯ ಮೈಮೇಲಿನ ನಸುಗಪ್ಪು, ಆಲಿವ್, ನಸುಹಳದಿಯ ಚಿತ್ತಾರಗಳು ನಮಗೆ ಗರಗಸದ ಭ್ರಮೆ ಹುಟ್ಟಿಸುತ್ತವೆ. ಒಂದೂವರೆ ಅಡಿಯಿಂದ ಎರಡೂ ಮುಕ್ಕಾಲು ಅಡಿ ಉದ್ದದ ವರೆಗಿನ ಸಾ-ಸ್ಕೇಲ್ಡ್ ವೈಪರ್‌ಗಳಿವೆ. ಆದರೆ ಉಳಿದ ಹಾವುಗಳೊಂದಿಗೆ ಇದ್ದಾಗ ಇದನ್ನು ತಟ್ಟನೆ ಗುರುತಿಸುವುದು ಕಷ್ಟ.

ಕಲ್ಲುಗುಪ್ಪೆ, ಅರೆಮರುಭೂಮಿ ಮತ್ತು ಒಣ

ಪ್ರದೇಶಗಳಲ್ಲಿ ಅವಿತಿಟ್ಟುಕೊಳ್ಳುವ ಈ ಹಾವು ಮರಿಗಳನ್ನು ಹೆರುವಂಥದು. ಆಯುರ್ಮಾನ 12 ವರ್ಷಗಳು. ಆಪತ್ತು ಎದುರಾದಾಗ ತನ್ನ ಸುತ್ತಿಕೊಂಡ ದೇಹವನ್ನು ತಿಕ್ಕುತ್ತ, ಸುರುಳೆಯಾಗಿಯೆ ಪಕ್ಕಕ್ಕೆ ಸರಿಯುತ್ತ ಜೋರಾಗಿ ಬುಸುಗುಡುತ್ತದೆ. ಆರೇಳು ವರ್ಷ ವಯಸ್ಸಿನ ಈ ಜಾತಿಯ ಹಾವು ಎಂಟು ಜನರನ್ನು ಕೊಲ್ಲಬಹುದಾದಷ್ಟು ವಿಷಸಂಗ್ರಹವುಳ್ಳದ್ದಾಗಿರುತ್ತದೆ.

ಗಬೂನ್ ವೈಪರ್ ಅತಿ ಉದ್ದದ (1.9 ಇಂಚು) ಬಾಗಿದ ವಿಷದಂತಗಳುಳ್ಳದ್ದು. ಆಫ್ರಿಕದ ಈ ನಿವಾಸಿ ನೋಡಲು ಎಷ್ಟು ಆಕರ್ಷಕವೋ ಅಷ್ಟೇ ಅಪಾಯಕಾರಿ. ವಿಷಕನ್ಯೆ ಎನ್ನಿ, ಬೇಕಾದರೆ. ಐದುವರೆ ಅಡಿಯವರೆಗೂ ಬೆಳೆಯುವ ಗಬೂನ್ ವೈಪರ್ ಸುಮ್ಮನೆ ಬಿದ್ದುಕೊಂಡರೆ ರತ್ನಗಂಬಳಿಯನ್ನು ಸುತ್ತಿಟ್ಟಂತೆನಿಸುತ್ತದೆ. ಆಗ ಅದರ ವಿಷದಂತಗಳು ಮಡಿಚಿಕೊಂಡು ಕೆಳದವಡೆಗೆ ಅಂಟಿಕೊಂಡಿರುತ್ತವೆ.

ನಮ್ಮ ಮೊಳಕಾಲಿನ ಮೀನಖಂಡದಷ್ಟು ದಪ್ಪದ ಈ ಹಾವು ಮೈತುಂಬ ಕೊಬ್ಬುಳ್ಳದ್ದು. ಆ ಉದ್ದದ ದಬ್ಬಣದಂಥ ವಿಷದಂತಗಳನ್ನು ಊರಿದರೆ ಆಯಿತು. ವಿಷ ಕೂಡಲೆ ಕಡಿಸಿಕೊಂಡ ಪ್ರಾಣಿಯ ರಕ್ತನಾಳಗಳಲ್ಲಿಳಿಯುತ್ತದೆ. ಈ ಹಾವಿನ ಕಡಿತಕ್ಕೆ ಸಿಕ್ಕುವವೆಂದರೆ ಹೆಚ್ಚಾಗಿ ದನಕರುಗಳೇ. ಅಡವಿಯ ತರಗೆಲೆರಾಶಿಗಳ ಮಧ್ಯೆ ಅವಿತಿಟ್ಟು ಬೇಟೆಗಾಗಿ ಹೊಂಚುಹಾಕುತ್ತದೆ ಗಬೂನ್ ವೈಪರ್.

ಇದು ಕೂಡ ಮರಿಗಳನ್ನು ಹೆರುತ್ತದೆ. ಆದರೆ ಮರಿಗಳು ತೆಳು ಮೇಲ್ಪೊರೆಯ ಚೀಲದಲ್ಲಿದ್ದು ಭೂಮಿಯ ವಾತಾವರಣಕ್ಕೆ ಬಂದೊಡನೆ ಆ ಚೀಲ ಹರಿಯುತ್ತದೆ. ಒಂದು ಸಲಕ್ಕೆ ಗರಿಷ್ಠ 40ರಷ್ಟು ಮರಿಗಳನ್ನು ಇದು ಹಾಕುತ್ತದೆ. ಮರಿ ಒಂದಡಿ ಉದ್ದವಾಗಿರುತ್ತದೆ. ಆಗತಾನೆ ಕಣ್ಣು ಬಿಟ್ಟ ಮರಿಯೂ ತಾಯಿಯಷ್ಟೇ ಉಗ್ರ, ಅಷ್ಟೇ ವಿಷಾರಿ.

ಗಬೂನ್ ವೈಪರ್‌ನ ಮೈಯೊಳಗಿನ ಕೊಬ್ಬನ್ನು ಔಷಧಿಗಳಲ್ಲಿ ಬಳಸುವುದುಂಟು.


★

ಹಾವು ಅಪಾಯಕಾರಿ ನಿಜ. ಆದರೆ ಬಲು ಪ್ರಯೋಜನಕಾರಿಯೂ ಹೌದು. ನಮ್ಮ ಎಷ್ಟೋ ರೋಗಗಳಿಗೆ ಬೇರೆ ಬೇರೆ ಹಾವುಗಳ ವಿಷವೇ ಮದ್ದು ಕೂಡ. ಆದ್ದರಿಂದ ಹಾವು ಎಂದಾಕ್ಷಣ 'ಶೌರ್ಯಪ್ರದರ್ಶನ'ಕ್ಕೆ ನಿಲ್ಲಬೇಡಿ.

●

(ವಿವಿಧ ಮೂಲಗಳಿಂದ)

* ದಕ್ಷಬ್ರಹ್ಮನ ಮಗಳು. ಕಶ್ಯಪಮುನಿಯ ಹದಿಮೂರು ಜನ ಹೆಂಡಂದಿರಲ್ಲಿ ಒಬ್ಬಳು. ಅನಸ್ತ, ಆದಿಶೇಷ, ಆರ್ಯಕ ಮುಂತಾದ ಸರ್ಪಗಳನ್ನು ಹೆತ್ತವಳು.



ಆಕಾಂಕ್ಷೆ ಮತ್ತು ಭಯ

ಮೂಲ: *ಬರ್ಟ್ರೆಂಡ್ ರಸೆಲ್*
ಅನುವಾದ: *ಉಮೇಶ ಹೆಗಡೆ*

ಮನುಷ್ಯನ ಜೀವನದಲ್ಲಿ ಕೆಲಸಂಗತಿಗಳು ಬದಲಾಗುವುದೇ ಇಲ್ಲ. ಕೆಲವು ಮಾತ್ರ ಬದಲಾಗುತ್ತವೆ. ಈ ಕಾರಣಕ್ಕಾಗಿಯೇ ಸುತ್ತಲಿನ ಪರಿಸರ ಮುಖ್ಯವಾಗುತ್ತವೆ. ಸಮಾಜದಲ್ಲಿ ಯಾವ ಸಂಗತಿಗಳು ಬದಲಾಗಲಾರವೋ ಅವುಗಳ ಬಗೆಗೆ ವ್ಯಕ್ತಿ ತಲೆಕೆಡಿಸಿಕೊಳ್ಳುವ ಅಗತ್ಯವಿರುವುದಿಲ್ಲ. ಬದಲಾಗಬಹುದಾದ ಸಂಗತಿಗಳು ಮಾತ್ರ ವ್ಯಕ್ತಿಯ ಆಕಾಂಕ್ಷೆ ಮತ್ತು ಭಯದ ಮೂಲವಾಗುತ್ತವೆ. ನಿಗದಿತ ಆದಾಯವಿರುವವ ಹಣವನ್ನು ಕುರಿತು ಚಿಂತಿಸುವುದಿಲ್ಲ. ಸಮಾಜದಲ್ಲಿ ನಿಶ್ಚಿತ ಸ್ಥಾನಹೊಂದಿದವರು ಜಂಭಗಾರರಾಗುವುದಿಲ್ಲ. ತನ್ನ ರಾಷ್ಟ್ರದ ಶ್ರೇಷ್ಠತೆ ಅಬಾಧಿತ ಎಂಬ ವಿಶ್ವಾಸ ಹೊಂದಿದವರು ಅತಿದೇಶಾಭಿಮಾನಿಗಳಾಗಿರುವುದಿಲ್ಲ.

ಈ ಮಾತು ಮೌಲ್ಯಗಳಿಗೂ ಅನ್ವಯವಾಗುತ್ತದೆ. ತಾನು ದಕ್ಷ ಎಂಬ ದೃಢವಿಶ್ವಾಸವಿರುವ ಮನುಷ್ಯ ಬೌದ್ಧಿಕ ಮಹತ್ವಾಕಾಂಕ್ಷೆಗಳನ್ನು ಹೊಂದಿರುವುದಿಲ್ಲ. ತನಗೆ ಸೌಂದರ್ಯಪ್ರಜ್ಞೆ ಇಲ್ಲ ಎಂದು ನಂಬಿದವ ಜನ ತನ್ನನ್ನು ಸೌಂದರ್ಯಾರಾಧಕ ಎಂದು ಗುರುತಿಸಬೇಕೆಂದು ಬಯಸುವದಿಲ್ಲ. ತಾನೂ ಸಾಮಾನ್ಯ ಎಂದು ಬಲವಾಗಿ ನಂಬಿದವ ಕೀರ್ತಿಗಳಿಸಬೇಕೆಂದು ಹಂಬಲಿಸುವುದಿಲ್ಲ.

ಕಾಲ ಬದಲಾದಂತೆ ಈ ಇಡೀ ಜಗದ ತುಂಬ ಆದಾಯ ಮತ್ತು ಸಾಮಾಜಿಕ ಸ್ಥಾನಗಳೆಲ್ಲ ಡೋಲಾಯಮಾನ ಸ್ಥಿತಿ ತಲುಪಿವೆ. ಈ ವರ್ಷ ಲಕ್ಷಾಧೀಶನಾಗಿದ್ದವ ಬರುವ ವರ್ಷ ಭಿಕಾರಿಯಾಗಲು ಮತ್ತು ಅದರ ಮುಂದಿನ ವರ್ಷ ಆತನೇ ಮತ್ತೆ ಲಕ್ಷಾಧೀಶನಾಗಲು ಕೂಡ ಇಂದು ಸಾಧ್ಯ. ಇಷ್ಟೆಲ್ಲಾ ಅತಿಗೆ ಹೋಗದಿದ್ದರೂ ಜೀವನದಲ್ಲಿ ಆರ್ಥಿಕ ಭದ್ರತೆ ಮೊದಲಿನಷ್ಟು ಈಗ ಉಳಿದಿಲ್ಲ. ಈ ಬಗೆಯ ಸಾಧ್ಯತೆಗಳು ಮತ್ತು ಕಳೆದುಕೊಳ್ಳುವ ಭಯಗಳು ಮನುಷ್ಯ ಇಡೀ ದಿನ ಹಣದ ಕುರಿತೇ ಯೋಚಿಸುವಂತೆ ಮಾಡಿವೆ. ಇದಕ್ಕೆ ಅಪವಾದವಾಗಿ ಕೆಲ ಜನರಿರಬಹುದಾದರೂ ಸಮಾಜ ಅಂಥವರನ್ನು ಕೈಲಾಗದವರೆಂದು ತಿಳಿಯುತ್ತದೆಯೇ ವಿನಾ ಈ ಹಣಗಳಿಕೆಯ ಧಂಧೆಯಲ್ಲಿ ಅವರಿಗೆ ಆಸಕ್ತಿಯಿಲ್ಲ ಎಂದೇನೂ ಭಾವಿಸುವುದಿಲ್ಲ. ದುರಂತವೆಂದರೆ ಹಣಕಾಸಿಗೆ ನಿಜಕ್ಕೂ ಏನೇನೂ ಸಂಬಂಧವಿರದ ಕಲೆ ಮತ್ತು ಕಲಾವಿದರ ಯಶಸ್ಸನ್ನು ಕೂಡ ಅವರು ಎಷ್ಟು ಶ್ರೀಮಂತರು ಎಂಬುದರ ಮೇಲೆಯೇ ಲೆಕ್ಕ ಹಾಕಲಾಗುತ್ತದೆ. ಹಣವಿಲ್ಲದವನ ಕಲೆಗೆ ಯಾವ ಮಹತ್ವವೂ ಉಳಿದಿಲ್ಲ.

ಹಣ ಗಳಿಸಿರುವ ಈ ಶ್ರೇಷ್ಠತೆಯ ಇನ್ನೊಂದು ದುಷ್ಪರಿಣಾಮ ಶ್ರೀಮಂತರು ಮೌಢ್ಯತೆಯತ್ತ ನಡೆದಿರುವುದು. ಹಿಂದೆ ರಾಜ-ಮಹಾರಾಜರ ಕೂಡ ಕೆಲವಿದ್ಯೆಗಳಲ್ಲಿ, ಕಲೆಗಳಲ್ಲಿ ಪಾರಂಗತರಾಗಲೇಬೇಕಾಗುತ್ತಿತ್ತು. ವಿದ್ವಾಂಸರಲ್ಲದ ಶ್ರೀಮಂತರಿಗೆ ಬೆಲೆಯೇ ಇರಲಿಲ್ಲ. ಇಂದು ಹಾಗಲ್ಲ. ಹಣವೊಂದಿದ್ದರೆ ಮತ್ತೇನೂ ಬೇಡ. ಈಗ ಶಿಕ್ಷಣ ಮತ್ತು ವಿದ್ಯೆ ಇವು ಕೆಲವೇ ಶಿಕ್ಷಕರ ಮತ್ತು ಪ್ರಾಧ್ಯಾಪಕರ ಸ್ವತ್ತಾಗಿ ಉಳಿದಿವೆ; ಮತ್ತು ಅವರನ್ನು ಗೌರವಿಸುವವರು ಯಾರೂ ಇಲ್ಲ.

ನಾಗರಿಕತೆಗೆ ಆದ ಈ ಹಾನಿಯನ್ನು ತಡೆಗಟ್ಟಲೇ ಬೇಕು. ಈ ಕುರಿತು ಕಾರ್ಯಪ್ರವೃತ್ತರಾಗುವ ಮೊದಲು ಆಗುತ್ತಿರುವ ಹಾನಿ ಎಂಥದ್ದು ಮತ್ತು ಎಷ್ಟು ಎಂಬ ಅರಿವನ್ನು ಬೆಳೆಸಿಕೊಳ್ಳಬೇಕು.

ಹಣದ ಬೆನ್ನು ಹತ್ತಿದ ಸಮಾಜದ ಇಂದಿನ ಹುಚ್ಚಿಗೆ ನನಗೆ ತೋರುವ ಒಂದೇ ಪರಿಹಾರವೆಂದರೆ ಪ್ರತಿಯೊಬ್ಬರಿಗೆ ಅವರ ಅವಶ್ಯಕತೆಗೆ ತಕ್ಕಂತೆ ಮತ್ತು ಯಾರಿಗೂ ಅತಿಯಾಗಿ ದೊರೆಯದಂತೆ ಹಣಕಾಸಿನ ವ್ಯವಸ್ಥೆಯನ್ನು ರೂಢಿಸುವುದು. ●


ಕೋಗಿಲೆಗಳ ತಂಡಕ್ಕೆ ಸೈನ್ಯಾಧಿಪತಿಗಳ ಜರೂರತ್ತಿಲ್ಲ ನಿಜ. ಆದರೆ ಒಂದು ಪೀಳಿಗೆಯನ್ನು ನೈತಿಕವಾಗಿ ಮುನ್ನಡೆಸುವ ವ್ಯಕ್ತಿ ಖಂಡಿತ ಬೇಕು. ಅಂತಹ ತಾಕತ್ತು, ವಿದ್ವತ್ತು ಮತ್ತು ಸೌಜನ್ಯಗಳು ಹಾಸಣಗಿ ಗಣಪತಿ ಭಟ್ಟರಿಗೆ ಇವೆ. (ಸಂಯುಕ್ತ ಕರ್ನಾಟಕದ 'ಸಾಪ್ತಾಹಿಕ ಸೌರಭ' ದಿಂದ)

ಕೋಗಿಲೆ ಸೈನ್ಯದ ನಾಯಕ

● *ರವಿ ಬೆಳಗೆರೆ*

ಒಂದು ನಿರಂತರ ತಳಮಳವಿಲ್ಲದವನು ಕವಿಯಾಗಲಾರ, ಚಿತ್ರಕಾರನಾಗಲಾರ, ನಟನಾಗಲಾರ....ಸೃಜನಶೀಲ ಬದುಕಿನ ಯಾವ ಮಜಲನ್ನೂ ತಲುಪಲಾರ. ಆದರೆ, ಸಂಗೀತಗಾರ ಹಾಗಲ್ಲ. ಎದೆಯ ತಳಮಳಗಳನ್ನೆಲ್ಲ ರಾಗಗಳಾಗಿಸಿ ಗಾಳಿಗೆ ತೂರುವ ಮುನ್ನ 'ಪ್ರಳಯಪೂರ್ವ ಸಿದ್ಧತೆ' ಎಂಬಂತೆ ಒಂದು ಪ್ರಚಂಡ ಮೌನವನ್ನು ಸಾಧಿಸಿಕೊಳ್ಳಬೇಕು. ಆ ಮೌನದ ದಿವ್ಯಸ್ಫೋಟವೇ ಗಾಯನ!

ನಾನೀಗ ಗಣಪತಿ ಭಟ್ಟರ ಬಗ್ಗೆ ಹೇಳಲಿದ್ದೇನೆ. ಅವರ ಗಾಯನವನ್ನು ಮಂಚಿಕೇರಿ ಸುತ್ತಲಿನ ಅರೆಬರೆಯಾಗಿ ಕಡಿದ ಕಾಡುಗಳು ಸೌಮ್ಯವಾಗಿ ಕುಡಿಯುವ ಹೊತ್ತು. ನಾನು ಸದ್ದಿಲ್ಲದೇ ಹಾಸಣಗಿಯ ವಿಶಾಲ ಮನೆಯ



ಮಾಳಿಗೆಯನ್ನು ಹತ್ತುತ್ತಿದ್ದೆ. ''ಅಂಬುವಾಕೆ ಡಾರ್ ಕೋಯಲಿಯಾ ಬೋಲೆ...'' ಗಣಪತಿ ಭಟ್ಟರು ಎದೆಗೆ ತಂಬೂರಿ ಅವಚಿಕೊಂಡು ಬಾಗೇಶ್ರೀ ಹಾಡುತ್ತಿದ್ದರು. ಒಂದು ಕ್ಷಣ ಬಾಗಿಲಲ್ಲಿ ನಿಂತೆ. ಅವರ ಮನಸ್ಸು ಮತ್ತು ನನ್ನ ಕಣ್ಣು ತುಂಬಿಬಂದಿದ್ದವು. ಮರದ ತುತ್ತ ತುದಿಯಲ್ಲಿ ಕುಳಿತು ಉಲಿಯುವ ಕೋಗಿಲೆಯ ಕೂಗು ಕೇಳಿದ ಹುಡುಗಿ ವಿರಹದಲ್ಲಿ ತೊಯ್ದು ತೂಗುಯ್ಯಾಲೆಯಾಡುತ್ತಿರುವ ದೃಶ್ಯವನ್ನು ಮನದಲ್ಲಿ ತುಂಬಿಕೊಂಡು ಗಣಪತಿ ಭಟ್ಟರು ಹಾಡುತ್ತಿದ್ದರು. ಹಾಸಣಗಿಯ ಮನೆಯ ತುಂಬೆಲ್ಲ ಆ ರಾಗ ಒಂದು ವಸಂತದಂತೆ ಆವರಿಸಿಕೊಳ್ಳತೊಡಗಿತ್ತು.

ಗಾಯನದ ಎಷ್ಟೊ ಹೊತ್ತಿನ ನಂತರ ಮೌನ ಮುರಿದೆವು. ''ತುಂಬ involve ಆಗಿದ್ದೀರಿ ಇವತ್ತು...'' ಅಂದೆ. ನಕ್ಕರು. ''ರವೀ, ಹಾಡುವವನು - ಹೆಚ್ಚು ಹೆಚ್ಚು ಸಂವೇದನಾಶೀಲನಾದಂತೆಲ್ಲಾ ಹಾಡುವ ಚೀಜ್‌ನ ಭಾವ ಸ್ಪಷ್ಟವಾಗುತ್ತಾ ಹೋಗ್ತದೆ. ಭಾಷೆಯ ಅಸ್ಪಷ್ಟತೆ ಕೊಂಚ ಮಟ್ಟಿಗೆ - ಕೇಳುಗನ ಸಂತಸವನ್ನು ಕಡಿಮೆ ಮಾಡುತ್ತದೆ. ನಾನು ಹಾಡುವಾಗ ತಲ್ಲೀನತೆ ಮತ್ತು ಭಾಷೆಯ ಸ್ಪಷ್ಟತೆಯ ಬಗ್ಗೆ ತುಂಬ ಎಚ್ಚರವಾಗಿರುತ್ತೇನೆ,'' ಅಂದರು ಗಣಪತಿ ಭಟ್ಟರು.


ರಾಗ ಭಾವ ತುಂಬುವ ಜೀವ

ಅದು ಹಾಸಣಗಿ ಗಣಪತಿ ಭಟ್ಟರ ಗಾಯನದ ವೈಶಿಷ್ಟ್ಯವೂ ಹೌದು. ಅನೇಕ ಹಿಂದೂಸ್ತಾನಿ ಗಾಯಕರು ತಮ್ಮ ಸ್ವರಮಾಧುರ್ಯದಲ್ಲಿ ಕೇಳುಗರನ್ನು ತೇಲುಮುಳುಗಾಗುವಂತೆ ಮಾಡುತ್ತಾರೆ. ಕೆಲವರು ಎದೆ ತೊಯ್ಯುವಷ್ಟು ಇಂಪಾಗಿ ಹಾಡುತ್ತಾರಾದರೂ ಹಾಡುವ 'ಚೀಜ್'ನ ಶಬ್ದಗಳ ಸ್ಪಷ್ಟತೆಯೆಡೆಗೆ ಗಮನ ಕೊಡುವದಿಲ್ಲ. ಇದಕ್ಕೆ ವಯಸ್ಸೂ ಕಾರಣವಾಗಿರಬಹುದು. ಆದರೆ ಸ್ವರಮಾಧುರ್ಯದೊಂದಿಗೆ ಶಬ್ದಗಳೂ ನಮ್ಮ ಗ್ರಹಿಕೆಗೆ ನಿಲುಕಬಲ್ಲುದಾದರೆ ಸಂಗೀತ ಕಣ್ಣೆದುರಿಗೂ ನಿಲ್ಲಬಲ್ಲುದಾಗುತ್ತದೆ. ಆ ಕೆಲಸವನ್ನು ಭಟ್ಟರು ಸಲೀಸಾಗಿ ಮಾಡುತ್ತಾರೆ.

ರಿಮ್‌ಝಿಮ್ ಬಾಜೆ ಪಾಯಲಿಯಾ
ಕೈಸೆ ಜಾವೂ ಪಿಯಾಕೆ ಮಿಲನವಾ?
ಜಾಗೆ ಮೋರೀ ಅಬಸಾಸನನದಿಯಾ
ಜಿಯಾ ತಡಪತ ಮೋರಾ ಪಿಯಾಕೆ
ಮಿಲನವಾ...,

ಅವರೀಗ ನಸುನಗುತ್ತ ಹಾಡುತ್ತಿದ್ದರು. 'ಇರುಳ ಕತ್ತಲೆಯಲ್ಲಿ ಝಲ್ಲೆನ್ನುವ ಕಿರುಗೆಜ್ಜೆ ಅತ್ತೆ ನಾದಿನಿಯರಿಗೆಚ್ಚರವನೀವಾಗ ಹೇಗೆ ಹೋಗಲಿ ಅವನ ಬಳಿಗೆ? ನನ್ನವನ ಬಳಿಗೆ...?' ಇದು ಚೀಜ್‌ನ ಅರ್ಥ. ಕದ್ದು ಓಡುವ ಹುಡುಗಿಯ ಫಜೀತಿ ಕಣ್ಣೆದುರಿಗೆ ನಿಲ್ಲುತ್ತಿದ್ದರೆ ಗಾಯನಕ್ಕೆ ಇನ್ನಷ್ಟು ಸೊಗಸು ಅಲ್ಲವೆ? ಸಂಗೀತ ಲೋಕದ ದಿಗ್ಗಜಗಳಲ್ಲೊಬ್ಬರಾದ ಪಂಡಿತ ಬಸವರಾಜ ರಾಜಗುರುಗಳ ಮೂಸೆಯಲ್ಲಿ ತಯಾರಾದ ಈ ಕಲಾವಿದ ಕಾಲಾಂತರದಲ್ಲಿ ತನ್ನದೇ ಆದ ಸ್ವತಂತ್ರ ರೂಪು, ಛಾಪು ಮತ್ತು ಶೈಲಿಗಳನ್ನು ರೂಢಿಸಿಕೊಡದ್ದು ಅವರ ಕ್ರಿಯಾಶೀಲತೆಗೆ ಸರ್ಟಿಫಿಕೇಟು. ''ರವೀ, ಕಲಾವಿದ ಅನ್ನಿಸಿಕೊಳ್ಳುವದು ಹುಟ್ಟಿದ ನಂತರ ಎಂಬುದು ನಿಜವೇ ಆದರೂ, ಆತ 'ಗಿಫ್ಟೆಡ್' ಆಗಿ ಹುಟ್ಟಬೇಕಾದುದು ಅವನ ಪುಣ್ಯ ಮತ್ತು ಅವಶ್ಯಕತೆ. ಧ್ವನಿಯ ಸ್ಟ್ರಕ್ಚರ್, ಅದರ ಆಳ, ಅಗಲಗಳು ಸಹಜವಾಗಿ ಬರಬೇಕು. ಮುಂದೆ ಅದನ್ನು ಶಕ್ತಿಯುತವಾಗಿ ಮಾಡಿಕೊಳ್ಳುವದು ಸಾಧನೆಗೆ ಸಂಬಂಧಪಟ್ಟ ವಿಷಯ,'' ಎಂದು ಸರಾಗವಾಗಿ ಮಾತನಾಡತೊಡಗಿದರು.

ಗಣಪತಿ ಭಟ್ಟರ ಶೈಲಿಯಲ್ಲಿ ದೊಡ್ಡ ಮಟ್ಟದ ಭಾವುಕತೆ ಇದೆ. ನಿರ್ಜೀವ ಸ್ವರಗಳಲ್ಲಿ ರಾಗಭಾವ ತುಂಬುವ ಚೈತನ್ಯ ಅವರಲ್ಲಿದೆ. ಕೆಲವೇ ನಿಮಿಷಗಳಲ್ಲಿ ಜನರನ್ನು ಮೋಡಿಮಾಡಬಲ್ಲ ತಾಕತ್ತಿದೆ. ಅವರೇ ಹೇಳುವಂತೆ, ''ಸ್ವರಗಳು ರಾಗ ಸಂಪುಟದ ನಿಯಮಗಳು ಮತ್ತು ಹಳೆಯ ಚೀಜುಗಳು ಮಾತ್ರ, ನಮ್ಮ ಮೂಲಧನ. ಅದರ ಮೇಲೆ ನಾವು ನಿಲ್ಲಬೇಕು. ಕಲ



ನೆಯ ಮಹಲು ಕಟ್ಟಬೇಕು. ತಂತ್ರದ ಮಾತು ಬೇರೆ. ಅದರ ಚೌಕಟ್ಟಿನಲ್ಲಿ ಕವಿತೆಯ ಭಾವ ವನ್ನು ತುಂಬುವ ಕೆಲಸ ಹಾಡುಗಾರನಿಂದಾಗ ಬೇಕು. ಅದೇ ಸಾರ್ಥಕ್ಯ!''

ಸೆಂಟಿಮೆಂಟುಗಳ ಮೇಲೆ ಪಗಡೆ

ಒಂದು ಮಾತು ಒಪ್ಪಿಕೊಳ್ಳಬೇಕಾದುದು ಗಣಪತಿ ಭಟ್ಟರಲ್ಲಿದೆ. ಯಾರೋ ಅಜ್ಞಾತ ಕವಿ ಬರೆದ ಚೀಜು(ಕವಿತೆ)ಗಳ ಸಾಲುಗಳ ನಡುವಿನ ಭಾವನೆಗಳನ್ನು ಹೆಕ್ಕಿ ತಂದು ಕೇಳುಗರ ಸೆಂಟಿ ಮೆಂಟುಗಳ ಮೇಲೆ ಪಗಡೆಯಾಡಿ ಬಿಡಬಲ್ಲ ತಾಕತ್ತು ಅವರದು. ಅಷ್ಟು ಸಾಕು, ಅವರು ನಿಮ್ಮ ಬಲ ಹೀನತೆಗಳ ಪೈಕಿ ಒಂದಾಗಿಬಿಡು ತ್ತಾರೆ. ಮೂಲತಃ ಭಾವಪ್ರಧಾನವಾದ ಕಿರಾಣಾ ಘರಾಣೆಯ ಹಾಡುಗಾರಿಕೆಯನ್ನು ಕಲಿತಿರುವ ಗಣಪತಿ ಭಟ್ಟರು ಸಂಗೀತಲೋಕದ ಕಾಯಿದೆ, ನಿಯಮ ಮತ್ತು ಮಿನಿಮಮ್‌ಗಳನ್ನು ಇರಿಸಿಕೊ ಳ್ಳುತ್ತಲೇ ಅನಂತವಾದ ರಾಗ ಕಲ್ಪನೆಯ ವಿಸ್ತಾ ರಕ್ಕೆ ಸಾಗಿಹೋಗುತ್ತಾರೆ. ಅದರಲ್ಲಿವರು ನಿಸ್ಸೀ ಮರು. ರಾಗಗಳ ಮಿತಿ ಇದ್ದೇ ಇದ್ದದ್ದು. ಆದರೆ ಗಾಯಕನಾದವನು ಶತಶತಮಾನಗಳಷ್ಟು ಹಳೆ ಯದಾದ ಆ ರಾಗಗಳನ್ನು ಬೆನ್ನತ್ತುತ್ತಾನೆ. ಪರಿ ಚಯ, ಸ್ನೇಹ, ರೂಢಿ ಮತ್ತು ಅವುಗಳ ಮೇಲಿನ ಹಿಡಿತ ಇತ್ಯಾದಿಗಳ ಹಂತಗಳನ್ನು ದಾಟುವುದೇ ತಡ ಅವುಗಳ ಅನಂತತೆಯಲ್ಲಿ ಒಂದಾಗಿಬಿಡು ತ್ತಾನೆ. ತನ್ನ ಕಲ್ಪನೆ ಇದ್ದಷ್ಟೂ ಅವುಗಳ ಪರಿಧಿ ಯನ್ನು ವಿಸ್ತರಿಸಿಕೊಳ್ಳುತ್ತ ಹೋಗುತ್ತಾನೆ. ಇಲ್ಲದಿದ್ದ ಪಕ್ಷದಲ್ಲಿ ಒಂದೇ ರಾಗವನ್ನು ವರ್ಷ ಗಟ್ಟಲೇ ಹಾಡಿ ಅದರ ಆಳಾಗಿ ದುಡಿಯಲು ಸಾಧಕರೇನು ಹುಚ್ಚರೇ?

ಒಂದು ರಾಗ ಮುಗಿದಿತ್ತು. ಆ ಕೋಣೆಯ ಮಂದ ಬೆಳಕಲ್ಲಿ ಮೌನವಿತ್ತು. ನಾನು ಮಾತಿ ಗಾಗಿ ಹುಡುಕುತ್ತಿದ್ದೆ. ''ಭಟ್ಟರೇ ಇದೆಲ್ಲ ಹೇಗಾಯ್ತು?'' ಕೇಳಿಯೇ ಬಿಟ್ಟೆ. ಈ ಕೆಲ ವರ್ಷಗಳಿಂದ ಉತ್ತರ ಕನ್ನಡದ ಮಂಚಿಕೇರಿ ಕಲೆ, ನಾಟಕ, ಸಂಗೀತಗಳ ದುನಿಯಾದಲ್ಲಿ ಖಚಿತವಾಗಿ ಎದ್ದು ನಿಲ್ಲುತ್ತದೆಯಾದರೂ ಈಗೊಂದು ಹದಿನೈದು ವರ್ಷಗಳ ಹಿಂದೆ ಹಿಂದೂಸ್ತಾನಿ ಸಂಗೀತ ಮಂಚಿಕೇರಿ ಸುತ್ತಲಿನ ಕಾಡುಗಳಿಗೆ ಅಪರಿಚಿತವೇ ಆಗಿತ್ತು.

ಮಂಚಿಕೇರಿಯಿಂದ ಕೊಂಚದೂರ ಕಾಡುದಾ ರಿಯಲ್ಲಿ ನಡೆದರೆ ಸಿಗುವ ಹಾಸಣಗಿಯೇ ಗಣ ಪತಿ ಭಟ್ಟರ ಊರು. ಬಹುಶಃ ಆ ಊರಿನ ತೆಂಗು-ಅಡಿಕೆಗಳ, ಹೊನ್ನೆ-ಬೀಟೆಗಳ ಹಸಿರಿನ

ನಡುವೆ ಕೋಗಿಲೆಯ ನಂತರ ಸಂಗೀತದತ್ತ ಗಮನ ವಹಿಸಿದ್ದು ಈ ಗಣಪತಿ ಭಟ್ಟರೇ.

ಸ್ವರ ಧಾರೆಯೆರೆದವರು

ಹುಟ್ಟಿದ್ದು ಗೋರ್ಸಗದ್ದೆ ಗ್ರಾಮವಾದರೂ ಹಾಸಣಗಿ ಮನೆತನಕ್ಕೆ ದತ್ತಕ ಬಂದ ಗಣಪತಿ ಭಟ್ಟರು ಪದವಿ ಪಡೆಯಲೆಂದು ಧಾರವಾಡಕ್ಕೆ ಬಂದಾಗ ಮೊದಲು ಅವರ ಕಣ್ಣಿಗೆ ಬಿದ್ದದ್ದು ಸಿತಾರ್. ಆದರೆ ತಂತಿಯೊಡಲು ಅದೇಕೋ ಈತನನ್ನು ಸಲೀಸಾಗಿ ಒಪ್ಪಿಕೊಳ್ಳಲಿಲ್ಲ. ಹುಡುಗನಾಗಿದ್ದಾಗ ನಾಟಕಗಳಿಗೆ ಹಾಡುತ್ತಿದ್ದುದು, ಸ್ತ್ರೀ ಪಾತ್ರಮಾಡಿ ಖುಷಿ ಪಡುತ್ತಿದ್ದುದು, ಯಕ್ಷಗಾನ ಭಾಗವತರಾದ ತಮ್ಮ ತಂದೆಯ ಸ್ವರ ಮಾಧುರ್ಯ ತಮಗೂ ಬಂದೀತೆಂಬ ಅಭಿಲಾಷೆ ಮುಂತಾದವುಗಳೆಲ್ಲ ಸೇರಿ ಭಟ್ಟರನ್ನು ತಂದು ಕೆಡವಿದ್ದು ಬಸವರಾಜ ರಾಜಗುರುಗಳ ಪಾದಕ್ಕೆ!

''ನಾನಿರುತ್ತಿದ್ದ ರೂಮು ಗುರುಗಳ ಮನೆಗೆ ತೀರ ಹತ್ತಿರದಲ್ಲಿತ್ತು. ಒಂದಿನ ಧೈರ್ಯ ಮಾಡಿ ಹೋದೆ. ಆ ಮನೆಯ ಅಂಗಳದಲ್ಲಿ ಒಬ್ಬ ವ್ಯಕ್ತಿ ದೊಡ್ಡ ಹೊಟ್ಟೆ ಬಿಟ್ಟುಕೊಂಡು ಒಂದು ನಿಕ್ಕರು, ಕನ್ನಡಕ ಮತ್ತು ಟೋಪಿಗಳಲ್ಲಿ ತಮ್ಮನ್ನು ಅಲಂಕರಿಸಿಕೊಂಡು ನಿಂತಿದ್ದರು. ನನ್ನೆಡೆಗೆ ಏನಾಗಬೇಕಿತ್ತು? ಎಂಬಂತೆ ನೋಡಿದರು. 'ಇಲ್ಲಿ ರಾಜಗುರುಗಳು ಎಲ್ಲಿರ್ತಾರೆ?' ಅಂದೆ. 'ನಾನೇ ಇದ್ದೀನಿ, ಹೇಳು' ಎಂದರು. ಒಂದು ಕ್ಷಣ ಜೀವ ತಣ್ಣಗಾಯಿತು. ಸಂಗೀತ ಕಲೀತೀನಿ ಅಂದೆ!''

ರಾಜಗುರು ಅವರ ಬಗ್ಗೆ ಮಾತನಾಡುತ್ತ ಹೋದಂತೆಲ್ಲ ಗಣಪತಿ ಭಟ್ಟರು ಭಾವುಕರಾಗುತ್ತಾರೆ. ಅಲ್ಲಿ ಕೇವಲ ಗುರುವೆಂಬ ಮೂಢ ಭಕುತಿಗಿಂತ ಗೌರವ, ಸ್ನೇಹ, ಆಪ್ಯಾಯತೆಗಳು ಚಿಗುರೊಡೆಯುತ್ತವೆ. 'ಆರು ತಿಂಗಳ ತನಕ ಸಂಗೀತ ಕಲಿಸುತ್ತೇನೆ. ಅದು ನಿನಗೆ ಮೈಗೂಡಿತೊ ಸರಿ. ಇಲ್ಲವಾದರೆ ನಿಲ್ಲಿಸಿ ಬಿಡುತ್ತೇನೆ, ನಂತರ ಸುಮ್ಮನೆ ಕಾಡಬೇಡ' ಎಂದು ಎಚ್ಚರಿಸಿಯೇ ಗಣಪತಿ ಭಟ್ಟರಿಗೆ ಸ್ವರ ಪರಿಚಯ ಮಾಡಿಕೊಟ್ಟವರು ರಾಜಗುರುಗಳು. ಅವರಿಗಾಗ್ಲೆ ತುಂಬ ಕಚೇರಿಗಳು, ಕಾರ್ಯಕ್ರಮಗಳು. ನಡುವೆ ದೊರೆತ ಬಿಡುವಿನಲ್ಲೇ ಶಿಷ್ಯನನ್ನು ಕರೆದು ಕೂಡಿಸಿಕೊಳ್ಳುತ್ತಿದ್ದರು.

''ಗುರುಗಳಿಗೊಂದು ಅಭ್ಯಾಸವಿತ್ತು ನೋಡಿ. ಅವರು ಹಾಡುವಾಗ ಜೊತೆಗೊಬ್ಬರಿದ್ದು ಅವರು ಹಾಡಿದ್ದನ್ನೇ ಹಾಡಿದರೆ ಅದೇನೋ ಸ್ಫೂರ್ತಿ. ತುಂಬ ಉತ್ತೇಜಿತರಾಗುತ್ತಿದ್ದರು. ಹಾಗೆ ಅವರೊಂದಿಗೆ ದನಿಗೂಡಿಸುವ ಅವಕಾಶ ನನಗೆ ಅಕಸ್ಮಾತ್ತಾಗಿ ದೊರಕಿದ್ದು ಮಿರಜ್ ಹತ್ತಿರದ ಊರಿನ ಕಾರ್ಯಕ್ರಮದಲ್ಲಿ. ಅವರೊಂದಿಗೆ ಕುಳಿತಿದ್ದ ನಾನು ಹಾಡತೊಡಗಿದೆ. ಅಂದು ನನ್ನ ಭಾಗ್ಯದ ಬಾಗಿಲು ತೆರೆಯಿತು, ರವೀ. ಮುಂದೆ ಅವರು ಕೈ ಬಿಡಲಿಲ್ಲ. ಕುಳಿತುಬಿಟ್ಟರು ಪಾಠಕ್ಕೆ. ತುಂಬು ಮಮತೆಯಿಂದ ಸ್ವರಗಳ ಧಾರೆಯೆರೆದರು. ಮುಂದೆ ಅವರ ಎಲ್ಲ ಕಾರ್ಯಕ್ರಮಗಳಿಗೂ ನಾನು ಜೊತೆಯಾಗಿ ಹೋದೆ. ಊರು ಸುತ್ತುತ್ತ, ಸುತ್ತುತ್ತ ಸಂಗೀತ ಗಟ್ಟಿಯಾಯಿತು. ತಮ್ಮ ಸಂಗೀತಾಭ್ಯಾಸದ ಕೋಣೆಯಲ್ಲಿ ಹಾಕಿಕೊಂಡಿರುವ ಗುರುಗಳ ಭಾವ ಚಿತ್ರ ನೋಡುತ್ತ ಮಾತನಾಡುತ್ತಿದ್ದ ಭಟ್ಟರಲ್ಲಿ ಮತ್ತೆ ಭಾವುಕತೆ ಜಿನುಗುತ್ತಿತ್ತು.

ಕೋಗಿಲೆಗಳ ತಂಡಕ್ಕೆ!

ಒಂದು ಮಾತು ಇಲ್ಲಿ ಅವಶ್ಯಕ. ಈ ದೇಶದಲ್ಲಿ ಗಾಯಕರು ವಿರಳವಲ್ಲ. ಆದರೆ ಈಗೊಂದು ಮೂವತ್ತು ವರ್ಷಗಳ ಹಿಂದೆ ಕಾಣಿಸಿಕೊಂಡ ದಿಗ್ಗಜಗಳ ನಂತರ ಹಿಂದೂಸ್ತಾನಿ ಸಂಗೀತದಲ್ಲಿ ಒಂದು ತೆರನಾದ ಸ್ತಬ್ಧತೆ ಉಂಟಾಗಿತ್ತು. ಒಂದು ಬೆಳೆ ಬರಬೇಕಾದದ್ದು ಬರಲಿಲ್ಲ, ಆದರೆ ನಿರೀಕ್ಷೆಗಳು ಹುಸಿಯಾಗದಂತೆ ಈ ಹತ್ತು ಹದಿನೈದು ವರ್ಷಗಳಲ್ಲಿ ಯುವ ಹಿಂದೂಸ್ತಾನಿ ಗಾಯಕರ ಒಂದು ತಂಡವೇ ಚಿಗಿದು ನಿಂತಿದೆ. ಇಲ್ಲಿ ಹೆಸರುಗಳ ಉಲ್ಲೇಖ ಅನವಶ್ಯಕ. ಈ ಪ್ರತಿಭಾವಂತರ ಇಡೀ ಗುಂಪಿನಲ್ಲಿ ಎದ್ದು ಕಾಣುವ ಹೆಸರು ಗಣಪತಿ ಭಟ್ಟರದು ಎಂದರೆ ತಪ್ಪಾಗಲಾರದು. ಕೋಗಿಲೆಗಳ ತಂಡಕ್ಕೆ ಸೈನ್ಯಾಧಿಪತಿಗಳ ಜರೂರತ್ತಿಲ್ಲ, ನಿಜ. ಆದರೆ ಒಂದು ಪೀಳಿಗೆಯನ್ನು ನೈತಿಕವಾಗಿ

ಭಾವಗೀತೆಯಂಥ ಬದುಕು

''ನಿನ್ನ ಹುಸಿನಗೆ ಶಲ್ಯಕೆ ಸಾವಿರ ಸಲ ನಾ ಮಡಿದಿಹೆನು...''

ನಮ್ಮ ಸಂದರ್ಶನದ ಒಂದು ಹಂತದಲ್ಲಿ ಗಣಪತಿ ಭಟ್ಟರು ಶಾಸ್ತ್ರೀಯದಿಂದ ಭಾವಗೀತೆಗೆ ಜಿಗಿದಿದ್ದರು. ಅವರು ಒಳ್ಳೆಯ ಲಹರಿಯಲ್ಲಿ ಗೀತೆ ಹಾಡುವಾಗಲೇ ಅವರ ಮಡದಿ ನಾಗವೇಣಿ ನಸುನಗುತ್ತ ಚಹ ತಂದಿದ್ದರು. ''ನಿನ್ನ ಹುಸಿನಗೆ ಶಲ್ಯಕೆ...'' ಭಾವಗೀತೆ ಮತ್ತೂ ರಂಗೇರಿತ್ತು. ನಗೆಯೊಡನೆ ಸದ್ದು ಬೆರೆಸಿದ್ದು ಮಗ ವಸಂತ, ಮಗಳು ಸ್ಮಿತಾ. ಉತ್ತಮವಾದ ವಾತಾವರಣವನ್ನು ಮಕ್ಕಳಿಗೆ ಒದಗಿಸಿರುವ ಗಣಪತಿ ಭಟ್ಟರು ಮಕ್ಕಳ ಭವಿತವ್ಯದ ಬಗ್ಗೆ ಭರವಸೆಯಿಟ್ಟುಕೊಂಡಿದ್ದಾರೆ.

ಸುತ್ತಲಿನ ನಿಸರ್ಗ, ಮನೆಯೊಳಗಿನ ಪ್ರಶಾಂತ ವಾತಾವರಣ ಭಟ್ಟರ ಸಾಧನೆಗೆ ಇಂಬುಗೊಡುವಂತಿವೆ. ಹಾಸಣಗಿ ಸುತ್ತಲ ಕಾಡು ಅದೆಷ್ಟು ಸುತ್ತಿದರೂ ಬೇಸರವೆನಿಸದು. ಹಾಡುವ ಹಕ್ಕಿ,ಇಣುಕುವ ಬೆಳಕಿನ ಕಿರಣಗಳ ಜೊತೆಗೆ ಹತ್ತಿರದ ಬಂಧುವೂ ಹಿರಿಯರೂ ಆದ ಆರ್.ಜಿ. ಭಟ್ಟ ಹಾಸಣಗಿ ಅವರ ಸಾಂಗತ್ಯ, ಮಾರ್ಗದರ್ಶನ ಗಣಪತಿ ಭಟ್ಟರ ಮಾನಸಿಕ ಆರೋಗ್ಯವನ್ನೂ ಕಾಪಾಡಿಕೊಂಡು ಬಂದಿವೆ.

ಇವೆಲ್ಲದರ ಜೊತೆಗೆ ಆಗಾಗ ಕಾರ್ಯಕ್ರಮಗಳು ಅವರನ್ನು ಪುಣೆ, ದೆಹಲಿ, ಲಖನೌಗಳಿಗೆ ಕರೆಯೊಯ್ಯುತ್ತವೆ. ಬೆಂಗಳೂರು, ಮೈಸೂರುಗಳಂತೂ ಸರ್ವೇ ಸಾಮಾನ್ಯ.

ಸಂಗೀತವೊಂದನ್ನೇ ನಂಬಿಕೊಂಡರೆ ಆದೀತೆ, ವಂಶಪಾರಂಪರ್ಯವಾಗಿ ಒದಗಿಬಂದ ಕೃಷಿಯೊಂದಿಗೆ ಅವರದು ಬಿಡದ ನಂಟು.

ಮುನ್ನಡೆಸುವ ವ್ಯಕ್ತಿ ಖಂಡಿತ ಬೇಕು. ಅಂತಹ ತಾಕತ್ತು ವಿದ್ವತ್ತು ಮತ್ತುಸೌಜನ್ಯಗಳು ಭಟ್ಟರಿಗಿವೆ.

ಇಷ್ಟಾದರೂ ಕನ್ನಡಿಗರಾದ ಗಣಪತಿ ಭಟ್ಟರಿಗೆ ಕನ್ನಡ ನೆಲದಲ್ಲಿ ದೊರೆತ ಮನ್ನಣೆ ಏನು? ಉತ್ತರಿಸಬೇಕಾದವರು ನಾವು. ಮತ್ತು ಸಂಕೋಚ ಪಡಬೇಕಾದವರೂ ನಾವೇ. ಉತ್ತರ ಕನ್ನಡದ ಗಣಪತಿ ಭಟ್ಟರು ಇಲ್ಲಿಗಿಂತ ಮಹಾರಾಷ್ಟ್ರದಲ್ಲಿ ಹೆಚ್ಚು ಖ್ಯಾತರು. ಪುಣೆಯಲ್ಲಿ ಮನೆಮಾತಾದವರು. ನಾವಿಲ್ಲಿ ದೂರದ ಗಾಯಕರಿಗಾಗಿ ಬಾಗಿಲುಗಳನ್ನು ತೆರೆದಿರಿಸಿ ಕಾಯುತ್ತಿರುವಾಗ ಅವರು ಅಲ್ಲಿ ಸಮ್ಮಾನಿತರಾಗಿದ್ದಾರೆ.

''ಅತ್ಯಲ್ಪ ಕಾಲದಲ್ಲೇ ನನಗೆ ದೊಡ್ಡ ಹೆಸರು ಮತ್ತು ಮನ್ನಣೆ ದೊರೆತವು. ಇದು ಎಲ್ಲ ಕಲಾವಿದರಿಗೂ ಸಾಧ್ಯವಾದಾಗ ಮಾತ್ರ ಕಲೆ ಬೆಳೆಯುತ್ತದೆ. ಇವತ್ತಿನ ಕಲಾವಿದರೆಷ್ಟು ಜನಕ್ಕೆ ಸಂಭಾವನೆ ಬರಬಲ್ಲ ಕಾರ್ಯಕ್ರಮಗಳು ಸಿಗುತ್ತವೆ? ಕಾರ್ಯಕ್ರಮಗಳೆಂದರೆ ಒಂದೆರಡು ಪುಣ್ಯತಿಥಿಗಳಷ್ಟೇ. ಅಷ್ಟರಲ್ಲೇ ಕಲಾವಿದ ಬದುಕಲಾರ. ನಮ್ಮ ಸ್ಥಳೀಯ ಸಂಸ್ಥೆಗಳು, ಅಕಾಡೆಮಿಗಳು, ಸರ್ಕಾರ ಈ ಸಮಸ್ಯೆ ಕುರಿತು ಯೋಚಿಸಬೇಕು. ಕಲಾವಿದರು ವಲಸೆ ಹೋದರೆ ಮಾಮರಗಳು ಖಾಲಿಯಾಗುತ್ತವೆ. ಈಗಾಗಲೇ ಕರ್ನಾಟಕದ ದೊಡ್ಡ ಗಾಯಕರು ನಾಡು ಬಿಟ್ಟು ಹೋಗಿದ್ದಾರೆ,'' ಅಂದ ಅವರನ್ನು ಮತ್ತೊಂದು ಪ್ರಶ್ನೆಯೆದುರಿಗೆ ಎಳೆದು ಕೂಡಿಸಿದೆ.

''ಈ ಗಾಯಕರ ತಲೆಮಾರಿನ ನಡುವೆ ಉಂಟಾದ ಗ್ಯಾಪ್ ಅಥವಾ ಸ್ತಬ್ಧತೆಗೆ ಕಾರಣವೇನು?'' ಎಂದೆ.

ಮಾತು ಮತ್ತೆ ಅಲ್ಲಿಗೇ ಬಂತು.

''ಅಂದಿನ ತಲೆಮಾರಿನ ಅನೇಕ ಗಾಯಕರು ಉತ್ತರ ಭಾರತಕ್ಕೆ ವಲಸೆ ಹೋದರು. ಉಳಿದವರಿಗೆ ಪ್ರತಿಭೆ ಇದ್ದರೂ ಹೊಟ್ಟೆಪಾಡಿಗಾಗಿ ಅವರು ಸೇರಿಕೊಂಡಿದ್ದು ನಾಟಕ ಕಂಪೆನಿಗಳಿಗೆ. ಈಗ ಕೊಂಚ ಬದಲಾವಣೆಯಾಗಿದೆ. ಆಕಾಶವಾಣಿ ಮತ್ತು ದೂರದರ್ಶನಗಳು ಕಲಾವಿದ



ಗುಡಿ ಮಾರಿಬಿಟ್ಟೆ..... ಆದ್ರೆ ಹೆಲ್ಮೆಟ್ ಮಾತ್ರ ಇಟ್ಕೊಂಡಿದೀನಿ..... ಈ ಅಪಾರ್ಟ್‌ಮೆಂಟನಲ್ಲಿ ಇದರ ಅವಶ್ಯಕತೆ ಬಹಳ ನೋಡಿ.....

ರನ್ನು ಕರೆದು ಉತ್ತೇಜನ ನೀಡಿವೆ. ದೊಡ್ಡ ಮಟ್ಟದಲ್ಲಿ ಗಾಯಕರಿಗೆ ಎಕ್ಸ್‌ಪೋಜರ್ ಸಿಗುವುದೇ ಈ ಮಾಧ್ಯಮಗಳಿಂದ'' ಅಂದರು.

''ತೃಪ್ತಿ?'' ಎಂದೆ.

''ಅದು ಸಿಕ್ಕದಿನ ನಾನು ಹಾಡುವದೂ ಮುಗೀತದೆ. ಎಲ್ಲಿಯ ತನಕ ಅತೃಪ್ತಿ, ಕಳವಳ ಮತ್ತು ದಾಹಗಳು ನನ್ನನ್ನು ಕಾಡುತ್ತವೆಯೋ, ಅಲ್ಲಿಯ ತನಕ ನನ್ನ ಕಲೆಯೂ ಜೀವಂತ. ನನಗೆ ತೃಪ್ತಿಯ ಚಿಂತೆಯಿಲ್ಲ. ಹೀಗಾಗಿ ಸ್ತಬ್ಧತೆಯ ಭಯವೂ ಇಲ್ಲ.'' ಮಾತು ಮುಗಿಸಿದರು. ಭವಿಷ್ಯದೆಡೆಗೆ ಅವರ ಅಭಿಪ್ರಾಯ ಖಚಿತವಾಗಿತ್ತು. ಹಾಡುಗಾರನಾಗಿದ್ದು ಒಂದು ಆಕಸ್ಮಿಕ ಯೋಗ. ಹಾಡುತ್ತಾ ಹೋಗುವುದಷ್ಟೇ ಕೆಲಸ. ಅದೊಂದು ಶ್ರದ್ಧೆಯ, ಸಮಾಧಾನದ, ಸಾಂತ್ವನದ, ಸಂತಸದ ಕೆಲಸ. ಅವನ್ನು ಮಾಡುತ್ತಾರೆ. ಹಾಡುವ ಕನಸು ಹೊತ್ತು ಬರುವ ಶಿಷ್ಯರಿಗೆ ಪ್ರೀತಿಯಿಂದ ಕಲಿಸುತ್ತಾರೆ. ಹಾಗೆ ಕಲಿಯುವವರು ನಡುವೆ ಬಿಟ್ಟು ಹೋದಾಗ ಕೊಂಚ ಖಿನ್ನತೆ ಕಾಡುವದು ಸಹಜ. ಯಥಾಪ್ರಕಾರ ಒಬ್ಬರೇ ತಂಬೂರಿ ಅವಚಿ ಕೂಡುತ್ತಾರೆ. ಗುರುಕುಲಗಳ ಕಾಲ ಮುಗಿದಿದೆ. ರೇಡಿಯೋ, ಟೇಪ್‌ರೆಕಾರ್ಡ್‌ರ, ಟಿ.ವಿ.ಗಳಿರುವಾಗ ಈಗಿನ ವಿದ್ಯಾರ್ಥಿಗಳು ಎಲ್ಲವನ್ನೂ ದಿಢೀರನೇ ಸಾಧಿಸಬಯಸುತ್ತಾರೆ. ಆದರೆ ಗುರುವಿಲ್ಲದೇ ದಕ್ಕುವ ವಿದ್ಯೆಯಲ್ಲ ಸಂಗೀತ! ಗುರು ಒಬ್ಬ ಭಾವನಾತ್ಮಕ ಬಂಧು ಎಂಬುದು ಗಣಪತಿ ಭಟ್ಟರ ಅಭಿಪ್ರಾಯ.

ನನ್ನ ನೆಲೆ ಇಲ್ಲೇ ಇಹುದು!

ಕಡೆಯದಾಗಿ ನಾನು ಸಿನೆಮಾ ಸಂಗೀತದ ಬಗ್ಗೆ ಮಾತನಾಡಿದೆ. ಇವತ್ತಿನ ಕೇಳುಗ 'ಫಾಸ್ಟ್' ಯುಗದ ದಾಸ. ಅವನಿಗೆ ವ್ಯವಧಾನ ಕಡಿಮೆ. ಸಿನೇಮಾ ಸಂಗೀತ ಇವತ್ತಿನ ಮಟ್ಟಿಗೆ ಒಂದು ಅತಿದೊಡ್ಡ ಮಾಧ್ಯಮ. ''ಸಿನೇಮಾಗೆ ಹಾಡುತ್ತೀರಾ?'' ಅಂದೆ, ''ಹಾಡಬಹುದು. ಆದರೆ ಅಲ್ಲೇ ನೆಲೆ ಕಂಡುಕೊಳ್ಳಲಾರೆ. ಮತ್ತೆ ನನ್ನ ಸಂಗೀತಕ್ಕೆ ನನ್ನ ಲೋಕಕ್ಕೆ ಬಂದು ಬಿಡುತ್ತೇನೆ,'' ಅಂದರು. ಚಿತ್ರಗೀತೆಗಳ ಪ್ರೇಮಿಗಳನ್ನು ಹುಚ್ಚೆಬ್ಬಿಸುವದು ಗಣಪತಿ ಭಟ್ಟರಿಗೆ ಅದೆಷ್ಟು ಹೊತ್ತಿನ ಕೆಲಸ? ಅವರ ಭಾವಗೀತೆಗಳಾಗಲೇ ಈ ಕೆಲಸ ಮಾಡಿವೆ.

ಅವರು ನನ್ನನ್ನು ಬೀಳ್ಕೊಡಲು ಎದ್ದರು. ತಂಬೂರಿ ತುಂಬ ಗಂಭೀರವಾಗಿ ಗೋಡೆಗಾತುಕೊಂಡಿತ್ತು. ಹಾಸಣಗಿಯ ಮನೆ, ಸುತ್ತಲಿನ ತೋಟಗಳು ಅವುಗಳನ್ನು ಒಡಲಿಗೆ ಹಾಕಿಕೊಂಡು ನಿಂತ ಕಾಡು, ಅದರ ಸೊಂಟ ಬಳಸಿ ಹರಿಯುವ ಬೇಡ್ತಿ ಹೊಳೆ, ಶುರುವಾಗತೊಡಗಿದ ಮಳೆಗಾಲದಲ್ಲಿ ಮೋಡಗಳೊಂದಿಗೆ ಗುದ್ದಾಡುತ್ತಿದ್ದ ಸೂರ್ಯ ಮತ್ತು ಮನಸನ್ನು ಎಡೆಬಿಡದೆ ಕಾಡುತ್ತಿದ್ದ ಗಣಪತಿ ಭಟ್ಟರ ಆವಾಜುಗಳನ್ನು ಒಲ್ಲದ ಮನದಿಂದಲೇ ದಾಟಿಕೊಂಡು ಈಚೆಗೆ ಬಂದಾಗ ಅನಿಸಿದ್ದು....''ಸಪ್ತ ಸಾಗರದಾಚೆಯೆಲ್ಲೋ ಸುಪ್ತ ಸಾಗರ ಕಾದಿದೆ....!''

ನಿಮ್ಮ ಶಬ್ದ ಭಂಡಾರ ಬೆಳೆಯಲಿ

ಶಬ್ದ ಭಾಂಡಾರವು ಹಣದ ಭಾಂಡಾರಕ್ಕಿಂತಲೂ ಅಮೂಲ್ಯವಾಗಿದೆ

ಪ್ರತಿ ತಿಂಗಳೂ ಇಲ್ಲಿ ಕೆಲವು ಶಬ್ದಗಳ ಪರಿಚಯ ಮಾಡಿಕೊಡಲಾಗುವುದು. ಆಯಾ ಶಬ್ದದ ಮುಂದೆ ನಾಲ್ಕು ಅರ್ಥಗಳನ್ನು ಕೊಟ್ಟಿದ್ದು ಅವುಗಳಲ್ಲಿ ಒಂದು ಮಾತ್ರ ಸರಿಯಾಗಿರುತ್ತದೆ. ನಿಮಗೆ ಸರಿಯೆನಿಸಿದ ಅರ್ಥವನ್ನು ಮೊದಲು ಆರಿಸಿಕೊಳ್ಳಿರಿ. ಆಮೇಲೆ ಅದರ ಬೆನ್ನಿನ ಪುಟ ನೋಡಿರಿ. ಅಲ್ಲಿ ಸರಿಯಾದ ಅರ್ಥವನ್ನು ವಿವರಿಸಿದೆ.

1. ಹಲ್ಲಿ
   (ಅ) ಒಂದು ಸಿಹಿ ತಿಂಡಿ
   (ಆ) ಶಕುನದ ಹಕ್ಕಿ
   (ಇ) ಗೌಳಿ
   (ಈ) ದಾಳಿ

2. ಹಸನ್ಮುಖಿ
   (ಅ) ಬಳಲಿದ ಮುಖಿ
   (ಆ) ನಗು ಮೋರೆ
   (ಇ) ಅಗಲವಾದ ಮುಖಿ
   (ಈ) ನಿರ್ಮಲವಾದ ಹಣೆ

3. ಸಾಧನ
   (ಅ) ಉಪಕರಣ
   (ಆ) ಕುದುರೆ
   (ಇ) ಹಣವಂತ
   (ಈ) ನಿರೂಪಣೆ

4. ಸೇವ್ಯ
   (ಅ) ಕೇಳಬೇಕಾದ
   (ಆ) ಕೆಸುವಿನ ಎಲೆ
   (ಇ) ಸೇವಿಸಲು ಯೋಗ್ಯ
   (ಈ) ಸುಂದರ

5. ವಹಿ
   (ಅ) ಗಾಡಿ
   (ಆ) ಅಪಹರಿಸಿದ್ದು
   (ಇ) ಲೆಕ್ಕಪುಸ್ತಕ
   (ಈ) ಪಕ್ಷಪಾತ

6. ವಾಕ್ಶ್ರೀ
   (ಅ) ಜಗಳ
   (ಆ) ವಾದ
   (ಇ) ಮುಂಗೈಯ ಆಭರಣ
   (ಈ) ಮಾತಿನ ಸೌಂದರ್ಯ

7. ಲಂಡೆ
   (ಅ) ನೀತಿಗೆಟ್ಟವಳು
   (ಆ) ಸೂಳೆ
   (ಇ) ವಿಧವೆ
   (ಈ) ಕೋಳ

8. ಲಗಾಮು
   (ಅ) ತಾಕಲಾಟ
   (ಆ) ಕಡಿವಾಣ
   (ಇ) ಕೋಟೆಯ ಮೇಲೆ ದಾಳಿ
   (ಈ) ತಗಲುವಿಕೆ

9. ಪಾಶ
   (ಅ) ಹಾಸುಗೆ
   (ಆ) ಹಸುಗಳ ಹಿಂಡು
   (ಇ) ಶಿವ
   (ಈ) ಹಗ್ಗದ ಉರುಲು

10. ಪೀತ
    (ಅ) ಹಳದಿ
    (ಆ) ತಂದೆ
    (ಇ) ಪುಕ್ಕ
    (ಈ) ಕಸುಗಾಯಿ

11. ಬೆಸುಗೆ
    (ಅ) ಸೆಕೆ
    (ಆ) ಹರಿಗೆ
    (ಇ) ಜೋಡಿಸುವಿಕೆ
    (ಈ) ಹೇಳಿಕೆ

12. ಭಷಣ
    (ಅ) ಬೂದಿ
    (ಆ) ಬೊಗಳುವಿಕೆ
    (ಇ) ತುಂಬಿಸುವುದು
    (ಈ) ಚೀಲ

ಶಬ್ದ ಭಾಂಡಾರದ ಸರಿಯಾದ ಅರ್ಥಗಳು

1. ಹಲ್ಲೆ

(ಈ) ದಾಳಿ, ಆಕ್ರಮಣ. ಉದಾ: ಕೋಟೆಯ ಮೇಲೆ ಹಲ್ಲೆಯಾಯಿತು. [ಹಿಂದಿ - ಹಲ್ಲಾ= ಗಲಾಟೆ, ಸೆಣಸುಮಾತು]

2. ಹಸನ್ಮುಖಿ

(ಅ) ನಗುಮುಖಿ; ನಸುನಗೆ ತೋರುವ ಮೋರೆ. ಉದಾ: ಹಸನ್ಮುಖಿಯಾದ ಹುಡುಗ. [ಸಂ. ಹಸತ್= ನಗುವ+ ಮುಖಿ]

3. ಸಾಧನ

(ಅ) ಉಪಕರಣ, ಸಲಕರಣೆ, ಉಪಾಯ. ಉದಾ: ಶತ್ರುಗಳನ್ನು ಹೆದರಿಸುವ ಸಾಧನ. [ಸಂ.]

4. ಸೇವ್ಯ

(ಇ) ಸೇವಿಸಲು ಅರ್ಹ, ಉಪಯೋಗಿಸಲು ತಕ್ಕ; ಉಪಚರಿಸಲು ಯೋಗ್ಯ. ಉದಾ: ಸೇವ್ಯವಾದ ಆಹಾರ, ಸೇವ್ಯನಾದ ಒಡೆಯ. [ಸಂ.]

5. ವಹಿ

(ಇ) ಲೆಕ್ಕಪುಸ್ತಕ, ದಫ್ತರ; ಪುಸ್ತಕ. ಉದಾ: ವಹಿಗಳನ್ನು ನ್ಯಾಯಾಲಯದಲ್ಲಿ ಹಾಜರುಪಡಿಸು. [ಮರಾಠಿ - ವಹೀ - ಹೊಲಿದ ಪುಸ್ತಕ - ಬಂಗಾಲಿ - ಬಈ]

6. ವಾಕ್ಶ್ರೀ

(ಈ) ಮಾತಿನ ಬೆಡಗು, ಮಾತಿನ ಸೌಂದರ್ಯ, ಚಮತ್ಕಾರ. ಉದಾ: ಬೆರಗುಗೊಳಿಸುವ ವಾಕ್ಶ್ರೀ. [ಸಂ. ವಾಕ್= ಮಾತು+ ಶ್ರೀ= ಸೌಂದರ್ಯ]

7. ಲಂಡೆ

(ಅ) ನೀತಿಗೆಟ್ಟವಳು, ನಾಚಿಕೆಗೇಡಿ ಹೆಂಗಸು. ಉದಾ: ಆ ಲಂಡೆಯ ಹತ್ತಿರ ಏನು ಜಗಳ? [ಹಿಂ. ಲಂಡ್= ಶಿಶ್ನ (?)]

8. ಲಗಾಮು

(ಅ) ಕಡಿವಾಣ, ಕುದುರೆ ಮೊದಲಾದ ಪ್ರಾಣಿಗಳನ್ನು ನಿಯಂತ್ರಿಸುವುದಕ್ಕಾಗಿ ಕಟವಾಯಿಗಳಿಗೆ ಹಾಕಿ ಹಗ್ಗದಿಂದ ಸವಾರನು ಎಳೆಯುವ ಸಾಧನ. ಉದಾ: ಲಗಾಮಿಲ್ಲದ ಮಾತು. [ಪಾರಸೀಕ - ಲಗಾಮ್]

9. ಪಾಶ

(ಈ) ಉರುಲು, ಹಗ್ಗ. ಉದಾ: ಯಮಪಾಶ. [ಸಂ.]

10. ಪೀತ

(ಅ) ಹಳದಿ, ಹೊಂಬಣ್ಣ, ಹಳದಿ ಬಣ್ಣದ. ಉದಾ: ಪೀತವಸನ= ಹಳದಿ ಬಟ್ಟೆ [ಸಂ.]

11. ಬೆಸುಗೆ

(ಇ) ಜೋಡಿಸುವಿಕೆ, ಜೋಡಣೆ; ಸೀಸ ಮೊದಲಾದ ಲೋಹವನ್ನು ಕರಗಿಸಿ ಎರಡು ಲೋಹದ ಭಾಗಗಳ ನಡುವೆ ಹಾಕಿ ಮಾಡಿದ ಜೋಡಣೆ. ಉದಾ: ಮುರಿದಲ್ಲಿ ಬೆಸುಗೆ ಹಾಕು. [ದೇಶ್ಯ - ಬೆಸೆ+ ಗೆ]

12. ಭಷಣ

(ಅ) ಬೊಗಳುವಿಕೆ, ಅರ್ಥವಿಲ್ಲದೆ ಸುಮ್ಮನೆ ಗಟ್ಟಿಯಾಗಿ ಮಾತಾಡುವುದು. ಉದಾ: ಇದು ಭಾಷಣವಲ್ಲ, ಭಷಣ. [ಸಂ.]


ನಿಮ್ಮ ಶಬ್ದಶಕ್ತಿ ತರಗತಿ

ನೀವು ಎಷ್ಟು ಶಬ್ದಗಳಿಗೆ ಅರ್ಥ ಅರಿಸಿದ್ದು ಸರಿಯಾಗಿದೆಯೆಂದು ಎಣಿಸಿ ಕೆಳಗಿನಂತೆ ನಿಮ್ಮ ಶಬ್ದಶಕ್ತಿಯ ತರಗತಿಗಳನ್ನು ತಿಳಿಯಿರಿ.

6–8 ಸರಿಯಿದ್ದರೆ ... ಸಾಧಾರಣ

9–10 ಸರಿಯಿದ್ದರೆ ... ಉತ್ತಮ

11–12 ಸರಿಯಿದ್ದರೆ ... ಅತ್ಯುತ್ತಮ



ಜಗತ್ತಿನ ಪುಟಾಣಿ ಡಿಸ್ಕೋ ಡಾನ್ಸರ್

● ಅರುಣ

ಬದುಕುವುದೇ ದುಸ್ತರವೆಂದು ಕೊಂಡಿದ್ದ ತಾಯಿಗೆ ಮಗಳು ಈ ರೀತಿ ಬೆಳೆದುನಿಂತದ್ದು ಅಚ್ಚರಿಯುಂಟು ಮಾಡಿತು.

ಜಗತ್ತಿನಲ್ಲಿಯೇ ಅತಿ ಕಿರಿಯ ವಯಸ್ಸಿನ ಪುಟಾಣಿ ಡಿಸ್ಕೋ ಡಾನ್ಸರ್ ಯಾರೆಂದು ಕೇಳುತ್ತೀರಾ? ಆಕೆಯೇ ಸ್ಕಾಟ್ಲೆಂಡ್‌ನ ಹದಿಮೂರರ ಹರೆಯದ ಹುಡುಗಿ ಆಶ್ಲೆ ಮೆಕಡಿವರ್. ಈಕೆ ಇಂದು ಯೂರೋಪಿನ ಅಗ್ರ ಶ್ರೇಣಿಯ ಡಿಸ್ಕೋ ಡಾನ್ಸರ್ ಎನಿಸಿದ್ದಾಳೆ. ಡಿಸ್ಕೋ ನೃತ್ಯ ಕ್ಷೇತ್ರದಲ್ಲಿ ಆಕೆಯ ಸಾಧನೆ ಅಸಾಧಾರಣ ನಿಜ. ಆದರೆ ಅದಕ್ಕಿಂತಲೂ ಮಿಗಿಲಾದ ಸಾಧನೆ ಎಂದರೆ ಬದುಕಿ ಉಳಿಯಲು ಆಕೆ ನಡೆಸಿದ ಅವಿರತ ಹೋರಾಟ.

ತಾಯಿಯ ಗರ್ಭದಲ್ಲಿ ಶಿಶುವಾಗಿದ್ದಾಗಲೇ ಆಕೆಯ ಜೀವಜ್ಯೋತಿ ನಂದಿ ಹೋಗುವುದು ಎಂದು ಸ್ವತಃ ಆಶ್ಲೆಯ ತಾಯಿ ಮರಿಯಾ ಭಾವಿಸಿದ್ದಳು. ಆರೋಗ್ಯ ತಪಾಸಣೆ ನಡೆಸಿದ ವೈದ್ಯಕೀಯ ತಜ್ಞರೂ ಭಾವಿಸಿದ್ದರು. ಆದರೆ ಪವಾಡವೋ ಎನ್ನುವಂತೆ ಆಕೆ ಬದುಕಿ ಉಳಿದಳು. ದಿನ ತುಂಬುವ ಮೊದಲೇ ಅಂದರೆ ಏಳನೇ ತಿಂಗಳಲ್ಲಿ ಆಕೆಯ ತಾಯಿ ಆಶ್ಲೆಗೆ ಜನ್ಮ ನೀಡಿದಳು.

ಅಂದಿನ ಘಟನೆ ತಾಯಿ ಮರಿಯಾಳನ್ನು ಇಂದಿಗೂ ಸಿಂಹಸ್ವಪ್ನದಂತೆ ಕಾಡುತ್ತಿದೆ.

ಆಶ್ಲೆಯ ಜೀವನ ನಾಟಕ 1978ರಲ್ಲಿ ಆರಂಭವಾಯಿತು. ಮರಿಯಾ ಆಕೆಯ ಪತಿ ಉಯಿಸ್ ದೆನ್ ಮತ್ತು ಮಗಳು ಸಿಲ್ವಿಯಾ ಒಂದು ದಿನ ತಮ್ಮ ಕಾರನ್ನು ರಸ್ತೆ ಪಕ್ಕದಲ್ಲಿ ಪಾರ್ಕ್ ಮಾಡಿ ತನ್ನ ಹದಿನೈದರ ಹರೆಯದ ಮಗನ ಆಗಮನವನ್ನು ನಿರೀಕ್ಷಿಸುತ್ತಾ ಕುಳಿತಿದ್ದರು. ಆಗ ಪ್ರಚಂಡ ವೇಗದಿಂದ ಧಾವಿಸಿ ಬಂದ ಹಳದಿಬಣ್ಣದ ವ್ಯಾನೊಂದು ಕಾರಿಗೆ ಢಿಕ್ಕಿ ಹೊಡೆಯಿತು. ಮರಿಯಾ ಏಳು ತಿಂಗಳ ಗರ್ಭಿಣಿಯಾಗಿದ್ದಳು. ಢಿಕ್ಕಿ ಹೊಡೆದ ರಭಸಕ್ಕೆ ಅವಳಿಗೆ ಪ್ರಜ್ಞೆ ತಪ್ಪಿತು. ಅವಳ ಎದೆ ಮತ್ತು ಹೊಟ್ಟೆಯ ಭಾಗಕ್ಕೆ ಬಲವಾದ ಏಟು ಬಿದ್ದಿತ್ತು. ತಕ್ಷಣ ಅವಳನ್ನು ತುರ್ತುಚಿಕಿತ್ಸೆಗಾಗಿ ಆಸ್ಪತ್ರೆಗೆ ಒಯ್ಯಲಾಯಿತು. ತುರ್ತು ಚಿಕಿತ್ಸೆಯಿಂದ ಆಕೆ, ಆಕೆಯ ಪತಿ (ಆತ ಟ್ರಕ್ ಡ್ರೈವರ್ ಆಗಿದ್ದ) ಮತ್ತು ಮಗ ಪ್ರಾಣಾ



ಕೊಡ್ಬೇಕಾಗಿದ್ದ ವರದಕ್ಷಿಣೆ ಬಾಕೀನ ನಮ್ಮೆಜ ಮಾನ್ರ ಜೇಬಿನ್ಂದ ಆಗಾಗ ಹಣ ತೆಗೆದು ತೀರಿ ಸ್ಬುಟ್ಟೆ ಕಣೇ.....

ಪಾಯದಿಂದ ಪಾರಾದರು. ಆದರೆ ಮೂರು ದಿನಗಳ ತರುವಾಯ ಮರಿಯಾಳಿಗೆ ಹೆರಿಗೆ ನೋವು ಕಾಣಿಸಿಕೊಂಡಿತು. ಅವಳನ್ನು ಸ್ಕಾಟ್ಲೆಂಡ್‌ನ ಇನ್ವರ್ನೆಸ್ ರೈಗ್ಮೋರ್ ಆಸ್ಪತ್ರೆಗೆ ಸೇರಿಸಲಾಯಿತು. ಆಕೆಯ ಆರೋಗ್ಯ ತಪಾಸಣೆ ಮಾಡಿದ ವೈದ್ಯರು ಹೊಟ್ಟೆಯಲ್ಲಿರುವ ಕೂಸು ಬದುಕಿ ಉಳಿಯುವ ಸಾಧ್ಯತೆ ತೀರಾ ಕಡಿಮೆ ಎಂದರು. ಹೆರಿಗೆಯ ದಿನ ಮುಂದೂಡಲ್ಪಟ್ಟರೆ ಕೂಸು ಬದುಕಿ ಉಳಿಯಲೂಬಹುದು ಎಂಬ ವಿಶ್ವಾಸವನ್ನು ಅವರು ವ್ಯಕ್ತಪಡಿಸಿದರು.

ಮರಿಯಾ ತುಂಬ ಕಷ್ಟದಿಂದ ಒಂದು ವಾರ ಕಳೆದಳು. ಮತ್ತೆ ಕೆಲವು ತೊಡಕುಗಳು ಉದ್ಭವಿಸಿದುವು. ಅವಳ ಆರೋಗ್ಯ ಪರಿಸ್ಥಿತಿಯಲ್ಲಿ ತೀವ್ರ ಬದಲಾವಣೆ ವ್ಯಕ್ತವಾಗಿ ರಕ್ತ ಸ್ರಾವವಾಯಿತು. ಮತ್ತೆ ಅವಳನ್ನು ಆಸ್ಪತ್ರೆಗೆ ಒಯ್ದರು. ಕೂಸು ಜೀವಂತವಾಗಿಯೋ ಮೃತಾವಸ್ಥೆಯಲ್ಲಿಯೋ ಒಟ್ಟಿನಲ್ಲಿ ಹೊರ ಬರಲೇ ಬೇಕು, ಇಲ್ಲದಿದ್ದರೆ ತಾಯಿಯ ಜೀವಕ್ಕೇ ಅಪಾಯವಿದೆ ಎಂದು ವೈದ್ಯರು ನಿರ್ಧರಿಸಿದರು. ಶಸ್ತ್ರಚಿಕಿತ್ಸೆಯ ಮೂಲಕ ಮರಿಯಾ ಶಿಶುವಿಗೆ ಜನ್ಮ ನೀಡಿದಳು. ಹುಟ್ಟಿದ್ದು ಹೆಣ್ಣು ಮಗು. ಹುಟ್ಟಿದಾಗ ಅದರ ತೂಕ 1.8 ಕೆ.ಜಿ. 'ನನ್ನ ಮಗಳು ಕೇವಲ ಮೂಳೆ ಚಕ್ಕಳವಿದ್ದ ಪುಟ್ಟ ಮೊಲದ ಮರಿಯಂತೆ ಕಾಣಿಸಿದಳು' ಎಂದು ಮರಿಯಾ ಅನಂತರ ಜ್ಞಾಪಿಸಿಕೊಂಡಳು. ಹುಟ್ಟಿದ ತಕ್ಷಣ ಅವಳ ಗಾತ್ರ ಎಷ್ಟು ಕಿರಿದಾಗಿತ್ತೆಂದರೆ ಸಣ್ಣ ಶೂ ಪೆಟ್ಟಿಗೆಯಲ್ಲಿ ಅವಳನ್ನು ತುಂಬಿಸಬಹುದಾಗಿತ್ತು. ಮಗುವನ್ನು ತುರ್ತು ಚಿಕಿತ್ಸಾ ವಿಭಾಗಕ್ಕೆ ಸಾಗಿಸಲಾಯಿತು. ಕೆಲವು ತಾಸು ಅವಳನ್ನು ಇನ್‌ಕ್ಯುಬೇಟರ್‌ನಲ್ಲಿರಿಸಲಾಯಿತು. ಉಸಿರಾಡಲು ಅನುಕೂಲವಾಗಲು ಅವಳಿಗೆ ಆಕ್ಸಿಜನ್ ನೀಡಲಾಯಿತು. 'ಆಶ್ಲೆ ಬಾಲ್ಯದಲ್ಲಿದ್ದಾಗ ಎಂದಾದರೂ ನಾನು ಅವಳನ್ನು ಕಳೆದುಕೊಳ್ಳಲಿದ್ದೇನೆ ಎಂಬ ಭಾವನೆ ನನ್ನಲ್ಲಿ ಬಲಿಯ ತೊಡಗಿತು' ಎಂದು ಮರಿಯಾ ಹೇಳುತ್ತಾಳೆ.

ಆಶ್ಲೆಯ ಬಾಲ್ಯದ ದಿನಗಳಲ್ಲಿ ಪ್ರತಿಕ್ಷಣವೂ ಆಕೆಯ ಬೆಳವಣಿಗೆಯನ್ನು ಹೆತ್ತವರು ಎಚ್ಚರಿಕೆಯಿಂದ ಗಮನಿಸುತ್ತಿದ್ದರು. ಮಗುವಿನ ಆರೋಗ್ಯ ತಪಾಸಣೆಗೆಂದು ಪ್ರತಿ ಎರಡು ದಿನಗಳಿಗೊಮ್ಮೆ ಸೂಲಗಿತ್ತಿಯೊಬ್ಬಳು ಮರಿಯಾಳ ಮನೆಗೆ ಭೇಟಿ ನೀಡುತ್ತಿದ್ದಳು. ಬಾಲ್ಯದಲ್ಲಿ ಆಶ್ಲೆಯ ಕಾಲುಗಳು ತೀರಾ ತೆಳ್ಳಗಾಗಿದ್ದವು. ಅನಂತರದ ದಿನಗಳಲ್ಲಿ ಅವಳ ದೈಹಿಕ ಬೆಳವಣಿಗೆ ಅದ್ಭುತವಾಗಿತ್ತು.

ಆಶ್ಲೆ ನಾಲ್ಕರ ಹರೆಯಕ್ಕೆ ಅಡಿಯಿರಿಸಿದಾಗ ತಾಯಿ ಅವಳನ್ನು ಸ್ಥಳೀಯ ನೃತ್ಯ ಶಾಲೆಗೆ ಸೇರಿಸಿದಳು. ನೃತ್ಯಾಭ್ಯಾಸ ಅವಳ ಕಾಲುಗಳನ್ನು ಬಲಗೊಳಿಸಲು ಸಹಾಯಕವಾದೀತು ಎಂದು ತಾಯಿ ಭಾವಿಸಿದ್ದಳು.

ಆಶ್ಲೆ ನೃತ್ಯಾಭ್ಯಾಸದಲ್ಲಿ ಎಲ್ಲರ ನಿರೀಕ್ಷೆ ಮೀರಿ ಪ್ರಗತಿ ಸಾಧಿಸಿದಳು. ತೆಳ್ಳಗೆ ಬಳಿಚಿಕೊಂಡಂತೆ ತೋರುತ್ತಿದ್ದ ಅವಳ ಕಾಲುಗಳು ಬಲಗೊಂಡವು. ಆಕೆ ಓಡುವುದನ್ನೂ ಅಭ್ಯಾಸ

ಮಾಡಿಕೊಂಡಳು. ಒಂಬತ್ತರ ಹರೆಯದಲ್ಲಿದ್ದಾಗ ಆಕೆ ಆರು ಮೈಲು ಓಟದಲ್ಲಿ ಸ್ಪರ್ಧಿಸಿದಳು. ಸಹಾಯಾರ್ಥ ನಡೆದ ಓಟದ ಸ್ಪರ್ಧೆಯಲ್ಲಿ ಸಂಗ್ರಹವಾದ 350 ಪೌಂಡ್ ಹಣವನ್ನು ಆಕೆ ಆಸ್ಪತ್ರೆಯಲ್ಲಿ ತನ್ನ ಜೀವ ಉಳಿಸಿದ ವಿಶೇಷ ಚಿಕಿತ್ಸಾ ಘಟಕಕ್ಕೆ ನೀಡಿದಳು.

ದಿನ ಕಳೆದಂತೆ ಆಶ್ಲೆ 'ಸ್ಟಾರ್ ಡಾನ್ಸರ್' ಆಗಿ ರೂಪುಗೊಳ್ಳತೊಡಗಿದಳು. ಏಳರ ಹರೆಯದಲ್ಲಿದ್ದಾಗ ಆಕೆ ಪ್ರಥಮ ನೃತ್ಯ ಸ್ಪರ್ಧೆಯಲ್ಲಿ ಭಾಗವಹಿಸಿದಳು. ಅದರಲ್ಲಿ ಆಕೆಗೆ ಜಯ ಸಿಗಲಿಲ್ಲ. ಇದರಿಂದಾಗಿ ಆಕೆ ತೀವ್ರವಾಗಿ ನೊಂದು ಹತಾಶಳಾದದ್ದು ಇದೆ.

ಕ್ರಮೇಣ ಅವಳ ಮನೆಯ ಶೋಕೇಸ್‌ಗಳು ಪ್ರಶಸ್ತಿ, ಪದಕ, ಫಲಕಗಳಿಂದ ತುಂಬಿದುವು. ಡಿಸ್ಕೋ ಡಾನ್ಸ್‌ನಲ್ಲಿ ಆಕೆ ಪ್ರಾವೀಣ್ಯ ಗಳಿಸಿದಳು. ವಯಸ್ಸಿನಲ್ಲಿ ತನಗಿಂತ ಕಿರಿಯರು ಮಾತ್ರವಲ್ಲ ಹಿರಿಯರಾದವರನ್ನೂ ಆಕೆ ಹಿಂದೆ ಹಾಕಿದಳು.

ಈಚೆಗೆ ಅವಳ ನೃತ್ಯ ತಂಡ- ಇನ್‌ವರ್ನೆಸ್‌ನಲ್ಲಿರುವ 'ಡಂಕನ್ ಸ್ಕೂಲ್ ಆಫ್ ಡಾನ್ಸಿಂಗ್' ನೃತ್ಯದಲ್ಲಿ ಐರೋಪ್ಯ ಚಾಂಪಿಯನ್‌ಶಿಪ್ ಗೆದ್ದುಕೊಂಡಿದೆ.

ನೃತ್ಯವನ್ನು ಗಾಢವಾಗಿ ಪ್ರೀತಿಸುವ ಆಶ್ಲೆ ಮೆಕ್‌ಪಿವರ್‌ನ ಹಿರೋ ಮೈಕೆಲ್ ಜಾಕ್ಸನ್.

ತನ್ನ ಭಾವೀ ಜೀವನ ಅಷ್ಟು ಉಜ್ವಲವಾಗಿಲ್ಲ ಎಂಬುದು ಅವಳಿಗೆ ಗೊತ್ತಿದೆ. ಟ್ರಕ್‌ಡ್ರೈವರ್ ಆಗಿದ್ದ ಅವಳ ತಂದೆ ಹೃದಯಾಘಾತದಿಂದ ತೀರಿಕೊಂಡ. ಅಜ್ಜ ಜೇನ್ ರಾಲ್ಸನೂ ತೀರಿಕೊಂಡ. ಈಗ ಮರಿಯಾಳೇ ಅವಳಿಗೇ ತಾಯಿ-ತಂದೆ ಎರಡೂ ಆಗಿದ್ದಾಳೆ. ಡಾನ್ಸ್ ಟೀಚರ್ ಆಗಬೇಕೆಂಬುದು ಆಶ್ಲೆಯ ಜೀವನದ ಮಹತ್ವಾಕಾಂಕ್ಷೆ. ಈಗಾಗಲೇ ಆಕೆ ಆಂಡ್ರ್ಯು ಎಂಬ ಯುವಕನಿಗೆ ಡಿಸ್ಕೋ ಡಾನ್ಸ್ ಮತ್ತು ಬಾಲ್ ರೂಮ್ ಡಾನ್ಸ್ ಕಲಿಸುತ್ತಿದ್ದಾಳೆ. ಆಕೆ ನಿಷ್ಣಾತ ಡಾನ್ಸ್ ಟೀಚರ್ ಆಗುವುದರಲ್ಲಿ ಅನುಮಾನ ವಿಲ್ಲ. ನೃತ್ಯದ ವೇದಿಕೆಯಲ್ಲಿ ಆಕೆಯ ಸಾಧನೆ ಏನೇ ಆಗಿದ್ದಿರಲಿ ಬದುಕಿ ಉಳಿಯಲು ಆಕೆ ನಡೆಸಿದ ಹೋರಾಟಕ್ಕೆ ಅದು ಸರಿಸಾಟಿಯಾಗಲಾರದು. ●

(ಆಧಾರ)

ಉಚಿತ ಉಪ್ಪು

ಅರಸ ತನ್ನ ಪರಿವಾರದೊಡನೆ ಬೇಟೆಗೆ ಹೋದ. ಮಧ್ಯಾಹ್ನದವರೆಗೆ ಅರಸ ಬೇಟೆಯಾಡಿದ. ಊಟದ ಸಮಯವಾಯಿತು. ಆದರೆ ಬಾಣಸಿಗ ಕೈಕೈ ಹಿಸುಕಿಕೊಂಡ.

'ಏನು ಸಮಾಚಾರ?' ಅರಸ ಪ್ರಶ್ನಿಸಿದ.

'ಅಡಿಗೆ ಸಿದ್ಧವಾಗಿದೆ, ಆದರೆ ನಾನು ಉಪ್ಪನ್ನು ತರಲು ಮರೆತುಬಿಟ್ಟೆ!' ಅಂದ ಅಡಿಗೆಯವನು.

'ಇಲ್ಲೇ ಹತ್ತಿರದಲ್ಲಿ ಊರಿದೆ. ಹಣಕೊಟ್ಟು ಉಪ್ಪು ತಾ. ಹಾಗೆ ಮಾಡದಿದ್ರೆ ಊರು ಹಾಳಾಗಿ ಬಿಡುತ್ತೆ!' ಅಂದ ಅರಸ.

'ಉಪ್ಪನ್ನು ಹಾಗೇ ತಂದರೆ ಊರು ಯಾಕೆ ಹಾಳಾಗುತ್ತೆ?' ಅಡಿಗೆಯವನು ಪ್ರಶ್ನಿಸಿದ.

'ಅಯ್ಯಾ, ಅರಸ ಅನ್ನಿಸಿಕೊಂಡವನು ಒಂದು ಹಿಡಿ ಉಪ್ಪನ್ನು ಉಚಿತವಾಗಿ ಪಡೆದರೆ ಅದೇ ನೆಪದಲ್ಲಿ ಅರಮನೆಯ ಅಧಿಕಾರಿಗಳು ಇನಾಮು ಅನ್ನುವ ಹೆಸರಿನಲ್ಲಿ ಊರನ್ನೇ ನಾಶ ಮಾಡಿಬಿಡ್ತಾರೆ!' ಎಂದು ಅರಸ ವಿವರಣೆ ನೀಡಿದ.

● ಬಾಲಯೋಗಿ



ಗಿರಾಕಿ

● ಶಾಂತಾರಾಮ ಸೋಮಯಾಜಿ

ಕಿಟಕಿಯ ಗಾಜು ತೂತು ಮಾಡಿ ಕಾರಿನೊಳಕ್ಕೆ ಸೇರಿಕೊಂಡಿದ್ದ, ಸೂರ್ಯ. ನನ್ನ ಎಡ ಕೆನ್ನೆ, ಎಡ ತೋಳು ಸುಡುತ್ತಿತ್ತು. ಕಾರಿನ ಸ್ಪೀಡನ್ನು ಸ್ವಲ್ಪ ನಿಧಾನ ಮಾಡಿದೆ. ಗುದ್ದಿ ನುಗ್ಗಿ ಬರುತ್ತಿದ್ದ ಗಾಳಿಯಲ್ಲಿ ಚಳಿ ಅಡಗಿತ್ತು.

ಹೈವೇ ಖಾಲಿಯಾಗಿತ್ತು. ಖಾಲಿ; ಮಾರಾಟ [illegible] ಮುಗಿದಂತೆ. ಆಗೊಮ್ಮೆ ಈಗೊಮ್ಮೆ ಕಿವಿಗೆ ಬಡಿ ಗುಂಯುಂತ ಸದ್ದು ಮಾಡುತ್ತಾ ಓಡುವ ಟ್ರಕ್‌ಗಳು. ಅರಿಜೋನಾದ ರಿಜಿಸ್ಟ್ರೇಶನ್ ಪ್ಲೇಟ್ ಹೊತ್ತ ಅಗಲ ಹೊಟ್ಟೆಯ ಕಾರುಗಳು. ಮತ್ತು ಹೈವೇಯ ಕರಿಕಪ್ಪು ಬಣ್ಣದ ಮೇಲೆ ಥಳಥಳ ಹೊಳೆಯುವ ಸೂರ್ಯ. ಅವೆಲ್ಲಾ ಬಿಟ್ಟರೆ ಹೈವೇ ಖಾಲಿ. ನೀಟಾಗಿ ಕಪ್ಪು ಲೇಪಿಸಿಕೊಂಡ ಒರಟು ಆಕಾರದ ಬಳ್ಳಿ, ಅಷ್ಟೇ.

ಹೈವೇಯಲ್ಲಿ ಮುಕ್ಕಾಲು ಗಂಟೆ ಕಾರು ಬಿಟ್ಟಿರಬೇಕು. ದೂರದಲ್ಲಿ ಹೈವೇಯ ಬಲ ಭಾಗದಲ್ಲಿ ಒಬ್ಬ ಹಿಚ್‌ಹೈಕರ್ (ಬಿಟ್ಟಿಯಾಗಿ ಪ್ರಯಾಣ ಮಾಡಲು ಕಾದು ನಿಂತವ) ಕಣ್ಣಿಗೆ ಬಿದ್ದ. ಬೆಳಗ್ಗಿನ ಬಿಸಿಲಿನಿಂದಲೋ ಅಥವಾ ಆ ಜಾಗದಲ್ಲಿ ಹೈವೇ ಮೈಲುಗಟ್ಟಳೆ ಉದ್ದಕ್ಕೆ ಹರಡಿ ಬಿದ್ದುದರಿಂದಲೋ ಏನೋ, ಎರಡು ಮೈಲು ದೂರದಿಂದಲೇ ಅವ ಕಣ್ಣಿಗೆ ಬಿದ್ದ. ನಿಜಕ್ಕೆಂದರೆ ಮೊದಲು ಕಣ್ಣಿಗೆ ಬಿದ್ದುದು ಅವನು ತನ್ನ ಪಕ್ಕದಲ್ಲಿ ನಿಲ್ಲಿಸಿದ್ದ ಸೈನ್, ಕಾರು ಹತ್ತಿರವಾಗುತ್ತಿರುವಂತೆ ಸೈನಿನ ಅಕ್ಷರಗಳು ಸ್ಪಷ್ಟವಾದವು. ಒಂದು ಪ್ಲೈವುಡ್ ಹಲಗೆಯ ಮೇಲೆ ಬಿಳಿ ಪೈಂಟಿನಲ್ಲಿ ಬರೆದಿತ್ತು - ' ಒರೆಗಾನ್‌ಗೆ'.

ಹೈವೇಯಲ್ಲಿ ಮುಕ್ಕಾಲು ಗಂಟೆ ಕಾರು ಬಿಟ್ಟಿರಬೇಕು. ದೂರದಲ್ಲಿ ಒಬ್ಬ ಹಿಚ್‌ಹೈಕರ್ ಕಣ್ಣಿಗೆ ಬಿದ್ದ. ಅವನಿಗೆ ಡ್ರಾಪ್ ಕೊಡಲೊಪ್ಪಿ ಕಾರಿನಲ್ಲಿ ಹತ್ತಿಸಿಕೊಂಡೆ. ಆದರೆ...

ನಾನು ಈಗ ಹೋಗುತ್ತಿದ್ದುದು ಓರೆಗಾನ್ ರಾಜ್ಯದ ಯುಜೀನ್ ಎಂಬಲ್ಲಿಗೆ. ಕಾರು ಆತನ ಸಮೀಪ ಬರುತ್ತಿರುವಂತೆ ಓರೆಕಣ್ಣಿಲ್ಲಿ ಆತನನ್ನು ಅಳೆದೆ.

ಎಳೆ ಪ್ರಾಯ, ಸುಮಾರು ಮೂವತ್ತಿರಬಹುದು. ಬೆನ್ನಿನ ಕೆಳಗೆ ಹರಡಿದ ಕಪ್ಪು ಕೂದಲು. ಬಲಕಿವಿಯಲ್ಲೊಂದು ಫಳ ಫಳ ಹೊಳೆಯುವ ರಿಂಗ್. ಕಲೆಯಾದ ನೀಲಿ ಜೀನ್ಸ್. ಆತಂಕವಿರದ ಸೌಮ್ಯ ಕಣ್ಣುಗಳು. ಪಕ್ಕದ ನೆಲದಲ್ಲಿ ಗೂಟೆ ಕಟ್ಟಿದ ಎರಡು ಬ್ಯಾಕ್ ಪ್ಯಾಕ್‌ಗಳು.

ಅವನನ್ನು ಹಾದು ಮುಂದೆ ಹೋಗಿ ಕಾರು ನಿಲ್ಲಿಸಿದೆ.

ಅವನು ಬ್ಯಾಕ್‌ಪ್ಯಾಕ್ ಎತ್ತಿಕೊಂಡು, ಸೈನ್‌ನ್ನು ಮಡಚಿ ಹೆಗಲಿಗೆ ತೂಗುಹಾಕಿ ವೇಗವಾಗಿ ನಡೆಯುತ್ತಾ ಕಾರಿನ ಕಡೆ ಬಂದ. ನಾನು ಕಿಟಕಿಯಿಂದ ತಲೆ ಹೊರಹಾಕಿ ಹೇಳಿದೆ -

' ಓರೆಗಾನ್‌ಲ್ಲಿ ಎಲ್ಲಿಗೆ?'

'ಎಲ್ಲಿಗಾದ್ರೂ ಸರಿ, ಪೋರ್ಟ್‌ಲಂಡ್, ಸೇಲಂ... ಎಲ್ಲಿಗಾದ್ರೂ. ಓರೆಗಾನ್ ಮುಟ್ಟಿದ್ರೆ ಸಾಕು.

'ಸರಿ, ಯುಜೀನ್‌ನಲ್ಲಿ ಬಿಡ್ತೇನೆ.'

'ಒಳ್ಳೇದೇ ಆಯ್ತು'

'ಆದ್ರೆ, ಒಂದು, ಎರಡು ಟ್ಯಾಂಕ್ ಪೂರ್ತಿ ಪೆಟ್ರೋಲ್ ಖರ್ಚು ನಿಂದು.' ಒಂದು ಗಳಿಗೆ ಆಲೋಚನೆ ಮಾಡುವವನಂತೆ ಆಚೀಚೆ ನೋಡಿದ. ಅನಂತರ ಹೇಳಿದ - 'ಫೈನ್, ಎರಡು ಟ್ಯಾಂಕು ಪೆಟ್ರೋಲು, ಅಷ್ಟೇ ತಾನೇ?'

'ಅಷ್ಟೇ. ಮತ್ತೆ ಊಟ ತಿಂಡಿ... ನಿನ್ನ ಖರ್ಚು ನಿಂದು.'

'ಫೈನ್.'

ನಾನು ಕಾರಿನ ಇಂಜನ್ನು ನಿಲ್ಲಿಸಿ ಕಾರಿಂದಿಳಿದು ಟ್ರಂಕ್ ತೆರೆದೆ. ಮುಗ್ಗಲು ವಾಸನೆ ಬರುತ್ತಿದ್ದ ಬ್ಯಾಕ್‌ಪ್ಯಾಕನ್ನು ಅಲ್ಲಿ ದೊಪ್ಪನೆ ಹಾಕಿದ. ಪ್ಲೈವುಡ್ ಹಲಗೆಯ ಸೈನ್‌ಗೆ ಜಾಗ ಸಾಲಲಿಲ್ಲ. ಕಾರಿನ ಹಿಂದಿನ ಸೀಟಿಗೆ ಒರಗಿಸಿ ಇಟ್ಟ. ಈಚೆ ಬಂದು, ನನ್ನ ಪಕ್ಕದ ಸೀಟಲ್ಲಿ ಕೂತು ಕೈ ಮುಂದೆ ಚಾಚಿ ಹೇಳಿದ -

ನಾನು ಮೈಕ್, ಮೈಕ್ ಸಿರೊವಿಕ್.'

ಅವನ ಸ್ವರ ಇಂಪಾಗಿತ್ತು. ಈಗಷ್ಟೇ ಮಲಗಿ ಎದ್ದು ಬಂದವನಂತೆ ಶುಭ್ರವಾಗಿತ್ತು ಮುಖ. ಕಾರು ಸ್ಟಾರ್ಟ್ ಮಾಡುತ್ತಾ ಕೇಳಿದೆ -

'ಏನು, ಓರೆಗಾನ್‌ಗೆ?'

'ನನ್ನ ತಂಗಿಯೊಬ್ಬಳಿದ್ದಾಳೆ ಅಲ್ಲಿ. ನ್ಯೂಬರ್ಗ್ ಅಂತ ಸಣ್ಣ ಪಟ್ಟಣ. ಸೇಲಂನಿಂದ ಸುಮಾರು ನಲುವತ್ತು ಮೈಲು ಉತ್ತರಕ್ಕೆ. ಅವಳನ್ನು ನೋಡದೇ ಮೂರು ವರ್ಷ ಆಗ್ತಾ ಬರ್ತದೆ ಈ ಕ್ರಿಸ್‌ಮಸ್‌ಗೆ.'

ಸ್ವಲ್ಪ ತಡೆದು ಮುಂದುವರಿಸಿದ - 'ಅದಲ್ದೆ ಇಲ್ಲಿದ್ದ ಕೆಲಸ ಹೋಯ್ತು. ಅಲ್ಲಿ ಎಲ್ಲಾದ್ರೂ ಕೆಲ್ಸ ಸಿಕ್ಕೀತು ಅಂತ ಆಶೆ.'

'ಏನು ಕೆಲ್ಸ ಮಾಡ್ತಿದ್ದಿ ಇಲ್ಲಿ'?

'ಅದೂ ಇದೂ, ಈಗೆರಡು ವರ್ಷದಿಂದ ಇಲ್ಲಿನ ಸ್ಕಾಟ್‌ಡೇಲಿನ ಒಂದು ಕಂಪ್ಯೂಟರ್ ವೇರ್ ಹೌಸಿನಲ್ಲಿ ವಾಚ್‌ಮನ್ ಕೆಲ್ಸ ಮಾಡ್ತಿದ್ದೆ. ಗಂಟೆಗೆ ಹನ್ನೊಂದು ಡಾಲರ್. ಅದಲ್ದೆ ಕ್ರಿಸ್‌ಮಸ್‌ಗೆ ಒಳ್ಳೇ ಬೋನಸ್ ಸಿಗ್ತಿತ್ತು. ಆದ್ರೆ ಏನು ಮಾಡುವುದು. ಮೂರು ತಿಂಗಳ ಹಿಂದೆ ಕಂಪೆನಿ ಕ್ಲೋಸಾಯ್ತು. ಅಲ್ಲೀ ಇಲ್ಲೀ ಅಂತ ಹುಡುಕೀ ಹುಡುಕೀ... ಹುಡುಕಾಡಿದ್ದೇ ಬಂತು ಎಲ್ಲೂ ಇಲ್ಲ ಕೆಲ್ಸ.'

'ಏನು ಒಬ್ಬೆಯಾ? ಮದ್ವೆ ಆಗ್ಲಿಲ್ವಾ?'

'ಆಗಿದ್ವೆ, ಒಮ್ಮೆ, ಆರು ವರ್ಷದ ಹಿಂದೆ, ನರ್ಸ್ ಒಬ್ಳು. ನನಗಿಂತ ಐದುವರ್ಷಕ್ಕೆ ದೊಡ್ಡ ವಳು. ಹತ್ತು ತಿಂಗಳೂ ಕೂಡಿ ಬರ್ಲಿಲ್ಲ. ಬರೀ ವೀಯರ್ಡ್ ಹೆಂಗ್ಸು ಅವಳು.'

'ಯಾಕೆ?'

'ಯಾಕೆ? ಬೆಳಗ್ಗೆ ತಿಂಡಿಗೆ ಅವಳು ಏನು ತಿನ್ನುತಿದ್ಳು ಗೊತ್ತಾ? ಸೆಲರಿ ಜ್ಯೂಸ್. ಸೆಲರಿ ಜ್ಯೂಸ್ ಮತ್ತು ಖರ್ಜೂರ ಅಷ್ಟೇ. ಆ ಜೂಸ್‌ನ ವಾಸನೆ ನೋಡಿದ್ರೆ... ಮೀನು ಮಾಂಸ ಯಾವುದೂ ಇಲ್ಲ. ಬರೀ ವೆಜಿಟೇರಿಯನ್. ನಾನು ಅಂಗಡಿಯಿಂದ ಮನೆಗೆ ಮಾಂಸ ತರುವು ದಂತಲೇ ಇಲ್ಲ. ಹೀಗೆಲ್ಲಾ ಇರುವಾಗ ಜೀವನ ಮಾಡುವುದಾದ್ರೂ ಹೇಗೆ?'

'ಮತ್ತೆ?'

'ಮತ್ತೇಂತ? ಒಂದು ಶನಿವಾರ. ಸಂಜೆ ಸಮಯ. ನಾನು ಯಾವುದಾರೂ ಬಾರ್‌ಗೆ ಹೋಗುವ ತಯಾರಿ ಮಾಡ್ತಿದ್ದೆ, ಬಂದ್ಳು ಇವಳು ಶಿಫ್ಟ್ ಮುಗಿಸಿಕೊಂಡು. ಏ ಮೈಕ್, ನಿನ್ನ ಹತ್ರ ಮಾತ್ನಾಡಲಿಕ್ಕಿದೆ ಅಂತ ಹೇಳಿದ್ಳು. ಹಾಗೆ ಹೀಗೆ ಉದ್ದಕ್ಕೆ ರಾಗ ಎಳೆದು ಹೇಳಿದ್ಳು, ನೀನಿನ್ನು ನನ್ನ ಮನೆ ಬಿಟ್ಟು ಹೋಗ್ಬೇಕು. ನಂಗಿನ್ನು ನಿನ್ನೊಂದಿಗೆ ಜೀವನ ಮಾಡುವುದು ಸಾಧ್ಯವೇ ಇಲ್ಲ ಅಂತ. ನಾನೇನು ಹೇಳುವುದು. ಆಯ್ತು ಮಾರಾಯ್ತಿ ಅಂದೆ. ನನ್ನ ಸಾಮಾನೆಲ್ಲಾ ಕಾರಲ್ಲಿ ತುಂಬಿಸಿ ಹಾಕಿದೆ. ಹಾಗ ಹೊರಗೆ ಹೋದವ ಮತ್ತೆ ಅವ್ಳ ಮುಖ ಕೂಡಾ ನೋಡ್ಲಿಲ್ಲ. ಐದು ವರ್ಷದ ಮೇಲಾಯ್ತು.'

'ಟೂ ಬ್ಯಾಡ್'

'ಯಾತಕ್ಕೆ? ನಂಗೇನೂ ಬೇಸರವಿಲ್ಲ.'

ಹೈವೇ ಈಗ ಬರೀ ಮರುಭೂಮಿಯೊಳಗೆ ಹಾದು ಹೋಗುತಿತ್ತು. ಸೂರ್ಯ ತನ್ನ ಶಕ್ತಿ ತೋರಿಸುತ್ತಿದ್ದ. ಅಲ್ಲಲ್ಲಿ ಗುಮ್ಮಟನಂತೆ ಬೆಳೆದು ನಿಂತಿದ್ದವು ಕಳ್ಳಿ ಗಿಡಗಳು. ನಾನು ಕೇಳಿದೆ -

'ನಿನ್ನ ಮನೆ ಕಾರೆಲ್ಲಾ ಏನು ಮಾಡಿದಿ?'

'ಮನೆಯಾ? ಇದ್ದದ್ದು ಬಾಡಿಗೆ ಬಿಡಾರ, ಹೋದ ತಿಂಗ್ಳಿಂದ ಬಾಡಿಗೆಯೇ ಕೊಡ್ಲಿಲ್ಲ. ಹೇಗೆ ಕೊಡುವುದು. ಹಣ ಇರ್ಲಿಲ್ಲ. ಒಂದು ವಾರದ ಹಿಂದೆ ಕಾರು ಮಾರಿದೆ, ಸಿಕ್ಕಿದ್ದು ಸಿಕ್ಲಿ ಅಂತ. ಹಳೆ ಕಾರು. ನಾನ್ನೂರ ಐವತ್ತು ಡಾಲರ್ ಸಿಕ್ಕಿತು.'

ನಾವೀಗ ಕೊಲೊರಾಡೋ ನದಿ ದಾಟಿ ಕ್ಯಾಲಿಫೋರ್ನಿಯಾದ ಗಡಿಯೊಳಗಿದ್ದೆವು. ಅಲ್ಲಲ್ಲಿ ನಾಟಿ ಮಾಡಿದ ಗದ್ದೆಗಳು. ಬೋಳು ಗುಡ್ಡ.

ಮೈಕ್ ತನ್ನ ಜಾಕೆಟ್ ಕಳಚಿ ಕಾಲ ಕೆಳಗೆ ಬಿಸಾಕಿದ.

ರೇಡಿಯೋದಿಂದ ಬರುತ್ತಿದ್ದ ಹಾಡಿಗೆ ದನಿಗೂಡಿಸಿ ಹಾಡಿದ. ಮತ್ತೆ ನನ್ನ ಕಡೆಗೆ ತಿರುಗಿ ಹೇಳಿದ -

'ಚೆನ್ನಾಗಿದೆ ನಿಂದು ಕಾರು.'

'ಥ್ಯಾಂಕ್ಸ್.'

'ತೊಂಬತ್ತರ ಮಾಡೆಲ್ಲಾ?'

'ಅಲ್ಲ. ತೊಂಭತ್ತೊಂದು.'

'ಹುಂ, ರಿಯಲೀ ಪ್ರೆಟ್ಟೀ. ತುಂಬಾ ಕ್ರಯ ಇದ್ದಿರಬೇಕಲ್ಲಾ?'

'ಹೌದು.'

ಹೈವೇಯಲ್ಲಿ ವಾಹನಗಳು ಜಾಸ್ತಿಯಾಗಿದ್ದವು. ಆಕಾಶದಲ್ಲಿ ಕಪ್ಪು ಮೋಡಗಳು ದಾರಿ ತಪ್ಪಿ ಓಡತೊಡಗಿದ್ದವು. ಮೈಕ್ ಹೇಳಿದ -

'ನನ್ನ ಊಟ ತಿಂಡಿಗೆ ನೀನೇನೂ ವರಿ ಮಾಡುವುದು ಬೇಡ. ಬ್ಯಾಕ್ ಪ್ಯಾಕಿನಲ್ಲಿ ನನ್ನ ಲಂಚ್, ಡಿನ್ನರ್ ಎಲ್ಲಾ ರೆಡಿಯಿದೆ. ಒಂದು ದಿನಕ್ಕೆ ಸಾಕು.'

ಸಂಜೆ ನಾಲ್ಕಕ್ಕೆ ಲಾಸ್‌ಏಂಜಲೀಸ್ ಬಂತು. ಹನಿ ಹನಿ ಮಳೆ ಸುರುವಾಯ್ತು. ಆರುಗಂಟೆ ಹೊತ್ತಿಗೆ ನಾನು ದಾರಿ ಬದಿಯ ರೆಸ್ಟುರಾಂಟ ಒಂದರ ಹತ್ತಿರ ಕಾರು ನಿಲ್ಲಿಸಿದೆ. ಹೊಟ್ಟೆ ಹಸಿದಿತ್ತು. ತಲೆ ನೋಯುತಿತ್ತು. ಕಾರಿನ ಮುಂದಿನ ನೆಲದಲ್ಲಿ ಕೂತು ಮೈಕ್ ತನ್ನ ಸ್ಯಾಂಡ್‌ವಿಚ್ ತಿನ್ನ ತೊಡಗಿದ. ನಾನು ರೆಸ್ಟು ರಾಂಟನೊಳಗೆ ಹೋಗಿ ಕರಿದ ಕೋಳಿ ಮಾಂಸ

ಆರ್ಡರ್ ಮಾಡಿದೆ. ಊಟ ಮುಗಿಸುತ್ತಿದ್ದಂತೆ ಮೈಕ್ ರೆಸ್ಟುರಾಂಟನೊಳಕ್ಕೆ ಬಂದಿದ್ದ - ಬಾತ್‌ರೂಂ ಉಪಯೋಗಿಸಲು.

ರೆಸ್ಟುರಾಂಟಿನ ಪಕ್ಕದ ಪೆಟ್ರೋಲ್ ಸ್ಟೇಶನ್ನಿನಲ್ಲಿ ಪೆಟ್ರೋಲು ಹಾಕಿದೆ. ಮೈಕ್ ಇಪ್ಪತ್ತು ಡಾಲರಿನ ನೋಟು ತೆಗೆದುಕೊಟ್ಟ. 'ನಾನು ಡ್ರೈವ್ ಮಾಡಲಾ, ನಿಂಗೆ ಆಯಾಸ ಆಗಿರಬಹುದು,' ಅಂತ ಕೇಳಿದ. 'ಬೇಡ, ಐ ಎಮ್ ಫೈನ್' ಎಂದೆ.

ಆ ರಾತ್ರಿ ನಾವು ಲಾಸ್ಟ ಹಿಲ್ಸ್ ಎಂಬಲ್ಲಿ ಒಂದು ಶಾಪಿಂಗ್ ಸೆಂಟರಿನ ಪಾರ್ಕಿಂಗ್ ಲಾಟ್‌ನಲ್ಲಿ ಕಾರಲ್ಲೇ ನಿದ್ರೆ ಮಾಡಿ ಕಳೆದೆವು. ನಾನು ಮುಂದಿನ ಸೀಟಲ್ಲೂ, ಮೈಕ್ ಹಿಂದಿನ ಸೀಟಲ್ಲೂ ಕಾಲು ಚಾಚಿ ಮಲಗಿಕೊಂಡೆವು. ಗಾಳಿಯಲ್ಲಿ ವಿಪರೀತ ಚಳಿ. ನನಗೆ ನಿದ್ದೆ ಬಂದಾಗ ಮೈಕ್ ಒಂದು ಕ್ರಿಸ್‌ಮಸ್ ಹಾಡನ್ನು ಮೆದುವಾಗಿ ಹಾಡುತ್ತಿದ್ದ.

ನಾನು ಬೆಳಗ್ಗೆ ಕಣ್ಣು ತೆರೆದಾಗ ಮೈಕ್ ಆವಾಗಲೇ ಎದ್ದು ಒಂದು ಇಟ್ಟಿಗೆ ಗೋಡೆ ಕೆಳಗೆ ಉಚ್ಚೆ ಹೊಯ್ದು ಹಿಂದೆ ಬರುತ್ತಿದ್ದ. ತಲೆಗೂದಲನ್ನು ನೀಟಾಗಿ ಬಾಚಿಕೊಂಡಿದ್ದ, ಮುಖದಲ್ಲಿ ಅದೇ ಶುಭ್ರ ನಗು, ನಾನು ಎದ್ದು ಕುಳಿತಾಗ ಕೇಳಿದ -

'ನೀನು ಓರೆಗಾನ್‌ಗೆ ಯಾಕೆ ಹೋಗುತ್ತಿರುವುದು ಅಂತ ಹೇಳ್ಳೇ ಇಲ್ವಲ್ಲಾ.'

'ಒಂದು ಕೆಲ್ಸ ಉಂಟು.'

'ಓ ಹಾಗೆಯಾ, ಮತ್ತೆ ನಿಂದು ಮನೆಯೆಲ್ಲಿ?'

'ಟೂಸಾನ್‌ನ ಹತ್ತಿರ.'

'ಅಲ್ಲೇನು, ಸ್ಟೂಡೆಂಟಾ?' ತಲೆಯಾಡಿಸಿದೆ. ಆತ ಹೇಳಿದ -

'ನಾನು ಹಾಗೇ ತಿಳ್ಕೊಂಡೆ, ಇಂತಹ ಸ್ಪೋರ್ಟ್ಸ್ ಕಾರು ಇಟ್ಟುಕೊಂಡಿರಬೇಕಾದ್ರೆ.....

ಅಲ್ಲಿಂದ ಎರಡು ಮೈಲು ದೂರದಲ್ಲಿದ್ದ ಒಂದು ರೆಸ್ಟುರಾಂಟನಲ್ಲಿ ಕಾರು ನಿಲ್ಲಿಸಿ



ಆಮ್ಲೆಟ್ ತಿಂದು ಕಾಫಿ ಕುಡಿದೆ. ಮೈಕ್ ಕಾಫಿ ಮಾತ್ರ ಆರ್ಡರ್ ಮಾಡಿದ. ನಾನು ಕೊಡ್ತಾ ಹಣ, ಎಂದು ಕೇಳಿದ್ದಕ್ಕೆ - ' ಬೇಡ, ಬೇಡ. ನನ್ನ ಖರ್ಚು ನಾನು ನೋಡಿಕೊಳ್ತೇನೆ' ಎಂದು ಪರ್ಸ್ ತೆಗೆದ.

ಹತ್ತಿರದಲ್ಲಿದ್ದ ಪೆಟ್ರೋಲ್ ಸ್ಟೇಶನ್ನಿನಲ್ಲಿ ಪೆಟ್ರೋಲು ತುಂಬಿಸಿದಾಗ ಮೈಕ್ ಪರ್ಸ್ ಹಿಡಿದು ರೆಡಿಯಾಗಿದ್ದ, ನಾನು ಕೇಳುವ ಮೊದಲೇ. ಅವನ ಈ ನಡತೆ ನನಗೆ ತುಂಬಾ ಪ್ರಿಯವಾಗಿತ್ತು.

ಹೈವೇ ಹಿಡಿದಾಗ ಮಂಜು ಕೆಳಗಿಳಿದಿತ್ತು. ಸೂರ್ಯನ ಬೆಳಕು ಮಂಜಿನ ಪರದೆಯ ಮೇಲೆ ಕೈ ಚಾಚಿ ತೆರೆದುಕೊಂಡಿತ್ತು.

ಮೈಕ್ ಕಾರಿನ ಸೀಟಿಗೊರಗಿ ತನ್ನ ಜಾಕೆಟನ್ನು ಎದೆಮೇಲೆ ಹರಡಿಕೊಂಡು ಕುಳಿತುಕೊಂಡ. ನಾನು ಕೇಳಿದೆ -

'ನಿನ್ನ ತಂಗಿ ಏನು ಮಾಡ್ತಾಳೆ?'

'ಸುಪರ್ ಮಾರ್ಕೆಟ್ ಒಂದರಲ್ಲಿ ಪ್ರೊಡ್ಯೂಸ್ ಮ್ಯಾನೇಜರ್. ನನಗಿಂತ ಜೋರು ಹಣ ಮಾಡ್ತಾಳೆ. ಗಂಟೆಗೆ ಹದಿನೈದು ಡಾಲರ್ ಬರ್ತದಂತೆ.'

'ಮತ್ತೆ ನಿನ್ನ ಭಾವ?'

'ಮದ್ವೆ ಆಗ್ಲಿಲ್ಲ ಅವ್ಳಿಗೆ. ಅವಳು ಸಿಂಗಲ್

ಮದರ್. ಐದು ವರ್ಷದ ಮಗು ಉಂಟು. ಜೆಸ್ಸೀ ಅಂತ. ಎಷ್ಟು ಮುದ್ದಾಗಿದ್ದಾನಂದ್ರೆ!'

'ನೀನು ಬರುವುದು ಗೊತ್ತಾ ಅಕ್ಕಿಗೆ'

ಹುಂ. ಮೊನ್ನೆ ಕಾಲ್ ಮಾಡಿದ್ದೆ. ಬಾ, ಇಲ್ಲೇನಾದ್ರೂ, ಕೆಲ್ಸ ಸಿಕ್ಕಿದ್ರೂ, ಸಿಗಬಹುದು, ಅಂತ ಹೇಳಿದ್ಳು.'

ಸ್ವಲ್ಪ ಹೊತ್ತಿನ ನಂತರ ಅತ ಸೀಟಿಗೊರಗಿ ಗೊರಕೆ ಹೊಡೆಯತೊಡಗಿದ. ನಾನು ರೇಡಿಯೋದ ಹಾಡನ್ನು ಸ್ವಲ್ಪ ನಿಧಾನ ಮಾಡಿದೆ. ಸೂರ್ಯ ಆಕಾಶದ ನಡುವಿದ್ದ. ಗಾಳಿ ನಿಧಾನವಾಗಿ ಬೀಸತೊಡಗಿತ್ತು.

ಎಚ್ಚರಗೊಂಡ ನಂತರ ಮೈಕ್ ಕೇಳಿದ -

'ತೊಂದರೆಯಿಲ್ಲದಿದ್ರೆ, ನಿನ್ನ ಹತ್ತಿರ ಒಂದು ಫೇವರ್ ಕೇಳ್ಬೇಕು ಅಂತ.....'

'ಏನು? ಕೇಳು.'

'ಇಲ್ಲಿ ರೆಡ್ಡಿಂಗ್‌ನ ಹತ್ತಿರ ಒಂದು ಐದು ನಿಮಿಷ ನಿಲ್ಲಿಸಬಹುದಾ?'

'ಶುವರ್. ಯಾಕೆ?'

'ಏನಿಲ್ಲ. ಅಲ್ಲಿ ಒಂದು ಇಟಾಲಿಯನ್ ರೆಸ್ಟುರಾಂಟದಲ್ಲಿ ನನ್ನ ಹಳೆ ಗೆಳೆಯನೊಬ್ಬ ಅಡಿಗೆ ಕೆಲಸ ಮಾಡಿಕೊಂಡಿದ್ದಾನೆ. ಅವನನ್ನು ನೋಡದೇ ಏಳೆಂಟು ವರ್ಷವಾಯ್ತು. ನಿನಗೆ ತೊಂದರೆಯಿಲ್ಲದಿದ್ರೆ, ಅಲ್ಲಿ ಒಂದೆರಡು ನಿಮಿಷ ನಿಂತು ಅವನ ಹತ್ರ ಮಾತ್ನಾಡಿ ಬರ್ತೇನೆ.'

'ಸರಿ. ನಿನಗೆ ದಾರಿ ಗೊತ್ತಲ್ಲಾ?'

'ಗೊತ್ತು, ಆದ್ರೆ ಮರೆತು ಹೋಗಿದೆ. ನೋಡುವಾ, ಟ್ರೈ ಮಾಡುವಾ.'

ರೆಡ್ಡಿಂಗ್ ತಲುಪುವಷ್ಟರಲ್ಲಿ ನಾಲ್ಕು ಕಳೆದಿತ್ತು. ಪಟ್ಟಣ ಮುಟ್ಟುವ ಮೊದಲೇ ಫ್ರೀವೇ ಬಿಟ್ಟು ಒಳದಾರಿಯಲ್ಲಿ ಹೋಗಹೇಳಿದ ಮೈಕ್. ಬಲಕ್ಕೆ ತಿರುಗಿ ಒಂದು ಮೈಲು ಹೋಗಿ ಡೇವಿಡ್ ಸ್ಟ್ರೀಟ್ ಅಂತ ಹೆಸರಿನ ಮಾರ್ಗದಲ್ಲಿ ಎಡಕ್ಕೆ ತಿರುಗಿದೆವು. ದಾರಿಯ ಎರಡೂ ಬದಿ ಹೊಸದಾಗಿ ಕಟ್ಟಿದ ಮನೆಗಳು, ದೇವಸ್ಥಾನದಂತೆ ಕಂಡು ಬರುವ ಒಂದು ಹಾಸ್ಪಿಟಲ್. ಆ ಮಾರ್ಗದಲ್ಲಿ ಎರಡು ಮೈಲು ದೂರ ಹೋದನಂತರ ಮೈಕ್ ಹೇಳಿದ - 'ಸ್ವಲ್ಪ ತಡಿ. ಇಲ್ಲೇ ಬದಿಯಲ್ಲಿ ನಿಲ್ಲು. ನಾನಿಲ್ಲಿ ಯಾರ ಹತ್ರಾದ್ರೂ ಕೇಳಿ ಬರ್ತೇನೆ.'

ಒಂದು ಹಾರ್ಡ್‌ವೇರ್ ಶಾಪಿನ್ ಬದಿ ಕಾರು ನಿಲ್ಲಿಸಿದೆ. ಕಾರಿಂದಿಳಿದ ಮೈಕ್ ಅಂಗಡಿಯೊಳ ಹೊಕ್ಕ. ಮೂರು ನಿಮಿಷದ ನಂತರ ಹೊರ ಬಂದು ಕಾರಿನೆಡೆಗೆ ನಡೆದು ಹೇಳಿದ -

'ಸರಿ, ಇದೇ ದಾರಿ. ಹೀಗೇ ಮುಂದೆ ಹೋಗಿ ಒಂದು ಮೈಲಿನ ನಂತರ ಬಲಕ್ಕೆ ತಿರುಗಿದರಾಯಿತು.'

ಸುಮಾರು ಒಂದೂವರೆ ಮೈಲಿನ ನಂತರ ಜೋ ಅವೆನ್ಯೂ ಎಂಬಲ್ಲಿ ಬಲಕ್ಕೆ ತಿರುಗಿದೆವು. ದಾರಿಯ ಎರಡೂ ಬದಿ ವಿಶಾಲ ಪಾರ್ಕುಗಳು. ಮೈಕ್ ಕತ್ತು ತಗ್ಗಿಸಿಕೊಂಡು ಆಚೀಚೆ ಹುಡುಕಾಡುತ್ತಿದ್ದ. ದೂರದಲ್ಲಿ ಒಂದು ರೆಸ್ಟುರಾಂಟ ಕಣ್ಣಿಗೆ ಬೀಳುತ್ತಲೇ ಹೇಳಿದ -

'ನೋಡು, ಅದೇ ಅದೇ..'

ನಾನು ರೆಸ್ಟುರಾಂಟದ ಪಾರ್ಕಿಂಗ್ ಲಾಜಿನಲ್ಲಿ ಕಾರು ನಿಲ್ಲಿಸಿದೆ. ಕಾರಿಂದಿಳಿಯುತ್ತಾ ಮೈಕ್ ಹೇಳಿದ - 'ನೀನು ಕಾರಿನ ಇಂಜನ್ ನಿಲ್ಲಿಸುವ ಅಗತ್ಯವಿಲ್ಲ. ಮೂರು ನಿಮಿಷದಲ್ಲೇ ಹಿಂದೆ ಬರ್ತೇನೆ.'

ನಾನು ಇಂಜನ್ ಆಫ್ ಮಾಡದೆ ರೇಡಿಯೊ ಹಾಡು ಕೇಳುತ್ತಾ ಕುಳಿತೆ, ಮೂರು ನಿಮಿಷ ಕಳೆಯಿತು. ಐದು ನಿಮಿಷ ಕಳೆಯಿತು. ಹತ್ತು ನಿಮಿಷ ಕಳೆಯಿತು. ಏನು ಮಾಡಿದ್ದಾನೆ ಇವ? ಲೇಟಾಗುತ್ತಲ್ಲಾ, ಯೂಜೀನ್ ಮುಟ್ಲಿಕ್ಕೆ ತಡವಾಗ್ತದಲ್ಲಾ. ಮತ್ತೆ ಎರಡು ನಿಮಿಷ ಕಾದೆ. ನಂತರ ಇಂಜನ್ ಆಫ್ ಮಾಡಿ, ಕಾರಿನ ಬಾಗಿಲು ತೆರೆದಿಟ್ಟು ಕಾರಿಂದಿಳಿದು ರೆಸ್ಟುರಾಂಟದೊಳಕ್ಕೆ ಹೋದೆ.

ಗಂಡಸರಂತೆ ತಲೆ ಬಾಚಿಕೊಂಡಿದ್ದ ರಿಸೆಪ್ಶನ್ ಹುಡುಗಿ ಎದುರಿಗೆ ಸಿಕ್ಕಿದಳು. ನಾನು ಕೇಳಿದೆ - ' ಕಿಚನ್ ಯಾವ ಕಡೆ? ನನ್ನ ಫ್ರೆಂಡೊಬ್ಬ ಇದ್ದಾನೆ.'

ಆಕೆ ಒಂದು ಗಳಿಗೆ ಪ್ರಶ್ನೆ ಹಾಕುವವಳಂತೆ ನನ್ನನ್ನಳೆದು ಉತ್ತರಕೊಡದೆ ಬಲಗಡೆ ಕೈ ತೋರಿಸಿದಳು.

ಬಾತ್‌ರೂಮು ದಾಟಿ ಎದುರಿನ ಬಾಗಿಲು ತೆರೆದೆ. ಎದುರಿನ ಅಡಿಗೆ ಕೋಣೆ ಬಹಳಷ್ಟು ಅಗಲವಾಗಿತ್ತು. ಕಿಟಕಿಯಿಂದ ತೂರಿಬರುತ್ತಿದ್ದ ಬಿಸಿಲಿಗೆ ಬಿಳಿ ಕೌಂಟರ್ ಚಿನ್ನದಂತೆ ಹೊಳೆಯುತಿತ್ತು, ಕರಿದ ಎಣ್ಣೆ ಪರಿಮಳ ಮೈಗೆಲ್ಲಾ ಹತ್ತಿಕೊಂಡಿತು. ರೇಡಿಯೋ ಕರ್ಕಶವಾಗಿ ಹಾಡುತ್ತಿತ್ತು.

ಕೌಂಟರಿನ ಇನ್ನೊಂದು ತುದಿಯಲ್ಲಿ ಮುದುಕ ಅಡಿಗೆಯವನೊಬ್ಬ ತಲೆಯೆತ್ತಿ ನನ್ನ ಕಡೆ ನೋಡಿದ. ರೇಡಿಯೋವನ್ನು ಸಣ್ಣಗೆ ಮಾಡಿ ಕೇಳಿದ -

'ಏನು ಬೇಕು?'

'ನನ್ನ ಫ್ರೆಂಡೊಬ್ಬನನ್ನು ಹುಡುಕಿಕೊಂಡು ಬಂದೆ.'

'ಫ್ರೆಂಡಾ! ಹೆಸರೇನು?'

'ಮೈಕ್, ಮೈಕ್ ಸಿರೂವಿಕ್.'

'ಮೈಕಾ? ಇಲ್ಲಿ ಮೈಕ್ ಅಂತ ಹೆಸರಿನವರು ಯಾರೂ ಇಲ್ವಲ್ಲಾ.' ಅನಂತರ ದನಿಯೇರಿಸಿ ಯಾರನ್ನೋ ಕರೆಯುವವನಂತೆ ಕೇಳಿದ -

'ಯೇ ಬಿಲ್, ನಿಂಗೆ ಮೈಕ್ ಅಂತ ಯಾರಾದರೂ ಗೊತ್ತಾ ಇಲ್ಲಿ'?

ಗೋಡೆಯಾಚೆಯಿಂದ ಉತ್ತರ ಬಂತು - 'ಇಲ್ವಲ್ಲಾ.'

ಮತ್ತೆ ನನ್ನ ಕಡೆ ನೋಡಿ ಹುಬ್ಬು ಹಾರಿಸಿಕೊಳ್ಳುತ್ತಾ ಹೇಳಿದ, ಮುದುಕ 'ಸ್ಸಾರೀ, ಇಲ್ಲಿ ಯಾವ ಮೈಕ್ ಇಲ್ಲ.'

ನಾನು ಬಾಗಿಲು ದೂಡಿಕೊಂಡು ಈಚೆ ಬಂದೆ, ರಿಸೆಪ್ಶನ್ನಿನ ಗಂಡಸು ತರದ ಹುಡುಗಿ ನನ್ನ ಕಡೆಗೇನೇ ವಿಚಿತ್ರವಾಗಿ ನೋಡುತ್ತಿದ್ದಳು. ಅವಳಲ್ಲಿ ಮಾತನಾಡದೇನೇ ಹೊರಗೆ ಬಂದು ತಲೆಯೆತ್ತಿ ನೋಡಿದೆ.

ನೋಡುವುದೇನು. ನನ್ನ ಕಾರು ಕಣ್ಮರೆಯಾಗಿತ್ತು. 'ಮೈಗಾಡ್' ಎಂದು ಕಿರಿಚಿ ಒಂದೇ ಉಸಿರಲ್ಲಿ ಓಡಿ ಬಂದೆ. ನೋಡಿದ್ದು ಸತ್ಯ. ಕೆಂಪು ಬಣ್ಣದ ಸ್ಪೋರ್ಟ್ಸ್ ಕಾರು ಕಣ್ಮರೆಯಾಗಿತ್ತು. ಕಾರಿದ್ದ ಸ್ಥಳದಲ್ಲಿ ಪ್ಲೈವುಡ್ ಹಲಗೆಯ ಸೈನ್, ಬಿಳಿ ಅಕ್ಷರಗಳಲ್ಲಿ ಬರೆದಿತ್ತು - ಓರೆಗಾನ್‌ಗೆ

ಸೈನ್ ಹಿಡಿದುಕೊಂಡೆ. ನೆಲದಲ್ಲಿ ಕಾಲು ಚಾಚಿ ಕೂತೆ. ನೆಲದಲ್ಲಿ ನೀರ ಪಸೆಯಿತ್ತು. ಕಣ್ಣುಕತ್ತಲೆ ಬಂತು. ಕಣ್ಣು ಮುಚ್ಚಿಕೊಂಡೆ. ಏನು ಮಾಡುವುದು?

ಏನು ಮಾಡುವುದು? ಮೊನ್ನೆ ರಾತ್ರಿಯಷ್ಟೇ ಫೀನಿಕ್ಸ್‌ನ ಶಾಪಿಂಗ್ ಸೆಂಟರ್ ಒಂದರ ಪಾರ್ಕಿಂಗ್ ಲಾಟಿನಿಂದ ಕದ್ದು ಹಾರಿಸಿಕೊಂಡು ಬಂದ ಕಾರು!

ಕದ್ದ ಕಾರನ್ನು ಓರೆಗಾನ್‌ನಲ್ಲಿ ಸುಲಭವಾಗಿ ಮಾರಾಟ ಮಾಡಬಹುದೆಂದು ಎಣಿಸಿಕೊಂಡು, ಹಳೆ ಪೈಂಟಿನ ಮೇಲೆ ಹೊಸ ಕೆಂಪು ಪೈಂಟ್ ಮಾಡಿಕೊಂಡ ತೊಂಬತ್ತೊಂದರ ಮಾಡೆಲ್ಲಿನ ಸ್ಪೋರ್ಟ್ಸ್ ಕಾರು ಕೈ ಬಿಟ್ಟು ಹೊರಟು ಹೋಯಿತು. ಕೈಗೆಟುಕದೆ ಹೋಯಿತು.

ಇನ್ನು ಓರೆಗಾನಿಗೆ ಹೋಗಿ ಮಾಡುವುದೇನು? ಕೈಲಿದ್ದ ಹಲಗೆಯ ತುಂಡನ್ನು ಬಿಸಾಕಿ ಪಾರ್ಕಿಂಗ್ ಲಾಟಿಗೆ ಸುತ್ತು ಬರತೊಡಗಿದೆ. ●

ಕಚ್ಚಿದ ಹಾವನ್ನೇ ನುಂಗಿದ

ಕೀನ್ಯದ ವ್ಯಕ್ತಿಯೊಬ್ಬ ತನ್ನನ್ನು ಕಚ್ಚಿದ ಹಾವನ್ನೇ ನುಂಗಿದ ಘಟನೆ ಇತ್ತೀಚೆಗೆ ವರದಿಯಾಗಿದೆ. 30 ವರ್ಷ ವಯಸ್ಸಿನ ಈ ಯುವಕನಿಗೆ ನಾಗರಹಾವೊಂದು ಮಧ್ಯರಾತ್ರಿ ಕಚ್ಚಿತು. ಆತ ಅದನ್ನು ಕಲ್ಲಿನಿಂದ ಕೊಂದು, ವಿಷವನ್ನು ಹೊರತೆಗೆದು, ಗಿಡಮೂಲಿಕೆಗಳ ಜತೆ ಸೇರಿಸಿ ನುಂಗಿ ಹಾಕಿದ.

● *ಗಣೇಶ ಪಿ. ನಾಡೋರ*

ಸೃಜನಶೀಲಸೆಲೆಯನ್ನು ಚಿಮ್ಮಿಸಿಕೊಳ್ಳಲು ಪಾಶ್ಚಾತ್ಯ ಲೇಖಕರು ನೆಚ್ಚಿಕೊಂಡ ಹಲವು ವಿಚಿತ್ರ ಹವ್ಯಾಸಗಳನ್ನು ನಂಬುವುದೇ ಕಷ್ಟ. ಬರವಣಿಗೆಯಲ್ಲಷ್ಟೇ ಅಲ್ಲ, ಬರೆಯುವ ಪರಿಸರ ನಿರ್ಮಿತಿಯಲ್ಲೂ ಇವರು ಭಿನ್ನರು!

ಪಾಶ್ಚಾತ್ಯ ಲೇಖಕರ ವಿಚಿತ್ರ ಹವ್ಯಾಸಗಳು

● ಮುರಲೀಧರ ಕುಲಕರ್ಣಿ



ಲೇಖನ ವೃತ್ತಿ ಸ್ವತಂತ್ರವಾದದ್ದು. ವೃತ್ತಿನಿರತ ಲೇಖಕನಿಗೆ ಕಛೇರಿಯ ಗುಮಾಸ್ತನಂತೆ ನಿಶ್ಚಿತ ವೇಳೆಗೆ ಕಛೇರಿ ತಲುಪಬೇಕೆಂಬ ಅವಸರವಿಲ್ಲ ಅಥವಾ ಕಾರ್ಖಾನೆಯ ಕೆಲಸಗಾರನಂತೆ ದಿವಸಕ್ಕೆ ಇಂತಿಷ್ಟು ಕೆಲಸ ಮುಗಿಸಲೇಬೇಕೆಂಬ ಕಡ್ಡಾಯವಿಲ್ಲ. ಅವನು ಮನಸಿನ ರಾಜ. ಆತನ ಕಾರ್ಯಕ್ಕೆ ಬೇಕಾದ ಮುಖ್ಯ ಬಂಡವಾಳವೆಂದರೆ ಸ್ಫೂರ್ತಿ. ಬರವಣಿಗೆಗೆ ಬೇಕಾದ ಸ್ಫೂರ್ತಿಯನ್ನು ದೊರಕಿಸಿಕೊಳ್ಳಲು ಈ ಲೇಖಕರು ಬಳಸುತ್ತಿದ್ದ ವಿಧಾನಗಳು ತುಂಬ ಚಿತ್ರವಿಚಿತ್ರ ಮತ್ತು ಸ್ವಾರಸ್ಯಕರ.

ಅಮೆರಿಕೆಯ ಪೌರತ್ವ ಪಡೆದ ರಷ್ಯನ್ ಕಾದಂಬರಿಕಾರ ವ್ಲಾಡಿಮೀರ್ ನಬೊಕೋವನಿಗೆ ನಿಂತುಕೊಂಡೇ ಬರೆಯುವ ಹವ್ಯಾಸವಿತ್ತು. ಅದಕ್ಕಾಗಿಯೇ ಅವನು ಒಂದು ವಿಶೇಷವಾದ ಡೆಸ್ಕನ್ನು ಮಾಡಿಸಿದ್ದನು. ಆ ಡೆಸ್ಕಿನ ಬಳಿ ಇಡೀ ದಿನ ನಿಂತುಕೊಂಡೇ ಅವನು ಬರೆಯುತ್ತಿದ್ದನು.

ಆಂಗ್ಲ ಪ್ರಬಂಧಕಾರ ಜೊಸೆಫ್ ಎಡಿಸನ್‌ನಿಗೆ ತನ್ನ ಮನೆಯ ಕಾರಿಡಾರಿನಲ್ಲಿ ಆ ಕಡೆಯಿಂದ ಈ ಕಡೆ ತಿರುಗಾಡುತ್ತಲೇ ಬರೆಯುವ ವಿಚಿತ್ರ ಹವ್ಯಾಸವಿತ್ತು. ಜಾನ್‌ರಸ್ಕಿನ್, ಮಾರ್ಕ್‌ಟ್ವೇನ್, ವಾಲ್ಟೆರ್, ವರ್ಡ್ಸ್‌ವರ್ತ್ ಮತ್ತು ಅಲೆಕ್ಸಾಂಡರ್ ಡೂಮಾ ಮುಂತಾದ ಲೇಖಕರಿಗೆ ಹಾಸಿಗೆ ಇಲ್ಲದೆ ಬರವಣಿಗೆಯೇ ಸಾಗುತ್ತಿರಲಿಲ್ಲ. ಮಾರ್ಕ್‌ಟ್ವೇನನಂತೂ ಮಲಗಿಕೊಂಡೇ ಬರೆಯುತ್ತಿದ್ದ. ಹಾಗೆಂದ ಮಾತ್ರಕ್ಕೆ ಮೇಲೆ ಹೇಳಿದ ಲೇಖಕರೆಲ್ಲ ರಾತ್ರಿ ಬರೆಯುತ್ತಿದ್ದರೆಂದು ಅರ್ಥವಲ್ಲ. ಹಗಲಿನಲ್ಲಿ ಬರೆಯಬೇಕಾದರೂ ಅವರಿಗೆ ಹಾಸಿಗೆಯೇ ಬೇಕಾಗುತ್ತಿತ್ತು!

ರಷ್ಯನ್ ಕತೆಗಾರ ದೋಸ್ತೊವಸ್ಕಿ ಬರೆಯುತ್ತಿದ್ದುದು ಕೇವಲ ರಾತ್ರಿ ಹೊತ್ತಿನಲ್ಲಿಯೇ. ಫ್ರೆಂಚ್ ಲೇಖಕ ಬಾಲ್‌ಜಾಕನಿಗೆ ಮಧ್ಯರಾತ್ರಿಯ ಹೊತ್ತಿಗೆ ಎದ್ದು ಬರೆಯುವ ಹವ್ಯಾಸವಿತ್ತು. ಆಗ ಕ್ಯಾಂಡಲ್ ಬೆಳಕಿನಲ್ಲಿ ಆರಂಭಿಸುತ್ತಿದ್ದ ಬರವಣಿಗೆ ಬೆಳಕು ಹರಿಯುವವರೆಗೂ ಮುಂದುವರೆಯುತ್ತಿತ್ತು. ಬಾಲ್‌ಜಾಕ್ ತುಂಬ ಹೊಟ್ಟೆಬಾಕನೂ ಆಗಿದ್ದ. ಅವನ ಮಧ್ಯಾಹ್ನದ ಊಟಕ್ಕೆ ಒಂದು ನೂರು ಚಿಕ್ಕ ಮೀನುಗಳು, ಒಂದು ಬಾತುಕೋಳಿ, ಹನ್ನೆರಡು ಕಟ್‌ಲೆಟ್ ಅನೇಕ ಬಗೆಯ ಸಿಹಿತಿಂಡಿಗಳು ಬೇಕಾಗುತ್ತಿದ್ದವು. ಅಲೆಕ್ಸಾಂಡರ್ ಡೂಮಾ ಮತ್ತು ಮಾರ್ಕ್‌ಟ್ವೇನರು ಹೊಟ್ಟೆಬಾಕರಾಗಿದ್ದರೂ ಬರವಣಿಗೆಗೆ ಕುಳಿತಾಗ ಮಾತ್ರ ಅವರಿಗೆ ಆಹಾರದ ಪರಿವೆಯೇ ಇರುತ್ತಿರಲಿಲ್ಲ. ಮಾರ್ಕ್‌ಟ್ವೇನನು ಬರವಣಿಗೆಗೆ ಕುಳಿತರೆ ಅವನ ಪತ್ನಿ ಅವನಿಗೆ ಬೇಯಿಸಿದ ಮೊಟ್ಟೆಗಳನ್ನು ನಿರಂತರವಾಗಿ ಸರಬರಾಜು ಮಾಡುತ್ತಲೇ ಇರಬೇಕಾಗುತ್ತಿತ್ತು.

ಅಮೆರಿಕೆಯ ಪತ್ತೇದಾರಿ ಕಾದಂಬರಿಕಾರ ಎಡ್ಗರ್ ವ್ಯಾಲೆಸನಿಗೆ ವಿಪರೀತ ಚಹ ಕುಡಿಯುವ ಚಟವಿತ್ತು. ಪ್ರತಿನಿತ್ಯ ನಲ್ವತ್ತು ಕಪ್ ಚಹಾ ಸೇವಿಸುತ್ತಿದ್ದ ಆತ ಚಿಕ್ಕ ವಯಸ್ಸಿನಲ್ಲೇ ಮರಣಕ್ಕೆ ತುತ್ತಾದನು.

ಬರೆಯಲು ಬೇಕಾದ ಸ್ಫೂರ್ತಿ ಪಡೆಯಲು ಒಬ್ಬೊಬ್ಬ ಲೇಖಕರು ಒಂದೊಂದು ವಿಧಾನವನ್ನು ಅನುಸರಿಸುತ್ತಿದ್ದನು. ಅರ್ನೆಸ್ಟ್ ಹೆಮಿಂಗ್ವೇ ತನಗೆ ಬರೆಯ ಬೇಕೆನಿಸಿದಾಗೆಲ್ಲ ನಲ್ವತ್ತು ಪೆನ್ಸಿಲ್‌ಗಳನ್ನು ಕೆತ್ತಿ ಇಟ್ಟುಕೊಳ್ಳುತ್ತಿದ್ದನು. ಫೆಡ್‌ರಿಕ್ ಷಿಲ್ಲರ್ ಎಂಬ ಲೇಖಕನಿಗೆ ಕೊಳೆತ ಸೇಬುಹಣ್ಣುಗಳ ವಾಸನೆ ನೋಡಿದಾಗ ಮಾತ್ರ ಬರೆಯುವ ಸ್ಫೂರ್ತಿ ಬರುತ್ತಿತ್ತು. ಜಾರ್ಜ್ ಬರ್ನಾರ್ಡ್ ಷಾನಿಗೆ ಬರೆಯಲು ಏನೂ ಹೊಳೆಯದಿದ್ದಾಗ ಬಸ್ಸಿನ ದೀರ್ಘ ಪ್ರವಾಸವನ್ನು ಕೈಕೊಳ್ಳುತ್ತಿದ್ದನು. ಅಲೆಕ್ಸಾಂಡರ್ ಡೂಮಾನಿಗೆ ತನ್ನ ಕಾದಂಬರಿಗಳನ್ನು ಬರೆಯಲು ನೀಲಿ ಬಣ್ಣದ ಕಾಗದವೇ ಬೇಕಾಗುತ್ತಿತ್ತು. ಬಿಡಿ ಲೇಖನಗಳನ್ನು ಬರೆಯಲು ಮಾತ್ರ ಅವನು ನಸುಗೆಂಪು ಬಣ್ಣದ ಕಾಗದವನ್ನು ಬಳಸುತ್ತಿದ್ದನು.

ಕೆಲವು ಲೇಖಕರು ಬರವಣಿಗೆಯಲ್ಲಿ ಒಂದು ಶಿಸ್ತು ಹಾಗೂ ಕ್ರಮಬದ್ಧತೆಯನ್ನು ಇಟ್ಟುಕೊಂಡಿದ್ದರು. ಜಾರ್ಜ್ ಬರ್ನಾರ್ಡ ಷಾ ಪ್ರತಿನಿತ್ಯ ಐದು ಪುಟಗಳನ್ನು ಮಾತ್ರ ಬರೆಯುತ್ತಿದ್ದನು. ಅದಕ್ಕಿಂತ ಒಂದು ಪದವನ್ನು ಸಹ ಹೆಚ್ಚಾಗಿ ಬರೆಯುತ್ತಿರಲಿಲ್ಲ. ಅಲೆಕ್ಸಾಂಡರ್ ಡೂಮಾ ಹಸಿರು ಶಾಯಿಯನ್ನು ಮಾತ್ರ ಬಳಸುತ್ತಿದ್ದನು. ರುಸೋನಿಗೆ ತನ್ನ ಮನೆಯ ಕೈತೋಟದಲ್ಲಿ ಎಳೆಬಿಸಿಲಿನಲ್ಲಿ ಕುಳಿತರೆ ಮಾತ್ರ ಬರೆಯಲು ಸ್ಫೂರ್ತಿ ಬರುತ್ತಿತ್ತು.

ಸಾಮ್ಯುವೆಲ್ ಜಾನ್‌ಸನ್ನನಿಗೆ ಬರೆಯುವ ಮೇಜಿನ ಮೇಲೆ ತನ್ನ ಪ್ರೀತಿಯ ಬೆಕ್ಕು ಕುಳಿತಿರದಿದ್ದರೆ ಬರವಣಿಗೆಗೆ ಸ್ಫೂರ್ತಿಯೇ ಬರುತ್ತಿರಲಿಲ್ಲ. ಜಾರ್ಜ್ ಗೆರ್ಸ್‌ವಿನ್ನನಿಗೆ ಗದ್ದಲವಿದ್ದರೆ ಮಾತ್ರ ಬರೆಯಲು ಸ್ಫೂರ್ತಿ ಬರುತ್ತಿತ್ತು. ಮೋಟಾರ್‌ಕಾರಿನ ಹಾರ್ನ್ ಅಥವಾ ಮಗುವಿನ ಅಳು ಕೂಡ ಅವನಿಗೆ ಬರೆಯಲು ಸ್ಫೂರ್ತಿ ನೀಡುತ್ತಿದ್ದವು. ಆದರೆ ಇದಕ್ಕೆ ತದ್ವಿರುದ್ಧವಾಗಿ ಇಬ್ಸನ್ನನಿಗೆ ಏಕಾಂತತೆ ಇಲ್ಲದಿದ್ದರೆ ಬರೆಯಲು ಆಗುತ್ತಲೇ ಇರಲಿಲ್ಲ.

●

ಡಾಕ್ಟರೇ, ಈ ಎಕ್ಸ್-ರೇ ಒಳಗೆ ಏನೂ ಕಾಣಿಸ್ತಿಲ್ಲವಲ್ಲ ಸಾರ್. ಇದು ಪೂರಾ ಖಾಲಿ ಇದೆ ಸಾರ್.

ಮತ್ತಗೆ ಹೇಳೋ. ಇದು ನಮ್ಮ ಮಂತ್ರಿಗಳ ಮೆದುಳಿನ ಎಕ್ಸ್-ರೇ.

● **ಟೇಕಲ್ ಗೋಪಾಲಕೃಷ್ಣ**

'ಮೆಹರಾನ್' – ಒಂದು ಹತ್ಯಾಕಾಂಡದ ನೆನಪು

'ಇಬ್ಬರಿಬ್ಬ ಗೆಳೆಯರು ಜೀವಕೊರಳ ಗೆಳೆಯರು. ಕನ್ಯೆಯೊಬ್ಬಳೊಡನೆ...' ಎಂದಾರಂಭಗೊಳಿಸೋಣವೆ ಮೆಹರಾನಿನ ದುರಂತ ಕಥೆಯನ್ನ?

ದೆಹಲಿಗೆ 160 ಕಿಲೋ ಮೀಟರ್ ದೂರದಲ್ಲಿ ಉತ್ತರ ಪ್ರದೇಶದ ಮಥುರಾ ಜಿಲ್ಲೆಗೆ ಸೇರಿದ್ದ ಒಂದು ಗ್ರಾಮ 'ಮೆಹರಾನ'. ರಾಜಸ್ಥಾನದ ಗಡಿಗೂ ಇದು ಸಮೀಪ. ದೆಹಲಿ ಮತ್ತು ಆಗ್ರಾದ ನಡುವಿನ ಹೆದ್ದಾರಿ ಈ ಗ್ರಾಮದ ಬಳಿಯೆ ಹಾದು ಹೋಗಿದೆ. ಈ ಗ್ರಾಮಕ್ಕೆ ವಿದ್ಯುತ್ ಪೂರೈಕೆಯಿದೆ. ಇಲ್ಲಿ ಸುಮಾರು 250 ಕುಟುಂಬಗಳು ಮೇಲ್ಜಾತಿ ಎನಿಸಿಕೊಂಡ ಶ್ರೀಮಂತ ಜಾಟರವು ಹಾಗೂ 130 ಕುಟುಂಬಗಳು ಜಾಟವ್ ಹರಿಜನರವು. ಎರಡೂ ಕೋಮುಗಳ ಜನ ಅನುದಿನದ ಬದುಕಿನಲ್ಲಿ ಪರಸ್ಪರ ಅವಲಂಬಿತರಾಗಿದ್ದವರು. ಗ್ರಾಮದ ಬಹುಜನರ ಮನೆಗಳಲ್ಲಿ ಟೆಲಿವಿಜನ್ ಸೆಟ್‌ಗಳಿವೆ. ಟ್ರ್ಯಾಕ್ಟರ್ ಮೊದಲಾದ ಯಂತ್ರ, ವಾಹನಗಳನ್ನು ಬಳಸಿ ವ್ಯವಸಾಯ ಮಾಡುವ ಅನೇಕ ಶ್ರೀಮಂತ ರೈತರು ಈ ಗ್ರಾಮದಲ್ಲಿದ್ದಾರೆ. ಆಧುನಿಕ ಸೌಲಭ್ಯಗಳಿಂದ ಸಾಕಷ್ಟು ಮುಂದುವರಿದ ಈ ಗ್ರಾಮದಲ್ಲಿ ಮಧ್ಯಕಾಲೀನ ಯುಗದಲ್ಲಿ ನಡೆಯಬಹುದಾದಂಥ ಕರಾಳ ಕೃತ್ಯವೊಂದು ಕಳೆದ ವರ್ಷ ನಡೆಯಿತು. ನಾಗರಿಕ ಸಮಾಜ ತಲೆ ತಗ್ಗಿಸುವಂಥ ರಾಕ್ಷಸೀಕೃತ್ಯ ಅದು.

ದಿನಾಂಕ 27.3.91. ಬೆಳಗಿನ ಎಂಟು ಗಂಟೆಯ ಸಮಯ. ಮೂಡಣ ದಿಕ್ಕಿನಲ್ಲಿ ಸೂರ್ಯ ಮೇಲೇರುತ್ತಿದ್ದ. ಸ್ವಲ್ಪ ಹೊತ್ತಿನಲ್ಲಿ ಜರುಗಲಿದ್ದ ಕರಾಳ ಕೃತ್ಯಕ್ಕೆ ಸಾಕ್ಷಿಯಾಗಲಿದ್ದ ಊರ ಹೊರಗಿನ ದೊಡ್ಡ ಆಲದ ಮರದ ಮೇಲಿನ ಪಕ್ಷಿಗಳ ಚಿಲಿಪಿಲಿ ಗಾನ ಇದಾವುದರ ಪರಿವೆಯಿಲ್ಲದೆ ನಿರಂತರವಾಗಿ ಸಾಗಿತ್ತು. ಜಾಟ್ ಮೇಲ್ಜಾತಿಯ ಸದಸ್ಯರಿಂದ ಕೂಡಿದ ಪಂಚಾಯತಿಯ ಬರ್ಬರ ತೀರ್ಪನ್ನು ಕಾರ್ಯಗತಗೊಳಿಸುವ

● *ರೇಣುಕ*

ಕ್ರಿಯೆಗೆ ಊರಿನ ಐನೂರು ಜನರ ಗುಂಪು ಸಾಕ್ಷಿಯಾಗಿ ಮರದ ಕೆಳಗೆ ಜಮಾಯಿಸಿತ್ತು. ಆ ತೀರ್ಪಾದರೂ ಎಂಥದು? ಮರಣದಂಡನೆ!

ಮರಣದಂಡನೆಗೊಳಗಾದ ಅಪರಾಧಿಗಳು ಜಾಟವ್ ಹರಿಜನ ಜಾತಿಗೆ ಸೇರಿದ ಹದಿಹರಯದ ಇಬ್ಬರು ಯುವಕರು ಮತ್ತು ಜಾಟ್ ಜಾತಿಗೆ ಸೇರಿದ ಹದಿನೇಳು ವರ್ಷ ವಯಸ್ಸಿನ ಯುವತಿ. ಮೂವರ ಕೊರಳನ್ನು ಮರದ ರೆಂಬೆಯಿಂದ ಇಳಿಬಿದ್ದಿರುವ ನೇಣಿನ ಹಗ್ಗ ಅಲಂಕರಿಸಿದೆ. ಮೂವರೂ ನೆರೆದವರ ಮನ ಕರಗುವಂತೆ ಪ್ರಾಣ ಭಿಕ್ಷೆಗಾಗಿ ಅಂಗಲಾಚಿ ಪ್ರಲಾಪಿಸುತ್ತಿದ್ದಾರೆ. ಆದರೆ ನೆರೆದಿದ್ದವರಲ್ಲಿ ಒಬ್ಬನದಾ

ದರೂ ಮನಸ್ಸು ಕರಗಿದಂತೆ ಕಾಣುತ್ತಿರಲಿಲ್ಲ. ಗ್ರಾಮ ದೇವಾಲಯದ ವೃದ್ಧ ಪೂಜಾರಿ ಮಾತ್ರ ಅಪರಾಧಿಗಳಿಗೆ ಪ್ರಾಣದಾನ ನೀಡುವಂತೆ ಪಂಚರ ಮನವೊಲಿಸುವ ವಿಫಲ ಯತ್ನ ನಡೆಸಿದ್ದಾನೆ.

ತಮ್ಮ ಮಕ್ಕಳಿಗೊದಗಿದ ಗತಿಯಿಂದ ದಿಗ್ಭ್ರಾಂತರಾಗಿ ದುಃಖದಿಂದ ಕುಸಿದು ಬೀಳುತ್ತಿದ್ದ ಅಪ್ಪಂದಿರನ್ನು ಎಳೆದುಕೊಂಡು ಬಂದು ಬಲವಂತವಾಗಿ ನೇಣಿನ ಹಗ್ಗವನ್ನು ಅವರ ಕೈಯಿಂದಲೇ ಎಳೆಸಿದಾಗ ಅಪರಾಧಿಗಳ ಕೊರಳಿಂದ ಕೊನೆಯ ಸಲ ಹೃದಯವೇಧಕ ಚೀತ್ಕಾರ ಹೊರಹೊಮ್ಮಿತು. ಮರದ ಮೇಲಿನ ಹಕ್ಕಿ ಪಕ್ಷಿಗಳು ಪಟ ಪಟ ರೆಕ್ಕೆಬಡಿಯುತ್ತಾ ಗಾಬರಿಯಿಂದ ಹಾರಿಹೋದುವು.

ಈ ಬರ್ಬರ ಕೃತ್ಯಕ್ಕೆ ಬಲಿಯಾದ ಆ ಮೂವರು ಅಮಾಯಕರೆಸಗಿದ ಗುರುತರವಾದ ಅಪರಾಧವಾದರೂ ಏನು?

ಬ್ರಿಜೇಂದ್ರ ಹದಿನೆಂಟರ ಹರಿಜನ ಯುವಕ. ಗ್ರಾಮದ ಜಾಟ್ ಜಾತಿಗೆ ಸೇರಿದ ಜಮೀನ್ದಾರ ಗಂಗಾರಾಮನ ಹದಿನೇಳು ವಯಸ್ಸಿನ ಮಗಳು ರೋಶನಿಯನ್ನು ಪ್ರೇಮಿಸಿದ್ದಕ್ಕೆ ಆತ ತಲೆದಂಡ ತೆರಬೇಕಾಯಿತು. ನೇಣು ಹಾಕಿಸಿಕೊಂಡ ಮತ್ತೊಬ್ಬ ಇವರಿಬ್ಬರ ಮಿಲನಕ್ಕೆ ಸಹಾಯಕನಾದ ರಾಮಕಿಶನನೆಂಬ ಹರಿಜನ ತರುಣ. ಹರಿಜನ ತರುಣ ಬ್ರಿಜೇಂದ್ರನನ್ನು ಪ್ರೇಮಿಸಿದ 'ತಪ್ಪಿಗಾಗಿ' ಜಾಟ್ ಜಾತಿಯ ರೋಶನಿ ನೇಣಿಗೆ ಎರವಾಗಬೇಕಾಯಿತು.

ಮಥುರಾ ಜಿಲ್ಲಾ ಪೊಲೀಸ್ ಅಧಿಕಾರಿ ಎ.ಕೆ. ಗುಪ್ತ ಹೇಳುವಂತೆ ಈ ಗ್ರಾಮದಲ್ಲಿ ಇದಕ್ಕೂ ಹಿಂದೆ ಕೋಮು ಘರ್ಷಣೆಗಳ ದಾಖಲೆಯಿಲ್ಲ. ಆದರೆ, ಈ ದಾರುಣ ಹತ್ಯೆಯ ನಂತರ ಜಾಟವ್ ಹರಿಜನ ಜಾತಿಗೆ ಸೇರಿದ ಅಮೀನ್‌ಚಂದ್ ಗ್ರಾಮ ಪಂಚಾಯಿತಿಯ ಮೂವತ್ತೇಳು ಮಂದಿ ಜಾಟ್ ಮೇಲ್ಜಾತಿಗೆ ಸೇರಿದ್ದ ಸದಸ್ಯರ ವಿರುದ್ಧ ಪೊಲೀಸರಿಗೆ ಮಾಹಿತಿಯ ಸಲ್ಲಿಸಿದ್ದು ಇಡೀ ಮೆಹರಾನ ಗ್ರಾಮ ಕೋಮು ದ್ವೇಷದ ದಳ್ಳುರಿಯಲ್ಲಿ ಕುದಿಯಲು ಕೆರೆದೊಗೆದ ಕಡ್ಡಿಯಾಯಿತು.

ವರ್ಷವೊಂದರ ಹಿಂದೆ.. ಹರಿಜನ ಯುವಕ ಬ್ರಿಜೇಂದ್ರ, ಜಮೀನ್ದಾರ ಗಂಗಾರಾಮನ ಹೊಲದಲ್ಲಿ ಕೂಲಿಯಾಗಿ ಕೆಲಸ ಮಾಡುತ್ತಿದ್ದ. ಗಂಗಾರಾಮನ ಮಗಳು ರೋಶನಿ ಸದಾ ಹೊಲಗೆಲಸದಲ್ಲಿ ತೊಡಗಿರುತ್ತಿದ್ದಳು. ಹದಿಹರೆಯದ ಹೃದಯಗಳು ಒಂದಾಗಲು ತಡವಾಗಲಿಲ್ಲ.

ಈ ನಡುವೆ ಸಮೀಪದ ಗ್ರಾಮದ ಶ್ರೀಮಂತ ಜಮೀನ್ದಾರನ ಮಗನೊಂದಿಗೆ ಮಗಳ ವಿವಾಹದ ಮಾತುಕತೆ ಮುಗಿಸಿದ್ದ ಗಂಗಾರಾಮ. ರೋಶನಿಗೆ ಈ ಸಂಬಂಧ ಇಷ್ಟವಾಗಲಿಲ್ಲ. ಪ್ರೇಮಿಗಳಿಬ್ಬರೂ ರಹಸ್ಯವಾಗಿ ಸಮಾಲೋಚಿಸಿ ಊರು ಬಿಟ್ಟು ಓಡಿಹೋಗಲು ನಿರ್ಧರಿಸಿದರು. ರಾಮಕಿಶನ ಇವರಿಬ್ಬರ ಪಲಾಯನಕ್ಕೆ ನೆರವಾದ. ಅದು ನಡೆದದ್ದು ಮಾರ್ಚ್ 21ರಂದು.

ಮಗಳು ತನ್ನ ಕೈಗೆ ಸಿಕ್ಕಿದರೆ ಬದುಕಿನಲ್ಲೇ ಮರೆಯಲಾರದಂಥ ಪಾಠ ಕಲಿಸುವೆನೆಂದು ಗಂಗಾರಾಮ ಊರಿನ ಜನರ ಮುಂದೆ ಶಪಥ ಮಾಡಿದ. ಪಕ್ಕದ ಊರಿನ ಜಮೀನ್ದಾರನ ಮಗನೊಂದಿಗೆ ಮಾಡಿಕೊಂಡಿದ್ದ ಮಗಳ ವಿವಾಹ ಒಪ್ಪಂದ ಮುರಿದು ಬಿದ್ದುದರಿಂದ ಅವಮಾನಿತನಾದ ಗಂಗಾರಾಮ ಒಳಗೊಳಗೇ ಕುದಿಯತೊಡಗಿದ.

ಮಾರ್ಚ್ 25. ಊರಿನ ಜಾಟ್ ಪ್ರಮುಖ ಮಂಗ್ರುರಾಮ್ ಪಹಿಲ್‌ವಾನ್ ತನ್ನ ತಾಯಿಯ ಅಪರಕ್ರಿಯೆಗಳ ಅಂಗವಾಗಿ ಮನೆಯಲ್ಲಿ ಏರ್ಪಡಿಸಿದ್ದ ಸಮಾರಂಭಕ್ಕೆ ಸುತ್ತಮುತ್ತಲ ಹದಿನೇಳು ಗ್ರಾಮಗಳಿಂದ ನೂರಾರು ಟ್ರ್ಯಾಕ್ಟರ್‌ಗಳಲ್ಲಿ ಜಾಟ್ ಜಾತಿ ಬಾಂಧವರು ಮೆಹರಾನಕ್ಕೆ ಆಗಮಿಸಿದ್ದರು. ಅದೇ ದಿನ, ಓಡಿಹೋಗಿದ್ದ ಪ್ರೇಮಿಗಳು ಏನು ಕಾರಣವೋ ಯಾರಿಗೂ ಕಾಣದಂತೆ ಊರಿಗೆ ಬಂದು ತಮ್ಮ ತಮ್ಮ ಮನೆಗಳನ್ನು ಸೇರಿಕೊಂಡರು. ನೆರೆಯ ಗ್ರಾಮಗಳ ಜಾತಿಬಾಂಧವರ ಮುಂದೆ ಊರಿನ ಕುಲಮರ್ಯಾದೆಯ ಪ್ರಶ್ನೆ ಚರ್ಚೆಗೆ ಗ್ರಾಸವಾಗದಿರಲೆಂದು ಗಂಗಾ


ರಾಮ ಮತ್ತು ಊರಿನ ಪ್ರಮುಖರು ಈ ಸುದ್ದಿಯನ್ನು ಆ ದಿನ ಎತ್ತಲಿಲ್ಲ.

ಮಾರನೆಯ ದಿನ ಸಂಜೆಯ ಹೊತ್ತಿಗೆ ಜಾಟ್ ಅತಿಥಿಗಳೆಲ್ಲಾ ತಂತಮ್ಮ ಊರಹಾದಿ ಹಿಡಿದ ಮೇಲೆ ಮಂಗ್ಟು ರಾಮ್ ಪಹಿಲ್‌ವಾನನ ಮನೆಯಲ್ಲಿ ಮೆಹರಾನ ಗ್ರಾಮದ ಜಾಟ್ ಪ್ರಮುಖರೆಲ್ಲಾ ಸಭೆ ಸೇರಿದರು. ಗ್ರಾಮ ಪಂಚಾಯತಿಯ ಪ್ರಧಾನ ನವಲ್‌ಸಿಂಗನೂ ಸಭೆಯಲ್ಲಿ ಉಪಸ್ಥಿತನಿದ್ದ.

ಇನ್ನೆಂದೂ ಗ್ರಾಮದ ಯಾವ ಜಾಟವನೇ ಆಗಲಿ ತನ್ನ ಜಾತಿಯ ಸೀಮಾರೇಖೆಯನ್ನು ಉಲ್ಲಂಘಿಸದಂಥ ಕಠಿಣ ಶಿಕ್ಷೆಯನ್ನು ಅಪರಾಧಿಗಳಿಗೆ ನೀಡಬೇಕೆಂದು ಸಭೆಯಲ್ಲಿ ತೀರ್ಮಾನಿಸಲಾಯಿತು. ರಾತ್ರಿ ಹತ್ತುಗಂಟೆಯ ಸಮಯ. ಬ್ರಿಜೇಂದ್ರ ಮತ್ತು ರಾಮಕಿಶನ ತಮ್ಮ ಕುಟುಂಬದ ಸದಸ್ಯರೊಂದಿಗೆ ಜಾಟರ ಸಭೆಯ ಮುಂದೆ ಹಾಜರಾಗುವಂತೆ ಕರೆ ಕಳುಹಿಸಲಾಯಿತು. ತಂದೆ ತಾಯಿ ಸಹಿತ ಸಭೆಗೆ ಬರಲು ರೋಶನಿಗೂ ಕರೆ ಹೋಯಿತು.

ಸಭೆಯಲ್ಲಿ ಜಾಟ್ ಪ್ರಮುಖರ ನಿರೀಕ್ಷೆಯನ್ನು ರೋಶನಿ ಸುಳ್ಳಾಗಿಸಿದಳು. ಬ್ರಿಜೇಂದ್ರನೊಂದಿಗೆ ಓಡಿಹೋದದ್ದಕ್ಕೆ ಆಕೆ ಪಶ್ಚಾತ್ತಾಪವನ್ನೇನೂ ವ್ಯಕ್ತಪಡಿಸಲಿಲ್ಲ. ಅವರೆಲ್ಲರ ಮುಖಕ್ಕೆ ಹೊಡೆದಂತೆ ಅವಳು ಧೈರ್ಯದಿಂದ ತಾನು ಬ್ರಿಜೇಂದ್ರನೊಂದಿಗೇ ಇರುವುದಾಗಿ ಹೇಳಿದಳು. ಇದು ಜಾಟರ ಜಾತ್ಯಭಿಮಾನಕ್ಕೆ ಪೆಟ್ಟು ಕೊಟ್ಟಂತಾಯಿತು.

ಬ್ರಿಜೇಂದ್ರನೂ ತಪ್ಪು ಒಪ್ಪಿಕೊಳ್ಳಲು ನಿರಾಕರಿಸಿದ. ತಾನು ರೋಶನಿಯನ್ನೇ ಮದುವೆಯಾಗುವದಾಗಿ ಖಡಾಖಂಡಿತವಾಗಿ ಹೇಳಿದ. ಜಾಟವ್ ಹರಿಜನ ಯುವಕನ ಈ ಉದ್ಧಟತನವನ್ನು ಜಾಟರು ಹೇಗೆ ತಾನೇ ಸಹಿಸಿಯಾರು! ಶತಮಾನಗಳಿಂದ ಅನೂಚಾನವಾಗಿ ಪಾಲಿಸಿಕೊಂಡು ಬಂದಿದ್ದ ಜಾತಿ ಪದ್ಧತಿಯ ನೀತಿ ನಿಯಮಗಳನ್ನು ಒಂದೇ ಸಲಕ್ಕೆ ತೊಡೆದು ಹಾಕಲು ನಿಂತ ದೈತ್ಯನಂತೆ ಅವರಿಗೆ ಕಂಡ ಬ್ರಿಜೇಂದ್ರ. ಆದರೆ, ಬ್ರಿಜೇಂದ್ರನ ಮುದಿ ತಂದೆ ತನ್ನ ಕೊನೆಗಾಲದ ಆಸರೆಯಂತಿದ್ದ ಮಗನಿಗೆ ಒದಗಲಿರುವ ಅವಸ್ಥೆಯನ್ನು ತಪ್ಪಿಸಲು, ಪ್ರಧಾನನ ಕಾಲಿಗೆ ಬಿದ್ದು ಕ್ಷಮೆ ನೀಡುವಂತೆ ಪರಿಪರಿಯಾಗಿ ಬೇಡಿಕೊಂಡ. ಅಲ್ಲಿದ್ದವರ ಮನ ಕರಗಲಿಲ್ಲ. ಜಾಟ್ ಪ್ರಮುಖರು ಜಾಟವರಿಗೆ ಮರ



ಯಲಾರದಂಥ ದಂಡನೆಯನ್ನು ವಿಧಿಸಲು ನಿರ್ಧರಿಸಿಬಿಟ್ಟಿದ್ದರಲ್ಲ. ರೋಶನಿಯನ್ನು ಅವಳ ತಂದೆಯೊಂದಿಗೆ ಮನೆಗೆ ಕಳುಹಿಸಿ, ಬ್ರಿಜೇಂದ್ರ ಮತ್ತು ರಾಮಕಿಶನರ ಕುಟುಂಬಗಳನ್ನು ಅಲ್ಲಿಯೇ ಇರುವಂತೆ ಹೇಳಲಾಯಿತು.

ಅನಂತರ ಪ್ರಾರಂಭವಾಯಿತು ಕ್ರೂರದಂಡನೆಯ ನಗ್ನ ನೃತ್ಯ. ಆ ರಾತ್ರಿ ಮಂಗ್ರುರಾಮ್ ಪಹಿಲ್‌ವಾನನ ನಿರ್ದೇಶನದಲ್ಲಿ ಐವರು ಜಾಟರು ಈ ಇಬ್ಬರು ಯುವಕರನ್ನು ಹಲವಾರು ಗಂಟೆಗಳ ಕಾಲ ಚಿತ್ರಹಿಂಸೆಗೆ ಗುರಿಪಡಿಸಿದರು. ಐದೂ ಮಂದಿ ಒಟ್ಟಾಗಿ ಒಂದೊಂದು ದಿಕ್ಕಿನಿಂದ ಚೆಂಡನ್ನು ಒದೆಯುವಂತೆ ನೆಲದ ಮೇಲೆ ಉರುಳಾಡುತ್ತಿದ್ದ ಇಬ್ಬರನ್ನೂ ಒದೆಯುತ್ತಾ ದೊಣ್ಣೆಯಿಂದ ಬಡಿಯತೊಡಗಿದರು. ಇಬ್ಬರ ಬಟ್ಟೆಗಳನ್ನು ಕಳಚಿ ಬತ್ತಲು ಮಾಡಿದರು. ಕಾಲುಗಳಿಗೆ ಹಗ್ಗಕಟ್ಟಿ ತಲೆ ಕೆಳಗಾಗಿಸಿ ಮಾಡಿನ ಜಂತಿಗೆ ನೇತಾಕಿದರು. ದೊಣ್ಣೆಯಿಂದ ಅವರ ತಿಕ-ತೊಡೆಗಳ ಮೇಲೆ ಹೊಡೆಯತೊಡಗಿದರು. ಆ ಇಬ್ಬರು ಮುಗ್ಧ ಯುವಕರು ನೋವಿನಿಂದ ಚೀರುತ್ತಿದ್ದರೆ ಜಾಟ್ ಪ್ರಮುಖರು ಭಂಗಿ ಸೇದುತ್ತಾ ಕುಳಿತು ಆನಂದಿಸುತ್ತಿದ್ದರು.

ಈಗ ಹಿಂಸೆಯ ವಿಧಾನ ಬದಲಾಯಿತು. ಉರಿಯುವ ದೊಂದಿಯನ್ನು ತಲೆಕೆಳಗಾಗಿ ನೇತಾಡುತ್ತಿದ್ದ ಬ್ರಿಜೇಂದ್ರ ಮತ್ತು ರಾಮಕಿಶನರ ಬಾಯಿಗೆ ಒಬ್ಬ ತುರುಕಿದ. ಅವರ ತುಟಿಗಳು ಬೆಂದು ಅಲ್ಲೆಲ್ಲಾ ಸುಟ್ಟ ಮಾಂಸದ ವಾಸನೆ ಹರಡಿತು. ಯುವಕರಿಬ್ಬರೂ ಮರಣಾಂತಿಕ ವೇದನೆಯಿಂದ ಕಿರುಚಿಕೊಂಡರು. ಉರಿಯುವ ದೊಂದಿಯೀಗ ಅವರ ಜನನೇಂದ್ರಿಯಗಳನ್ನು ಸುಟ್ಟಿತು. ಯುವಕರು ಜ್ಞಾನ ತಪ್ಪುವವರೆಗೂ ಈ ಬರ್ಬರ ಕ್ರೀಡೆ ನಿರಂತರವಾಗಿ ಸಾಗಿತು. ಇಷ್ಟಾದರೂ ಜಾಟ್ ಪ್ರಮುಖರ ರೋಷ ತಣಿಯಲಿಲ್ಲ.

ಮಾರ್ಚ್ 27ರ ಬೆಳಗಿನ ಜಾವ. ಅರೆ ಪ್ರಜ್ಞಾವಸ್ಥೆಯಲ್ಲಿದ್ದ ಯುವಕರಿಬ್ಬರನ್ನು ಗ್ರಾಮದ ಚಾವಡಿಗೆ ಎಳೆದುಕೊಂಡು ಬಂದರು. ತಮ್ಮ ಪಾಶವೀಕೃತ್ಯವನ್ನು ಕಾನೂನುರೀತ್ಯ ಕ್ರಮಬದ್ಧಗೊಳಿಸುವ ಸಲುವಾಗಿ ಗ್ರಾಮ ಪಂಚಾಯತಿಯ ಸಭೆಯನ್ನು ತುರ್ತಾಗಿ ಕರೆಯಲಾಯಿತು. ಪಂಚಾಯತಿಯ ತೀರ್ಪಿಗೆ ಜಾಟವ ಹರಿಜನರನ್ನೊಳಗೊಂಡು ಗ್ರಾಮದ ಜನರೆಲ್ಲ ಬದ್ಧರಾಗಿರುವಂತೆ ಮಾಡುವುದೇ ಸಭೆ ಕರೆದ ಉದ್ದೇಶ. ಪಂಚಾಯತಿಯ ನಾಲ್ಕು ಜನ ಜಾಟವ್ ಹರಿಜನ ಸದಸ್ಯರನ್ನು ಬಲವಂತವಾಗಿ ಅವರ ಮನೆಗಳಿಂದ ಎಳೆದುತಂದು ಜಾಟ್ ಸದಸ್ಯರೇ ಬಹುಸಂಖ್ಯಾತರಾಗಿದ್ದ ಆ ಸಭೆಯಲ್ಲಿ ಭಾಗವಹಿಸುವಂತೆ ಮಾಡಲಾಯಿತು.

ಅಂತಿಮವಾಗಿ ''ಮೂವರು ಅಪರಾಧಿಗಳನ್ನು ಅವರವರ ಅಪ್ಪಂದಿರೇ ನೇಣುಹಾಕಿ ಕೊಲ್ಲಬೇಕು'' ಎಂದು ತೀರ್ಪು ನೀಡಲಾಯಿತು. ಜಾಟವ್ ಹರಿಜನ ಸದಸ್ಯರು ತೀರ್ಪಿನ ವಿರುದ್ಧ ದನಿ ಎತ್ತದಂತೆ ವ್ಯವಸ್ಥೆಯಿತ್ತು. ಈ ಏಕಪಕ್ಷೀಯ ತೀರ್ಪನ್ನು ಪ್ರತಿಭಟಿಸಿದ ಜಾಟವ್ ವೃದ್ಧ ಪರ್ಮಿಯನ್ನು ಎಚ್ಚರದಪ್ಪುವಂತೆ ಹೊಡೆದು ಎಳೆದೊಗೆದರು 'ನಿಷ್ಠಾವಂತರು'.

ನೇಣಿನ ಕುಣಿಕೆಯನ್ನು ಬಿಗಿಯಾಗಿ ಎಳೆದ ಕೂಡಲೆ ಮೊದಲೇ ಅರೆಜೀವವಾಗಿದ್ದ ರಾಮಕಿಶನ್ ಪ್ರಾಣಬಿಟ್ಟ. ಪ್ರೇಮಿಗಳಿಬ್ಬರೂ ಯಾತನೆ ಪಡುತ್ತಾ ಒದ್ದಾಡಿ ಸಾವನ್ನಪ್ಪಿದರು. ನೆರೆದಿದ್ದ ಜನ ಮೂರೂ ಶವಗಳನ್ನು ಪಕ್ಕದಲ್ಲೇ ಇದ್ದ ರುದ್ರಭೂಮಿಗೆ ಎಳೆದುಕೊಂಡುಹೋಗಿ ಅವಸರದಲ್ಲಿ ಬೆಂಕಿ ಇಟ್ಟು ಸುಟ್ಟರು.

ಈ ಹತ್ಯಾಕಾಂಡದಿಂದ ಜಾಟವ್ ಹರಿಜನರು ಎಷ್ಟು ಭಯಗೊಂಡಿದ್ದರೆಂದರೆ ಇಪ್ಪತ್ತು ಕಿಲೋಮೀಟರ್ ದೂರದಲ್ಲಿದ್ದ ಬರ್ನಾನ ಪೊಲೀಸ್ ಠಾಣೆಗೆ ಹೋಗಿ ಈ ಕೊಲೆಯ ಬಗ್ಗೆ ಯಾರೂ ದೂರು ಕೊಡುವ ಸಾಹಸ ಮಾಡಲಿಲ್ಲ. ಈ ಹೀನಕೃತ್ಯಕ್ಕೆ ಸಾಕ್ಷಿಯಾಗಿದ್ದ ಬೇರೆ ಗ್ರಾಮದ ಹಾದಿ ಹೋಕನೊಬ್ಬ ಮರಣದಂಡನೆಯ ಬಗ್ಗೆ ಪೊಲೀಸರಿಗೆ ಸುದ್ದಿ ಮುಟ್ಟಿಸಿದ. ಕಾರ್ಯ ಪ್ರವೃತ್ತರಾದ ಪೊಲೀಸರು ರೋಶನಿಯ ತಂದೆ ಗಂಗಾರಾಮ ಅವಳ ಅಣ್ಣ ಪಪ್ಪುವನ್ನೊಳಗೊಂಡಂತೆ ಹದಿನೈದು ಮಂದಿ ಜಾಟರನ್ನು ಬಂಧಿಸಿ

ದರು. ಬಂಧಿತ ಆರೋಪಿಗಳಲ್ಲಿ ಪ್ರಮುಖನಾದ ಮಂಗ್ಯು ರಾಮ್ ಪಹಿಲ್‌ವಾನನನ್ನು ಜಾಮೀನಿನ ಮೇಲೆ ಬಿಡುಗಡೆ ಮಾಡಿಸಲು ಮಾಜಿ ಲೋಕಸಭಾ ಸದಸ್ಯ ಮನವೇಂದ್ರಸಿಂಗ್ ಸ್ಥಳೀಯ ಪೊಲೀಸರ ಮೇಲೆ ತಂದ ಒತ್ತಡ ಫಲಕಾರಿಯಾಗಲಿಲ್ಲ.

ಈ ಪ್ರಕರಣ ನಡೆದ ವಾರದ ನಂತರ ರೋಶನಿಯ ತಾಯಿ ವಾಸನಾದೇವಿಯನ್ನು ವರದಿಗಾರನೊಬ್ಬ ಈ ರೀತಿ ಪ್ರಶ್ನಿಸಿದ: " ನಿಮ್ಮ ಮಗಳನ್ನು ನೇಣುಗಟ್ಟಿ ಕೊಲ್ಲುವ ಬದಲು ಅವಳು ಬಯಸಿದವನೊಂದಿಗೆ ಬದುಕಲು ಬಿಟ್ಟಿದ್ದರೆ ಒಳಿತಾಗುತ್ತಿತ್ತಲ್ಲವೆ?"

ವಾಸನಾದೇವಿ ಇದ್ದಕ್ಕಿದ್ದಂತೆ ಆವೇಶದಿಂದ ಕಂಪಿಸುವ ದನಿಯಲ್ಲಿ ಹೇಳಿದಳಂತೆ: " ಜಾಟರ ಹುಡುಗಿಗೆ ಜಾಟವ್ ಹರಿಜನ ಹುಡುಗನೊಂದಿಗೆ ಮದುವೆಯೆ! ಪಟ್ಟಣಗಳಲ್ಲಿ ಮಾತ್ರ ಇದು ನಡೆಯಬಹುದೇನೋ. ಇಲ್ಲಿ ಜಮೀನ್ದಾರರು ಜಮೀನ್ದಾರರೊಂದಿಗೆ ಮಾತ್ರ ಸಂಬಂಧ ಬೆಳೆಸುತ್ತಾರೆ. ಪ್ರಾಣಕ್ಕಿಂತ ನಮಗೆ ಕುಲಮರ್ಯಾದೆ ಮುಖ್ಯ."

"ರೋಶನಿಯನ್ನು ನೇಣು ಹಾಕಿಕೊಲ್ಲುವ ಪಂಚಾಯತಿಯ ತೀರ್ಪಿನ ಬಗ್ಗೆ ನಿಮ್ಮ ಅಭಿಪ್ರಾಯ?"

"ಹಳ್ಳಿಯಲ್ಲಿ ಎಲ್ಲಾ ದೂರುಗಳನ್ನು ಪಂಚಾಯತಿ ಮಾತ್ರ ಇತ್ಯರ್ಥ ಮಾಡುತ್ತದೆ. ಪಂಚಾಯತಿಯ ತೀರ್ಪಿಗೆ ಎಲ್ಲರೂ ಬದ್ಧರಾಗಿರಲೇಬೇಕು. ನನ್ನ ಮಗಳಾದರೇನು? ಯಾರಾದರೇನು?"

ಜಾತಿ ಪ್ರತಿಷ್ಠೆಯ ರಕ್ಷಣೆಗಾಗಿ ಮಾನವತ್ವವನ್ನೇ ಮರೆತು ಈ ಹತ್ಯಾಕಾಂಡದಲ್ಲಿ ಭಾಗಿಗಳಾದ ಅಪರಾಧಿಗಳನ್ನು ಕಾನೂನು ಈಗ ತನ್ನ ತೆಕ್ಕೆಗೆ ತೆಗೆದುಕೊಂಡಿದೆ. ಅವರ ಅಪರಾಧಕ್ಕೆ ತಕ್ಕ ಶಿಕ್ಷೆಯೂ ಆಗಬಹುದು. ಆದರೆ ಮೆಹರಾನ ಗ್ರಾಮದಲ್ಲಿ ಜಾಟವ್ ಹರಿಜನರು ಗ್ರಾಮದ ಮೇಲ್ಜಾತಿಯ ಜಾಟರೊಂದಿಗೆ ಎಂದಾದರೂ ಸಹಬಾಳ್ವೆ ನಡೆಸಲು ಸಾಧ್ಯವಾಗುವ ಕಾಲ ಬಂದೀತೆ? ●

(ಆಧಾರ)

ಸುಳ್ಳಿನ ಸ್ಪರ್ಧೆ

ಒಮ್ಮೆ ಒಂದು ರೈಲ್ವೆ ಬೋಗಿಯಲ್ಲಿ ಒಬ್ಬ ಅಮೇರಿಕನ್, ಒಬ್ಬ ರಷ್ಯನ್, ಒಬ್ಬ ಜಪಾನಿ ಹಾಗೂ ಒಬ್ಬ ಭಾರತೀಯ ಪ್ರಯಾಣ ಮಾಡುತ್ತಿದ್ದರು. ಟೈಂಪಾಸ್ ಮಾಡುವ ಸಲುವಾಗಿ ಜಪಾನೀಯ "ಯಾರು ಒಂದು ಅತ್ಯುತ್ತಮವಾದ ಸುಳ್ಳನ್ನು ಹೇಳುತ್ತಾರೋ ಅವರಿಗೆ ಆಕರ್ಷಕ ಬಹುಮಾನ" ಎಂದು ಘೋಷಿಸಿದ.


"ನಮ್ಮ ದೇಶದಲ್ಲಿ ಒಂದು ಕೋಳಿ ಹುಂಜ ನೂರು ಕೆ.ಜಿ. ತೂಕವಿರುತ್ತವೆ!" ಎಂದ ಅಮೆರಿಕನ್.

"ನಮ್ಮ ದೇಶದಲ್ಲಿ ಕೋಳಿ ಹುಂಜ ಇಡುವ ಮೊಟ್ಟೆ ತೂಕ ನೂರು ಕೆ.ಜಿ. ಇರುತ್ತವೆ!!" ಎಂದ ರಷ್ಯನ್.

ಶಾಂತನಾಗಿ ಕೇಳುತ್ತಿದ್ದ ಭಾರತೀಯ ಜಪಾನ್‌ನವನಿಗೆ ಹೇಳಿದ - "ಸ್ವಾಮಿ!... ಇವರಿಬ್ಬರೂ ಹೇಳುವುದನ್ನು ನಾನು ನಂಬುತ್ತೇನೆ!!!"

ವಿಸ್ಮಿತನಾದ ಆ ಜಪಾನಿ "ಇದಕ್ಕಿಂತ ಅತ್ಯುತ್ತಮ ಸುಳ್ಳು ಬೇರೊಂದಿರಲಾರದು" ಎಂದು ನಿಶ್ಚಯಿಸಿ ಭಾರತೀಯನಿಗೇ ಬಹುಮಾನವನ್ನು ನೀಡಿದ.

ಸಂಗ್ರಹ: ಜಿ.ವಿ. ಪ್ರಭು



ದೂರದರ್ಶನದ ಕಾರ್ಯಕ್ರಮಗಳ ಬಗ್ಗೆ ಅಪಸ್ವರವಿರಬಹುದು. ಆದರೆ ಈ ಪುಟ್ಟ ಪೆಟ್ಟಿಗೆ ಆಧುನಿಕ ಬದುಕಿನ ವಿನ್ಯಾಸವನ್ನೇ ಬದಲಿಸಿದ್ದನ್ನಂತೂ ಒಪ್ಪಲೇಬೇಕು. ಇದನ್ನು ಸಾಧ್ಯವಾಗಿಸಿದವನ ಪರಿಚಯ ಎಷ್ಟು ಜನರಿಗಿದೆ?

● *ತಿಂಗಳೇಶ*

ಫಿಲೋ ಫಾರ್ನ್ಸ್‌ವರ್ಥ್: ದೂರವೇ ಉಳಿದ ದೂರದರ್ಶನದ ರೂವಾರಿ

ದೂರವಾಣಿಯನ್ನು ಗ್ರಹಾಂ ಬೆಲ್‌ನೂ, ವಿದ್ಯುತ್ ದೀಪವನ್ನು ಥಾಮಸ್ ಎಡಿಸನ್‌ನೂ ಕಂಡು ಹಿಡಿದರೆಂಬ ಸಂಗತಿ ಪ್ರಾಥಮಿಕ ತರಗತಿಯ ಮಕ್ಕಳಿಗೂ ಗೊತ್ತಿರುತ್ತದೆ. ಆದರೆ ಆಧುನಿಕ ಬದುಕಿನ ವಿನ್ಯಾಸವನ್ನೇ ಬದಲಿಸಿದ ಟಿ.ವಿ.ಯ ಆವಿಷ್ಕಾರದ ಹಾದಿಯನ್ನು ಬಿಚ್ಚಿಟ್ಟವನ ಹೆಸರು ಅಗತ್ಯದಷ್ಟು ಪ್ರಚಾರಕ್ಕೆ ಬರಲಿಲ್ಲ.

ಈತ ಫಿಲೋ ಫಾರ್ನ್ಸ್‌ವರ್ಥ್.

ಅಮೆರಿಕೆಯ ದಕ್ಷಿಣ ಉತಾಹ್‌ನಲ್ಲಿ ಜನಿಸಿದ ಫಾರ್ನ್ಸ್‌ವರ್ಥ್‌ನಿಗೆ ದೂರದರ್ಶನದ ಹೊಳಹು ಸಿಕ್ಕಿದ್ದು 1922ರಲ್ಲಿ. ಆಗಿನ್ನೂ ಕೆಲವು ಪ್ರತಿಭಾನ್ವಿತ ಮಿದುಳುಗಳು ವಾಯು ಮಾಧ್ಯಮದ ಮೂಲಕ ಚಿತ್ರಗಳನ್ನು ರವಾನಿಸುವ ಪ್ರಯೋಗಗಳನ್ನು ನಡೆಸುತ್ತಿದ್ದವು. ಈ ಪ್ರಯೋಗಗಳೆಲ್ಲ ಈಗಿನ ಇಲೆಕ್ಟ್ರಾನ್ ವಿಧಾನಕ್ಕಿಂತ ಸಿನಿಮಾ ತಂತ್ರಜ್ಞಾನಕ್ಕೆ ಹೆಚ್ಚು ಹೋಲುತ್ತಿದ್ದವು. ಆದರೆ ಫಿಲೋನ ಮಿದುಳ ಪದರಿನಲ್ಲಿ ಮಾತ್ರ ದೂರದರ್ಶನ ಆವಿಷ್ಕಾರದ ಬೀಜ ಆಗಲೇ ಮೊಳೆಯತೊಡಗಿತ್ತು.

ಶಾಲಾವಯಸ್ಸಿಗೆ ಪೂರ್ವದಲ್ಲೇ ಓದುವುದನ್ನು ಕಲಿತಿದ್ದ ಈ ಜಾಣ ಬಾಲ್ಯದಲ್ಲೇ ಅನೇಕ ಯಂತ್ರಗಳನ್ನು ನಿರ್ಮಿಸಿ 'ಬೆಳೆಯುವ ಸಿರಿ'ಯ ಸುಳಿವು ನೀಡಿದ್ದ. ತನ್ನ ತಾಯಿಯ ಬಳಿಯಿದ್ದ ಕೈಯಿಂದ ಒಗೆಯುವ ಯಂತ್ರವನ್ನು ಸ್ವಯಂಚಾಲಿತಗೊಳಿಸಿದಾಗ ಫಿಲೋಗೆ ಕೇವಲ ಹನ್ನೊಂದು ವರ್ಷ! ವಾಹನಕ್ಕೆ ಜೋಡಿಸುವ ಬೀಗವನ್ನು ವಿನ್ಯಾಸಗೊಳಿಸುವ ಸ್ಪರ್ಧೆಯಲ್ಲಿ

ಫಿಲೋಗೆ ಇಪ್ಪತ್ತೈದು ಡಾಲರ್ ಬಹುಮಾನ ಸಹ ಬಂದಿತ್ತು. ಒಮ್ಮೆಯಂತೂ ಈತ ಮನೆಯೊಳಗೆ ಜಂಗು ತಿನ್ನುತ್ತ ಮೂಲೆಗೆ ಸೇರಿದ್ದ ವಿದ್ಯುತ್ ಜನಕವನ್ನು ಪುನಶ್ಚೇತನಗೊಳಿಸಿ ಸಂಬಂಧಿಕರ ವಲಯದಲ್ಲಿ ಬೆರಗು ಹುಟ್ಟಿಸಿದ್ದ.

ನೂರಾರು ಸಂಕೀರ್ಣ ರಚನೆ ಹಾಗೂ ಸೂತ್ರಗಳನ್ನು ಗ್ರಹಿಸುವ, ನೆನಪಿಟ್ಟುಕೊಳ್ಳುವ ಫಿಲೋನ ಸಾಮರ್ಥ್ಯ ಆತನ ಬೆಳವಣಿಗೆಯೊಂದಿಗೆ ವಿಕಾಸಗೊಳ್ಳುತ್ತಲೇ ಸಾಗಿತು. ತಂತ್ರಜ್ಞಾನಕ್ಕೆ ಸಂಬಂಧಿಸಿದ ನಿಯತಕಾಲಿಕಗಳು ಮತ್ತು ಪುಸ್ತಕಗಳನ್ನು ಆತ ಸಂಪೂರ್ಣ ಅರ್ಥದಲ್ಲಿ ಅರೆದು ಕುಡಿದ. ಅರಗಿದ ಜ್ಞಾನ ಸಹಜ ಪ್ರತಿಭೆಯೊಂದಿಗೆ ಮಿಳಿತಗೊಂಡು ತೀಕ್ಷ್ಣ ಸ್ವರೂಪದಲ್ಲಿ ಹೊರಹೊಮ್ಮತೊಡಗಿತು. ಪ್ರೌಢಶಾಲೆಗೆ ಕಾಲಿರಿಸುವಷ್ಟರಲ್ಲಿ ಚಿತ್ರಗಳನ್ನು ಸಂವಹನಗೊಳಿಸುವ ಬಗ್ಗೆ ಫಿಲೋಗೆ ಮನವರಿಕೆಯಾಗಿತ್ತು.

ಒಮ್ಮೆ ಫಿಲೋ ತನ್ನ ಸಹಪಾಠಿಗಳಿಗೆ ಐನ್‌ಸ್ಟೆನ್‌ನ ಸಾಪೇಕ್ಷವಾದವನ್ನು ವಿವರಿಸುತ್ತಿದ್ದಾಗ ಶಾಲಾ ಶಿಕ್ಷಕರ ಗಮನ ಸೆಳೆದ. ಅಂದು ಫಿಲೋ ಆರಂಭಿಸಿದ್ದ ಸಾಪೇಕ್ಷವಾದದ ಚರ್ಚೆ ತಾವು ಇದುವರೆಗೆ ಕೇಳಿದ, ಓದಿದ ಎಲ್ಲ ವಿಶ್ಲೇಷಣೆಗಿಂತಲೂ ಅತ್ಯುತ್ತಮವಾಗಿತ್ತೆಂದು ಈ ಶಿಕ್ಷಕರು ಉಲ್ಲೇಖಿಸಿದ್ದಾರೆ. ಕೆಲವೇ ದಿನಗಳ ತರುವಾಯ ಈ ಎಳೆಯ ವಿಜ್ಞಾನಿ ಎಲೆಕ್ಟ್ರಾನಿಕ್ ಟಿ.ವಿ.ಯ ಹೊಳಹನ್ನು ಅರುಹಿದ:

''ಎರಡು ವರ್ಷಗಳಿಂದ ಸತತ ಆಲೋಚಿಸುತ್ತಿರುವ ವಿಷಯವೀಗ ನನಗೆ ಸಂಪೂರ್ಣ ಮನವರಿಕೆಯಾಗಿದೆ. ಎಲೆಕ್ಟ್ರಾನ್‌ಗಳ ಮೂಲಕ ಮಾತ್ರವೇ ಅತಿ ವೇಗದಲ್ಲಿ ಅತಿ ದೂರದವರೆಗೆ ಚಿತ್ರಗಳನ್ನು ರವಾನಿಸಲು ಸಾಧ್ಯ.''

ಆಗಿನ್ನು ಟಿ.ವಿ.ಯ ಕಲ್ಪನೆ ತೀರಾ ಅಮೂರ್ತವೂ ಅಸ್ಪಷ್ಟವೂ ಆದ ಹಂತದಲ್ಲಿ ಇತ್ತು. ಪರಿಭ್ರಮಣ ಚಕ್ರದ (whirling disk) ಸಹಾಯದಿಂದ ಬೆಳಕನ್ನು ಚಿಕ್ಕ ಚಿಕ್ಕ ಬಿಂದುಗಳಾಗಿ ತುಂಡರಿಸಿ ಆಯಕಟ್ಟಿನ ಸ್ಥಳಗಳಲ್ಲಿ ಇರಿಸಿದ ದರ್ಪಣಗಳ ಮೂಲಕ ರವಾನಿಸುವ ಬಗ್ಗೆ ಮಾತ್ರ ಅಂದಿನ ಪ್ರಯೋಗಗಳು ಸೀಮಿತಗೊಂಡಿದ್ದವು. 1934ರಷ್ಟೊತ್ತಿಗೆ ಅಲ್ಪದೂರದವರೆಗೆ ಚಿತ್ರಗಳನ್ನು ರವಾನಿಸುವಲ್ಲಿ ಯಶಸ್ವಿಯಾಗಿದ್ದ ಇಂಗ್ಲೆಂಡಿನ ಜಾನ್ ಬೇರ್ಡ್, ವ್ಲಾದಿಮಿರ್ ಜೋರಿಕಿನ್ ಮುಂತಾದ ವಿಜ್ಞಾನಿಗಳು ಯಾಂತ್ರಿಕ ವಿಧಾನದ ಟಿ.ವಿ. ನಿರ್ಮಿಸಲು ಪ್ರಯತ್ನ ನಡೆಸಿದ್ದರು. ಆದರೆ ಅದುವರೆಗೆ ಬೆಳಕನ್ನು ಎಲೆಕ್ಟ್ರಾನಿಕ್ ಸಂಕೇತಗಳನ್ನಾಗಿ ಪರಿವರ್ತಿಸುವ ಕುರಿತು ಯಾರೂ ಚಿಂತಿಸಿರಲಿಲ್ಲ!

ಸಂವಹನಗೊಳಿಸಬೇಕಾದ ಪ್ರತಿಮೆಯನ್ನು ನಿರ್ವಾತ ಕೊಳವೆಯ ಫೋಟೋ ಎಲೆಕ್ಟ್ರಿಕ್ ಮೇಲ್ಮೈಯಲ್ಲಿ ಮೂಡಿಸುವ ಪ್ರಯತ್ನದತ್ತ ಫಿಲೋ ಶ್ರಮಿಸಿದ. ಅಲ್ಲದೆ ತರಂಗ ರೂಪದ ಬೆಳಕಿನ ಅಲೆಗಳನ್ನು ಅಂಕುಡೊಂಕಾದ ಎಲೆಕ್ಟ್ರಾನಿಕ್ ಮಾದರಿಗೆ (ಒಂದು ಸೆಕೆಂಡಿಗೆ ಇಪ್ಪತ್ತು ಲಕ್ಷ ಸಲ ಓಲಾಡಬಲ್ಲಂತೆ) ಬದಲಾಯಿಸುವ ಬಗ್ಗೆಯೂ ಫಿಲೋ ಚಿಂತಿಸಿದ.

ಫಿಲೋ ಪ್ರೌಢಶಾಲೆಯಿಂದ ಹೊರಬಿದ್ದ ತಕ್ಷಣವೇ ಜಾರ್ಜ್ ಎವರ್‌ಸನ್ ಮತ್ತು ಲೆಸ್ಲಿ ಗೊರೆಲ್ ಎಂಬ ಇಬ್ಬರು ವಾಣಿಜ್ಯೋದ್ಯಮಿಗಳನ್ನು ಭೇಟಿಯಾಗಿ ತನ್ನ ಸಂಶೋಧನೆಗೆ ಹಣ ಒದಗಿಸಲು ಕೇಳಿಕೊಂಡ. ಈ ಧನಿಕರಿಗೋ ಹಲವಾರು ಅನುಮಾನಗಳು. ಅವರೆಲ್ಲ ಸಂಶಯ, ಪ್ರಶ್ನೆಗಳಿಗೆ ಸಾವಧಾನದಿಂದ ಉತ್ತರಿಸಿದ ನಂತರ ಅವರು ಕೊನೆಯ ಪ್ರಶ್ನೆಯೊಂದನ್ನು ಮುಂದಿಟ್ಟರು:

''ಹಾಗಾದರೆ ನಿನ್ನ ಪ್ರಯೋಗಕ್ಕೆ ಎಷ್ಟು ಹಣ ಬೇಕಾಗಬಹುದು?''

''ನಿಖರವಾಗಿ ಹೇಳುವುದು ಕಷ್ಟ. ಆದಾಗ್ಯೂ ಐದು ಸಾವಿರ ಡಾಲರ್ ಸಾಕಾಗಬಹುದು.''

ಅಂತಿಮವಾಗಿ ಇಬ್ಬರೂ ಹಣವಂತರು ಒಂದು 'ಚಾನ್ಸ್' ತೆಗೆದುಕೊಳ್ಳಲು ನಿರ್ಧರಿಸಿದರು. ಮೂವರ ಪಾಲುಗಾರಿಕೆಯಲ್ಲಿ ಮಾತುಗಳು ಕೃತಿಗಿಳಿದವು. ಲಾಸ್ ಎಂಜಲ್ಸ್‌ನಲ್ಲಿ ಮೊದಲ ಪ್ರಯೋಗಾಲಯವನ್ನು ಸ್ಥಾಪಿಸಿದ ಫಾರ್ನ್ಸ್‌ವರ್ಥ್. ಆದರೆ ಮೊದಲು ಅಂದಾಜ

ಸಿದ ಐದು ಸಾವಿರ ಡಾಲರು ಹಣ ಒಂದೆರಡು ಪ್ರಮುಖ ತತ್ವಗಳ ನಿರೂಪಣೆಯಲ್ಲೇ ಕರಗಿ ಹೋಯ್ತು. ಕೆಲವು ತಿಂಗಳ ಕಾಲ ಮೀನ-ಮೇಷ ಎಣಿಸಿದ ಪಾಲುದಾರರು ಅಧಿಕ ಹಣಕಾಸಿನ ಅಗತ್ಯವನ್ನು ಮನಗಂಡು ಕ್ಯಾಲಿಫೋರ್ನಿಯಾದ ಕ್ರಾಕರ್ ನ್ಯಾಷನಲ್ ಬ್ಯಾಂಕನ್ನು ಸಂಪರ್ಕಿಸಿದರು. ಸ್ವತಃ ಫಾರ್ನ್ಸ್‌ವರ್ಥ್‌ನೊಡನೆ ಸುದೀರ್ಘವಾಗಿ ಚರ್ಚಿಸಿದ ಬ್ಯಾಂಕಿನವರು ನೆರವಿನ ಹಸ್ತ ಚಾಚಿದರು.

ಈಗಲೂ ಎಲ್ಲವೂ ಅಂದುಕೊಂಡಂತೆ ನೆರವೇರಲಿಲ್ಲ. ಪೂರ್ವಭಾವಿಯಾಗಿ ಅಂದಾಜುಗಟ್ಟಿದ ಒಂದು ವರ್ಷದ ಅವಧಿ ಹದಿಮೂರು ವರ್ಷಗಳಿಗೂ, ಇಪ್ಪತ್ತೈದು ಸಾವಿರ ಡಾಲರು ಮೊತ್ತ ಹತ್ತು ಲಕ್ಷ ಡಾಲರುಗಳಿಗೂ ಹಿಗ್ಗಿದವು. ಆದರೆ ಯಶಸ್ಸು ಕೈಗೆಟುಕಿತ್ತು.

1927ರ ಸೆಪ್ಟೆಂಬರ್ ಏಳರಂದು ಫಿಲೋ ತನ್ನ ಕೆಲವು ಸಹಾಯಕರೊಂದಿಗೆ ಒಂದು ಕಪ್ಪು ತ್ರಿಕೋಣಾಕೃತಿಯನ್ನು ವಾಯು ಮಾಧ್ಯಮದ ಮೂಲಕ ರವಾನಿಸುವುದರೊಂದಿಗೆ ಆಧುನಿಕ ಯುಗದ ಪ್ರಮುಖ ಆವಿಷ್ಕಾರಕ್ಕೆ ರೂವಾರಿಯೆನಿಸಿದ. ಮೂರು ತಿಂಗಳ ತರುವಾಯ ಡಾಲರ್ ಸಂಕೇತವನ್ನು ಹಣಕಾಸು ಸಂಸ್ಥೆಗೆ ರವಾನಿಸಲೂ ಯಶಸ್ವಿಯಾದ.

1940ರ ವೇಳೆಗೆ ಫಾರ್ನ್ಸ್‌ವರ್ಥ್ 75ಕ್ಕೂ ಮಿಕ್ಕಿ ಸಂಶೋಧನೆಗಳ ಹಕ್ಕು (Patent) ಗಳನ್ನು ತನ್ನವಾಗಿಸಿಕೊಂಡಿದ್ದ. ಈತನ ಆಸಕ್ತಿಯ ಕ್ಷೇತ್ರ ಟಿ.ವಿ. ಸಂಶೋಧನೆಗಷ್ಟೇ ಸೀಮಿತಗೊಂಡಿರಲಿಲ್ಲ. ಫೀಲೋ ಸ್ವಯಂಪರಿಪೂರ್ಣ ಅಂತರಿಕ್ಷ ನಿಲ್ದಾಣ ನಿರ್ಮಿಸುವ ಕನಸು ಕಂಡ. ಕ್ಯಾನ್ಸರ್ ಮತ್ತು ವೈರಸ್ ಶೋಧನೆಯಲ್ಲಿ ಆಸಕ್ತಿ ವಹಿಸಿದ. ಎರಡನೇ ಮಹಾಯುದ್ಧದ ಸಮಯದಲ್ಲಿ ರಾಡಾರ್ ಕುರಿತು ಕೆಲಸ ಮಾಡಿದ. ಇವೆಲ್ಲದರ ನಡುವೆಯೂ ಆತನ ಮಹತ್ವಾಕಾಂಕ್ಷೆ ನೆಟ್ಟಿದ್ದು ನ್ಯೂಕ್ಲಿಯರ್ ಫ್ಯೂಜನ್ (ಪರಮಾಣು ಕೇಂದ್ರಿತ ದ್ರವೀಕರಣ) ಸಂಶೋಧನೆಯ ಮೇಲೆ.

1966, ಜೂನ್ ತಿಂಗಳಲ್ಲಿ ಫಿಲೋ ವಿದ್ಯುತ್ ವಿಸರ್ಜಕ ಸಾಧನದ ಹಕ್ಕನ್ನು ತನ್ನದಾಗಿಸಿಕೊಳ್ಳುವುದರ ಮೂಲಕ ಸಂಶೋಧನಾ ಕ್ಷೇತ್ರದ ಮತ್ತೊಂದು ಮಜಲನ್ನು ಏರಿದ. ಈ ಸಾಧನದ ಮೂಲಕ ಪರಮಾಣುಕೇಂದ್ರಗಳಲ್ಲಿ ಅಂತರ್‌ಕ್ರಿಯೆ ಏರ್ಪಡಿಸಲು ಸಾಧ್ಯವಾಯ್ತು. ಆದರೆ ಈ ಪ್ರಕ್ರಿಯೆಯನ್ನು ಕ್ಷಣಾರ್ಧಕ್ಕಿಂತ ಹೆಚ್ಚು ವೇಳೆ ಮುಂದುವರಿಸಲು ಫಿಲೋನಿಂದ ಸಾಧ್ಯವಾಗಲಿಲ್ಲ. ಅಗಾಧವಾದ ಶಾಖವನ್ನು ಶೇಖರಿಸಲು ಮತ್ತು ವಿತರಿಸಲು ಅಗತ್ಯವಾಗಿದ್ದ ವಸ್ತುಗಳ ಕೊರತೆಯೇ ಆತನ ಬಹು ಮುಖ್ಯ ಸಮಸ್ಯೆಯಾಗಿತ್ತು. ಪ್ರಪಂಚದ ಮಾಲಿನ್ಯ ಸಮಸ್ಯೆಗಳಿಗೆ ಪರಿಹಾರವಾಗಬಲ್ಲ ಸಂಶೋಧನೆಯೆಡೆ ಫಿಲೋ ಲಕ್ಷ್ಯವಹಿಸಿದನಾದರೂ ಅದರ ಯಶಸ್ಸಿನ ಗರಿ ಆತನಿಗೆ ದಕ್ಕಲಿಲ್ಲ.

ಇಪ್ಪತ್ತನೇ ಶತಮಾನದ ವೇಗದ ಬದುಕಿಗೆ ದೂರದರ್ಶನವನ್ನು ಕಾಣಿಕೆಯಿತ್ತ ಫಿಲೋ ಫಾರ್ನ್ಸ್‌ವರ್ಥ್ 1971ರ ಮಾರ್ಚ್ ಹನ್ನೊಂದರಂದು ಇಲ್ಲವಾದ. ಆದರೆ ಆತನ ಹೆಸರಿನೊಂದಿಗೆ ಬೆಸೆದುಕೊಂಡ ಇನ್ನೂರು ಸಂಶೋಧನಾ ಹಕ್ಕುಗಳು ಇಂದಿಗೂ ಜಾರಿಯಲ್ಲಿವೆ. ದೂರದರ್ಶನವಂತೂ ಫಿಲೋನ ಸ್ಮರಣೆಗೆ ನಿತ್ಯ ಜೀವ ಕೊಡುತ್ತದೆ. ●

ಹುಡುಗಿಯ ತಾಯಿ:- ನನ್ನ ಮಗಳು ಚೆನ್ನಾಗಿ ಸಂಗೀತ ಹಾಡುತ್ತಾಳೆ. ಸ್ವರವನ್ನು ಎಷ್ಟು ಎತ್ತರ ಬೇಕಾದರೂ ಎತ್ತಿ ಹಾಡಬಲ್ಲಳು...

ಹುಡುಗನ ತಾಯಿ:- ಬಹಳ ಸಂತೋಷ. ನಮ್ಮ ಮಗನಿಗೂ ಅಷ್ಟೆ. ಜೋರಾಗಿ ಮಾತನಾಡಿದರೆ ಮಾತ್ರ ಕೇಳಿಸೋದು.

● ಟೇಕಲ್ ಗೋಪಾಲಕೃಷ್ಣ

ಒಂದು ಪುಸ್ತಕ

ಸ್ವಾಮಿ ರಾಮ ಅವರ 'ಹಿಮಾಲಯದ ಮಹಾತ್ಮರ ಸನ್ನಿಧಿಯಲ್ಲಿ..'

● ಟಿ.ಪಿ. ಅಶೋಕ

ಸ್ವಾಮಿ ರಾಮ ಅವರ ಆಧ್ಯಾತ್ಮಿಕ ಅನುಭವಗಳ ಸಂಗ್ರಹ ಇಂಗ್ಲಿಷ್ ಭಾಷೆಯಲ್ಲಿ ''ಲಿವಿಂಗ್ ವಿತ್ ದಿ ಹಿಮಾಲಿಯನ್ ಮಾಸ್ಟರ್ಸ್'' ಎಂಬ ಹೆಸರಿನಲ್ಲಿ ಕೆಲವು ವರುಷಗಳ ಹಿಂದೆ ಪ್ರಕಟವಾಯಿತು. ಸ್ವಾಮಿ ರಾಮ ಅವರ ಪ್ರವಚನಗಳಿಂದ, ದಿನಚರಿಗಳಿಂದ, ಶಿಷ್ಯರೊಂದಿಗೆ ಆಡಿದ ಮಾತುಕತೆಗಳಿಂದ ಈ ಪುಸ್ತಕ ಸಿದ್ಧವಾಗಿದೆ. ಹೀಗೊಂದು ಪುಸ್ತಕ ಬರೆಯಲು ಅಥವಾ ಹೊರತರಲು ಸ್ವತಃ ಸ್ವಾಮಿ ರಾಮ ಅವರೇ ಯೋಜನೆಯೊಂದನ್ನು ಹಾಕಿಕೊಂಡದ್ದಲ್ಲ. ಅವರಿಗೆ ಆ ಬಗ್ಗೆ ಅಂಥ ಆಸಕ್ತಿಯೇನೂ ಇರಲಿಲ್ಲ. ಆದರೆ ಇವರ ಅನುಭವಗಳ ಮತ್ತು ವಿಚಾರಗಳನ್ನು ತೀರ ಹತ್ತಿರದಿಂದ ಗಮನಿಸಿ ಅವುಗಳ ಮಹತ್ವ

> **ಆಧ್ಯಾತ್ಮಿಕ ಅನುಭವಗಳನ್ನು ಮೂರ್ತ ದೃಷ್ಟಾಂತಗಳಲ್ಲಿ ಮಂಡಿಸುವಾಗ ಅವು ಸರಳೀಕೃತವಾಗುವ ಅಪಾಯ ಇದ್ದೇ ಇರುತ್ತದೆ.**
>
> **ಇದನ್ನು ಮನಗಂಡೂ ಒಂದು ಜೀವನಕ್ರಮವನ್ನು, ಚಿಂತನಾವಿಧಾನವನ್ನು ಓದುಗರ ಮುಂದೆ ತರುವ ಪ್ರಯತ್ನವನ್ನು ಸ್ವಾಮಿ ರಾಮ ಮಾಡಿದ್ದಾರೆ.**

ವನ್ನು ಅರಿತ ಅವರ ಮಾರ್ಗಾನುಯಾಯಿ ಸ್ವಾಮಿ ಅಜಯರವರು ಅಪಾರ ಶ್ರದ್ಧೆ, ಪ್ರೀತಿಗಳಿಂದ ಈ ಪುಸ್ತಕವನ್ನು ಸಿದ್ಧಗೊಳಿಸಿದ್ದಾರೆ. ಅವರು ಈ ಕೃತಿಯನ್ನು ಒಂದು 'ಕಥನಮಾಲಿಕೆ' ಯೆಂದು ಕರೆದಿದ್ದಾರೆ ಮತ್ತು ಸ್ವಾಮಿ ಅಜಯರವರು ಹಾಗೆ ಕರೆದಿರುವುದು ತೀರಾ ಉಚಿತವಾಗಿದೆ. ಇಂಥ ಅನುಭವ ಮತ್ತು ವಿಚಾರಗಳನ್ನು ಹಂಚಿಕೊಳ್ಳದವರೂ ಇವುಗಳನ್ನು ಕುತೂಹಲದಿಂದ ಓದಿ ತಮ್ಮ ಜಾಯಮಾನಕ್ಕಿಂತ ಭಿನ್ನವಾದ ಜೀವನ ಶೈಲಿಯೊಂದನ್ನೂ, ಗ್ರಹಿಕೆಯ ವಿಧಾನವೊಂದನ್ನೂ ಖಚಿತವಾಗಿ ಗುರುತಿಸಿಕೊಳ್ಳಲು ಸಾಧ್ಯವಿದೆ. ರ್‍ಯಾಶನಲಿಸ್ಟ್ ಎಂದೇ ಪ್ರಸಿದ್ಧರಾಗಿರುವ ಶಿವರಾಮ ಕಾರಂತರು ಈ ಆಧ್ಯಾತ್ಮಿಕ ಅನುಭವ ಪುಸ್ತಕವನ್ನು ತುಂಬಾ ಮೆಚ್ಚಿಕೊಂಡು ಅದಕ್ಕೆ ಈ ಕಾರಣಗಳನ್ನು ನೀಡಿದ್ದಾರೆ: ''ಭಾರತದಲ್ಲಿಯೂ ಸಮೀಪದ ಪೌರ್ವಾತ್ಯ ದೇಶಗಳಲ್ಲಿಯೂ ದೀರ್ಘಕಾಲದಿಂದ ಹರಿದುಬಂದಿರುವ ವಿವಿಧ ರೀತಿಯ ಆಧ್ಯಾತ್ಮಿಕ ಧ್ಯೇಯ ಹಾಗೂ ಸಾಧನೆಗಳನ್ನು ಕುರಿತು ಸ್ವಾಮಿ ರಾಮರು ಬಹಳ ತಿಳಿಯಾಗಿ, ಜ್ಞಾನ ಕುತೂಹಲಿಗಳ ಮುಂದೆ ಇರಿಸುವ ಪ್ರಯತ್ನವನ್ನು ಮಾಡಿದ್ದಾರೆ. ಅದರಲ್ಲಿ ಬುದ್ಧಿ ಚಮತ್ಕಾರದ ಯಾವ ಪ್ರದರ್ಶನವೂ ಇಲ್ಲ. ಅವರ ಪ್ರಾಮಾಣಿಕ ಅನುಭವ ಮತ್ತು ವಿವೇಚನೆಗಳಷ್ಟನ್ನೇ ಕಾಣುತ್ತೇವೆ. ಹೀಗಾಗಿ ನಮ್ಮ ನಾಡಿನ ಸಂಸ್ಕೃತಿಯಲ್ಲಿ ಈತನಕ ಹರಿದು ಬಂದ ನಮ್ಮಲ್ಲಿನ ಅನೇಕ ಹಿರಿಯರು ತಮ್ಮ ಯಾವತ್ತೂ ಬದುಕನ್ನು ಅರ್ಪಿಸಿ ಜೀವಿಸಿದಂಥ ಕ್ಷೇತ್ರ, ಯಾವ ತೆರನದು ಎಂಬುದನ್ನು

ಬಹಳ ಚೆನ್ನಾಗಿ ಈ ಗ್ರಂಥದಲ್ಲಿ ಬಣ್ಣಿಸಿದ್ದಾರೆ. ಹಾಗಾಗಿ ನನಗೆ ಇದು ಮಹತ್ವದ ಗ್ರಂಥ ಎನಿಸುತ್ತದೆ.''

ಈ ಗ್ರಂಥವನ್ನು ಮೊದಲ ಬಾರಿ ಓದಿದ ಕ್ಷಣದಿಂದಲೇ ಅದರ ಸೆಳೆತಕ್ಕೆ ಸಿಕ್ಕಿದ ಡಿ.ಕೆ. ಶ್ಯಾಮಸುಂದರರಾವ್ ಅವರು ''ಹಿಮಾಲಯದ ಮಹಾತ್ಮರ ಸನ್ನಿಧಿಯಲ್ಲಿ'' ಎಂಬ ಹೆಸರಿನಲ್ಲಿ ಸ್ವಾಮಿ ರಾಮರ ಈ ಕೃತಿಯನ್ನು ತುಂಬಾ ಅಚ್ಚುಕಟ್ಟಾಗಿ ಕನ್ನಡಕ್ಕೆ ತಂದಿದ್ದಾರೆ. ಶ್ಯಾಮಸುಂದರರಾಯರ ಕನ್ನಡ ಅನುವಾದ ಸುಲಲಿತವಾಗಿ ಓದಿಸಿಕೊಂಡು ಹೋಗುತ್ತದೆ. ಈಚೆಗೆ ಕನ್ನಡಕ್ಕೆ ಅನುವಾದಗೊಂಡು ಬಂದ ಕೃತಿಗಳ ನಡುವೆ ''ಹಿಮಾಲಯದ ಮಹಾತ್ಮರ ಸನ್ನಿಧಿಯಲ್ಲಿ'' ಎದ್ದುಕಾಣುತ್ತದೆ. ಇದೊಂದು ಕೇವಲ ಅಕಡೆಮಿಕ್ ಅನುವಾದ ಅಲ್ಲ. ಅನುವಾದಕ ಒಂದು ಗ್ರಂಥವನ್ನು ಮೆಚ್ಚಿಕೊಂಡು, ಅನುಭವಿಸಿ ತನ್ನ ಪ್ರೀತಿ ಗೌರವಗಳನ್ನು ಧಾರೆ ಎರೆದ ಕೆಲಸ. ಅನುವಾದಕರ ಶ್ರದ್ಧೆ ಕೇವಲ ಭಾವುಕವಾಗದೆ ಕನ್ನಡದ ಓದುಗರಿಗೆ ಅಪರೂಪವೆನಿಸುವ ಕಾಣಿಕೆಯೊಂದನ್ನು ಇಲ್ಲಿ ಕೊಟ್ಟಿದೆ. ಶ್ಯಾಮಸುಂದರರಾಯರು ಕೇವಲ ಸ್ವಾಮಿ ರಾಮರ ಉಪಾಸಕರಾಗಿ ಈ ಪುಸ್ತಕವನ್ನು ಓದಿಲ್ಲ. ಈ ಕೃತಿಯನ್ನು ಸಾಹಿತ್ಯದ ವಿದ್ಯಾರ್ಥಿಯಾಗಿ ಅಧ್ಯಯನ ಮಾಡಿದಾಗ ಕುತೂಹಲಿ ಓದುಗನಾಗಿ ಅವಲೋಕಿಸಿದಾಗ, ಆಧ್ಯಾತ್ಮಿಕ ವಿಚಾರಗಳ ಅನ್ವೇಷಣೆಯ ದೃಷ್ಟಿಯಿಂದ ಪರಿಶೀಲಿಸಿದಾಗ ಇದು ಯಾವುದೇ ವರ್ಗ, ದೃಷ್ಟಿ-ಧೋರಣೆಗಳನ್ನು ತಣಿಸಬಲ್ಲ ಅನನ್ಯ ಕೃತಿಯಾಗಿ ತೆರೆದುಕೊಳ್ಳುತ್ತದೆ. ಕುತೂಹಲಕಾರಕ ಕಥನ ಮಾಲಿಕೆಯನ್ನು ಇಲ್ಲಿ ಕಾಣಬಹುದು. ಒಂದು ಸುಂದರವಾದ ಪ್ರವಾಸ ಕಥನದ ಉತ್ಕೃಷ್ಟ ಅಂಶಗಳು ಇಲ್ಲಿವೆ. ಸೌಂದರ್ಯಾರಾಧಕರನ್ನು ತಣಿಸುವ ವರ್ಣನೆಗಳು ಇಲ್ಲಿವೆ. ಜೀವನ ಚಿತ್ರ-ಚರಿತ್ರೆಗಳ ಸರಮಾಲೆ, ಇಹ-ಪರಗಳ ಗಣಿತ ಸಿದ್ಧಾಂತದ ಪೂರ್ಣಪಾಠದ ರಸಘಟ್ಟ ಇಲ್ಲಿದೆ. ಪ್ರತಿಯೊಬ್ಬ ಮಾನವ ಜೀವಿಗೂ ಅಗತ್ಯವಾದ ವಿಶ್ವಮಾನವ ಧರ್ಮದ ಸಂಜೀವಿನೀ ಸಂಪುಟ ಈ ಕೃತಿ. ಇಂಥ ಏನೆಲ್ಲ ಸಂಗತಿಗಳೂ ವೈಜ್ಞಾನಿಕ ದೃಷ್ಟಿ-ಧೋರಣೆಗಳೊಡಗೂಡಿ ಸರಳ ಸುಂದರ ಭಾಷೆಯಲ್ಲಿ ಸುಸ್ಪಷ್ಟವಾಗಿ ಮೂಡಿಬಂದಿರುವುದು ಈ ಕೃತಿಯ ವಿಶೇಷ''.

ಸ್ವಾಮಿ ರಾಮರು ಹುಟ್ಟುವುದಕ್ಕೆ ಎಷ್ಟೋ ಕಾಲ ಮೊದಲೇ 60 ವರ್ಷದ ಗಂಡ ಮತ್ತು 43 ವರ್ಷದ ಹೆಂಡತಿಗೆ ಮಗುವೊಂದು ಜನಿಸುವುದೆಂದೂ ಅದನ್ನು ತಮಗೆ ಕೊಡಬೇಕೆಂದೂ ಗುರುಗಳೊಬ್ಬರು ಭಾಷೆ ತೆಗೆದುಕೊಂಡಿದ್ದರಂತೆ. ಅಂದರೆ ಜನ್ಮತಾಳುವ ಮೊದಲೇ ಗುರುಗಳನ್ನು ಪಡೆದುಕೊಂಡಿದ್ದ ಪುಣ್ಯವಂತರು ಸ್ವಾಮಿ ರಾಮರು. ಹುಟ್ಟುವ ಮೊದಲೇ ಪವಾಡ! ಹುಟ್ಟಿದ ನಂತರ ತಮ್ಮ ಗುರುಗಳ ಸಂಪರ್ಕದಿಂದ ಸ್ವಾಮಿ ರಾಮರು ಕಂಡ ಪವಾಡಗಳಿಗೆ ಲೆಕ್ಕವಿಲ್ಲ. ತರ್ಕಕ್ಕೆ ಸಿಗದ ಎಷ್ಟೋ ಸಂಗತಿಗಳನ್ನು ಅವರು ಅನುಭವಿಸಿದರು. ಆದರೆ ಪುಸ್ತಕ ಎಂದೂ ಈ ಪವಾಡಗಳನ್ನು ವೈಭವೀಕರಿಸ ಹೊರಡುವದಿಲ್ಲ. ಪವಾಡಗಳ ಮೂಲಕ ಅಂಧಶ್ರದ್ಧೆ, ಕುರುಡು ನಂಬಿಕೆಗಳನ್ನು ಪುರಸ್ಕರಿಸುವುದು ಈ ಪುಸ್ತಕದ ಉದ್ದೇಶವಲ್ಲ. ಬಹಳಷ್ಟು ಪವಾಡಗಳು ಶಿಷ್ಯನ ಅಜ್ಞಾನವನ್ನು ಕಳೆಯಲು, ಮಿತಿಗಳನ್ನು ಸ್ಪಷ್ಟಪಡಿಸಲು, ಅಹಂಕಾರವನ್ನು

ಹಿಮಾಲಯದ ಮಹಾತ್ಮರ ಸನ್ನಿಧಿಯಲ್ಲಿ

ಇಂಗ್ಲಿಷ್ ಮೂಲ	:	**ಸ್ವಾಮಿ ರಾಮ**
ಸಂಪಾದನೆ	:	**ಸ್ವಾಮಿ ಅಜಯ**
ಕನ್ನಡ ಅನುವಾದ	:	**ಡಿ.ಕೆ. ಶ್ಯಾಮಸುಂದರರಾವ್**
ಪ್ರಕಾಶಕರು	:	**ಕಾಮಧೇನು, ನಂ. 6, ನಾಗಪ್ಪರಸ್ತೆ, ಶೇಷಾದ್ರಿಪುರಂ, ಬೆಂಗಳೂರು-20**
ಪುಟಗಳು	:	**450**
ಬೆಲೆ	:	**ರೂ. 145.00**
ಪ್ರಕಟಣೆ	:	**1991**

ಧ್ವಂಸಮಾಡಲು ಸೃಷ್ಟಿಸಿದವೇನೋ ಎಂದು ಅನ್ನಿಸುತ್ತದೆ. ಅತೀಂದ್ರಿಯ, ಅಲೌಕಿಕ ತರ್ಕಾತೀತ ಅರಿವಿಗೂ, ಕೇವಲ ಚಮತ್ಕಾರ ಭರಿತ ಪವಾಡಕ್ಕೂ ನಡುವಣ ವ್ಯತ್ಯಾಸವನ್ನು ಸ್ವಾಮಿ ರಾಮರು ತಮ್ಮ ಗುರುಗಳಿಂದ ಅನೇಕ ಬಾರಿ ಕಲಿತರು. ಈ ''ನಮ್ರತೆಯ ಪಾಠ'' ಸ್ವಾಮಿ ರಾಮರ ಆಧ್ಯಾತ್ಮಿಕ ಸಾಧನೆಗೆ ಭದ್ರವಾದ ಅಡಿಪಾಯವನ್ನು ಒದಗಿಸಿತು. ತಮ್ಮ ಶಿಷ್ಯತ್ವದ ಪ್ರಾರಂಭದ ದಿನಗಳಲ್ಲಿ ಇತರ ಸಾಧುಸಂತರ ಪವಾಡ ಪ್ರತಿಭೆಗಳಿಗೆ ಸುಲಭವಾಗಿ ಮಾರು ಹೋಗುತ್ತಿದ್ದರು. ಬಾಯಿಂದ ಬೆಂಕಿ ಬರಿಸುವುದನ್ನು ಇಪ್ಪತ್ತು ವರ್ಷಗಳ ಸಾಧನೆಯಿಂದ ಕಲಿತ ಬೆಂಕಿ ಸ್ವಾಮಿಯೊಬ್ಬನ ಬಗ್ಗೆ ತಮ್ಮ ಗುರುಗಳಿಂದ ಈ ಪ್ರತಿಕ್ರಿಯೆಯನ್ನು ರಾಮರು ಕೇಳುತ್ತಾರೆ: ''ಒಂದು ಬೆಂಕಿ ಕಡ್ಡಿ ಒಂದು ಸೆಕೆಂಡಿನಲ್ಲಿ ಬೆಂಕಿಯನ್ನು ಬರಿಸುತ್ತೆ. ಬಾಯಿಂದ ಬೆಂಕಿ ಬರಿಸೋದಕ್ಕೆ ಇಪ್ಪತ್ತು ವರ್ಷಗಳನ್ನ ಕಳೆಯೋದಕ್ಕೆ ಇಷ್ಟಪಡೋದಾದ್ರೆ, ನೀನೊಬ್ಬ ಮೂರ್ಖ.''

ಇಂಥ ಸಿದ್ಧಿಗಳೆಲ್ಲಾ ಮಾರ್ಗದಲ್ಲಿನ ಬರಿ ಸೂಚನೆಗಳಷ್ಟೆ ಎಂಬುದನ್ನು ರಾಮರು ಮನವರಿಕೆ ಮಾಡಿಕೊಳ್ಳುತ್ತಾರೆ. ''ಆಧ್ಯಾತ್ಮಿಕತೆಗೂ ಈ ಶಕ್ತಿಗಳಿಗೂ ಯಾವ ನಂಟೂ ಇಲ್ಲ. ಈ ಅತಿಭೌತಿಕತೆಗಳು ಕಡಿಮೆ ಕಿಮ್ಮತ್ತಿನವು ಎಂಬ ಸಂಗತಿಯನ್ನು ಅನುಭವ ಹಾಗೂ ಪರೀಕ್ಷೆಗಳಿಂದ ಕಂಡುಕೊಂಡೆ. ಪ್ರತಿಯಾಗಿ ಇವು ಮಾರ್ಗದಲ್ಲಿನ ಬಲವಾದ ಅಡೆತಡೆಗಳು. ಕೆಲವೊಮ್ಮೆ ಅತಿಭೌತಿಕ ಶಕ್ತಿಗಳು ಮೂಡುತ್ತವೆ; ಆಗ ನೀವು ಬೇರೆಯವರ ಭವಿಷ್ಯವನ್ನು ಹೇಳತೊಡಗಬಹುದು. ವಿಚಾರಗಳು ಹೊಳೆಯಬಹುದು. ಇವೆಲ್ಲಾ ಅನ್ಯಾಕರ್ಷಣೆಗಳು. ನಿಮ್ಮ ದಾರಿಗೆ ಅಡ್ಡಬರಲು ಇವುಗಳಿಗೆ ಅವಕಾಶ ಕೊಡಬೇಡಿ. ಬಹಳ ಮಂದಿ, ಸ್ವಾಮಿಗಳನ್ನೂ ಒಳಗೊಂಡು, ಕಾಲ ಹಾಗೂ ಶಕ್ತಿಗಳನ್ನು ಇಂಥ ದಾರಿ ತಪ್ಪಿಸುವ ವಿಚಾರಗಳಲ್ಲಿ ಕಳೆದಿದ್ದಾರೆ. ಸಿದ್ಧಿಯನ್ನು ಅಪೇಕ್ಷೆ ಪಡುವಂಥವರು ನೂರಾದರೂ ಅವನ್ನು ದೊರಕಿಸಿಕೊಳ್ಳಬಹುದು ಮತ್ತು ಕೆಲವು ಅತಿಲೌಕಿಕ ಆಶ್ಚರ್ಯಗಳನ್ನು ಪ್ರದರ್ಶನ ಮಾಡಬಹುದು. ಆದರೆ ಆತ್ಮಜ್ಞಾನವು ಸಂಪೂರ್ಣವಾಗಿ ಬೇರೆಯೇ ಆದ ವಿಚಾರ.''

ಸ್ವಾಮಿ ರಾಮರು ತಮ್ಮ ಉರಗಭೀತಿಯನ್ನು ಕಳಚಿಕೊಳ್ಳುವ ಪ್ರಸಂಗವೂ ತುಂಬಾ ಅರ್ಥಪೂರ್ಣವಾಗಿದೆ. ಈ ಘಟನೆ ಬೋಧನಾ ವಿಧಾನವೊಂದನ್ನು ಮಾತ್ರವಲ್ಲ, ಹಿಮಾಲಯದ ಗುರುಗಳ ಜೀವನದೃಷ್ಟಿಯನ್ನೇ ಪರ್ಯಾಯವಾಗಿ ಕಾಣಿಸುವುದರಿಂದ ಮುಖ್ಯವಾಗುತ್ತದೆ. ರಾಮರಿಗೆ ಹಾವಿನ ಭಯ ಇತ್ತು. ಅವರ ಗುರುಗಳಿಗೆ ಇದು ಗೊತ್ತಾಯಿತು. ಒಮ್ಮೆ ಗುರುಗಳು ಶಿಷ್ಯನಿಗೆ ವಿಶೇಷ ಪೂಜೆಯ ಸಲುವಾಗಿ ಪತ್ರ-ಪುಷ್ಪಗಳನ್ನು ತರಲು ಹೇಳುತ್ತಾರೆ. ರಾಮರು ಕತ್ತಲಲ್ಲಿ ಎಲೆಗಳ ಗುಪ್ಪೆಯೊಂದನ್ನು ಕಿತ್ತುತರುತ್ತಾರೆ. ಅದರಲ್ಲಿ ನಾಗರಹಾವೊಂದು ಇರುವುದು ಆಮೇಲೆ ಅವರ ಅರಿವಿಗೆ ಬರುತ್ತದೆ. ರಾಮರು ಹೆದರಿ ಕಂಗಾಲಾಗುತ್ತಾರೆ. ಭಯದಿಂದಾಗಿ ರಾಮರು ನಡುಗಲಾರಂಭಿಸುತ್ತಾರೆ. ಆಗ ನಡೆಯುವ ಗುರು-ಶಿಷ್ಯರ ಸಂಭಾಷಣೆ ಒಂದು ರೀತಿಯಲ್ಲಿ ಪೌರ್ವಾತ್ಯ ಪ್ರಾಚೀನ ಶಿಕ್ಷಣಕ್ರಮದ ಪರಂಪರೆಯನ್ನೇ ಸಾಂಕೇತಿಸುವಂತಿದೆ. ಸಂಭಾಷಣೆಯ ಒಂದು ಘಟ್ಟದಲ್ಲಿ ಗುರುಗಳು ಹೇಳುತ್ತಾರೆ: ''ನೀನು ಗಾಢ ನಿದ್ರೆಯಲ್ಲಿದ್ದಾಗ, ನಿನ್ನ ಬೆರಳು ಕಣ್ಣುಗಳನ್ನು ತಿವಿಯುತ್ತದೇನು! ನಿನ್ನ ಹಲ್ಲುಗಳು ನಿನ್ನ ನಾಲಗೆಯನ್ನು ಕಚ್ಚುತ್ತವೇನು? ಎಲ್ಲಾ ಭಾಗಗಳೂ ಒಂದೇ ದೇಹಕ್ಕೆ ಸಂಬಂಧಪಟ್ಟವುಗಳು ಎಂಬ ಒಂದು ಒಟ್ಟಾರೆ ಗ್ರಹಿಕೆ ಇರುತ್ತದೆ. ಎಲ್ಲ ಜೀವಜಾತಗಳೂ ಒಂದೇ ಎಂಬಂಥ ಗ್ರಹಿಕೆ ಮೂಡಿದ ದಿನ, ಯಾವ ಜೀವಿಗೂ, ನಾವು ಹೆದರುವುದಿಲ್ಲ.'' ಅಂದರೆ ಇಲ್ಲಿ ಅರಿವು ಬೇರೆಯಲ್ಲ, ಅನುಭವ ಬೇರೆಯಲ್ಲ. ಇಂಥ ಹದವನ್ನು ಈ ಪುಸ್ತಕದಲ್ಲಿ ಎಲ್ಲೆಡೆ ಕಾಣುತ್ತೇವೆ. ಈ ಪೌರ್ವಾತ್ಯ ವಿಶಿಷ್ಟ ಆಯಾಮ ಈ ಪುಸ್ತಕಕ್ಕೆ ವಿಶೇಷ ಆಕರ್ಷಣೆಯನ್ನೂ ಮಹತ್ವವನ್ನೂ ತಂದುಕೊಟ್ಟಿದೆ. ಇಲ್ಲಿ

ಶಿಷ್ಯ ತನ್ನ ಗುರುವನ್ನು ಕೇವಲ ಹಿಂಬಾಲಿಸುವುದಿಲ್ಲ. ಇಲ್ಲವೇ ಗುರು ಶಿಷ್ಯನ ಮನಸ್ಸನ್ನು ತನ್ನ ಅಧೀನದಲ್ಲಿಟ್ಟುಕೊಳ್ಳುವುದಿಲ್ಲ. ಅಂತರಂಗದ ಸಹಜ ವಿಕಾಸಕ್ಕೆ ಇಲ್ಲಿ ಪ್ರಾಧಾನ್ಯ. ಅಲೌಕಿಕ ಸಂಗತಿಗಳು ಕೇವಲ ಶಾಕ್ ಟ್ರೀಟ್‌ಮೆಂಟಿನಂತೆ ಮೂಡಿಬರುತ್ತವೆ. ಆದರೆ ಅವುಗಳು ಸಹಜ ವಿಕಾಸಕ್ಕೆ ಬದಲಿ ಅಲ್ಲ ಎಂಬ ಧ್ವನಿ ಇಡೀ ಪುಸ್ತಕದ ಹಿಂದಿದೆ. ಆದ್ದರಿಂದಲೇ ಎಂಥ ಸಾಮಾನ್ಯರೂ ಆಧ್ಯಾತ್ಮಿಕ ಜ್ಞಾನ ಪಡೆಯಲು ಅರ್ಹರು; ಅದಕ್ಕೆ ಬೇಕಾದ ಅಗತ್ಯಗಳನ್ನು ಪೂರೈಸಿಕೊಳ್ಳುವ ಯಾರೇ ಆದರೂ ಜ್ಞಾನಿಗಳಾಗಲು ಸಾಧ್ಯ. ಈ ಮಾನವೀಯ ದೃಷ್ಟಿಕೋನ ಪುಸ್ತಕದ ಇತ್ಯಾತ್ಮಕ ಅಂಶಗಳಲ್ಲಿ ಒಂದು: ''ಜಾಗೃತಿ ಮೂಡಿದಾಗ, ನಾವು ಹಿಂದಿನದೆಲ್ಲವನ್ನೂ ಕಿತ್ತೊಗೆದು ಪೂರ್ಣವಾಗಿ ನಮ್ಮ ವ್ಯಕ್ತಿತ್ವಗಳನ್ನು ಪರಿವರ್ತಿಸಿಕೊಳ್ಳಲು ಸಾಧ್ಯ. ಪ್ರಪಂಚದ ಕೆಲವರು ಅತಿದೊಡ್ಡ ಸನ್ಯಾಸಿಗಳು ಒಂದು ಕಾಲಕ್ಕೆ ಅತಿ ಕೆಟ್ಟವರೂ ಆಗಿದ್ದರು. ಸೆಯಿಂಟ್ ಪಾಲ್ ಆಗಿ ಪರಿವರ್ತಿತನಾದ ಸೌಲ್‌ನ ಹಾಗೆ. ಹಠಾತ್ತನೆ, ಸೌಲನಿಗೆ ಡಮಾಸ್ಕಸ್‌ಗೆ ಹೋಗುವ ಮಾರ್ಗದಲ್ಲಿ ಪ್ರೇರಣೆ ದೊರೆತು ಆತನ ವ್ಯಕ್ತಿತ್ವ ರೂಪಾಂತರ ಹೊಂದಿತು. ರಾಮಾಯಣದ ಕರ್ತೃ ವಾಲ್ಮೀಕಿ ಇಂಥದೇ ಅನುಭವ ಪಡೆದವನು. ನಿಮ್ಮನ್ನು ನಿಕೃಷ್ಟವೆಂದು ಭಾವಿಸಿಕೊಳ್ಳಬೇಡಿ. ಎಷ್ಟು ಕೆಟ್ಟವರು ಅಥವಾ ಕುಬ್ಜರು ನೀವು ಎಂದುಕೊಂಡು ಇದ್ದರೂ, ನಿಮ್ಮ ಇಡೀ ವ್ಯಕ್ತಿತ್ವವನ್ನು ರೂಪಾಂತರಿಸಿಕೊಳ್ಳುವ ಒಂದು ಅವಕಾಶ ನಿಮಗೆ ಉಂಟು. ಒಬ್ಬ ಶ್ರದ್ಧಾವಂತನಾದ ಪ್ರಯತ್ನಶೀಲನು ಯಾವಾಗಲೂ ಸತ್ಯವನ್ನು ಆತ್ಮಗತ ಮಾಡಿಕೊಳ್ಳಬಲ್ಲ ಹಾಗೂ ಎಲ್ಲ ಬಂಧನ ಮತ್ತು ಸಂಕಟಗಳಿಂದಲೂ ಬಿಡುಗಡೆಯನ್ನು ಸಾಧಿಸಿಕೊಳ್ಳಬಲ್ಲ. ಒಂದೇ ಕ್ಷಣದಲ್ಲಿ ನೀವು ಸ್ವತಃ ಜ್ಞಾನಿಗಳಾಗಬಲ್ಲಿರಿ.''

'ಹಿಮಾಲಯದ ಮಹಾತ್ಮರ ಸನ್ನಿಧಿಯಲ್ಲಿ' ಹಲವು ಗುರುಪರಂಪರೆಗಳನ್ನು ನಮ್ಮ ಮುಂದೆ ಇಡುತ್ತದೆ. ನಿಜವಾದ ಗುರು ಯಾರು ಎಂಬ ಪ್ರಶ್ನೆಯೂ ಅಲ್ಲಲ್ಲಿ ಜಿಜ್ಞಾಸೆಗೆ ಒಳಗಾಗಿದೆ. ಈ ಗುರುಗಳ ಶಕ್ತಿಯನ್ನು ಹಲವು ವಿಲಕ್ಷಣ, ನಂಬಲಸಾಧ್ಯವಾದ ದೃಷ್ಟಾಂತಗಳಲ್ಲಿ ಸೂಚಿಸಲಾಗಿದೆ. ಗುರುಗಳ ಈ ಶಕ್ತಿ ಕೆಲವೊಮ್ಮೆ ಆಕಸ್ಮಿಕ ಪರಿಹಾರಗಳಾಗಿ ಕೆಲವರಿಗೆ ಒದಗಿಬಂದದ್ದೂ ಉಂಟು. ಪವಾಡಗಳಿಗಿಂತ ಹೆಚ್ಚಾಗಿ ಆತ್ಮಶಕ್ತಿಗೆ, ಅಂತರಂಗ ಬಲಕ್ಕೆ ಈ ಪುಸ್ತಕ ಒತ್ತು ಕೊಡುತ್ತದೇನೋ ನಿಜ. ಆದರೆ ಈ ಆಧ್ಯಾತ್ಮಿಕ ಸಾಧನೆಗಳಲ್ಲಿ ನಿರತರಾದವರಿಗೂ ಅವರ ಸುತ್ತಲ ದೈನಂದಿನ ಜೀವನಕ್ಕೂ ಇರುವ ಸಂಬಂಧದ ಸ್ವರೂಪವೇನು ಎಂಬ ಪ್ರಶ್ನೆ ಎದುರಾಗುತ್ತದೆ. ಈ ಮಹಾತ್ಮರೆಲ್ಲ ಕೇವಲ ತಮ್ಮ ಆಧ್ಯಾತ್ಮಿಕ ಬಲದ ಮೇಲೆಯೇ ಜೀವಿಸುತ್ತಾರೆ ಎಂಬುದಕ್ಕೆ ಪುಸ್ತಕದಲ್ಲಿ ಖಚಿತವಾದ ಸೂಚನೆಗಳಿಲ್ಲ. ಅಂದರೆ ಕನಿಷ್ಠ ಜೀವನಾವಶ್ಯಕ ವಸ್ತುಗಳ ಅನಿವಾರ್ಯತೆಯಿಂದ ಇವರೂ ತಪ್ಪಿಸಿಕೊಂಡಿಲ್ಲ. ಈ ಕನಿಷ್ಠ ಜೀವನಾವಶ್ಯಕ ವಸ್ತುಗಳು ಅವರಿಗೆ ಯಾವ ಮೂಲಗಳಿಂದ ಸರಬರಾಜಾಗುತ್ತವೆ ಎಂದು ಕೇಳಬೇಕೆನಿಸುತ್ತದೆ. ದೇಶದ ಚರಿತ್ರೆ, ಸಂಸ್ಕೃತಿ, ಶಿಕ್ಷಣಗಳ ಬಗ್ಗೆ ಅಲ್ಲಲ್ಲಿ ತಲೆಕೆಡಿಸಿಕೊಳ್ಳುವ ಲೇಖಕರು ಭೌತಜೀವನದ ಮೂಲಭೂತ ಸಮಸ್ಯೆಗಳತ್ತ ತಲೆಕೆಡಿಸಿಕೊಳ್ಳುವುದಿಲ್ಲ. ಅಂದರೆ ಈ ಆತ್ಮಕೇಂದ್ರಿತ ಮನಸ್ಸುಗಳು ತಮ್ಮನ್ನೂ ಮೀರಿದ ವಿಶಾಲ ಮನುಷ್ಯ ಜಗತ್ತಿನ ಪರಿವೆಯೇ ಇಲ್ಲದಂತೆ ವರ್ತಿಸುತ್ತವೆ. ''ಭಾರತ ಆಧ್ಯಾತ್ಮಿಕ ಸಂಪತ್ತಿಯನ್ನು ಹೊಂದಿದ್ದ ಪಕ್ಷದಲ್ಲಿ ಅಲ್ಲಿ ಅಷ್ಟೊಂದು ಬಡತನ ಯಾಕಿದೆ?'' ಎಂಬ ಪ್ರಶ್ನೆಗೆ ಸ್ವಾಮಿ ರಾಮರ ಉತ್ತರ: ''ವಿಶ್ವದ ಯಾವುದೇ ಇತಿಹಾಸಗಳಲ್ಲಿ ಆಧ್ಯಾತ್ಮಿಕತೆ ಮತ್ತು ಆರ್ಥಿಕತೆ ಇವು ರಾಜಿಯಾಗಲಾರವು. ಅವೆರಡೂ ಭಿನ್ನವಾದವುಗಳು. ಭಾರತದಲ್ಲಿ ಧರ್ಮ ಹಾಗೂ ರಾಜಕೀಯಗಳು ಯಾವಾಗಲೂ ಪ್ರತ್ಯೇಕವಾಗಿ ಉಳಿದಿವೆ ಹಾಗೂ ಆಧ್ಯಾತ್ಮಿಕ ಮಂದಿ ಎಂದೂ ರಾಜಕೀಯದಲ್ಲಿ ಭಾಗಿಗಳಾಗಿಲ್ಲ. ಭಾರತದಲ್ಲಿ ಈ ಎರಡೂ ವಿರುದ್ಧ ಶಕ್ತಿಗಳು ಒಂದುಗೂಡಲಾರವು; ಹೀಗಾಗಿ ಶಕ್ತಿ

ಕುಗ್ಗಿದೆ. ಭಾರತದಲ್ಲಿ ಬಡತನ ಇರುವುದು ಆಧ್ಯಾತ್ಮಿಕತೆಯ ಕಾರಣಕ್ಕಾಗಿ ಅಲ್ಲ. ಲೌಕಿಕ ಬದುಕಿನೊಂದಿಗೆ ಆಧ್ಯಾತ್ಮಿಕತೆಯನ್ನು ಸಾಧನೆ ಮಾಡದ ಕಾರಣಕ್ಕಾಗಿ, ಬಡತನ ಇದೆ. ಈಗ ದೇಶವನ್ನು ಮುನ್ನಡೆಸುತ್ತಿರುವವರು ಈ ಸಂಗತಿಯ ಅರಿವನ್ನು ಹೊಂದಬೇಕು. ಒಟ್ಟಾರೆಯಾಗಿ ದೇಶವನ್ನು ಮೇಲೆತ್ತಬೇಕೆಂಬ ಒಟ್ಟಾರೆ ದೃಷ್ಟಿಯು ಇನ್ನೂ ಈ ದೇಶದ ಜನಗಳಿಗಾಗಲೀ ಮುಖಂಡರಿಗಾಗಲೀ ಇವತ್ತಿಗೂ ಬಂದಿಲ್ಲವಾದ ಕಾರಣ ಭಾರತ ನರಳುತ್ತಿದೆ. ಜನಸಂಖ್ಯಾ ಸಮಸ್ಯೆಗೆ ಅವರಲ್ಲಿ ಉತ್ತರವಿಲ್ಲ. ಅಲ್ಲದೆ ಅದಕ್ಕೆ ಯಾವುದೇ ತಾತ್ಪೂರ್ತಿಕ ಪರಿಹಾರವೂ ಕಾಣಸುತ್ತಿಲ್ಲ. ತನ್ನ ಸಮೃದ್ಧವಾದ ಆಧ್ಯಾತ್ಮಿಕ ಮತ್ತು ಸಾಂಸ್ಕೃತಿಕ ಸಂಪತ್ತಿಯಿಂದಾಗಿ ಮಾತ್ರ ಭಾರತ ತನ್ನ ಅಸ್ತಿತ್ವವನ್ನು ಕಾಪಾಡಿಕೊಂಡು ಬರುತ್ತಿದೆ ಎಂದು ನನ್ನ ಭಾವನೆ.''

ಅಂದರೆ ಸ್ವಾಮಿಗಳ ಚಿಂತನೆ ಸಮಾಜಮುಖಿಯಲ್ಲ. ಅವರಿಗೆ ಬಡತನದ ಮೂರ್ತ ಪ್ರಶ್ನೆಗಳಿಗಿಂತ ಅಮೂರ್ತವಾದ ಆಧ್ಯಾತ್ಮಿಕ ಆಕರ್ಷಣೆಯೇ ತೀವ್ರವಾಗಿದೆ. ಇದು ನಿಜಕ್ಕೂ ಒಂದು ಚರ್ಚಾರ್ಹ ಸಂಗತಿಯೇ. ಸ್ವಾಮಿಗಳು Apolitical ಆಗಿಯೇ ವರ್ತಿಸುತ್ತಾರೆಯೇ ಎಂಬುದು ಒಂದು ಗಂಭೀರ ಪ್ರಶ್ನೆಯಾಗಿ ಉಳಿದುಕೊಳ್ಳುತ್ತದೆ. ಇದರ ಹಿಂದಿನ ತಾತ್ತ್ವಿಕ ಹಿನ್ನೆಲೆಯನ್ನು ಅರ್ಥಮಾಡಿಕೊಳ್ಳಲು ಒಂದು ದೃಷ್ಟಾಂತವನ್ನು ಗಮನಿಸಬಹುದು. ಸ್ವಾತಂತ್ರ್ಯ ಚಳುವಳಿಯ ಈ ಸಂದರ್ಭವನ್ನು ನೋಡಿ: '' ಮಹಾತ್ಮಾ ಗಾಂಧಿಯವರ ಸಿದ್ಧಾಂತ, ಧೋರಣೆ, ಹಾಗೂ ಚಳುವಳಿಗಳಲ್ಲಿ ನನಗೆ ನಂಬಿಕೆಯಿತ್ತಾದರೂ ನಾನು ಯಾವತ್ತೂ ಸಕ್ರಿಯ ರಾಜಕೀಯದಲ್ಲಿ ಪಾತ್ರವಹಿಸಲಿಲ್ಲ. ರಾಜಕೀಯವನ್ನು ಪ್ರವೇಶ ಮಾಡುವಂತೆ ನನ್ನ ಮೇಲೆ ಪ್ರಭಾವ ಬೀರಬಯಸಿದರು. ಇದು ಹೀಗೇ ನಾಲ್ಕು ತಿಂಗಳು ಸಾಗಿತು. ಆದರೆ ನನ್ನ ಗುರುಗಳು ಯಾವ ರಾಜಕೀಯ ಪಕ್ಷಕ್ಕೂ ಸೇರಲೇ ಬಾರದೆಂದು ನನಗೆ ಹೇಳಿದರು 'ನೀನು ವಿಶ್ವದವನು ಹಾಗೂ ವಿಶ್ವಮಾನವ. ಭಾರತದ ಜನರೊಂದಿಗೆ ಮಾತ್ರ ಯಾಕೆ ನಿನ್ನನ್ನು ಗುರುತಿಸಿಕೊಳ್ಳುತ್ತೀಯ? ನಿನ್ನ ಕಳಕಳಿ ಇಡೀ ಮಾನವತೆಯ ಸಲುವಾಗಿನದು ಆಗಬೇಕು. ಮೊದಲು ಆಂತರಿಕ ಶಕ್ತಿಯನ್ನು ರೂಢಿಸಿಕೋ, ಬುದ್ಧಿಶಕ್ತಿಯನ್ನು ಹರಿತಗೊಳಿಸು, ಭಾವನೆಗಳ ನಿಯಂತ್ರಣವನ್ನು ಕಲಿ, ಆಮೇಲೆ ಕಾರ್ಯಪ್ರವೃತ್ತನಾಗು. ಭಾರತದಂಥ ಆಧ್ಯಾತ್ಮಿಕ ಉನ್ನತಿಯ ದೇಶವಾದರೂ ಸರಿ, ಒಂದು ದೇಶದ ಬಗ್ಗೆ ದುರಭಿಮಾನದ ಆರಾಧನೆ ದೈವೀಮಾನವನಿಗೆ ಸರಿಹೊಂದುವುದಿಲ್ಲ.' ಹಿಂಸೆಯಲ್ಲಿ ಪಾತ್ರವಹಿಸಬೇಡ ಎಂದು ನನಗೆ ಹೇಳಿದ ಗುರುಗಳು ಭಾರತ ಸ್ವತಂತ್ರವಾಗುವ ದಿನಾಂಕವನ್ನು ಮುಂಚಿತವಾಗಿಯೇ ಭವಿಷ್ಯ ನುಡಿದರು.''

ಈ ತಾತ್ತ್ವಿಕತೆಯನ್ನು ಪ್ರಶ್ನಿಸಲು ಸಾಧ್ಯ. ಆದರೆ ಸ್ವಾಮಿ ರಾಮರು ಎಲ್ಲವನ್ನೂ ಓದುಗರ ಮುಂದೆ ಬಿಟ್ಟಿದ್ದಾರೆ. ಅವರ ಶೈಲಿ ಓದುಗರ ಮೇಲೆ ಏನನ್ನೂ ಹೇರುವಂಥದ್ದಲ್ಲ. ಬದಲಾಗಿ, 'ನನ್ನ ಅನುಭವ ಇದು; ನನ್ನ ವಿಚಾರ ಹೀಗೆ; ನಿಮಗೇನನ್ನಿಸುತ್ತದೆ?' ಎಂಬ ಧಾಟಿ ಸಾಮಾನ್ಯವಾಗಿ ಕಂಡುಬರುತ್ತದೆ. ಆಧ್ಯಾತ್ಮಿಕ ಅನುಭವಗಳನ್ನು ಮೂರ್ತ ದೃಷ್ಟಾಂತಗಳಲ್ಲಿ ಹೇಳಿಕೊಳ್ಳುವಾಗ ಅವು ಸರಳೀಕೃತಗೊಳ್ಳುವ ಅಪಾಯ ಇದ್ದೇ ಇರುತ್ತದೆ. ಈ ಅಪಾಯವನ್ನು ಮನಗಂಡೂ ಒಂದು ಜೀವನ ಕ್ರಮವನ್ನು, ಚಿಂತನ ಕ್ರಮವನ್ನು- ಅದೆಷ್ಟು ವಿವಾದಾಸ್ಪದವಾಗಿದ್ದರೂ - ಓದುಗರ ಮುಂದೆ ತಂದಿರುವ ಪ್ರಯತ್ನ ಮಾತ್ರ ಸ್ವಾಗತಾರ್ಹ.

★ ಮತ್ತೇನಪ್ಪಾ ಸಮಾಚಾರ? - ಎಂದು.

★ ನಾನು ನಿನ್ನನ್ನ ಕಾಯಿಸಿದ್ನಾ? - ಎಂದು.

★ ನಾನ್ಯಾರೂಂತ ನಿಮಗೆ ನೆನಪಾಗ್ತಿಲ್ಲ, ಅಲ್ಲ? - ಎಂದು.

ಪರಸ್ಪರ

ಹೂವುಗಳು ಅರಳಿಕೊಳ್ಳುತ್ತವೆ;
ಪರಸ್ಪರ ಕುಶಲ ವರ್ತಮಾನವ
ಸೂಚಿಸಿ,
ಹೊರಗೆ ಬೆಳಕಲ್ಲಿ
ಪಕಳೆ ಬಿಚ್ಚಿ, ಸಹಜ ತೋರಿ,
ನಿರಾಡಂಬರ ಮುಗುಳು ನಗೆ!

ಅಗಿದು ನುಂಗಿಯೂ ಅರಗಿಸಲಾಗದ
ಘನಪದಾರ್ಥಗಳು
ಎದೆಯ ಪದರಿನೊಳಗೆ ಅಮರಿಕೊಳ್ಳುವ
ಅಭೂತಪೂರ್ವ ವಿಚಿತ್ರ ವೇಧೆ,
ಕಣ್ಣು, ಕೈ, ಮುಖಭಾವ ಸಂಕೇತಿಸುವ
ವಿರಳ ವಿರಳ ಮಾತುಕತೆ.

ಅಗಲುವಂಜಿಕೆಯಿಂದ
ಅಂತರಾಳದಿ
ನುಣ್ಣನೆ ಮೊರೆವ
ನೋವಿನನುರಣನ
'ಸೌಮ್ಯಾ'
ಎಂದು ನಿಧಾನಿಸುವುದರೊಳಗೆ
ಕಾಲಪಕ್ಷಿಯ ಕೆನೆತ!

ಹೊರಗೆ ಕಾಯುವ ಕಣ್ಣು
ತಪ್ಪಿಸಿ
ಜಾರಿಕೊಳ್ಳಲು
ಅಧೀರ ನಡೆಯ ದಾಪುಗಾಲು

'ತಿರುಗಿ ಕಾಣುವುದೆಂದು? ಎಂತು?'
ಯಾಕೆ ಅಕಾರಣ ನೆನಪಿನ ಪರಿ-
ಭ್ರಮಣ ಮತ್ತೆ ಮತ್ತೆ...!

● ವಿನಾಯಕ ಹೆಗಡೆ, ಭದ್ರನ್

ಶ್ರವಣೋಪಕರಣದ ನಿರ್ವಹಣೆ

ಸುತ್ತಲಿನವರಿಗೆ ಕಿರಿಕಿರಿಯನ್ನೂ, ಗಂಟಲಿಗೆ ಶ್ರಮವನ್ನೂ, ಕೇಳುಗರಿಗೆ ಮುಜುಗರವನ್ನೂ ಉಂಟುಮಾಡದಂತೆ ಶ್ರವಣಶಕ್ತಿ ಕಡಿಮೆ ಇರುವವರೊಂದಿಗೆ ಸಂವಹನ ಸಾಧಿಸುವ ಸಾಧನದ ಪೂರ್ಣ ಪರಿಚಯ.

● ಜಿ.ವಿ. ಗಣೇಶಯ್ಯ

ಶ್ರವಣ ಶಕ್ತಿ ಕಡಿಮೆ ಇರುವವರೊಂದಿಗೆ ಸಂವಹನ ಸಾಧಿಸುವುದು ತುಸು ತ್ರಾಸದಾಯಕ ಎಂಬುದು ನಿಜವಾದರೂ ಅಸಾಧ್ಯವಲ್ಲ. ದನಿ ಎತ್ತರಿಸಿ ಮಾತನಾಡುವುದರ ಮೂಲಕ ಸುತ್ತಲಿನವರಿಗೆ ಕಿರಿಕಿರಿಯನ್ನೂ, ಗಂಟಲಿಗೆ ಶ್ರಮವನ್ನೂ, ಕೇಳುವ ವ್ಯಕ್ತಿಗೆ ಮುಜುಗರವನ್ನೂ ಉಂಟು ಮಾಡದಂತೆ ಸಂಭಾಷಣೆಯನ್ನು ಸುರಳೀತಗೊಳಿಸುವ ಸಾಧನವೀಗ ಲಭ್ಯ. ಒಂದು ಪುಟ್ಟ ಎಲೆಕ್ಟ್ರಾನಿಕ್ ಉಪಕರಣವಾದ ಶ್ರವಣೋಪಕರಣ (Hearig aid) ಸಹಜವಾಗಿ ಆಡುವ ಮಾತನ್ನೇ ಶ್ರವಣಶಕ್ತಿ ಕಡಿಮೆ ಇರುವವರಿಗೆ



ಕಿಸೆ ಮಾದರಿ ಶ್ರವಣೋಪಕರಣ
ಮೇಲ್ಭಾಗದಲ್ಲಿರುವುದು ಕಿವಿಯಲ್ಲು
ಕೂರಿಸುವ ಧ್ವನಿ ಗ್ರಾಹಕ

ಜೋರಾಗಿ ಕೇಳಿಸುವ ಕರ್ತವ್ಯ ನಿರ್ವಹಿಸುತ್ತದೆ. ಆದರೆ ಇದು ಧ್ವನಿವರ್ಧಕದಂತೆ ಇದ್ದಬಿದ್ದವರ ಕಿವಿಗಳಿಗೆಲ್ಲ ಅಪ್ಪಳಿಸಿ ಶಬ್ದಮಾಲಿನ್ಯವನ್ನೇನು ಉಂಟು ಮಾಡುವುದಿಲ್ಲ.

ಸೂಕ್ಷ್ಮಾತಿಸೂಕ್ಷ್ಮ ಬಿಡಿಭಾಗಗಳ ಗೊಂಚಲಾದ ಈ ಉಪಕರಣವನ್ನು ಯಾವುದೇ ವಯೋಮಾನದವರು ಬಳಸಬಹುದಾದರೂ ನಿರ್ದಿಷ್ಟ ನಮೂನೆಯನ್ನು ಶ್ರವಣತಜ್ಞರು ಮಾತ್ರ ಸೂಚಿಸಬಲ್ಲರು.

ವಿವಿಧ ಮಾದರಿಗಳು:

ಶ್ರವಣೋಪಕರಣಗಳಲ್ಲಿ ಕಿಸೆ ಮಾದರಿ (Body aid), ಕನ್ನಡಕದ ಮಾದರಿ (eyeglass aid), ಕಿವಿಯ ಹಿಂಭಾಗದ ಮಾದರಿ (Behind the ear aid), ಕರ್ಣಾಂತರ್ಗತ ಮಾದರಿ (In the ear aid) ಎಂದು ನಾಲ್ಕು ವಿಧಗಳು.

ಶ್ರವಣೋಪಕರಣದ ಭಾಗಗಳು:

ಸ್ವಿಚ್ಚು: ಇದನ್ನು M ಸ್ಥಾನದಲ್ಲಿರಿಸಿದಾಗ ಕೆಲಸ ಮಾಡತೊಡಗುವ ಉಪಕರಣ O ಗೆ ಬದಲಿಸಿದರೆ ಸ್ಥಗಿತಗೊಳ್ಳುತ್ತದೆ. ಸ್ವಿಚ್ಚನ್ನು ಆನ್ ಮಾಡುವ ಮೊದಲು ಶಬ್ದ ನಿಯಂತ್ರಕವು (volume controller) ಕನಿಷ್ಠ ಸಂಖ್ಯೆಯಲ್ಲಿರಬೇಕೆಂಬುದನ್ನು ಮರೆಯಬಾರದು. ಶ್ರವಣೋಪಕರಣವನ್ನು ಬಳಸದಿದ್ದಾಗಲೂ, ಬಿಡಿಭಾಗಗಳನ್ನು ಕಳಚುವಾಗಲೂ ಸ್ವಿಚ್ಚನ್ನು ಆಫ್ ಮಾಡುವುದು ಅಗತ್ಯ.

ಟೆಲಿಫೋನ್/ಮೈಕ್ ಸ್ವಿಚ್ಚು: ಕೆಲವು ಶ್ರವಣೋಪಕರಣಗಳಲ್ಲಿ ಮಾತ್ರವಿರುವ ಈ ವ್ಯವಸ್ಥೆಯಿಂದ ದೂರವಾಣಿ ಬಳಸುವವರಿಗೆ ಅನುಕೂಲವಾಗುತ್ತದೆ. ಅಂಥ ಸಂದರ್ಭದಲ್ಲಿ ಸ್ವಿಚ್ಚನ್ನು T ಸ್ಥಾನದಲ್ಲಿಟ್ಟು ಟೆಲಿಫೋನ್ ರಿಸೀವರನ್ನು ಶ್ರವಣೋಪಕರಣದ ಬಳಿ ಇರಿಸಿಕೊಂಡು ಸಂಭಾಷಿಸಬೇಕು (ಚಿತ್ರ ನೋಡಿ)

ಈ ಸ್ವಿಚ್ಚನ್ನು MT ಎಂಬಲ್ಲಿ ಇರಿಸಿಕೊಂಡರೆ ದೂರವಾಣಿ ಹಾಗೂ ಹೊರಗಿನ ಮಾತು ಎರಡನ್ನೂ ಆಲಿಸಬಹುದು.



ಶ್ರವಣೋಪಕರಣಧಾರಿಯು ದೂರವಾಣಿಯಲ್ಲಿ ಮಾತನಾಡುವ ವಿಧಾನ

1. ರಿಸೀವರ್ 2. ವೈರು 3. ಶ್ರವಣೋಪಕರಣ

ಶಬ್ದ ನಿಯಂತ್ರಕ: ಈ ಭಾಗವು ರೇಡಿಯೋದ ಶಬ್ದನಿಯಂತ್ರಕದಂತೆ ಶಬ್ದವನ್ನು ಹೆಚ್ಚು-ಕಡಿಮೆ ಮಾಡುವ ಸೌಲಭ್ಯವೊದಗಿಸುತ್ತದೆ. ಇದರಲ್ಲಿ ವಿವಿಧ ಹಂತದ ಒಂಬತ್ತು ಅಂಕಿಗಳಿದ್ದು ಆಲಿಸುವ ವ್ಯಕ್ತಿ ತನಗೆ ಹಿತವಾದ ಅಂಕಿಯನ್ನು ಅನುಭವದಿಂದ ಕಂಡುಕೊಂಡು ಅದಕ್ಕನುಗುಣವಾಗಿ ಹೊಂದಿಸಿಕೊಳ್ಳಬೇಕು. ಆದಷ್ಟು ಕನಿಷ್ಠ ಸಂಖ್ಯೆಗೆ ನಿಯಂತ್ರಕವನ್ನು ಹೊಂದಿಸಿಕೊಳ್ಳುವುದೊಳ್ಳೆಯದು. ಏಕೆಂದರೆ ನಿಯಂತ್ರಕದ ಹೆಚ್ಚಿನ ಅಂಕಿಗಳೆಡೆ ಸಾಗಿದಂತೆಲ್ಲಾ ಶಬ್ದವು ವಿಕಾರಗೊಂಡು ಮಾತು ಅಸ್ಪಷ್ಟವಾಗಿ ಕೇಳಿಸುತ್ತದೆ. ಇದಲ್ಲದೆ ಸಂಖ್ಯೆಯನ್ನು ಹೆಚ್ಚಿಸಿದಂತೆ ಬ್ಯಾಟರಿ ಶಕ್ತಿಯ ವಿನಿಯೋಗ ಅಧಿಕಗೊಂಡು ಅದರ ಆಯಸ್ಸು ಕ್ಷಯಿಸುತ್ತದೆ.

ಸ್ವರನಿಯಂತ್ರಕ (Tone Controller): ಇದರಲ್ಲಿ N.H.L. ಎಂಬ ಮೂರು ಗುರ್ತುಗಳಿರುತ್ತವೆ. N ಗುರ್ತಿಗೆ ಈ ನಿಯಂತ್ರಕವನ್ನು ಜೋಡಿಸಿದರೆ ಎಲ್ಲ ಬಗೆಯ ಶಬ್ದಗಳೂ ಒಂದೇ ರೀತಿಯಲ್ಲಿ ಕೇಳಿಸುತ್ತವೆ. L ಗುರ್ತಿಗೆ ತಿರುಗಿಸಿಕೊಂಡರೆ

ಅಲ್ಪ ಆವರ್ತನಾಂಕ ಸ್ವರಗಳು (Low frequency sounds) ಮಾತ್ರ ಜೋರಾಗಿ ಕೇಳಿಸುತ್ತವೆ. ಹಾಗೆಯೇ H ಗುರ್ತಿನಲ್ಲಿ ಅಧಿಕ ಆವರ್ತನಾಂಕ ಸ್ವರಗಳು (High frequency sounds) ಮಾತ್ರ ಜೋರಾಗಿ ಕೇಳಿಸುತ್ತವೆ.

ಈ ನಿಯಂತ್ರಕವನ್ನು ಯಾರು ಯಾವ ಗುರ್ತಿಗೆ ಹೊಂದಿಸಿಕೊಳ್ಳಬೇಕೆಂಬುದನ್ನು ಶ್ರವಣತಜ್ಞರೇ ಸೂಚಿಸುತ್ತಾರೆ.

ಸೂಕ್ಷ್ಮ ಶಬ್ದಗ್ರಾಹಿ (Microphone): ಶ್ರವಣೋಪಕರಣದಲ್ಲಿ ಇದು ಅತಿಮುಖ್ಯ ಭಾಗ. ಇದು ಹೊರಗಿನ ಶಬ್ದಗಳನ್ನು ಪಡೆದುಕೊಂಡು ವಿದ್ಯುತ್ ತರಂಗಗಳನ್ನಾಗಿ ಪರಿವರ್ತಿಸುತ್ತದೆ. ಈ ವಿದ್ಯುತ್ ತರಂಗಗಳು ನಂತರ ಶ್ರವಣೋಪಕರಣದೊಳಗೆ ಇನ್ನಷ್ಟು ಶಕ್ತಿಯುತಗೊಂಡು ಕಿವಿಯಲ್ಲಿನ ಧ್ವನಿಗ್ರಾಹಕಕ್ಕೆ ತಲುಪಿ, ಅಲ್ಲಿ ಶಬ್ದ ತರಂಗವಾಗಿ ಮಾರ್ಪಡುತ್ತದೆ.


ಈ ಸೂಕ್ಷ್ಮಗ್ರಾಹಕವನ್ನು ನೀರು, ದೂಳು, ಕ್ರಿಮಿ-ಕೀಟಗಳಿಂದ ರಕ್ಷಿಸಲೋಸ್ಕರ ನಿರ್ಮಿಸಿದ ಪೆಟ್ಟಿಗೆಯಲ್ಲಿ ಜೋಪಾನವಾಗಿರಿಸುವುದು ಮುಖ್ಯ. ಸೂಕ್ಷ್ಮ ಶಬ್ದಗ್ರಾಹಿಗೆ ಶಾಖ ಮತ್ತು ಕ್ಷ-ಕಿರಣಗಳ ಸಂಪರ್ಕ ವರ್ಜ್ಯ. ಅಲ್ಪ ಸ್ವಲ್ಪ ಆಘಾತವೂ ಈ ಉಪಕರಣಕ್ಕೆ ಮರಣಾಂತಿಕವಾಗಬಹುದೆಂಬುದನ್ನು ನೆನಪಿಡಬೇಕು.

ಶ್ರವಣೋಪಕರಣದ ಭಾಗಗಳು:

ಅ - ಶ್ರವಣೋಪಕರಣದ ಮೇಲ್ಭಾಗ

ಆ - ಶ್ರವಣೋಪಕರಣ

1. ಶಬ್ದ ನಿಯಂತ್ರಕ 2. ಸ್ವಿಚ್ಚು 3. ಟೋನ್ ಕಂಟ್ರೋಲ್ 4. ಮೈಕ್ರೋಫೋನ್ 5. ಕ್ಲಿಪ್ಪು 6. ವೈರು 7. ಪ್ಲಾಸ್ಟಿಕ್ ಟ್ಯೂಬ್ 8. ರಿಸೀವರ್ 9. ಕಿವಿಯಚ್ಚು 10-11. ಧ್ವನಿಗ್ರಾಹಕದ ಹಿಂಭಾಗ ಹಾಗೂ ಮುಂಭಾಗ 12-14. ಪಿನ್ನುಗಳು 13. ಕಿವಿ 15. ಧ್ವನಿಗ್ರಾಹಕ



ಕೆಲವು "ಮಾಡಿ-ಬೇಡಿ"ಗಳು

ಶ್ರವಣೋಪಕರಣವನ್ನು -

★ ಕೆಳಗೆ ಬೀಳಿಸಬೇಡಿ.
★ ರೇಡಿಯೋ, ಟೀವಿ-ಮುಂತಾದ ಯಂತ್ರಗಳ ಮೇಲೆ ಇಡಬೇಡಿ.
★ ಬಿಸಿಲು ಬೀಳುವ ಜಾಗದಲ್ಲಿಡಬೇಡಿ.
★ ವಯರಿಗೆ ಅಥವಾ ಧ್ವನಿಗ್ರಾಹಕಕ್ಕೆ ನೇತಾಡಿಕೊಂಡಿರಲು ಬಿಡಬೇಡಿ.
★ ದೂಳು, ನೀರು ಸೋಕಿಸಬೇಡಿ. ಅಕಸ್ಮಾತ್ ಶ್ರವಣೋಪಕರಣವು ನೆನೆದರೆ ತಕ್ಷಣ ಬ್ಯಾಟರಿಯನ್ನು ಹೊರತಗೆದು ಒಣಗಿದ ಶುದ್ಧ ಬಟ್ಟೆಯೊಂದರಿಂದ ಚೆನ್ನಾಗಿ ಒರೆಸಿ ಶಾಖವಿಲ್ಲದ ಒಣಜಾಗದಲ್ಲಿಡಿ. (ಒಲೆಯಮೇಲಿಟ್ಟೋ ಬಿಸಿಲಿನಲ್ಲಿಟ್ಟೊ ಒಣಗಿಸ ಕೂಡದು)
★ ಕಿವಿ ಕೇಳಿಸುವ ಇತರ ಮಕ್ಕಳಿಗೆ ಶ್ರವಣೋಪಕರಣವನ್ನು ಹಾಕಬೇಡಿ. ಇದರಿಂದ ಅವರೂ ಕಿವುಡರಾಗಬಹುದು.
★ ಸ್ನಾನ ಮಾಡುವಾಗ, ಈಜುವಾಗ ಶ್ರವಣೋಪಕರಣವನ್ನು ಧರಿಸಬೇಡಿ.
★ ಮಕ್ಕಳು,ಬೆಕ್ಕು-ನಾಯಿಗಳಿಗೆ ಶ್ರವಣೋಪಕರಣವು ಸಿಗದಂತೆ ಇಡಬೇಕು.
★ ಶ್ರವಣೋಪಕರಣವನ್ನು ಜೇಬಿಗೆ ಭದ್ರವಾಗಿ ಕ್ಲಿಪ್ ಮಾಡಿಕೊಳ್ಳಿ.
★ ಪ್ರತಿವರ್ಷ ಶ್ರವಣೋಪಕರಣವನ್ನು ತಜ್ಞರಿಂದ ತಪಾಸಣೆ ಮಾಡಿಸಿಕೊಳ್ಳಿ.
★ ಶ್ರವಣೋಪಕರಣವನ್ನು ಧರಿಸದಿದ್ದಾಗ ಸ್ವಿಚ್ಚನ್ನು 'ಆಫ್' ಮಾಡಿಬಿಡಿ. ಆನ್ ಮಾಡೇ ಇಟ್ಟಲ್ಲಿ ಇದರಿಂದ 'ಫೀಡ್‌ಬ್ಯಾಕ್' ಎನ್ನುವ ಶಬ್ದ ಬರುತ್ತಿದ್ದು ಅದು ನಾಯಿ-ಬೆಕ್ಕುಗಳಂತಹ ಪ್ರಾಣಿಗಳನ್ನು ಆಕರ್ಷಿಸಬಹುದು. ಅವೇನಾದರೂ ಸಿಕ್ಕಿ ನಿಮ್ಮ ಉಪಕರಣವನ್ನು ಕೆಡಿಸಲೂಬಹುದು.
★ ಶ್ರವಣೋಪಕರಣವನ್ನು ಆಲ್ಕೋಹಾಲ್ ಅಥವಾ ಇನ್ನಾವುದೇ ಶುದ್ಧಿ ಮಾಡುವ ದ್ರವದಿಂದ ಶುದ್ಧಿಮಾಡಬೇಡಿ. ಉಪಕರಣದ ಹೊರಭಾಗವನ್ನು ಮೃದುವಾದ ಒಣಬಟ್ಟೆಯಿಂದ ಮಾತ್ರ ಒರೆಸಿ.

ಬ್ಯಾಟರಿ(ವಿದ್ಯುತ್ಕೋಶ) : ಶ್ರವಣೋಪಕರಣಗಳು ಸಾಮಾನ್ಯವಾಗಿ 1.5 ವೋಲ್ಟ್ ಬ್ಯಾಟರಿಯ ಸಹಾಯದಿಂದ ಕಾರ್ಯ ನಿರ್ವಹಿಸುತ್ತವೆ. ಬ್ಯಾಟರಿಯ ಸಾಮರ್ಥ್ಯ ಕ್ಷೀಣಿಸಿದಂತೆಲ್ಲಾ ಶಬ್ದ ನಿಯಂತ್ರಕವನ್ನು ಹೆಚ್ಚಿನ ಸಂಖ್ಯೆಗೆ ತಿರುಗಿಸಬೇಕಾಗುತ್ತದೆ. ಗರಿಷ್ಠ 6ನೇ ಅಂಕಿಯವರೆಗೆ ಈ ಹೊಂದಾಣಿಕೆ ಮಾಡಬಹುದು. ತದನಂತರ ಬ್ಯಾಟರಿಯ ಬದಲಾವಣೆ ಮಾಡದೆ ಗತ್ಯಂತರ ವಿಲ್ಲ.

ಹಳೆಯ ಬ್ಯಾಟರಿಯಿಂದ ರಾಸಾಯನಿಕಗಳು ಒಸರಿ ಲೋಹ ಭಾಗಗಳೆಲ್ಲ ಹಾಳಾಗುವ ಅಪಾಯವಿರುವುದರಿಂದ ಪ್ರತಿಸಾರಿ ಹೊಸ ವಿದ್ಯುತ್ ಕೋಶಗಳನ್ನೆ ಬಳಸುವುದೊಳ್ಳೆಯದು. ಹೆಚ್ಚಿನ ಬ್ಯಾಟರಿಗಳನ್ನು ಕಿಸೆಯಲ್ಲಿ ಇಟ್ಟುಕೊಂಡರೆ ನಾಣ್ಯ, ಬೀಗದ ಕೈ ಇತ್ಯಾದಿ ಲೋಹದ ವಸ್ತುಗಳ ಸಂಪರ್ಕದಿಂದ ಅವುಗಳ ಆಯಸ್ಸು ಕುಗ್ಗಬಹುದು.

ತಂತಿ (cord): ಕಿಸೆ ಮಾದರಿ (Body aid) ಶ್ರವಣೋಪಕರಣದಲ್ಲಿ ಈ ತಂತಿಯ ಬಳಕೆಯಾಗುತ್ತದೆ. ಇದು ಕಿವಿಯಚ್ಚಿಗೆ ಸೇರಿಸಲಾಗಿರುವ ಧ್ವನಿಗ್ರಾಹಕಕ್ಕೆ ಶ್ರವಣೋಪಕರಣದಿಂದ ಶಬ್ದವನ್ನೊಯ್ಯುವುದು. ಎರಡು ಅಥವಾ ಮೂರು ಪಿನ್ನಿನ ಸಿಂಗಲ್‌ಕಾರ್ಡ್ (Single cord), ವೈ-ಕಾರ್ಡ್, ವಿ-ಕಾರ್ಡ್ ಇತ್ಯಾದಿಯಾಗಿ ಈ

ತಂತಿಗಳಲ್ಲಿ ವೈವಿಧ್ಯಗಳಿರುವುದರಿಂದ ನಿರ್ದಿಷ್ಟ ಶ್ರವಣೋಪಕರಣಕ್ಕೆ ಸರಿಹೊಂದುವ ತಂತಿಯನ್ನೇ ಉಪಯೋಗಿಸಬೇಕು.

ಅತ್ಯಂತ ನಾಜೂಕಾದ ಈ ತಂತಿಯನ್ನು ಅಷ್ಟೇ ಮುತುವರ್ಜಿಯಿಂದ ನೋಡಿಕೊಳ್ಳುವುದು ಅವಶ್ಯ. ಇದನ್ನು ಹೊಸೆಯುವುದು, ಸುರುಳಿ ಸುತ್ತುವುದು, ಗಂಟು ಹಾಕುವುದು ಮಾಡಿದರ ಒಳಗಿನ ಲೋಹದ ತಂತಿ ತುಂಡಾಗಬಹುದು.

ಧ್ವನಿಗ್ರಾಹಕ (Receiver): ಇದು ಒಂದು ರೀತಿಯಲ್ಲಿ ಧ್ವನಿ ಗ್ರಾಹಕ ಮತ್ತೊಂದು ರೀತಿಯಲ್ಲಿ ಧ್ವನಿವಿಸರ್ಜಕ! ಶ್ರವಣೋಪಕರಣದಲ್ಲಿ ಶಕ್ತಿಯುತಗೊಂಡು ತಂತಿಯ ಮೂಲಕ ಬರುವ ವಿದ್ಯುತ್ ತರಂಗಗಳನ್ನು ಇದು ಶಬ್ದ ತರಂಗಗಳನ್ನಾಗಿ ಮಾರ್ಪಡಿಸಿ ಕಿವಿಯಚ್ಚಿನ ಮೂಲಕ ಕಿವಿಯೊಳಗೆ ರವಾನಿಸುತ್ತದೆ. ಒಂದೊಂದು ಮಾದರಿಯ ಶ್ರವಣೋಪಕರಣಕ್ಕೂ ಒಂದೊಂದು ವಿಧದ ಧ್ವನಿಗ್ರಾಹಕಗಳಿರುತ್ತವೆ. ಎರಡೂ ಕಿವಿಗಳಲ್ಲಿ ಧ್ವನಿಗ್ರಾಹಕ ಬಳಸುತ್ತಿದ್ದರೆ ಎರಡೂ ಒಂದೇ ಮಾದರಿಯವಿರಬೇಕು.

ಅತಿ ನಾಜೂಕಾದ ಈ ಧ್ವನಿಗ್ರಾಹಕವನ್ನು ಕಿವಿಯಚ್ಚಿನಿಂದ (Ear Mould) ಅಥವಾ ತಂತಿಯಿಂದ ಅನಗತ್ಯವಾಗಿ ಬೇರ್ಪಡಿಸಬಾರದು. ಶ್ರವಣೋಪಕರಣ ಧರಿಸಿದ ಮಗುವನ್ನು ಹೊಡೆದರ ಧ್ವನಿಗ್ರಾಹಕ ಹಾಳಾಗುವ ಸಾಧ್ಯತೆಯಿರುತ್ತದೆ.

ಕಿವಿಯಚ್ಚು (Ear Mould): ಧ್ವನಿಗ್ರಾಹಕವನ್ನು ಕಿವಿಗೆ ಸರಿಯಾಗಿ ಕೂಡಿಸಲು ಸಹಾಯಕವಾಗುವ ಇದನ್ನು 'ಅಕ್ರೈಲಿಕ್' ಎಂಬ ಪ್ಲಾಸ್ಟಿಕ್ ಪದಾರ್ಥದಿಂದ ತಯಾರಿಸುತ್ತಾರೆ. ಶಬ್ದ ತರಂಗವು ಧ್ವನಿಗ್ರಾಹಕದಿಂದ ಕಿವಿಯಚ್ಚಿನಲ್ಲಿರುವ ನಾಳದ ಮೂಲಕ ಕಿವಿಯೊಳಗೆ ಪ್ರವೇಶಿಸುತ್ತದೆ.

ಪ್ರತಿಯೊಬ್ಬರ ಕಿವಿಯ ಅಳತೆಗೆ ತಕ್ಕಂತೆ ಈ ಕಿವಿಯಚ್ಚನ್ನು ತಯಾರಿಸಲಾಗುತ್ತದೆ. ಎಡ-ಬಲ ಅಚ್ಚುಗಳು ಸಹ ಪ್ರತ್ಯೇಕವಾಗಿದ್ದು ಒಂದರದ್ದು ಇನ್ನೊಂದಕ್ಕೆ ಸರಿಹೊಂದಲಾರದು.

ಮಕ್ಕಳ ಕಿವಿ ಬೆಳೆಯುವುದರಿಂದ ಹಾಗೂ ವೃದ್ಧರ ಚರ್ಮ ಮುದುರುವುದರಿಂದ ಅವರ ಕಿವಿಯಚ್ಚುಗಳನ್ನು ಆಗಾಗ ಬದಲಿಸುವುದು ಅಗತ್ಯ.

ಶ್ರವಣೋಪಕರಣವು ಹೇಗೆ ಮಾನವನ ಸಹಾಯಕ್ಕೆ ಒದಗಿ ಬರುತ್ತದೋ ಹಾಗೆಯೇ ಬಳಕೆದಾರರಿಂದ ಹಲವಾರು ಕಾಳಜಿಗಳನ್ನೂ ಅಪೇಕ್ಷಿಸುತ್ತದೆ ಎಂಬುದು ಸುಳ್ಳಲ್ಲ. ●

ಬುದ್ಧಿವಾದದ ಬೆಲೆ

ವಿಕ್ಟೋರಿಯಾ ಮಹಾರಾಣಿಯ ಮೊಮ್ಮಗ ತಂದೆತಾಯಿಯರ ಮಾತುಗಳನ್ನು ಕೇಳದೆ ಇಷ್ಟ ಬಂದಂತೆ ಹಣ ವೆಚ್ಚಮಾಡುತ್ತ ಅಲೆಯುತ್ತಿದ್ದ. ಈ ವಿಷಯ ತಿಳಿದು ವಿಕ್ಟೋರಿಯಾ ಎಷ್ಟೋ ಬಾಧೆಪಟ್ಟಳು. ಮೊಮ್ಮಗನಿಗೆ ಬುದ್ಧಿವಾದ ಹೇಳುತ್ತಾ ಹಣದ ಬೆಲೆಯನ್ನು ಗುರ್ತಿಸಿ ಜಾಗ್ರತೆಯಿಂದ ವೆಚ್ಚ ಮಾಡಬೇಕೆಂದು ಒಂದು ಕಾಗದ ಬರೆದಳು. ಅದಕ್ಕೆ ಮೊಮ್ಮಗ ಕೊಟ್ಟ ಉತ್ತರ:

''ನೀವು ದಯವಿಟ್ಟು ಬರೆದ ಕಾಗದ ಸೇರಿತು. ನಿಮ್ಮ ಸಲಹೆಗಳಿಗೆ ಕೃತಜ್ಞ. ನೀವು ನನಗೆ ಬರೆದ ಕಾಗದವನ್ನು ಐದು ಪೌಂಡುಗಳಿಗೆ ಮಾರಾಟಮಾಡಿದೆ! ನನಗೆ ಹಣ ಅವಶ್ಯವಾದ ಸಮಯಕ್ಕೆ ಸರಿಯಾಗಿ ನಿಮ್ಮ ಕಾಗದ ಸೇರಿತು. ಈ ರೀತಿಯಾಗಿ ಆಗಾಗ ಕಾಗದ ಬರೆಯುತ್ತಾ ಇರಿ. ನನ್ನ ಅವಶ್ಯಕತೆಗಳಿಗೆ ಉಪಯೋಗವಾಗುತ್ತೆ!''

ಸಂಗ್ರಹ: **ಕೋಲಾರ್ ಕೃಷ್ಣ ಅಯ್ಯರ್**

ವ್ಯಾಟಿಕನ್ ನಗರದ ರಹಸ್ಯಗಳು

ನಗರ ಮತ್ತು ಸ್ವತಂತ್ರ ರಾಷ್ಟ್ರ ಎರಡೂ ಆಗಿರುವ ವ್ಯಾಟಿಕನ್ ಬರಿ ಕ್ಯಾಥೋಲಿಕ್ ಪಂಥದವರ ಧಾರ್ಮಿಕ ಕೇಂದ್ರವಲ್ಲ. ಇದು ಕಲೆಯ ಬೀಡಿನಂತೆಯೇ ರಹಸ್ಯಗಳ ತವರೂ ಹೌದು.

● *ಸಿರಿಲ್ ಜೆ. ಸಿಕ್ವೇರಾ*

ವ್ಯಾಟಿಕನ್ ನಗರ ಜಗತ್ತಿನ ಅತಿ ಚಿಕ್ಕ ಸ್ವತಂತ್ರ ರಾಜ್ಯ . ಇಲ್ಲಿನ ಸೈಂಟ್ ಪೀಟರ್ಸ್ ಬಾಸಿಲಿಕಾ ರೋಮನ್ ಸಂಸ್ಕೃತಿಯ ದ್ಯೋತಕ. ವ್ಯಾಟಿಕನ್ ನಗರಕ್ಕೆ ಭೇಟಿ ಕೊಡುವ ಯಾತ್ರಿಕರಿಗೆ ಅಲ್ಲಿನ ಪ್ರಮುಖ ಆಕರ್ಷಣೆ ಎಂದರೆ ಪ್ರಾಚೀನ ವಸ್ತು ಸಂಗ್ರಹಾಲಯ ಮತ್ತು ಜಗದ್ವಿಖ್ಯಾತ ಚಿತ್ರಕಾರ ಮೈಕೆಲ್ ಆಂಜೆಲೋ ಅವರ ಕಲಾತ್ಮಕ ಚಿತ್ರಗಳಿಂದ ಕಂಗೊಳಿಸುತ್ತಿರುವ ಸಿಸ್ಟೈನ್ ಚಾಪೆಲ್.

ಆದರೆ ಕಲಾವೈಭವದ ಹಿಂದೆ ಬೇರೆಯೇ ಒಂದು ವ್ಯಾಟಿಕನ್ ಇದೆ. ಸಾಮಾನ್ಯವಾಗಿ



ಯಾತ್ರಿಕರು ಅದನ್ನು ನೋಡುವದಿಲ್ಲ.

1929ರಲ್ಲಿ ಪೋಪ್ ಜಗದ್ಗುರು ಹಾಗೂ ಇಟಾಲಿಯನ್ ಸರಕಾರದೊಳಗಾದ ಒಪ್ಪಂದದ ಪ್ರಕಾರ ಪೋಪ್ ಅವರು ಜಗತ್ತಿನ ಕೆಥೋಲಿಕ್ ಸಮುದಾಯದ(ಈಗಿನ ಸಂಖ್ಯೆ 840 ಮಿಲಿಯ) ಧಾರ್ಮಿಕ ಮುಖಂಡ.

ವ್ಯಾಟಿಕನ್ ರಾಜ್ಯದ ವಿಸ್ತೀರ್ಣ 44 ಹೆಕ್ಟೇರು. ಬರೇ 45 ನಿಮಿಷಗಳಲ್ಲಿ ನೀವು ಈ ನಗರವನ್ನು ಸುತ್ತಾಡಿಕೊಂಡು ಬರಬಹುದು. ಇದರ ನಿವಾಸಿಗಳ ಸಂಖ್ಯೆ 342. ಅವರೆಲ್ಲಾ ವಿವಿಧ ದೇಶಗಳ ನಾಗರಿಕರು. ವ್ಯಾಟಿಕನ್ ರಾಜ್ಯದ ಪೌರತ್ವವನ್ನು ಪಡೆದ ಸುಮಾರು 404 ಮಂದಿ ವಿದೇಶಗಳಲ್ಲಿ ವಾಸಿಸುತ್ತಿದ್ದಾರೆ. ಪ್ರತಿ

ದಿನ ಬೆಳಿಗ್ಗೆ ಸುಮಾರು 1,500 ಕೆಲಸಗಾರರು ಒಂದು ಶತಮಾನಗಳಷ್ಟು ಹಳೆಯ ಪ್ರಾಂಗಣ ಗಳನ್ನು ಕಾರು ಪಾರ್ಕಿಗೆ ಅಣಿಗೊಳಿಸುತ್ತಾರೆ. '' ಅವರು ಸೈಕಲ್‌ಗಳಲ್ಲಿ ಬಂದರೆ ಚೆನ್ನಾಗಿತ್ತು'' ಅನ್ನುತ್ತಾರೆ ಒಬ್ಬ ಅಧಿಕಾರಿ. ಕಾರಣ, ಸುಮಾರು 100 ಕಾರುಗಳು ನಿಲ್ಲುವಷ್ಟು ಜಾಗವನ್ನು ಈ ಸಿಬ್ಬಂದಿಗಳ ವಾಹನಗಳು ತುಂಬುತ್ತವೆ. ಈ ವಾಹನಗಳಲ್ಲಿ ಪೋಪ್ ಜಾನ್ ಪಾಲ್ II ಅವರ ಗುಂಡು ನಿರೋಧಕ 'ಪೋಪ್‌ಮೊಬಾಯ್ಲ್' ಕಾರೂ ಇದೆ.

ಮಧ್ಯಯುಗೀನ ಕೋಟೆ

ವ್ಯಾಟಿಕನ್ ನಗರ-ರಾಜ್ಯಕ್ಕೆ ತನ್ನದೇ ಆದ ಧ್ವಜ (ಹಳದಿ ಮತ್ತು ಬಿಳಿವರ್ಣ), ರಾಷ್ಟ್ರಗೀತೆ, ಸೈನ್ಯ (ಸ್ವಿಸ್‌ಗಾರ್ಡುಗಳು,) ನ್ಯಾಯಾಲಯ ಗಳು, ಜೈಲು (ಖಾಲಿ), ಅಂಚೆಕಚೇರಿ, ರೇಡಿಯೊ ಕೇಂದ್ರ, (34 ಭಾಷೆಗಳಲ್ಲಿ ಪ್ರಸಾರ) ಹಾಗೂ ಲೈಸೆನ್ಸ್ ಫಲಕಗಳಿವೆ.

ಇಟಾಲಿಯನ್ ಹಣ 'ಲೀರಾ' ಆದರೂ ವ್ಯಾಟಿಕನ್ ತನ್ನದೇ ಆದ ನಾಣ್ಯ ಹಾಗೂ ಅಂಚೆ ಚೀಟಿಗಳನ್ನು ಮುದ್ರಿಸುತ್ತದೆ. ಇದರಿಂದ ಕಾಳ ಧನವೂ ಸೃಷ್ಟಿಯಾಗುತ್ತದೆ.

ವ್ಯಾಟಿಕನ್ ನಗರದ ವಿನ್ಯಾಸ ನೋಡಿದಾಗ ಮಧ್ಯಯುಗೀನ ಪ್ರಾಚೀನ ಕೋಟೆಯ ನೆನಪು ಮರುಕಳಿಸುತ್ತದೆ. ಅದರ ಗೋಡೆಗಳು ಸುಮಾರು 18 ಮೀಟರ್ ಎತ್ತರ. ವ್ಯಾಟಿಕನ್ ಮ್ಯೂಸಿಯಂ ಮತ್ತು ಸೈಂಟ್ ಪೀಟರ್ಸ್ ಮುಖ್ಯ ದ್ವಾರಗಳಲ್ಲಿ ಮಾತ್ರ ಸಾರ್ವಜನಿಕರಿಗೆ ಮುಕ್ತ ಪ್ರವೇಶ. ಉಳಿದ ಎಲ್ಲಾ ದ್ವಾರಗಳನ್ನು ಬಣ್ಣ ಬಣ್ಣದ ಸಮವಸ್ತ್ರ ಧರಿಸಿದ ಸ್ವಿಸ್‌ಗಾರ್ಡುಗಳು ಅಥವಾ ಪೋಲೀಸರು ಕಾಯುತ್ತಾರೆ.

ಸೈಂಟ್ ಆ್ಯನ್ಸ್ ದ್ವಾರದಲ್ಲಿ ನಿಮ್ಮ ಗುರುತು ಚೀಟಿಯನ್ನು ಕೊಟ್ಟು ಪರಿಚಯ ಬರೆದು ಕಳಿಸಿ ದರೆ, ಕೆಲವೇ ಕ್ಷಣಗಳಲ್ಲಿ ನೀವು ಕರ್ನಲ್ ರೊಲ್ಯಾಂಡ್ ಬಚ್ಸ್- ಬಿಂಜ್ ಅವರ ಮುಂದೆ ಹಾಜರು. ಈ ಕರ್ನಲ್ ಸುಮಾರು 100 ಮಂದಿ ಸ್ವಿಸ್ ಗಾರ್ಡುಗಳ ಕಮಾಂಡರ್ ಆಗಿದ್ದು ಪೋಪ್‌ರ ರಕ್ಷಣಾ ಕಾರ್ಯದ ಜವಾಬ್ದಾರಿ ವಹಿಸುತ್ತಾರೆ.

ವೃತ್ತಿಯಲ್ಲಿ ಬ್ಯಾಂಕರ್ ಆಗಿರುವ ಕರ್ನಲ್ ಬಿಂಜ್ ಕೆಲವೊಂದು ತತ್ವಗಳಿಗನುಸಾರವಾಗಿ ಈ ಕೆಲಸಕ್ಕೆ ಸೇರಿದರು. ''ಪೂಜ್ಯ ಜಗದ್ಗುರು ಹಾಗೂ ಕೆಥೋಲಿಕ್ ಸಭೆಯ ಸೇವೆಗಾಗಿ ನಾನು ಈ ಕೆಲಸ ಮಾಡುತ್ತಿದ್ದೇನೆ '' ಅನ್ನುತ್ತಾರೆ ಅವರು.


ಸೈಂಟ್ ಆ್ಯನ್ಸ್ ಎಂಬುದು ವ್ಯಾಟಿಕನ್ ನಗರದ ಪ್ಯಾರಿಶ್ ಚರ್ಚ್. ಅದೊಂದು ಚಿಕ್ಕ ಪಟ್ಟಣ. ಕಟ್ಟಡಗಳಿಂದ ತುಂಬಿದ ಈ ಪಟ್ಟಣದ ರಸ್ತೆಯ ಇಕ್ಕೆಡೆಗಳಲ್ಲಿ ಸಣ್ಣ ಪುಟ್ಟ ಅಂಗಡಿ ಗಳು. ಇಲ್ಲಿನ ಅಂಗಡಿಗಳಲ್ಲಿ ಮೂರನೇ ಒಂದಾಂಶ ಬೆಲೆ ಕಮ್ಮಿ. ಕಾರಣ ವ್ಯಾಟಿಕನ್ ಕಸ್ಟಂಸ್ ಕರ ಭರಿಸುವುದಿಲ್ಲ.

ವ್ಯಾಟಿಕನ್ ಅರಮನೆಯಿರುವುದು ಇದೇ ಚಿಕ್ಕ ಪಟ್ಟಣದಲ್ಲಿ. ಈ ಅರಮನೆಯಲ್ಲಿ 1400 ಕ್ಕೂ ಮೇಲ್ಪಟ್ಟು ಕೋಣೆಗಳಿವೆ. ಇದರಲ್ಲಿ 17ನೆಯ ಶತಮಾನದಲ್ಲಿ ಕಟ್ಟಿದ 'ಪೋಪ್ ನಿವಾಸ'ವೂ ಸೇರಿದೆ. ಇದರ ಮೇಲಿನ ಅಂತಸ್ತಿನಲ್ಲಿ ಈಗಿನ ಪೋಪ್ ಜಾನ್ ಪಾಲ್ II ಅವರ 11 ಕೋಣೆಗಳ ಫ್ಲ್ಯಾಟ್ ಇದೆ. ಇದರ ಕಿಟಕಿಗಳ ಮುಖಾಂತರ ಇಡೀ ರೋಮ್ ನಗರವನ್ನು ವೀಕ್ಷಿಸಬಹುದು.

ಖಾಸಗಿ ಜಗತ್ತು

ಪೋಪ್ ಜಾನ್ ಪಾಲ್ II ಅವರ ದೈನಿಕ ಕಾರ್ಯಕ್ರಮ ಮಾಳಿಗೆಯ ಎಡ ಪಾರ್ಶ್ವದಲ್ಲಿರುವ ಅವರ ಖಾಸಗಿ ದೇವಮಂದಿರದಲ್ಲಿ ಬೆಳಿಗ್ಗೆ ಏಳು ಘಂಟೆಗೆ ಆರಂಭವಾಗುತ್ತದೆ. ಕೆಲವೇ ವ್ಯಾಟಿಕನ್ ಅಧಿಕಾರಿಗಳೊಂದಿಗೆ ಅವರು ದಿವ್ಯ ಬಲಿಪೂಜೆಯನ್ನು ಅರ್ಪಿಸುತ್ತಾರೆ. ಕೆಲವೊಮ್ಮೆ ಪೋಪ್ ಅವರು ಈ ಅಧಿಕಾರಿಗಳನ್ನು ಬೆಳಗಿನ ಉಪಾಹಾರಕ್ಕೂ ಆಹ್ವಾನಿಸುತ್ತಾರೆ.

ಹಗಲಿನಲ್ಲಿ ಪ್ರಾರ್ಥನೆ ಹಾಗೂ ಧ್ಯಾನಕ್ಕಾಗಿ ಒಂದಕ್ಕಿಂತಲೂ ಹೆಚ್ಚು ಬಾರಿ ಪೋಪ್ ಅವರು ತಮ್ಮ ಖಾಸಗಿ ದೇವಮಂದಿರಕ್ಕೆ ಹೋಗುತ್ತಾರೆ.



ಮಧ್ಯಾಹ್ನದ ಊಟಕ್ಕೆ ಪೋಪ್ ಅವರೊಂದಿಗೆ ಮೂವರು ಅಥವಾ ನಾಲ್ವರು ಅತಿಥಿಗಳಿರುತ್ತಾರೆ. ಸೂಪ್, ಪೋಲಿಷ್ ಸಾಸೆಜ್, ತರಕಾರಿ, ಪಲ್ಯ ಮತ್ತು ಒಂದು ಲೋಟ ವೈನ್ - ಇವಿಷ್ಟೇ ಅವರ ಮಧ್ಯಾಹ್ನದ ಊಟ.

ಅತಿಥಿಗಳಿಗೆ ಪೋಪ್ ಅವರೊಂದಿಗೆ ಮಾತಾಡುವುದೆಂದರೆ ತುಂಬಾ ಇಷ್ಟ. ಪೋಪ್ ಜಾನ್ ಪಾಲ್ II ಅವರಿಗೆ ಆರಕ್ಕೂ ಹೆಚ್ಚು ಭಾಷೆಗಳು ಗೊತ್ತಿವೆ. ಮಾತಾಡುವಾಗ ಪದೇ ಪದೇ ಕೈಗಡಿಯಾರ ನೋಡುವುದು ಪೋಪ್ ಅವರ ಅಭ್ಯಾಸ.

ಪೋಪ್ ಜಾನ್ ಪಾಲ್ II ಅವರ ಖಾಸಗಿ ಜಗತ್ತಿನ ಹೃದಯವೆಂದರೆ ಅವರ ಚಿಕ್ಕ ಅಭ್ಯಾಸದ ಕೋಣೆ. ಅದರಲ್ಲೊಂದು ಸಾಗವಾನಿ ಮರದ ಕೆತ್ತನೆಯ ಮೇಜು. ಅದರಲ್ಲೇ ಅವರ ಕಾರ್ಯ ಆರಂಭ. ಅಲ್ಲಿಯೇ ಅವರು ಟಿ.ವಿ. ನೋಡುವುದು, ಸ್ಟೀರಿಯೊ ಆಲಿಸುವುದು ಅಥವಾ ಓದುವುದು.

ರವಿವಾರದಂದು ಮಧ್ಯಾಹ್ನ ಪೋಪ್ ಅವರು ತಮ್ಮ ಕೋಣೆಯ ಕಿಟಿಕಿ ತೆರೆದಿಟ್ಟು ಸೈಂಟ್ ಪೀಟರ್ಸ್ ಸ್ಕ್ವೇರ್‌ನಲ್ಲಿ ಜಮಾಯಿಸಿದ ಜನಸ್ತೋಮವನ್ನು ಆಶೀರ್ವದಿಸುತ್ತಾರೆ. ಅವರಿಗೆ ವಿಶ್ರಾಂತಿ ಸಿಗುವದೇ ಕಮ್ಮಿ. ಅವರ ವಿಶ್ರಾಂತಿಯೆಂದರೆ, ತಮ್ಮ ನಿವಾಸದ ಮಾಳಿಗೆಯ ಮೇಲೆ ಸ್ವಲ್ಪ ಸುತ್ತಾಡುವುದು ಅಥವಾ ತಮ್ಮ ಬೇಸಿಗೆ ನಿವಾಸದ ಬಳಿಯಿರುವ ಈಜುಕೊಳದಲ್ಲೊಂದು ಸ್ನಾನ ಹಾಗೂ ಚಳಿಗಾಲದಲ್ಲಿ ಕೆಲವೊಮ್ಮೆ ಸ್ಕೀಯಿಂಗ್.

ವ್ಯಾಟಿಕನ್ ನಗರದ ಗುಪ್ತವಲಯಗಳಲ್ಲಿ ಅಪರಿಚಿತರು ಹೋಗುವುದು ವಿರಳ. ಈ ರಹಸ್ಯ ವಲಯದಲ್ಲಿರುವ ಮೆಟಿಲ್ಡಾ ಚಾಪೆಲ್‌ನಲ್ಲಿ ಪೋಪ್ ಅವರು ಆಧ್ಯಾತ್ಮಿಕ ಧ್ಯಾನ ಕಾರ್ಯಗಳಿಗೆ ಹಾಜರಾಗುತ್ತಾರೆ.

ಅಲ್ಲಿಯೇ ಇರುವ ಚಿಕ್ಕದೊಂದು ಕೋಣೆಯಲ್ಲಿ ಸಂತ ಲಾರೆನ್ಸ್ ಅವರ ತಲೆಬುರುಡೆ ಎದ್ದು ಕಾಣುತ್ತದೆ. ಕ್ರಿಸ್ತ ಶಕ 258ರಲ್ಲಿ ಸಂತ ಲಾರೆನ್ಸರು ಧರ್ಮರಕ್ಷಣೆಗಾಗಿ ಪ್ರಾಣ ತೆತ್ತರೆಂಬ ನಂಬಿಕೆಯಿದೆ.

ಪ್ರಸಿದ್ಧ ಪುಸ್ತಕ ಭಾಂಡಾರ

ಪ್ರವಾಸಿಗರಿಗೆ ನೋಡಲು ಅವಕಾಶವಿಲ್ಲದ ಇನ್ನೊಂದು ಸ್ಥಳವೆಂದರೆ 16ನೇ ಶತಮಾನದ ಕಾರ್ಡಿನಲ್ ಬಿಬ್ಬಿಯೆನಾರ ಸ್ನಾನದ ಕೋಣೆ. ಖ್ಯಾತ ಕಲಾವಿದ ರಾಫಾಯೆಲ್ ಈ ಸ್ನಾನದ ಕೋಣೆಯನ್ನು ಮೃಗಪಕ್ಷಿಗಳಿಂದ ತುಂಬಿದ ಮನಮೋಹಕ ಪ್ರಕೃತಿ ದೃಶ್ಯಗಳಿಂದ ಚಿತ್ರಿಸಿದ್ದಾನೆ.

ವ್ಯಾಟಿಕನ್ ಅರಮನೆಯ ಒಂದು ಭವ್ಯ ಹಾಲ್‌ನಲ್ಲಿ ಸುಪ್ರಸಿದ್ಧ ಪುಸ್ತಕ ಭಾಂಡಾರವಿದೆ. 1475ರಲ್ಲಿ ಅದರ ಸ್ಥಾಪನೆ. ಈ ಪುಸ್ತಕ ಭಾಂಡಾರದಲ್ಲಿ ಸುಮಾರು ಇಪ್ಪತ್ತುಲಕ್ಷ ವಸ್ತುಗಳಿವೆ. ಅವುಗಳಲ್ಲಿ ಅಪರೂಪದ ಪುಸ್ತಕಗಳು ಹಸ್ತಪ್ರತಿಗಳು ಸೇರಿವೆ. ಇಲ್ಲಿನ ಕಪಾಟುಗಳನ್ನು ಒಂದಕ್ಕೊಂದು ಜೋಡಿಸಿದರೆ ಅವು 100 ಕಿಲೋಮೀಟರ್ - ಅಂದರೆ ಮಂಗಳೂರಿಂದ ಕುಂದಾಪುರದವರೆಗೆ - ಉದ್ದಕ್ಕೆ ಚಾಚಬಹುದು. ಈ ಪುಸ್ತಕ ಭಾಂಡಾರದಲ್ಲಿ ಗ್ರೀಕ್, ಲ್ಯಾಟಿನ್, ಹಿಬ್ರ್ಯೂ, ಅರೇಬಿಕ್ ಪುಸ್ತಕಗಳೂ, ಖ್ಯಾತ ಸಂಗೀತಕಾರರ ಮೂಲಸಂಗೀತ ಪ್ರತಿಗಳೂ, ಭಿನ್ನಮತೀಯರಾದ ಎಂಟನೇ ಕಿಂಗ್ ಹೆನ್ರಿ ಮತ್ತು

ಮಾರ್ಟಿನ್ ಲೂಥರ್ ಅವರು ಬರೆದ ಮೂಲ ಪತ್ರಗಳೂ ಇವೆ.

ಕ್ರಿಸ್ತ ಶಕ 350ರಲ್ಲಿ ಗ್ರೀಕ್ ಭಾಷೆಯಲ್ಲಿ ಚರ್ಮದಮೇಲೆ ಬರೆದ ಅಪರೂಪದ ವ್ಯಾಟಿಕನ್ ಬೈಬಲ್ (ಕೊಡೆಕ್ಸ್ ವತಿಕಾನುಸ್) ಕೂಡ ಇಲ್ಲಿದೆ. ಇಲ್ಲಿನ ವಾಚನಾಲಯ ಸಂಶೋಧಕರಿಗೆ ಮಾತ್ರ ಮುಕ್ತ.

ಪೋಪ್ ಅವರು ಎರಡು ಪ್ರತ್ಯೇಕ ಆಡಳಿತ ವಿಭಾಗಗಳ ಮುಖ್ಯಸ್ಥರಾಗಿದ್ದಾರೆ. ಮೊದಲನೆಯದು ಧರ್ಮಸಭೆ (ಹೋಲಿ ಸೀ). ಇದರಲ್ಲಿ ಹತ್ತು ಮಂದಿ ಕಾರ್ಡಿನಲ್‌ಗಳಿದ್ದಾರೆ. ಅವರು ಧರ್ಮಸಭೆಗೆ ಸಂಬಂಧಪಟ್ಟ ಕೆಥೋಲಿಕ್ ಶಿಕ್ಷಣ, ಶ್ರದ್ಧೆ, ಹೊಸ ಸಂತರು ಹಾಗೂ ವಿವಿಧ ಮತೀಯ ಮೇಳಗಳ ಮೇಲ್ವಿಚಾರಣೆ ನೋಡುತ್ತಾರೆ.

ಇನ್ನೊಂದು ವಿಭಾಗ ವ್ಯಾಟಿಕನ್ ನಗರ-ರಾಜ್ಯದ ಆಡಳಿತೆಯನ್ನು ನೋಡಿಕೊಳ್ಳುತ್ತದೆ. ಪೋಪ್ ಜಾನ್ ಪಾಲ್ II ಅವರು ಈ ಅಧಿಕಾರಿಶಾಹಿ ವರ್ಗದ ಆಡಳಿತ ದರ್ಪವನ್ನು ಮೆಚ್ಚದ ಕಾರಣ ಈ ಎರಡು ಮಂಡಳಿಗಳ ಉಸ್ತುವಾರಿಯನ್ನು ಅವರ ಆಪ್ತ ಕಾರ್ಯದರ್ಶಿ 73 ವರ್ಷ ವಯಸ್ಸಿನ ಆಗೊಸ್ತೀನೊ ಕಾರ್ಡಿನಲ್ ಕಾಸರೋಲಿ ಅವರಿಗೆ ವಹಿಸಿ ಕೊಡಲಾಗಿದೆ. ಅತಿ ಮುಖ್ಯ ವಿಷಯಗಳನ್ನು ಮಾತ್ರ ಪೋಪ್ ಅವರ ಅನುಮತಿಗಾಗಿ ಕಳುಹಿಸಿಕೊಡಲಾಗುತ್ತದೆ.

ಪ್ರಸಕ್ತ ಆಡಳಿತ ಕ್ರಮ

ಪೋಪ್ ಅವರು ಕಾರ್ಡಿನಲ್‌ಗಳನ್ನು ನೇಮಿಸುತ್ತಾರೆ. ಈ ಕಾರ್ಡಿನಲ್‌ಗಳ ಹುದ್ದೆಯ ಅವಧಿ ಅವರ ಜೀವಿತ ಕಾಲದವರೆಗೆ. ಅವರ ಪ್ರಮುಖ ಕೆಲಸವೆಂದರೆ ಪೋಪ್ ಅವರ ಉತ್ತರಾಧಿಕಾರಿಯನ್ನು ತಮ್ಮೊಳಗಿಂದಲೇ ಆರಿಸಿಕೊಳ್ಳುವುದು. ಆದರೆ ತಮ್ಮ 80ನೆ ವಯಸ್ಸಿನಲ್ಲಿ ಅವರು ಈ ಹಕ್ಕನ್ನು ಕಳೆದುಕೊಳ್ಳುತ್ತಾರೆ.

ಈಗ ಮತದಾನದ ಹಕ್ಕಿರುವ ಸುಮಾರು 102 ಕಾರ್ಡಿನಲ್‌ಗಳು ಪ್ರಪಂಚದಾದ್ಯಂತ ಇದ್ದಾರೆ. ಭಾರತದಲ್ಲೂ ಲಾರೆನ್ಸ್ ಕಾರ್ಡಿನಲ್ ಪಿಕಾಚಿ



ಕಾವೇರಿಯನು ಹರಿಯಲು ಬಿಟ್ಟು ವಿಶ್ವೇಶ್ವರಯ್ಯ ಶ್ರಮಪಡದಿದ್ದರೆ... ಕನ್ನಂಬಾಡಿ ಕಟ್ಟದಿದ್ದರೆ...



ಆಗುತ್ತಿತ್ತೇ ಈ ಗೋಳು..... ನಮ್ಮ ಕನ್ನಡಿಗರ ಬಾಳು.,...

(ಕಲ್ಕತ್ತ) ಹಾಗೂ ಸೈಮನ್ ಕಾರ್ಡಿನಲ್ ಪಿಮೆಂಟಾ (ಮುಂಬಯಿ) ಅವರಿದ್ದಾರೆ.

ಆಡಳಿತಕ್ಕೆ ಸಂಬಂಧಿಸಿದ ಎಲ್ಲಾ ಸಂಪರ್ಕಗಳೂ ಪತ್ರಗಳ ಮೂಲಕವೇ ನಡೆಯುತ್ತದೆ. ಪ್ರತ್ಯುತ್ತರಕ್ಕೆ ಕೆಲವು ವಾರಗಳೇ ತಗಲಬಹುದು.

ಕಾರ್ಡಿನಲ್‌ರ ಅತಿ ಹೆಚ್ಚು ಮಾಸಿಕ ವೇತನ ಎಂದರೆ 2.4 ಮಿಲಿಯಾ ಲೀರೆ (100 ಇಟೇಲಿಯನ್ ಲೀರೆ ಅಂದರೆ ನಮ್ಮ ಒಂದು ರೂಪಾಯಿ). ಆಡಳಿತ ವರ್ಗದ ಸಿಬ್ಬಂದಿಗೆ ಮಾಸಿಕ ವೇತನವನ್ನು ನಗದುರೂಪದಲ್ಲಿ ಕೊಡಲಾಗುತ್ತದೆ. ಈ ಸಿಬ್ಬಂದಿಯ ಹೇಳಿಕೆ ಪ್ರಕಾರ ಅವರು ತುಂಬಾ ಕಡಿಮೆ ವೇತನಕ್ಕಾಗಿ ದುಡಿಯುತ್ತಾರೆ.

1982ರಲ್ಲಿ ಸುಮಾರು 1200 ಕಾರ್ಮಿಕರು ವ್ಯಾಟಿಕನ್ ನಗರದಲ್ಲಿ ಹರತಾಳ ನಡೆಸಿದರು. ಪೋಪ್ ಅವರಿಗಾಗಿ ದುಡಿಯುವುದೆಂದರೆ ಒಂದು ತರದ ಆತ್ಮಗೌರವವೂ ಇದೆ. ಹಾಗೂ ಕಾರ್ಮಿಕ ವರ್ಗಕ್ಕೆ ಕೆಲವು ಸವಲತ್ತುಗಳೂ ಇವೆ. ವಾರಕ್ಕೆ 36 ತಾಸು ಕೆಲಸ ಮಾಡಿದ ಕಾರ್ಮಿಕರು ಇಟಾಲಿಯನ್ ಟ್ಯಾಕ್ಸ್‌ನಿಂದ ಮುಕ್ತರಾಗಿದ್ದಾರೆ. ಅವರಿಗೆ ವೈದ್ಯಕೀಯ ಸವಲತ್ತು ಮಾತ್ರವಲ್ಲದೆ ಕಡಿಮೆ ದರದಲ್ಲಿ ಆಹಾರವಸ್ತುಗಳು ಮತ್ತು ಪೆಟ್ರೋಲ್ ಇತ್ಯಾದಿ ದೊರಕುತ್ತವೆ.

ವಿಷಯ ಸಂಗ್ರಹ

ವ್ಯಾಟಿಕನ್ ನಗರದ ಪೂರ್ವದಲ್ಲಿ ಸೈಂಟ್ ಮಾರ್ಥಾಸ್ ಹಾಸ್ಟೆಲ್ ಇದೆ. ಇಲ್ಲಿನ ಅತ್ಯಾಧುನಿಕ ಪೇಪಲ್ ಸಭಾಭವನದಲ್ಲಿ ಒಮ್ಮೆಗೆ ಸುಮಾರು 7,000 ಜನರು ಆರಾಮವಾಗಿ ಆಸೀನರಾಗಬಹುದು.

ಇಲ್ಲಿಯೇ ಹತ್ತಿರದಲ್ಲಿ ಶ್ರದ್ಧಾಸಕ್ತಿಯ ಇಲಾಖೆಯಿದೆ. ಪ್ರೊಟೆಸ್ಟಂಟ್ ಪಂಥವನ್ನು ಅಳಿಸುವ ದಕ್ಕೋಸ್ಕರ 1542ರಲ್ಲಿ ಅದನ್ನು ಸ್ಥಾಪಿಸಲಾಯಿತು. ನಂತರ ಅದಕ್ಕೆ 'ಇಂಕ್ವಿಜಿಶನ್' ಅಂತಲೂ, 1965ರಲ್ಲಿ 'ಪವಿತ್ರ ಕಾರ್ಯಾಲಯ' ಅಂತಲೂ ಪುನರ್ ನಾಮಕರಣವಾಯಿತು.

16ನೇ ಶತಮಾನದ ಕಟ್ಟಡದಲ್ಲಿರುವ ಈ ಕಾರ್ಯಾಲಯದಲ್ಲಿ ಹತ್ತು ಜನ ಯಾಜಕರು ಹಾಗೂ ಒಬ್ಬ ಕನ್ಯಾಸ್ತ್ರೀಯು ಪ್ರಪಂಚದಾದ್ಯಂತ ಕೆಥೋಲಿಕ ಶಿಕ್ಷಣಕ್ಕೆ ಸಂಬಂಧಪಟ್ಟ ವಿಷಯಗಳನ್ನು ಸಂಗ್ರಹಿಸಿಡುತ್ತಾರೆ.

ಭಿನ್ನಮತೀಯರನ್ನು, ಅವರೆಲ್ಲಿದ್ದರೂ, ಇಲ್ಲಿಗೆ ಕರೆಸಿ ಅವರೊಡನೆ ಸೌಹಾರ್ದಯುತ ಮಾತುಕತೆ ನಡೆಸಲಾಗುವುದು. ತಮ್ಮ ಹಠಮಾರಿತನವನ್ನು ಬಿಡದವರನ್ನು ಶಿಸ್ತಿಗೂ ಒಳಪಡಿಸಲಾಗುವುದು.

ವ್ಯಾಟಿಕನ್ ನಗರದಿಂದ ಹೊರಬರಲು ಗಂಟೆಗಳ ಮಹಾದ್ವಾರವನ್ನು ಹಾದುಬರಬೇಕು. ಅಲ್ಲಿಗೆ ಬಂದಾಗ ಬಸವಳಿದ ಪ್ರವಾಸಿಗರೂ ಸ್ಮರಣಿಕೆಗಳನ್ನು ಮಾರುವವರೂ ಸಿಗುತ್ತಾರೆ.

ಸೈಂಟ್ ಪೀಟರ್ಸ್ ಚೌಕದ ಬೃಹದ್ ಗೋಡೆಗಳ ಹಿಂದೆ ಇನ್ನೆಷ್ಟು ರಹಸ್ಯಗಳು ಅಡಗಿರುವುವೋ! ●

(ಸಾಧಾರ)

ಎಷ್ಟು ಉದ್ದದ ಪತ್ರ, ಬಲ್ಲಿರಿ?

ರಾಜೇಂದ್ರಚಂದ್ ಠಾಕೂರಿ ಎಂಬ ಇಪ್ಪತ್ತು ವರ್ಷ ವಯಸ್ಸಿನ ನೇಪಾಳಿ ಯುವಕ ತನ್ನ ಭಾರತದ ಮಿತ್ರನಿಗೆ ಒಂದು ಪತ್ರ ಬರೆದ. ಅದರಲ್ಲಿ ಆಶ್ಚರ್ಯವೇನಿದೆ ಎಂದಿರಾ?

ಆ ಪತ್ರದ ಪುಟ ಸಂಖ್ಯೆ 10,315. ಅದರ ಒಟ್ಟು ತೂಕ 42 ಕೆ.ಜಿ.ಗಳು! ಪತ್ರದ ಪುಟಗಳನ್ನು ಒಂದರ ಪಕ್ಕ ಒಂದರಂತೆ ಇರಿಸಿದರೆ ಅದು 3 ಕಿ.ಮೀ. ಆಕ್ರಮಿಸಿಕೊಳ್ಳುತ್ತದೆ!

ಸಂಗ್ರಹ : ಕೋಲಾರ ಕೃಷ್ಣ ಅಯ್ಯರ್

ನಮ್ಮ ನಾಟಕದ ಕೆಲವು ಅಂಕಗಳು....

● *ಗೋಪಾಲ ವಾಜಪೇಯಿ*

> ಬೀಳುವ ಹಣ್ಣಿನಲ್ಲಿಯೆ ಏಳುವ ಬೀಜ ಅಡಗಿದ್ದಂತೆ ಅವನತಿಯ ಕಾರಣಾದಲ್ಲಿಯೆ ಉನ್ನತಿಗೆ ಪ್ರೇರಣೆ ದೊರೆಯಬಹುದಾಗಿದೆ. ಕನ್ನಡ ರಂಗಭೂಮಿಯು ಮತ್ತೆ ಉತ್ತಮಗೊಳ್ಳಬೇಕೆಂದರೆ ಆ ಉನ್ನತಿಯ ಪ್ರೇರಣೆಯನ್ನು ನಾವು ಮೊದಲು ಕಂಡುಕೊಳ್ಳಬೇಕು.
> ● *ಶ್ರೀರಂಗ*

"ಅಂಕದ ಪರದೆ ಜಾರಿದ ಮೇಲೆ... ನಾಟಕವಿನ್ನೂ ಉಳಿದಿಹುದೆ?..."- ಹಳೆಯ ಕನ್ನಡ ಚಿತ್ರವೊಂದರ ವಿಷಾದಗೀತೆಯಿದು.

ಕನ್ನಡ ರಂಗಭೂಮಿಯನ್ನು ಅಂಕದ ಪರದೆ ಆವರಿಸಿಕೊಂಡಿದ್ದು ಮತ್ತು ಮೊತ್ತಮೊದಲ ಬಾರಿಗೆ ತೆರದುಕೊಂಡದ್ದು ಗಾಂಧಿ ಹುಟ್ಟಿದ ವರ್ಷದಲ್ಲಿ. ಸಂಕಟದಲ್ಲಿದ್ದ ನಮ್ಮ ಸಾಂಸ್ಕೃತಿಕ ಲೋಕಕ್ಕೆ ಆಗೊಬ್ಬ ವೆಂಕಟರಮಣನ ಪ್ರವೇಶವಾಯಿತು. 'ಶ್ರೀನಿವಾಸ'ನೆಂಬ ಅಂಕಿತದಲ್ಲಿ ಅಂಕದ ಪರದೆ ತೆರೆದು ಅದ್ಭುತವನ್ನು ತೋರಿಸಿದ ನಾಟಕಕಾರ ಅವರು - ಅಗಳಗಟ್ಟಿ ವೆಂಕಣ್ಣಾಚಾರ್ಯರು. ಮೊದಲ ವೃತ್ತಿನಾಟಕ ಸಂಸ್ಥೆ 'ಹಲಸಿಗೆ ನಾಟಕ ಮಂಡಳಿ' ಈ ನಾಟಕಕಾರನ ನಾಟಕಗಳನ್ನು ಪ್ರಯೋಗಿಸಿ ತುಂಗೆಯೀಚೆಗಿನ ನಾಡನ್ನೆಲ್ಲ ಸುತ್ತಿತು. ಅಲ್ಲಿಂದ ಮುಂದೆ ನಾಡಿನಾದ್ಯಂತ ವೃತ್ತಿಕಂಪನಿಗಳುದಿಸಿ ರಂಗಿನಲೋಕವನ್ನು ಸೃಷ್ಟಿಸಿಟ್ಟವು. ಎಲ್ಲೆಲ್ಲೂ 'ನಾಟಕಸಭಾ'ಗಳು, 'ನಾಟಕ ಮಂಡಳಿ', 'ನಾಟಕ ಕಂಪನಿ'ಗಳು.

ಪಂಡಿತರು ಪುರಾಣೇತಿಹಾಸಗಳ ಪ್ರಸಂಗಗಳನ್ನು ರಮ್ಯನಾಟಕಗಳಾಗಿಸಿ ನೀಡಿದರು. ಜನ ಬಾಯ್ದೆರೆದು ನೋಡಿಯೇ ನೋಡಿದರು.

ಮೂವತ್ತಾರು ವರ್ಷಗಳ ನಂತರ, ಈ ಶತಮಾನದ ಮೊದಲ ದಶಕದಲ್ಲಿ ಕೆಲವು ಬುದ್ಧಿವಂತರಲ್ಲಿ ಸಾಮಾಜಿಕ ಪ್ರಜ್ಞೆ ಜಾಗೃತವಾಯಿತು. "ಲಾಭದಾಸೆಯಿಂದ, ನಾಟಕವನ್ನು ವ್ಯವಸಾಯ ಮಾಡಿಕೊಂಡವರು, ಜನರನ್ನು ಮೈಮರೆಸುವ ತಂತ್ರಗಳನ್ನೇ ಅನಸರಿಸುತ್ತಲಿದ್ದಾರೆಯೆ ವಿನಾ ಬದುಕಿನ ಸಮಸ್ಯೆಗಳತ್ತ ಗಮನಹರಿಸುತ್ತಿಲ್ಲ. ಜನರಂಜನೆ ಮುಖ್ಯವಾಗಿದೆಯೆ ಹೊರತು ಬೋಧನೆಯ ಜವಾಬ್ದಾರಿಯೂ ರಂಗಭೂಮಿಗಿದೆ ಎಂಬುದರ ಅರಿವಿಲ್ಲ ಈ ಜನಕ್ಕೆ. ನಾವು ಸಾಮಾಜಿಕ ವಸ್ತುಗಳುಳ್ಳ ನಾಟಕಗಳನ್ನಾಡಬೇಕು", ಎಂಬ ವಿಚಾರ ಈ ಬುದ್ಧಿವಂತ ನಾಟಕಾಸಕ್ತರಲ್ಲಿ ಮೊಳೆಯಿತು. ಇದು ಕನ್ನಡ ರಂಗಭೂಮಿಯ ಎರಡನೆಯ ಅಂಕ, ವಿಲಾಸಿ ರಂಗಭೂಮಿಯ ಅಧ್ಯಾಯ ಪ್ರಾರಂಭವಾದದ್ದು ಇಲ್ಲಿಂದಲೆ. ' ಭರತ ಕಲೋತ್ತೇಜಕ ಸಂಗೀತ ಸಮಾಜ'(1905), 'ಅಮೆಚ್ಯೂರ್ ಡ್ರಾಮೆಟಿಕ್ ಅಸೋಸಿಯೇಶನ್' (ADA - 1909) 'ಯಂಗ್ ಮೆನ್ಸ್ ಫುಟ್‌ಬಾಲ್ ಕ್ಲಬ್ ಅಸೋಸ್ಸೇಶನ್', (1914),'ವಾಸುದೇವ ವಿನೋದಿನಿ ನಾಟಕ ಸಭಾ' (1927), 'ಕನ್ನಡ ನಾಟ್ಯ ವಿಲಾಸಿಗಳು '(1933) ಮುಂತಾದ ವಿಲಾಸಿ ತಂಡಗಳು ಧಾರವಾಡ, ಬೆಂಗಳೂರು, ಗದಗ, ಬಾಗಲಕೋಟೆಗಳಲ್ಲಿ ಕಾರ್ಯಾರಂಭಮಾಡಿ ರಂಗಭೂಮಿಗೆ

ಹೊಸನೀರು ಹರಿಸಿದವು. ಈಗೆಲ್ಲ ಸಾಮಾಜಿಕ ವಸ್ತುಗಳು. ಸಮಾಜದ ಟೊಳ್ಳುಗಟ್ಟಿಗಳನ್ನು ಹೊರಹಾಕುವ ನಾಟಕಗಳು. ಆಂಗ್ಲಾಭ್ಯಾಸದ ಪರಿಣಾಮವಾಗಿ ಮೂಡಿಬಂದ ರೂಪಾಂತರಗಳು. ಮಹಾತ್ಮಾಜಿಯ ಚಳವಳಿಯಿಂದ ರಾಜಕೀಯ ಕ್ಷೇತ್ರದಂತೆ ಸಾಮಾಜಿಕ ವಾತಾವರಣದಲ್ಲೂ ಗಮನಾರ್ಹ ಬದಲಾವಣೆ ಕಂಡ ಕಾಲವದು. ಸುಶಿಕ್ಷಿತರ ವಿಚಾರಕ್ರಾಂತಿಯ ಫಲವಾಗಿ ಸಾಹಿತ್ಯ-ಸಾಂಸ್ಕತಿಕ ಲೋಕದಲ್ಲಿ ಶಿಕ್ಷಣ, ಸ್ತ್ರೀ ಸ್ವಾತಂತ್ರ್ಯ, ಸಮಾನತೆ, ಅಸ್ಪೃಶ್ಯೋದ್ಧಾರದ ಯತ್ನ ಜೋರಾಯಿತು. ಇವುಗಳ ಪ್ರತಿಪಾದನೆಗೆ ವಿಲಾಸಿ ನಾಟಕಗಳು - ತಂಡಗಳು ಸಾಧನಗಳಾದವು. ಅದೇ ಕಾಲಕ್ಕೆ ಶೇಕ್ಸ್‌ಪಿಯರ್ ನಮ್ಮಲ್ಲಿ ಬಂದಿಳಿದ. ಭಾರತದ ಇತರ ಭಾಷೆಯ ಇಂಥ ವಿಚಾರಯುಕ್ತ ಕೃತಿಗಳು ಕನ್ನಡ ರಂಗಭೂಮಿಯ ಮೇಲೆ ಅಭಿನಯಿಸಲ್ಪಟ್ಟವು. ' ನಾಟಕವೆಂದರೆ ಸಂಗೀತ- ನೃತ್ಯ- ರಮಣೀಯ ಸನ್ನಿವೇಶಗಳನ್ನೊಳಗೊಂಡ ಪುರಾಣ-ಪುಣ್ಯಕತೆಯಲ್ಲ, ನಿತ್ಯಜೀವನಕ್ಕೆ - ಸಮಕಾಲೀನ ಬದುಕಿಗೆ ಅದರ ಸಮಸ್ಯೆಗಳಿಗೆ ಯಾವುದೇ ಸಂಬಂಧವಿರದಂಥ ಹಳೆಯ ಮೌಲ್ಯಗಳ ದೃಶ್ಯೀಕರಣವಲ್ಲ. ರಂಗಭೂಮಿ ಎಂಬುದು ಇಂದಿನ ಸ್ಥಿತಿಗೆ ಸಂಬಂಧಿಸಿದ್ದು. ಯಾವಾಗಲೂ ವರ್ತಮಾನದ ಪ್ರತಿಬಿಂಬವಾಗಿಯೇ ಇರುವಂಥದ್ದು' ಮುಂತಾಗಿ ವಾಸ್ತವಿಕ ವಿಚಾರವನ್ನು ವಿಲಾಸಿ ರಂಗಭೂಮಿ ಆಚರಣೆಯನ್ನಾಗಿಸಿಕೊಂಡಿತು. ಬದುಕಿಗೆ ಹತ್ತಿರವಲ್ಲದ್ದನ್ನು - ಅಸಹಜವಾದದ್ದನ್ನು ತ್ಯಜಿಸಿತು. ಹೀಗಾಗಿ ಸಂಗೀತ ಮರೆಯಾಯಿತು. ಅತಿ ಅಭಿನಯ ಅಳಿಯಿತು. ಕಣ್ಣೀರ ಕೋಡಿ ಹರಿಸುವ ಕಷ್ಟದಿಂದ ಇವುಗಳ ಪ್ರೇಕ್ಷಕ ಪಾರಾದ. ಕೈಲಾಸಂ, ಶ್ರೀರಂಗರಿಬ್ಬರೂ ಆ-ಈ ತುದಿಯಲ್ಲಿ ನಿಂತು ರಂಗಭೂಮಿಯಲ್ಲಿ ವಿಚಾರಮಥನದ ಮುಂದಾಳುವಾದರು. ಆದರೆ ದ್ವಿತೀಯ ಮಹಾಯುದ್ಧ, ಬಿಳಿಯರ ವಿರುದ್ಧದ ಚಳವಳಿಗಳ ಆ ಪ್ರಸಂಗದಲ್ಲಿ ವಿಲಾಸಿ ರಂಗಭೂಮಿ ತನ್ನ ಸ್ವರೂಪನಾಶವನ್ನು ಮಾಡಿಕೊಂಡಿತು.

ನಮ್ಮ ರಂಗಭೂಮಿ ನೂರರ ಒಂದು ಸುತ್ತು ಮುಗಿಸಿ ಮತ್ತೆ ಆರಂಭದ ಸ್ಥಿತಿಗೇ ಬಂದಿದೆ. ಈ ಚಕ್ರಭ್ರಮಣದಲ್ಲಿ ಅದು ಕಂಡ ಏರಿಳಿತಗಳು ಜನಸಾಮಾನ್ಯನಿಗೆ ಅರ್ಥವಾಗಲಿಲ್ಲ- ರಂಗಿನ ಲೋಕದ ಜನ ಅರ್ಥಮಾಡಿಕೊಡಲೂ ಇಲ್ಲ. ಯಾರಿಗಾಗಿ ರಂಗಭೂಮಿ ಇರಬೇಕೋ ಅವನಿಗಾಗಿ ಅದು ತುಡಿಯಲೂ ಬೇಕು ಅಲ್ಲವೆ?

ನಮ್ಮ ರಂಗಭೂಮಿಯ ಮೂರನೆಯ ಅಂಕ ಬಹಳ ದಯನೀಯವಾಗಿತ್ತು. ವೃತ್ತಿರಂಗಭೂಮಿಯ ಏಕತಾನತೆಯಿಂದ ಪ್ರೇಕ್ಷಕ ಬೇಸರಗೊಂಡಿದ್ದ. ವಿಲಾಸಿರಂಗಭೂಮಿಯ ಕೆಲವೆ ಸುಶಿಕ್ಷಿತರು ಕೆಲವೆ ಸುಶಿಕ್ಷಿತರಿಗಾಗಿ ನಾಟಕ ಬರೆದು ಆಡಿ ಪರಸ್ಪರ ಬೆನ್ನುತಟ್ಟಿಕೊಂಡರೇ ವಿನಾ ಸಾಮಾನ್ಯನ ಸಮೀಪ ಸುಳಿಯಲಿಲ್ಲ. ಈ ಸಮಯದಲ್ಲಿ ಸಿನಿಮಾ ಎಂಬ ಮಾಯಾಮೃಗ ಎಲ್ಲರ ಲಕ್ಷ್ಯವನ್ನು ತನ್ನತ್ತ ಕೇಂದ್ರೀಕರಿಸಿಕೊಂಡು ಸುಳಿದಾಡತೊಡಗಿತ್ತು. ಆ ಕಾಲದ ರಂಗಭೂಮಿಯ ಶ್ರೇಷ್ಠ ಶೋಮನ್‌ಗಳೆನಿಸಿದ ಗುಬ್ಬಿವೀರಣ್ಣ ಮೊದಲಾದವರು ಆರ್ಕ್‌ಲ್ಯಾಂಪ್ ಆಕರ್ಷಣೆಗೊಳಗಾದರು. (ವಿಲಾಸಿ ರಂಗಭೂಮಿಯ ಅಧ್ವರ್ಯು ಕೈಲಾಸಂ ಕೂಡ ಈ ರಂಗದಲ್ಲಿ ಕೈ ಆಡಿಸಿದರು.) ವೃತ್ತಿ ನಾಟಕಗಳ ಅಸಾಧ್ಯತೆಗಳೆಲ್ಲ ಸಿನಿಮಾದಲ್ಲಿ ಸಾಧ್ಯತೆಗಳಾದವು. ಇನ್ನೇನು ಬೇಕು? ಸಿನಿಮಾದ ಹೆಸರಿನಲ್ಲಿ 'ನಾಟಕಗಳು' ಮುಂದುವರಿದವು. ರಂಗಭೂಮಿಯಂತೆ ದಿನವೂ ಕನಸಿನ ಲೋಕವನ್ನು ಕಟ್ಟಬೇಕಾದ ಕಷ್ಟ ಸಿನಿಮಾಕ್ಕಿರಲಿಲ್ಲ. ನಾಟಕಕ್ಕಿಂತ ಭಿನ್ನವಾಗಿ, ಭವ್ಯವಾಗಿ ಒಮ್ಮೆ ವೈಭವವನ್ನು ಸೃಷ್ಟಿಸಿ ರೀಲು ಸುತ್ತಿದರಾಯಿತು. ವ್ಯವಹಾರ ಚತುರರಿಗೆ ಈ ರೀಲು ಪುರಾಣಗಳು ಕಟ್ಟಿಕೊಟ್ಟ ಹಣದ ಗಂಟು ದೊಡ್ಡದು. ಮಿಸುನಿಜಿಂಕೆಗೆ ಮಾರುಹೋದ

ಸೀತೆಯಂತಾಯಿತು ವೃತ್ತಿರಂಗದ ಸ್ಥಿತಿ. ಇಲ್ಲಿಯ ಕಲಾವಿದರು ಅಲ್ಲಿಗೆ ವಲಸೆಹೋಗಿದ್ದರು. ನಾಟಕ ಬರೆದುಕೊಡುತ್ತಿದ್ದ ಪಂಡಿತರು ಚಿತ್ರ-ಕಥೆ ಬರೆಯತೊಡಗಿದರು. ಎಂದಿನಂತೆ ಶ್ರೀಸಾಮಾನ್ಯ ಕ್ಷಣಮಾತ್ರದ ವಿಲಕ್ಷಣ ಅನುಭವಕ್ಕಾಗಿ ಸಿನಿಮಾ ಟಿಕೆಟ್ಟು ಕೊಳ್ಳತೊಡಗಿದ. ಸಿನಿಮಾದೊಂದಿಗೆ ನಗರ ನಿವಾಸಿಯ ನಂಟು ಹೆಚ್ಚತೊಡಗಿತು. ಬಯಾಸ್ಕೋಪಿನೊಂದಿಗಿನ ಮೇಲಾಟದಲ್ಲಿ ಓಡುವ ತಾಕತ್ತು ತಮಗಿಲ್ಲವೆಂಬ ಅರಿವು ಮೂಡಿದ ಆ ಸಂದರ್ಭದಲ್ಲಿ, ಒಂದೋ ತಾವು ಹೊಸಮಾರ್ಗ ಕಂಡುಕೊಳ್ಳಬೇಕು, ಇಲ್ಲವೆ ಸಶಕ್ತಗೊಳ್ಳುವ ಸುಯುಕ್ತಿ ಹುಡುಕಬೇಕು. ವೃತ್ತಿರಂಗಭೂಮಿಯ ಧೀಮಂತರೆಲ್ಲ ಚಿಂತನೆಗೆ ತೊಡಗಿದರು. ಇನ್ನಷ್ಟು ರಂಜಕಗುಣವನ್ನು ತುಂಬಿಕೊಂಡರು. ಕೆಲವು ಕಂಪನಿಗಳು ಕೇವಲ ಪಟ್ಟಣ-ಹಳ್ಳಿಗಳಿಗೆ ಕ್ಯಾಂಪು ಹಾಕುತ್ತ ಬದುಕಿನ ಹೋರಾಟ ನಡೆಸಿದವು. ಇತ್ತ ವೃತ್ತಿರಂಗ ಅತ್ತ ಚಿತ್ರರಂಗ ಎಂದು ಓಡಾಡುತ್ತಿದ್ದ ಕೆಲವರಿಗೆ ಇಬ್ಬರು ಹೆಂಡಿರ ಗಂಡನ ಪಾಡು. ಸುಶಿಕ್ಷಿತ ವಿಲಾಸಿಗಳು ಕೆಲವರು ಮಾಡಿದ ಇನ್ನೊಂದು ಕೆಲಸವೆಂದರೆ ವೃತ್ತಿರಂಗಭೂಮಿಯನ್ನು ಗೇಲಿಮಾಡುತ್ತ ತಾವೇ ರಂಗಭೂಮಿಯ ವಾರಸುದಾರರೆಂಬಂತೆ ವರ್ತಿಸತೊಡಗಿದ್ದು. ಇವರಲ್ಲಿ ಬರಿ ಟೀಕೆಗಳಿದ್ದವೆ ಹೊರತು ಸಲಹೆಗಳಿರಲಿಲ್ಲ - ಸಮಸ್ಯೆಗೆ ಪರಿಹಾರವಿರಲಿಲ್ಲ. ಇನ್ನು ಕೆಲವರು ನೀಡಿದ ಸೂಚನೆಗಳು ವೃತ್ತಿರಂಗಭೂಮಿಯವರಿಗೆ ಒಪ್ಪಿಗೆಯಾಗಲಿಲ್ಲ. ಕ್ರಮೇಣ ವೃತ್ತಿರಂಗಭೂಮಿಯ ವಿಂಗುಗಳಲ್ಲೆಲ್ಲ ಜೇಡಕಟ್ಟಿಕೊಳ್ಳತೊಡಗಿತು. ದೂಳು ತುಂಬಿಕೊಳ್ಳತೊಡಗಿತು. ಪಾಪಾಸುಕಳ್ಳಿ ಬೆಳೆಯತೊಡಗಿತು. ಆದರೆ ಒಂದು ಕಾಲದಲ್ಲಿ ಮರಾಠಿ-ಪಾರ್ಸಿ ಕಂಪನಿಗಳ ಪ್ರಭಾವದಿಂದ ನಮ್ಮ ಪ್ರೇಕ್ಷಕನನ್ನು ಬಿಡಿಸಿ, ತನ್ನ ಕಾಲ ಮೇಲೆ ತಾನು ನಿಂತು ಇತಿಹಾಸ ಸೃಷ್ಟಿಸಿದ ವೈಭವೋಪೇತ ವೃತ್ತಿರಂಗಭೂಮಿ ನಮಗೆ ಕೊಟ್ಟ ನಾಟಕ ಸಾಹಿತ್ಯ ಅಮೂಲ್ಯವಾದದ್ದು ಎಂಬುದನ್ನು ಮಾತ್ರ ಮರೆಯುವಂತಿಲ್ಲ. ಹಾಗೆಯೆ, ತತ್ಕಾಲೀನ ಸಾಮಾಜಿಕ ಒತ್ತಡ - ಅನಿವಾರ್ಯತೆಗಳ ಫಲವಾಗಿ ವೈಚಾರಿಕರನೇಕರು ಆಧುನಿಕ ನಾಟಕ ಸಾಹಿತ್ಯ ಸೃಷ್ಟಿಗಿಳಿದು 'ನಮ್ಮ ನಾಟಕ'ದ ದಿಕ್ಕು ಬದಲಿಸಿದ್ದನ್ನು ಕೂಡ. ಕೈಲಾಸಂ-ಶ್ರೀರಂಗರಂತೂ ರಂಗಭೂಮಿಯಲ್ಲಿ ಪ್ರಯೋಗನಿರತರಾಗಿ, ಬಂದ ಫಲಿತಾಂಶದ ಪಾಠವನ್ನು ತಮ್ಮ ನಾಟಕಗಳ ಮೂಲಕ ನಮಗೆ ಹೇಳುತ್ತ ಹೊಸದೃಷ್ಟಿ ತಂದುಕೊಡಲೆತ್ನಿಸಿದರು.

ಇನ್ನು ನಾಲ್ಕನೆಯ ಅಂಕದ ತುಂಬ ಬರಿ ರಸ್ತಾಸೀನುಗಳು. ದೇಶದಲ್ಲಿ ಸ್ವಾತಂತ್ರ್ಯ ಸೂರ್ಯನ ಉದಯದ ಸಂತೋಷ ಒಂದೆಡೆ, ದೇಶ ವಿಭಜನೆಯ ನೋವು ಮತ್ತೊಂದೆಡೆ. ಸಂಸ್ಥಾನಗಳ ವಿಲಿನೀಕರಣದ ಹಿನ್ನೆಲೆಯಲ್ಲೆದ್ದ ಗಲಭೆ- ದೊಂಬಿಗಳು ಮಗುದೊಂದೆಡೆ. ಪ್ರಜಾಸತ್ತೆಯ ಪ್ರಶ್ನೆ ಬಲಿತಂತೆ, ಬದಲಾದ ವಾತಾವರಣದಲ್ಲಿ ಉದ್ಭವಿಸಿದ ಸಮಸ್ಯೆಗಳನೇಕ. ಹೊಸ ಮೌಲ್ಯಗಳು ಸಮಾಜದಲ್ಲಿ ಪ್ರತಿಪಾದಿಸಲ್ಪಡತೊಡಗಿದವು. ಎಲ್ಲ ರಂಗಗಳಲ್ಲೂ ಪ್ರಗತಿಯ ಹೆಜ್ಜೆ ಇಡಬಯಸಿದ ಶಾಸನ, ಅದರ ಹಿನ್ನೆಲೆಯಲ್ಲಿ ನಡೆದ 'ನಾಟಕ'ಗಳು, ಅದುವರೆಗಿನ ಆದರ್ಶಗಳೆಲ್ಲ ಬುಡಮೇಲಾದದ್ದು ಸೂಕ್ಷ್ಮಸಂವೇದಿ ಮನಸ್ಸುಗಳನ್ನು ತಟ್ಟಿದವು. ಸ್ವಾರ್ಥತ್ಯಾಗ, ದೇಶಪ್ರೇಮಗಳೆಂದು ಹೋರಾಡಿದವರು ಕ್ರಮೇಣ ಪಗಡೆಯ ಪಟ್ಟ ಬದಲಿಸಿದರು. ಅಧಿಕಾರದಾಹ- ಸ್ವಾರ್ಥಲಾಲಸೆಗಳ ಅಟ್ಟಹಾಸ ಬೇರೆ. ಎಲ್ಲ ಸ್ತರಗಳಲ್ಲಿ ಪ್ರಗತಿಯತ್ನಕ್ಕೆ ತೊಡಗಿದ ಸಂದರ್ಭದಲ್ಲಿಯೆ ಸಾಹಿತ್ಯ - ಸಂಗೀತ - ಕಲೆಗಳ ಅಭಿವೃದ್ಧಿಗಳಿಗೆಂದು ರಾಷ್ಟ್ರಮಟ್ಟದಲ್ಲಿ ಸಂಸ್ಥೆಗಳ ರಚನೆಯಾಯಿತು. ಸಂಗೀತ-ನಾಟಕ ಅಕಾಡೆಮಿ, ರಾಷ್ಟ್ರೀಯ ರಂಗಶಾಲೆಗಳ ಸ್ಥಾಪನೆಯಿಂದ ಈ ಶಾಖೆಗಳಿಗೆ ಹೊಸ ಹರಿತ್ತು ತುಂಬುವ ಯತ್ನ ಒಂದು ದೃಷ್ಟಿಯಿಂದ ನಮ್ಮ ವೈಚಾರಿಕರನ್ನು ಹುರಿದುಂಬಿಸಿದವು. ಜಗತ್ತಿನಲ್ಲಿ ಮೊಳಗುತ್ತಿದ್ದ ಅಪಾಯದ ಗಂಟೆಯ ಧ್ವನಿ ಹೇಗೆ ಮಹಾಯುದ್ಧ- ಮತ್ತು ನಂತರದ ಕಾಲ

★ ಕಲಾಲೋಕದ ಒಂದು ಪೀಳಿಗೆ ಹಿಂದಿನ ಪೀಳಿಗೆಯವರನ್ನು ನಿಂದಿಸುವದು ಒಂದು ಬಗೆಯ ಕಲಾತ್ಮಕ ಕ್ರೌರ್ಯ.

★ ಬೌದ್ಧಿಕ ಜಗತ್ತನ್ನು ನಿರಾಸೆಯ ಹತಾಶಭಾವನೆಯ ಮೋಡಗಳು ಕವಿದಂಥ ಸಂದರ್ಭದಲ್ಲಿ ಶ್ರೇಷ್ಠ ನಾಟಕಕಾರರನ್ನು ಸಾಮಾಜಿಕ ಪರಿಸರ ಪ್ರೇರಿಸಲು ಸಾಧ್ಯವೆ?

★ ವೃತ್ತಿ-ಹವ್ಯಾಸಿ ರಂಗಭೂಮಿಗಳ ನಡುವಿನ ಕಂದಕವನ್ನು ಹೊಸ ಆದರ್ಶ-ನಿಷ್ಠೆಗಳ ಗಾರೆಯಿಂದ ಮುಚ್ಚಬೇಕು. ಹರಿದಿರುವ ಸೂತ್ರಪಟಕ್ಕೆ ಹೊಚ್ಚ ಹೊಸ ಅರಳೆಯಿಂದ ದಾರ ಹೊಸೆಯಬೇಕು.

★ ಇಂಥ ಪ್ರವೃತ್ತಿಯ ನಾಟಕವೇ ಆಗಬೇಕು, ಇಂಥ 'ಪಂಗಡ'ದವರೆ ಬರೆದುದಾಗಿರಬೇಕೆಂಬ ಪೂರ್ವಾಗ್ರಹ ಸಲ್ಲದು. ನಮ್ಮ ಆಕಾಂಕ್ಷೆ ಒಳ್ಳೆಯ ನಾಟಕದ ಸಮರ್ಪಕ ಪ್ರಯೋಗದ್ದಾಗಬೇಕು.

★ ಕಾಲದ ಪರೀಕ್ಷೆಯಲ್ಲಿ ಯಾವ ಕೃತಿ ಶ್ರೇಷ್ಠ, ಯಾವುದು ಅಲ್ಲ ಎಂಬುದು ನಿರ್ಧಾರವಾಗೇ ಆಗುತ್ತದೆ. ಎಲ್ಲಾ ದೇಶಗಳಿಗೂ ಎಲ್ಲ ಕಾಲಗಳಿಗೂ ಅನ್ವಯಿಸುವ ತಿರುಳುಳ್ಳದ್ದು ಸಾರ್ವಕಾಲಿಕ ಕೃತಿ.

● ವಿವಿಧ ರಂಗ ಪರಿಣತರ ಅಭಿಪ್ರಾಯಗಳು

ದಲ್ಲಿ ಪಾಶ್ಚಾತ್ಯ ವೈಚಾರಿಕರನ್ನು ಬಡಿದೆಬ್ಬಿಸಿದೋ ಹಾಗೆ ನಮ್ಮ ಸಾಮಾಜಿಕರ ಮೇಲೆ ಪರಿಣಾಮ ಬೀರುವ ಸಾಧ್ಯತೆಯಿರಲಿಲ್ಲ. ಆದರೆ ನಮ್ಮ ಪರಿಸ್ಥಿತಿಗಳನ್ನು ಅವಕ್ಕೆ ಹೋಲಿಸಿ ಬರೆದ ನಾಟಕಗಳು ರಂಗಭೂಮಿಗೆ ಬಂದವಾದರೂ ದಿಗ್ಭ್ರಮೆಯಲ್ಲಿದ್ದ ಶ್ರೀಸಾಮಾನ್ಯ ಮಾತ್ರ ಇವುಗಳಿಂದ ದೂರವೇ ಉಳಿದ. ಅವನಿಗಾಗಿ ವೃತ್ತಿ ರಂಗಭೂಮಿಯ ಅಳಿದುಳಿದ ಮಂದಿ ಅದೇ 'ಹೇಮರಡ್ಡಿ ಮಲ್ಲಮ್ಮ' ಅದೇ 'ಅಣ್ಣ-ತಮ್ಮ' ಎಂದು ಬ್ಯಾಂಡು-ಬೋರ್ಡುಗಳೊಂದಿಗೆ ಊರೂರು ಸುತ್ತಿದರು. ಅವರಲ್ಲೇ ಕೆಲವರು 'ಖಾದಿಸೀರೆ' ಎಂದರು. ಕೆಲವರು 'ದೇವರ ಕಣ್ಣು' ಎಂದರು. ಮುಂದೆಲ್ಲ ಬಂದವರು 'ತರಕಾರಿ ತಾರಾಬಾಯಿ'ಯಂಥವರು 'ಗದ್ದಲದ ಗೌಡ'ರಂಥವರು.

ಐದನೇಯ ಅಂಕ ಆಶಾದಾಯಕವಾದದ್ದು. ರಂಗಭೂಮಿಯಲ್ಲಿ ಹೊಸ ಪ್ರಯೋಗಗಳು ಹೊಸ ಪ್ರಯತ್ನಗಳು. ರಂಗಶಾಸ್ತ್ರದ ಶಾಸ್ತ್ರೀಯ ಅಭ್ಯಾಸ. ಶಾಸ್ತ್ರೀಯವಾಗಿ ರಂಗ ತರಬೇತಿ. ಶಾಲೆಕಾಲೇಜುಗಳಲ್ಲಿ ನಾಟಕ ಚಟುವಟಿಕೆಗಳು. ಹವ್ಯಾಸಿ ತಂಡಗಳ ಉತ್ಸಾಹದ ಕಾರ್ಯಕ್ರಮಗಳು. ಭಾರತದ ಇತರ ರಾಜ್ಯಗಳೊಂದಿಗೆ ಸಾಂಸ್ಕೃತಿಕ ವಿನಿಮಯ. ರಾಷ್ಟ್ರೀಯ ನಾಟಕಶಾಲೆಯಲ್ಲಿ ಅಧ್ಯಯನ ಗೈದು ಬಂದವರಿಂದ ಹೊಸತನ ತುಂಬುವ ಪ್ರಯತ್ನ (ವೃತ್ತಿರಂಗದ ಹಿರಿಯ ಗುಬ್ಬಿ ವೀರಣ್ಣನವರು ತಮ್ಮ ಮನೆಯ ಹುಡುಗರನ್ನು NSD ಗೆ ಕಳಿಸಿದರು) ಇದೇ ವೇಳೆಗೆ ನಾಟಕ ಸ್ಪರ್ಧೆಗಳು, ನಾಟಕೋತ್ಸವಗಳು ಹೊಸ ಹುರುಪು ತಂದದ್ದು. ಸ್ಪರ್ಧಾತ್ಮಕ ಮನೋಭಾವ ನಾಟಕದವರಲ್ಲಿ ಮೂಡಿತು. ಈ ಸ್ಪರ್ಧೆಗಳಿಂದ ಹೊಮ್ಮಲ್ಪಟ್ಟ ಪ್ರತಿಭೆಗಳೆಲ್ಲ ಹೊಸತನದ ಹಸಿವನ್ನು ಹೆಚ್ಚಿಸಿಕೊಳ್ಳುತ್ತಲೆ ಬೆಳೆದವು. ಬೆಂಗಳೂರು, ಮೈಸೂರು, ಧಾರವಾಡ, ಹೆಗ್ಗೋಡು, ಸಾಗರ ಹೀಗೆ ಕರ್ನಾಟಕದ ಎಲ್ಲ ದಿಕ್ಕುಗಳಲ್ಲೂ ಹೊಸ ಅಲೆ. ಕನ್ನಡದಲ್ಲಿ ಅದುವರೆಗೆ ಅನ್ಯಭಾಷಾ, ಅನ್ಯದೇಶಿ ನಾಟಕಗಳು ಅನುವಾದಗೊಂಡಿದ್ದವಾದರೂ ಕನ್ನಡದಿಂದ ಇತರ ಭಾರತೀಯ ಭಾಷೆಗಳಿಗೆ ನಾಟಕಗಳು ಪರಿಚಯವಾಗಿರಲಿಲ್ಲ. ನಮ್ಮ ಹಿರಿಯ ವೈಚಾರಿಕ ಶ್ರೀರಂಗರ 'ಕೇಳು ಜನಮೇಜಯ', ಅದಾಗ ಹೊಸ

ಭರವಸೆ ಮೂಡಿಸಿದ್ದ ಗಿರೀಶ ಕಾರ್ನಾಡರ 'ತುಘಲಕ್'ಗಳು ಹಿಂದಿಗೂ ತನ್ಮೂಲಕ ಇತರ ಭಾರತೀಯ ಭಾಷೆಗಳಿಗೂ ತರ್ಜುಮೆಗೊಂಡವು. ಹಾಗೆಯೆ ಹಿಂದಿಯ 'ಅಂಧಾಯುಗ'(ಧರ್ಮವೀರ ಭಾರತಿ), ಬಂಗಾಲಿಯ 'ಏವಂ ಇಂದ್ರಜಿತ್'(ಬಾದಲ್ ಸರಕಾರ), ಮರಾಠಿಯ 'ಶಾಂತತಾ ಕೋರ್ಟ್ ಚಾಲೂ ಆಹೆ'(ವಿಜಯ ತೆಂಡೂಲ್ಕರ್) ಹಿಂದಿಯ'ಆಷಾಢ ಕಾ ಏಕ ದಿನ್'(ಮೋಹನ ರಾಕೇಶ್) ಮರಾಠಿಯ 'ಏಕ ಶೂನ್ಯ ಬಾಜೀರಾವ್' (ಚಿ.ತ್ರ್ಯಂ.ಖಾನೋಳಕರ್) ಮುಂತಾದ ನಾಟಕಗಳೂ ಭಾರತದ ಇತರ ಭಾಷೆಗಳವರನ್ನು ಮುಟ್ಟಿದವು. ರಾಜ್ಯಗಳ ನಡುವೆ, ರಾಜ್ಯಗಳಲ್ಲೇ ಭಿನ್ನ ಪ್ರದೇಶಗಳವರಲ್ಲಿ ಒಂದು ರೀತಿಯ 'ಸಂವಾದ'ವೇರ್ಪಟ್ಟುದರ ಫಲವಾಗಿ ನಾಟಕ ರಚನೆಯಲ್ಲಿ, ಅವುಗಳ ನಿರ್ಮಾಣದಲ್ಲಿ, ಅವು ಸ್ಪಂದಿಸುವ ರೀತಿಯಲ್ಲಿ ಎಲ್ಲಿಲ್ಲದ ವೇಗ ಬಂತು. ಇದು ರಾಷ್ಟ್ರೀಯ ರಂಗಭೂಮಿ-ಪ್ರಾದೇಶಿಕ ರಂಗಭೂಮಿಗಳ ಕಲ್ಪನೆಗೆ ಪುಟಕೊಟ್ಟಿತು. ನಮ್ಮ ಕೆಲವು ಪ್ರತ್ಯುತ್ಪನ್ನಮತಿಗಳು ಜಾನಪದ ಮೂಲದ ವಸ್ತುಗಳಿಗೆ ಹೊಸ ಅರ್ಥ ನೀಡಿ ನಾಟಕ ರಚಿಸಲಾರಂಭಿಸಿದರು. ಪ್ರಕಾಶನ ಸಂಸ್ಥೆಗಳವರು ನಾಟಕಕೃತಿಗಳ ಪ್ರಕಟಣೆಯತ್ತ ಹೆಚ್ಚಿನ ಒಲವು ತೋರಿದರು. ವಿಮರ್ಶಕರು ಅವುಗಳ ಸತ್ವವನ್ನು ಒರೆಗೆ ಹಚ್ಚಿ ಹಿಡಿದರು. ಜಿಜ್ಞಾಸುಗಳಿಗೆ ನಾಟಕ ಸಾಹಿತ್ಯದ ಚರ್ಚೆ, ಪತ್ರಿಕೆಗಳವರಿಗೆ ರಂಗಭೂಮಿಯು ಅಂಕಣ ಮಹತ್ವದವೆನಿಸಿದವು. ಆದರೆ ಅಲ್ಲಿಲ್ಲಿ-ಅಷ್ಟಿಷ್ಟು ಜನ ಮಾತ್ರ. ಇದರಿಂದ ಪ್ರಭಾವಿತರಾದರೇ ವಿನಾ ನಮ್ಮ ನಾಟಕ ಸಾಹಿತ್ಯ - ನಾಟಕ ಚಟುವಟಿಕೆಗಳು ಜನರ ಆಶೋತ್ತರಗಳಿಗೆ ಪೂರಕವಾಗಿ ಪ್ರೇರಕವಾಗಿ ನಿಲ್ಲಲಿಲ್ಲ.

ನೂರು ವರ್ಷಗಳ ಈ ಚಕ್ರ, ಒಂದು ಸುತ್ತ ಸುತ್ತಿತ್ತು. ಎತ್ತುಪರದೆಗಳು ಸುತ್ತುಪರದೆಗಳು ಮಾಯವಾಗಿದ್ದವು. ಸಾಂಸ್ಕೃತಿಕ ಲೋಕಕ್ಕೆ ಮತ್ತೆ ಸಂಕಟಸಮಯ. ಇತಿಹಾಸ ಪುನರಾವರ್ತಿಸಿತು. ಮತ್ತೊಬ್ಬ ವೆಂಕಟರಮಣನ ಪ್ರವೇಶವಾಯಿತು. ಬಾಬುಕೋಡಿ ವೆಂಕಟರಮಣ ಕಾರಂತರು. ಹೊಸ ಬೆಳಕು ಹೊಸ ಬಣ್ಣ, ಹೊಸ ಹೆಜ್ಜೆ- ಹೊಸಗೆಜ್ಜೆ, ಹೊಸನಾದ - ಹೊಸವಾದದೊಂದಿಗೆ ಬಂದರು. ಮೂರೂ ರಂಗಭೂಮಿಗಳ ಅನುಭವ-ಜ್ಞಾನ-ಕ್ರಿಯಾಶೀಲತೆ-ಇಚ್ಛಾಶಕ್ತಿಗಳು ಮೇಳೈಸಿದ ಕಾರಂತರು. ದೃಶ್ಯಕಾವ್ಯವನ್ನು ಕಟ್ಟಬಲ್ಲ ಕಾರಂತರು. ಹಾಡಿ-ಹಾಡಿಸಬಲ್ಲ, ಕುಣಿದು-ಕುಣಿಸಬಲ್ಲ ಕಾರಂತರು. ದನಿಯಲ್ಲಿ ಹೊಸ ಬನಿ ಹುಟ್ಟಿಸಬಲ್ಲ ಕಾರಂತರು. ಬೆಂಗಳೂರಿನಿಂದ ಬೊಂಬಾಯಿಯವರೆಗೆ ಹೊಸ ಮಿಂಚನ್ನು ಹರಿಸುವ ಉದ್ದೇಶ ಅವರದಾಯಿತು. ಸರಿ, ಅವರೊಂದಿಗೆ ಹೊಸ ಹುರುಪಿನ ಹುಡುಗರು, ಹೊಸ ದೃಷ್ಟಿಯ ನಾಟಕಕಾರರು ಟೊಂಕ ಕಟ್ಟಿ ನಿಂತುದರ ಫಲವಾಗಿ ಕನ್ನಡ ಹವ್ಯಾಸಿ ರಂಗಭೂಮಿ ಜೀವಂತಿಕೆ ಪಡೆಯಿತು. ಆ 'ಈಡಿಪಸ್', 'ಜೋಕುಮಾರ ಸ್ವಾಮಿ', 'ಹಯವದನ','ಸತ್ತವರ ನೆರಳು', 'ಟಿಂಗರ ಬುಡ್ಡಣ್ಣ', 'ಮುಂದೇನ ಸಖಿ ಮುಂದೇನ'ಗಳು ನಡೆಸಿದ ರಂಗಯಾತ್ರೆ, ಒಂದು ರೀತಿಯಲ್ಲಿ ಪ್ರಜ್ಞಾ ಪ್ರಭಾತಫೇರಿಯಾಯಿತು. ತಮಗೆ ತಿಳಿದ ರೀತಿಯಲ್ಲಿ ನಾಟಕ ರಚಿಸುತ್ತಿದ್ದ ಹೊಸಬರಿಗೆ, ತಮಗೆ ಸರಿಕಂಡಂತೆ ನಾಟಕ ನಿರ್ದೇಶಿಸುತ್ತಿದ್ದ ನಿರ್ದೇಶಕರುಗಳಿಗೆ ಕಾರಂತ ಯತ್ನ ಕಾಂತ ಚಿಕಿತ್ಸೆಯಾಯಿತು. ಬೆಂಗಳೂರು - ದಾವಣಗೆರೆ - ಹುಬ್ಬಳ್ಳಿ - ಧಾರವಾಡ - ಬೆಳಗಾವಿಗಳಲ್ಲೂ, ವಿಜಾಪುರ - ಕಲಬುರ್ಗಿಗಳಲ್ಲೂ, ಮೈಸೂರು - ಮಂಗಳೂರುಗಳಲ್ಲೂ ಕಾರಂತರ 'ನೆರಳು' ರಂಗಭೂಮಿಯನ್ನು ಆವರಿಸಿತು. ಅಲ್ಲಿ ಮಲೆನಾಡ ಮೂಲೆಯಲ್ಲಿ ಸದ್ದಿಲ್ಲದೆ ಸಾಧನೆಗೈಯುತ್ತಿದ್ದ ಸುಬ್ಬಣ್ಣ 'ನೀನಾಸಂ ಪ್ರಯೋಗಶಾಲೆ'ಯಲ್ಲಿ ಹೊಸಸೂತ್ರಗಳನ್ನು ಕಂಡು ಹಿಡಿಯುತ್ತಿದ್ದರು. 'ಸಮುದಾಯ' ಸೈದ್ಧಾಂತಿಕ ನೆಲೆಯಲ್ಲಿ ರಂಗಭೂಮಿ ಕಟ್ಟತೊಡಗಿತು.

ಈ ಅಂಕವೂ ಮುಗಿಯಿತು. ಆದರೆ ಒಮ್ಮೆ ಜಾನಪದ ಶೈಲಿಯ ನಾಟಕಗಳ ದಾಳಿ,

ಇನ್ನೊಮ್ಮೆ ರಾಜಕೀಯ ವಿಡಂಬನೆಗಳ ಹಾವಳಿ, ಮತ್ತೊಮ್ಮೆ ರೂಪಾಂತರಗಳ ದೀಪಾವಳಿ. ಎಲ್ಲವೂ ಆಯಾ ಮೂಲದ ನೂರನೆಯ ಕಾರ್ಬನ್ ಕಾಪಿಗಳು. ಆದರೆ ಒಂದು ಸಮಾಧಾನಕರ ಅಂಶವೆಂದರೆ ಎಲ್ಲೆಲ್ಲೂ ರಂಗಭೂಮಿಯ ಎಲ್ಲ ಅಂಗಗಳ ಅಭ್ಯಾಸಗೈವ ಶಿಬಿರಗಳು ನಡೆದದ್ದು, ರಂಗಪ್ರಯೋಗಗಳ ವಿನಿಮಯವಾದದ್ದು. ಕರ್ನಾಟಕ ನಾಟಕ ಅಕಾಡೆಮಿ ನಾಟಕ ರಚನಾ ಶಿಬಿರವನ್ನು ನಡೆಸಿದ್ದು(ಕೊಂಡಜ್ಜ-1983, ಪ್ರತಿಮಾಸಭಾ ದಾವಣಗೆರೆಯ ಸಹಯೋಗ), ನೀನಾಸಂ ಜನಸ್ಪಂದನ ಕಾರ್ಯಕ್ರಮದ ಮೂಲಕ ಗ್ರಾಮಾಂತರದಲ್ಲಿ ರಂಗಸಂಸ್ಕೃತಿಯ ಹುಟ್ಟಿಗೆ ಕಾರಣವಾದದ್ದು, ಮುಂದೆ 'ತಿರುಗಾಟ'ದ ಮೂಲಕ ಮೂರೂ ರಂಗಭೂಮಿಗಳ ಒಳ್ಳೆಯ ಅಂಶಗಳನ್ನುಳಿಸಿಕೊಂಡು ಜನರ ಸಮೀಪ ನಡೆದದ್ದು, ಕ.ನಾ.ಅ. ಆಶ್ರಯದಲ್ಲಿ ಕಾಸರಗೋಡಿನಲ್ಲಿ 'ನಾಟಕ ಶಿಲ್ಪಶಾಲೆ', ಹುಬ್ಬಳ್ಳಿಯಲ್ಲಿ 'ನೇಪಥ್ಯಶಿಲ್ಪ'ಗಳೆಂಬ ತರಬೇತಿ ನಡೆಸಿದ್ದು ರಂಗಸಾಹಿತ್ಯ ಮತ್ತು ಪ್ರಯೋಗ ಪೂರ್ವಸಿದ್ಧತೆಗಳ ಬಗ್ಗೆ ಉತ್ಸಾಹಿಗಳಿಗೆ ಉಪಯುಕ್ತವೆನಿಸಿದವು.

ಎಂಟನೆಯ ಅಂಕದಲ್ಲಿ ನಮಗೆ ಕಾಣುವುದು ಬರಿ ಬಂಡ್ವಾಳ್ವಿಲ್ಲದ ಬಡಾಯಿ, 'ನಾಟಕ ಚಳವಳಿ'ಯ ನಾಟಕ, ಒಂದು ರೀತಿಯ 'ಮಹಾಮೌನ'. ಹೌದು, ಇದನ್ನು ಸ್ಫೋಟದ ಮುನ್ನದ ನೀಚ ಮೌನವೆನ್ನೋಣವೆ? ಅಥವಾ ರಸ್ತಾಸೀನಿನ ಹಿನ್ನೆಲೆಯಲ್ಲಿ ನಡೆದಿರುವ ಒಂದು ಮಹತ್ವದ ಡೀಪ್‌ಸೀನಿನ ತಯಾರಿ ಎನ್ನೋಣವೆ?

ಮುಂದಿನ ಅಂಕಗಳು ನಮ್ಮ ರಂಗಭೂಮಿಗೆ ಹೊಸ ವೈಭವ ತರಲಿ. ●

(ದಾವಣಗೆರೆಯಲ್ಲಿ ನಡೆದ ಅ.ಭಾ. 61ನೆಯ ಕನ್ನಡ ಸಾಹಿತ್ಯದ ಸಮ್ಮೇಳನ ಸಂದರ್ಭದಲ್ಲಿ ಪ್ರಕಟವಾದ 'ದವನಸಿರಿ' ಸ್ಮರಣ ಸಂಚಿಕೆಯಿಂದ ಅನುಮತಿಯೊಂದಿಗೆ ಪುನರ್ಪ್ರಕಟಿತ.)

ನಾಮದ ಬಲ

ಊರ ಹೊರವಲಯದಲ್ಲಿರುವ ಹನುಮಪ್ಪನ ಗುಡಿಯಲ್ಲಿ ದಾಸಪ್ಪನೊಬ್ಬ ಠಿಕಾಣಿ ಹೂಡಿದ್ದ. ಊರಿನ ಮನೆ-ಮನೆಯಲ್ಲಿ ಎತ್ತಿದ ಭಿಕ್ಷೆ ಹೊಟ್ಟೆತುಂಬಿಸಿದ್ದರೂ ದಾಸಪ್ಪನಿಗೆ ಇನ್ನೂ ಒಂದು ಕಡಿಮೆಯಾಗಿತ್ತು. ಚೂರು ಪಾರು ಬಿಡಿಕಾಸು ಜೇಬಿನಲ್ಲಿದ್ದರೂ ಅದರಿಂದಲೇ ಅವನ ಆಶೆ ಈಡೇರುವಂತಿರಲಿಲ್ಲ. ಉಪಾಯಗಾಣದೇ ಬೇಸರದಿಂದಲೇ ಏಕತಾರಿ ಹಿಡಿದು ಹನುಮಪ್ಪನೆದುರಿಗೆ ಕುಳಿತು ಹಾಡಲು ಶುರು ಮಾಡಿದ - ''ಕರುಣಾಕರ ನೀನೆಂಬುವುದ್ಯಾತಕೋ ಭರವಸೆ ಇಲ್ಲೆನಗೆ.......'' ಇದ್ದಕ್ಕಿದ್ದಂತೆ ಹನುಮಪ್ಪನ ಹಣೆಯಲ್ಲಿ ಏನೋ ಬೆಳ್ಳಗೆ ಮಿರುಗುವುದನ್ನು ಕಂಡ ದಾಸಪ್ಪ ಏಕತಾರಿಯನ್ನು ಮೂಲೆಗೆಸೆದು ಮೂರ್ತಿಯ ಹತ್ತಿರ ಹೋದ. ಯಾರೋ ಭಕ್ತರು ಹನುಮಪ್ಪನಿಗೆ ಬೆಳ್ಳಿಯ ನಾಮ (ತಿಲಕ) ಮಾಡಿಸಿ ಹಾಕಿದ್ದರು. ದಾಸಪ್ಪ ಅದನ್ನು ಹೆಕ್ಕಿಕೊಂಡು ಹೆಂಡದಂಗಡಿಗೆ ಹೋಗಿ ಕಂಠಪೂರ್ತಿ ಕುಡಿದು ಗುಡಿಗೆ ಮರಳಿದ. ಮಾರುತಿಯ ಮೂರುತಿಯೆದುರು ಕುಳಿತು ಏಕತಾರೀ ಕೈಗೆತ್ತಿಕೊಂಡ. ಒಳ್ಳೇ ಮೂಡ್‌ನಿಂದ ಹಾಡು ಹೊರಹೊಮ್ಮಿತು. ''ನೀನ್ಯಾಕೋ ನಿನ್ನ ಹಂಗ್ಯಾಕೋ ನಿನ್ನ 'ನಾಮ'ದ ಬಲವೊಂದಿದ್ದರೆ ಸಾಕೋ.....,

ದಾಸರಲ್ಲಿ ಸಮಯೋಚಿತ ಹಾಡುಗಳಿಗೆ ಬರವೇ?!

● ಟಿ.ಕೆ.ಗಂಗಾಧರ (ಪತ್ತಾರ)

'ಮಾಡು'ನಿಂದ 'ಆಯುಧ'ದವರೆಗೆ

ಕೆಲವೊಮ್ಮೆ ತೀರ ಸಾಮಾನ್ಯ ನಿತ್ಯಸವಕಲು ಧಾತುಗಳು ಆಶ್ಚರ್ಯಕರವಾದ ಸಂಸಾರವನ್ನು ಬೆಳೆಸಿಕೊಳ್ಳುತ್ತವೆ. ಒಂದು ಉದಾಹರಣೆ "ಮಾಡು" ಎಂಬ ಕ್ರಿಯಾಪದ. ಈ ಶಬ್ದದ ಮೂಲಾರ್ಥ ಏನೆಂದು ವಿವರಿಸುವ ಅವಶ್ಯಕತೆಯೇನೂ ಇಲ್ಲ. ಅದು ಕನ್ನಡ ಭಾಷೆಯಷ್ಟೇ ಹಳೆಯದು; ಸುತ್ತಣ ತುಳು, ತಮಿಳು, ಮಲೆಯಾಳ, ತೆಲುಗುಗಳಲ್ಲೆಲ್ಲ ಅದಕ್ಕೆ ಅಕ್ಕ-ತಂಗಿಯರುಂಟು. "ಕೆಯ್," "ಒಡರಿಸು" ಇತ್ಯಾದಿ ಧಾತುಗಳನ್ನು ಕವಿಗಳು ಇದಕ್ಕೆ ಪರ್ಯಾಯವಾಗಿ ಬಳಸಿದ್ದಾರಾದರೂ "ಮಾಡು" ಅತ್ಯಂತ ಸಾಮಾನ್ಯ; ಜನನುಡಿಯಲ್ಲಿ ಪ್ರಧಾನ. ಕಿಟ್ಟೆಲ್‌ಕೋಶದಲ್ಲಿ ಕೇವಲ ಈ ಧಾತುವಿನ ಕ್ರಿಯಾಪದ ರೂಪದ ಕೆಳಗೇ ಒಂದಿಡೀ ಪುಟದಷ್ಟು ವಿಷಯ ದಾಖಲಾಗಿದೆ. "ಮಾಡು" ಬಹುತರವಾಗಿ ಶಾರೀರಿಕ ಕ್ರಿಯೆಯ ಸೂಚಕ.

ಈಗ ಮಾಡುವಿಕೆಯ ಸುತ್ತ ವಿಸ್ತರಿಸಬಹುದಾದ ಅರ್ಥಪರಂಪರೆಯನ್ನೆಲ್ಲ ಅಲ್ಲೇ ಬಿಡೋಣ. ಆದರೆ "ಇವನನ್ನು ಹೀಗೇ ಬಿಡಬಾರದೆಂದು ಮಾಡಿದ್ದೇನೆ." ಎನ್ನುವಲ್ಲಿ "ಮಾಡು" ಯಾವುದೇ ಶಾರೀರಿಕ ಮಾಡುವಿಕೆಯನ್ನು ಕುರಿಯುತ್ತದೆಯೆಂದು ನನಗೆ ತೋರುವುದಿಲ್ಲ. ಇಲ್ಲಿ "ಮಾಡು" ಉದ್ದೇಶವನ್ನು ಧ್ವನಿಸುತ್ತದೆ. "ನೀನು ಏನಂತ ಮಾಡಿದ್ದೀ?" ಎಂಬಲ್ಲಿ "ಮಾಡು" ಎಣಿಸುವಿಕೆಯನ್ನು ಸೂಚಿಸುತ್ತದೆ. "ನೀನು ಬರಲಿಕ್ಕಿಲ್ಲ ಅಂತ ಮಾಡಿದ್ದೆ." ಎಂಬಲ್ಲಿ ತಪ್ಪು ಊಹೆ ಅಭಿಪ್ರೇತವಾಗುತ್ತದೆ. ಜನರ ಮಾತುಗಳನ್ನು ಕಿವಿಗೊಟ್ಟು ಆಲಿಸುತ್ತಿದ್ದರೆ "ಮಾಡು"ವಿನ ಇನ್ನೂ ಅನೇಕ ಅವತಾರಗಳು ಲೆಕ್ಕಕ್ಕೆ ಸಿಗಬಹುದು.

"ಮಾಡು"ವಿನ ಮೇಲ್ಕಾಣಿಸಿದ ಅರ್ಥಗಳಿಗೆ ಸಮೀಪವಾಗಿ "ಮಾಡಿಕೊಳ್ಳು" ವರ್ತಿಸುತ್ತದೆ. "ಈ ಸಮಸ್ಯೆಯನ್ನು ಬಗೆಹರಿಸಿಬಿಡಬೇಕೆಂದು ಮಾಡಿಕೊಂಡಿದ್ದೇನೆ." ಇದು ಬರೇ "ಮಾಡಿದ್ದೇನೆ" ಎಂಬುದಕ್ಕಿಂತ ತುಸು ಹೆಚ್ಚು ದೃಢತೆಯನ್ನು ತೋರಿಸುತ್ತದೆ. "ಮಾಡಿಕೊಳ್ಳು"ವುದಕ್ಕೆ ಇನ್ನೂ ಒಂದು ಅರ್ಥಛಾಯೆ ಇದೆ. ಇವನನ್ನು "ಎತ್ತಣಿಂದಲಿ ಮಾಡಿಕೊಂಡೆ" ಎಂದು ಉತ್ತರಕುಮಾರನಿಂದ ಕುಮಾರವ್ಯಾಸ ಅರ್ಜುನ (ಬೃಹನ್ನಳೆ)ನ ಬಗ್ಗೆ ಹೇಳಿಸುವಾಗ ಗಂಟುಹಾಕಿಕೊಂಡೆ ಎಂದು ತಾತ್ಪರ್ಯ. "ಅವಳನ್ನು ಮಾಡಿಕೊಂಡ" ಎಂಬಲ್ಲಿ ಮದುವೆಯೆಂದು ಅಭಿಪ್ರಾಯ.

ಇದೆಲ್ಲ "ಮಾಡು"ವಿನ ಕ್ರಿಯಾಪದ ರೂಪವನ್ನು ಕುರಿತದ್ದಾಯಿತು. ಇನ್ನು ಅದರ ನಾಮಪದ ರೂಪಗಳ ಕುತೂಹಲಕರ ಛಾಯೆಗಳನ್ನು ನೋಡೋಣ. ಈಗ ಅಷ್ಟಾಗಿ ಬಳಕೆಯಲ್ಲಿಲ್ಲದ, ಆದರೆ ಹಳೆಗನ್ನಡದಲ್ಲಿ ಪ್ರಯೋಗದಲ್ಲಿದ್ದ "ಮಾಳ್ಕೆ"(= ಮಾಡುವಿಕೆ) ಯನ್ನು ನೋಡಿ. ರಚನೆ, ನಿರ್ಮಾಣ ಎಂಬ ಅರ್ಥದ ಈ ಪದ "ಅಂತಪ್ಪ ಮಾಳ್ಕೆಯೊಳ್" ಎನ್ನುವಲ್ಲಿ ರೀತಿ ಎಂಬರ್ಥಕ್ಕೆ ತಿರುಗುತ್ತದೆ. ಹೀಗೆ ಎನ್ನುವುದಕ್ಕೆ "ಈ ಮಾಳ್ಕೆಯೊಳ್" ಎನ್ನುತ್ತಾರೆ ಹಳೆಗನ್ನಡ ಕವಿಗಳು.

ಇದಕ್ಕಿಂತ ವಿಶೇಷವಾದದ್ದು "ಮಾಟ." ಅದು ಮಾಡುವಿಕೆ ಎಂಬರ್ಥದ್ದೇ. "ಮಾಟವಾದ ಆಕಾರ" ಎನ್ನುವಾಗ ಆಕಾರ ಒಪ್ಪವಂತಿದೆ ಎಂದು ತಾನೇ ಅರ್ಥ. "ಅವಳ ಮಾಟವಾದ ಮೈಕಟ್ಟು" ಎನ್ನಬಹುದು.

ಸರಿಯಾದ ಅಂಗೋಪಾಂಗಗಳ ಪ್ರಮಾಣ (proportion) ಅಥವಾ ಪ್ರಮಾಣಬದ್ಧ ಎಂದು ತಾತ್ಪರ್ಯ. ಆದರೆ ''ಮಾಟ''ಕ್ಕೆ ಇನ್ನೊಂದು ಪ್ರಸಿದ್ಧ ಅರ್ಥವಿದೆಯಲ್ಲ. ಅದು ಯಾರಿಗಾದರೂ ಕೆಡುಕಾಗುವಂತೆ ಮಾಡಿದ ಅಭಿಚಾರಕ್ರಿಯೆ, ಮಂತ್ರ, ಮಾಯಕ ಎಂಬರ್ಥವನ್ನು ಸೂಚಿಸುತ್ತದೆ. ''ಅಂಗಡಿಗೆ ಮಾಟ ಮಾಡಿಸಿದ್ದಾರೆ'', ಇತ್ಯಾದಿ. ಇದಕ್ಕೆ ಸಂಸ್ಕೃತದಲ್ಲಿ ಹೋಲಿಕೆ ಸಿಗುತ್ತದೆ. ''ಕೃತ್ಯಾ'' ಎಂಬುದು ಸಂಸ್ಕೃತದಲ್ಲಿ ಮಾಟಕ್ಕೆ ಸಮಾನ ಪದ. ಅದೂ ಮಾಡು ಎಂಬರ್ಥದ ''ಕೃ''(ಕೃಂಞ ಕರಣೇ) ಧಾತುವಿನಿಂದಲೇ ಹೊರಟದ್ದು.

ಸಂಸ್ಕೃತದಲ್ಲಿ ಕೂಡ ಈ ''ಕೃ'' ಧಾತುವಿನ ವಿಕರಣಗಳು ಬಗೆಬಗೆಯ ಬಣ್ಣಗಳಲ್ಲಿ ಅರ್ಥ ಕೊಡುತ್ತವೆ. ಸಂಸ್ಕೃತದಲ್ಲಿ ''ಕೃತ್ಯ'' ಎಂದರೆ ಕೆಲಸ, ಮಾಡಬೇಕಾದ್ದು. ಆ ಕೆಲಸ ಒಳ್ಳೆಯದೂ ಇರಬಹುದು, ಕೆಟ್ಟದ್ದೂ ಇರಬಹುದು. ಕನ್ನಡದಲ್ಲಿ ಮಾತ್ರ ''ಕೃತ್ಯ''ವನ್ನು ಕೆಟ್ಟಕೆಲಸಕ್ಕೆ ಅನ್ವಯಿಸುವುದೇ ಹೆಚ್ಚು. ಇಲ್ಲಿ ಕೃತ್ಯ= ದುಷ್ಕೃತ್ಯ, ಅಕೃತ್ಯ. ಕ್ರೈಸ್ತರು ಅವರ ಧಾರ್ಮಿಕ ಸಾಹಿತ್ಯವನ್ನು ಅನುವಾದಿಸುವಾಗ ಈ ರೂಢಿಯನ್ನು ಅಲಕ್ಷಿಸಿ, ''ಅಪೋಸ್ತಲರ ಕೃತ್ಯಗಳು'' (Acts of the Apostles) ಎಂದಿದ್ದಾರೆ ಎಂಬುದು ಬೇರೆ ಮಾತು. ನಾವು ಕೂಡ ''ಕೃತಕೃತ್ಯ'' ಎನ್ನುವಾಗ ಕೃತ್ಯಕ್ಕೆ ಕೆಟ್ಟ ಅರ್ಥವನ್ನು ಗಂಟು ಹಾಕಿಲ್ಲ. ಮಾಡಬೇಕಾದ (ಒಳ್ಳೇ) ಕೆಲಸ ಸಾಧಿಸಿದವನೆಂದೇ ಇಲ್ಲಿ ಅರ್ಥ.

ಕೆಲಸ, ಮಾಡುವಿಕೆ ಎಂದೇ ಅರ್ಥಕೊಡುವ ''ಕರ್ಮ'', ''ಕ್ರಿಯಾ'' ಶಬ್ದಗಳು ಕೂಡ ಹೀಗೆ ವಿಕೃತಾರ್ಥವನ್ನು ರೂಢಿ ಮೂಲಕ ಸಂಪಾದಿಸದೆ ಇಲ್ಲ. ''ನನ್ನ ಕರ್ಮ'' ಎನ್ನುವಾಗ ಈ ಜೀವನದಲ್ಲಿ ಅಲ್ಲ, ಹಿಂದಿನ ಜನ್ಮಗಳಲ್ಲಿ ಮಾಡಿರಬಹುದಾದ ಕೆಟ್ಟ ಕೆಲಸಗಳ ಕಲ್ಪನೆ ವ್ಯಂಜಿಸಲ್ಪಡುತ್ತದೆ. ಇವೆರಡೂ ಪದಗಳು ಸತ್ತವರಿಗಾಗಿ ಮಾಡುವ ಅಪರ ಕರ್ಮಗಳಿಗೂ ಅನ್ವಯಿಸುವುದುಂಟು.

ಮೇಲೆ ವಿವೇಚಿಸಿದ ಸಾಮಾನ್ಯ ಪದಗಳ ವಿಶಿಷ್ಟ ಅರ್ಥಪ್ರಸಕ್ತಿ ಎಲ್ಲ ಭಾಷೆಗಳಲ್ಲಿಯೂ ಇದೆ. ಇಂಗ್ಲೀಷಿನಲ್ಲಿ do (=ಮಾಡು)ವನ್ನು ನೋಡಬಹುದು. Doings ಮಾಡುವಿಕೆಗಳು ಎಂಬ ಭಾವನಾಮ ರೂಪಕ್ಕೆ ತಿರುಗಿದಾಗ do ಯಾವಾಗಲೂ ಒಳ್ಳೇ ಕೆಲಸವನ್ನೇ ಸೂಚಿಸುವುದಿಲ್ಲ. ಬಹುತರವಾಗಿ ಕೆಟ್ಟ ಕೆಲಸಗಳನ್ನೇ ಅದು ಸೂಚಿಸುತ್ತದೆ. ಆದರೆ Do come ಎನ್ನವಾಗ do ಎಂಬುದು ಅರ್ಥವನ್ನು ಒತ್ತಿ ಹೇಳುತ್ತದೆ. ಅವಶ್ಯವಾಗಿ ಬನ್ನಿ ಎಂದಂತೆ. ಭೂತಕಾಲದಲ್ಲಿ ಅದೇ did come ಎಂದರೆ ಖಂಡಿತ ಬಂದಿದ್ದೆ. Do ವಿಗಿರುವ ಈ ಸಂದಿಗ್ಧಾರ್ಥಗಳಿಗೆ ಪ್ರತಿಯಾಗಿ ಅದೇ ಅರ್ಥದ work ಅಥವಾ make ಗೆ ದುಷ್ಟಾರ್ಥಗಳು ಸಂಗಡಿಸಲಿಲ್ಲ ಎನಿಸುತ್ತದೆ. ಯಾಕೆ? ಗೊತ್ತಿಲ್ಲ.

ಅಂದ ಹಾಗೆ ಇಂಗ್ಲೀಷಿನ ಈ do ಧಾತು ಸಂಸ್ಕೃತದ ''ಧಾ'' ಧಾತುವಿನ ಜ್ಞಾತಿಯೆಂದು ಭಾಷಾಶಾಸ್ತ್ರಜ್ಞರು ಹೇಳಿದ್ದಾರೆ.

★

ಒಂದು ರಂಗಕ್ಕಾಗಿ ತಲೆಯೆತ್ತಿದ್ದ ಶಬ್ದ ಬೇರೊಂದು ರಂಗದಲ್ಲಿ ಬಳಕೆಗೆ ಬರುವುದು ಅಪರೂಪವಲ್ಲ. ''ಆಯುಧ'' ಶಬ್ದವನ್ನು ತೆಗೆದುಕೊಳ್ಳಿ. ''ಆಯುಧ'' ಯುದ್ಧದಲ್ಲಿ ಉಪಯೋಗಿಸುವಂಥ ಉಪಕರಣವೆಂಬುದು ಆ ಶಬ್ದದಿಂದಲೇ ವ್ಯಕ್ತವಾಗುತ್ತದೆ. (ಯುಧ್=ಹೋರಾಡು). ಆದರೆ ಬೇರೆ ಬೇರೆ ಉದ್ಯೋಗಗಳಲ್ಲಿ ಬಳಸುವ ಉಪಕರಣಗಳನ್ನು ಕೂಡ ಈಗ ''ಆಯುಧ''ಗಳೆಂದೇ ಕರೆಯುತ್ತೇವೆ. ಹೀಗೆ ನವರಾತ್ರಿಯಲ್ಲಿ ನಡೆಯುವ ''ಆಯುಧಪೂಜೆ''ಯಲ್ಲಿ ನಾವು ಯಂತ್ರೋಪಕರಣಗಳನ್ನು ಪೂಜಿಸುತ್ತೇವೆ. ಆದರೆ ಇದೇ ಅರ್ಥದಲ್ಲಿ ಬಹಳ ಜನ ಉಪಯೋಗಿಸುತ್ತಿರುವ ''ಹತ್ಯಾರ್'' (ಹಿಂದೀ-ಹಥಿಯಾರ್) ಎಂಬ ಶಬ್ದ ಮಾತ್ರ ಯುದ್ಧದೊಡನೆ ಯಾವುದೇ ಸಂಬಂಧ ಇಲ್ಲದ್ದು. ಅದು ''ಹಾಥ್'' ಅಂದರೆ ಕೈಗೆ ಸಂಬಂಧಿಸಿದ್ದು. ವಿಜ್ಞಾನಿಗಳ ಪ್ರಕಾರ ಕೋಲು ಮೊದಲಾಗಿ ಎಲ್ಲ ''ಆಯುಧ''ಗಳು ಕೈಯದೇ ವಿಸ್ತರಣೆಗಳು. ಆ ಮಾತನ್ನು ''ಹಥಿಯಾರ್'' ಪದ ಸಿದ್ಧಪಡಿಸುತ್ತದೆ.

– ಪಾವೆಂ

ಮನಸ್ಸನ್ನು ಓದುವ ಕುದುರೆ:
ಮತ್ತೊಂದು ಮುಖ

ಕಳೆದ ಸಂಚಿಕೆಯಲ್ಲಿ 'ಅತೀಂದ್ರಿಯ ಶಕ್ತಿಯ ಕುದುರೆಗಳು' ನೋಡಿದಿರಲ್ಲ. ನಮ್ಮ ಮನಸ್ಸನ್ನು ಓದುವುದು ಕುದುರೆಯೋ ಅಥವಾ ಅದರ ಹಿಂದಿನ ಚಾಲಕ ಶ(ವ್ಯ)ಕ್ತಿಯೋ? ಜನ ಮರುಳೊ ಜಾತ್ರೆ ಮರುಳೋ ಎಂಬಂಥ ಈ ಘಟನೆಗಳನ್ನು ಸೂಕ್ಷ್ಮವಾಗಿ ಅವಲೋಕಿಸಿ 'ಲೇಡಿ ವಂಡರ್'ನ ರಹಸ್ಯ ಭೇದಿಸಿದರು ನ್ಯೂಜೆರ್ಸಿಯ ಪ್ರೊ. ಸ್ಟ್ಯಾನ್ಲೆ. ನವಕರ್ನಾಟಕ ಪ್ರಕಾಶನ ಪ್ರಕಟಿಸಿದ 'ದೇವರು-ದೆವ್ವ-ವಿಜ್ಞಾನ' ಎಂಬ ಡಾ. ಅಬ್ರಾಹಂ ಕೋವೂರ್ ಲೇಖನಗಳ ಸಂಗ್ರಹದಿಂದ ಈ ಅನುವಾದವನ್ನು ಎತ್ತಿ ನಿಮ್ಮೆದುರಿಗಿರಿಸುತ್ತಿದ್ದೇವೆ.

● ಅನುವಾದ: *ಯಶವಂತ ಡೋಂಗ್ರೆ*

ವರ್ಜೀನಿಯಾದ ರಿಚ್‌ಮಂಡ್‌ದಲ್ಲಿ ಸಿ.ಡಿ. ಫಾಂಡ್ ಎಂಬೊಬ್ಬ ಮಹಿಳೆ, 'ಲೇಡಿ ವಂಡರ್' ಎಂಬ ಹೆಸರಿನ, ಅಭೌತಶಕ್ತಿ ಪಡೆದಿದೆ - ಎಂದು ಖ್ಯಾತಿ ಪಡೆದ ಕುದುರೆಯೊಂದನ್ನು ಹೊಂದಿದ್ದಳು. "ಅಬ್‌ನಾರ್ಮಲ್ ಅಂಡ್ ಸೋಷಿಯಲ್ ಸೈಕಾಲಜಿ" ಪತ್ರಿಕೆಯಲ್ಲಿ "ಮನಸ್ಸನ್ನು ಓದುವ ಕುದುರೆಯ ಬಗೆಗಿನ ವಿಚಾರಣೆ" ಎಂಬ ತಲೆಬರಹದಲ್ಲಿ ಡ್ಯೂಕ್ ವಿಶ್ವವಿದ್ಯಾಲಯದ ಡಾ. ಜೆ.ಬಿ. ರೈನ್ ಮತ್ತು ಡಾ. ಲೂಸಿಯಾ ಇ. ರೈನ್‌ರ ಲೇಖನವೊಂದು ಪ್ರಕಟವಾಯಿತು. ಆ ಲೇಖನದ ಕೆಲವು ಭಾಗಗಳನ್ನು ಇಲ್ಲಿ ಉಲ್ಲೇಖಿಸಿದೆ.

"ಇಲ್ಲಿ ವಿವರಿಸಿದ, ಪರೀಕ್ಷೆಗೊಳಪಟ್ಟ ಪ್ರಾಣಿ, ಮೂರು ವರ್ಷ ಪ್ರಾಯದ ಹೆಣ್ಣು ಕುದುರೆ ಮರಿ, ಲೇಡಿ ವಂಡರ್, ವರ್ಜೀನಿಯದ ರಿಚ್‌ಮಂಡ್‌ನಲ್ಲಿಯ ಶ್ರೀಮತಿ ಸಿ.ಡಿ. ಫಾಂಡರ ಒಡೆತನಕ್ಕೆ ಸೇರಿದ್ದು. ನಮ್ಮ ವಿಚಾರಣೆಗೆ ಮಾರ್ಗದರ್ಶಕವಾದ ವರದಿಯ ಪ್ರಕಾರ, ಯಾವುದೇ ಮಾತಿನ ಅನುಜ್ಞೆ ಇಲ್ಲದೆ ಭವಿಷ್ಯ ನುಡಿಯುವುದು, ಅಂಕಗಣಿತದ ಸರಳ ಸಮಸ್ಯೆಗಳಿಗೆ ಉತ್ತರಿಸುವುದು, ಪ್ರಶ್ನೆಗಳಿಗೆ ಸರಿಯಾದ ಮತ್ತು ಬುದ್ಧಿವಂತಿಕೆಯ ಉತ್ತರಗಳನ್ನು ಕೊಡುವುದು ಇವುಗಳನ್ನು ಈ ಕುದುರೆಯು ಮಾಡುತ್ತಿತ್ತು. ಮಾಡಬೇಕಿದ್ದ ಕೆಲಸವೆಂದರೆ ಪ್ರಶ್ನೆಯನ್ನು ಬರೆದು ಶ್ರೀಮತಿ ಫಾಂಡ್‌ಗೆ ತೋರಿಸಬೇಕಿದ್ದುದು ಮಾತ್ರ. ಶ್ರೀಮತಿ ಫಾಂಡರ ಅಭಿಪ್ರಾಯದಂತೆ, 'ಅಸಾಮಾನ್ಯ ಬುದ್ಧಿವಂತಿಕೆ ಮತ್ತು ಮನಸ್ಸನ್ನು ಓದುವ ಸಾಮರ್ಥ್ಯದ ಸಂಯೋಗವೇ ಕುದುರೆಯ ಈ ಎಲ್ಲ ಸಾಧನೆಗೆ ಕಾರಣ' ನಮ್ಮ ಪರೀಕ್ಷೆಗಳು ಒಟ್ಟು ಆರು ದಿನಗಳ ಅವಧಿಯನ್ನೊಳಗೊಂಡಿದ್ದು 1927ರ ಡಿಸೆಂಬರ್ 3ರಂದು ಆರಂಭವಾಗಿ 1928ರ ಜನವರಿ 15ರಂದು ಮುಗಿದವು. ಪರೀಕ್ಷೆಗಳನ್ನು ಶ್ರೀಮತಿ ಫಾಂಡರ ಮನೆಯಲ್ಲಿ 9X12 ಅಡಿಗಳ ಒಂದು ಪ್ರದರ್ಶಕ ಡೇರೆಯಲ್ಲಿ ನಡೆಸಲಾಯಿತು.

"ಪ್ರೊಫೆಸರ್ ವಿಲಿಯಂ ಮ್ಯಾಕ್‌ಡೌಗಲ್‌ರವರು ಎರಡು ದಿನಗಳ ಪರೀಕ್ಷೆಗಳಲ್ಲಿ ಮತ್ತು ಜಿಲ್ಲಾ ಶಾಲಾ ಸಹಾಯಕ ಅಧೀಕ್ಷಕರಾದ

ಶ್ರೀಮತಿ ಜಾನ್ ಎಫ್. ಥಾಮಸ್‌ರವರು ಒಂದು ದಿನದ ಪರೀಕ್ಷೆಯಲ್ಲೂ ಭಾಗವಹಿಸಿದ್ದರು. ಉಪಸ್ಥಿತರಿದ್ದ ಇತರರೆಂದರೆ ಶ್ರೀಮತಿ ಸಿ.ಡಿ. ಫಾಂಡ್, ಡಾ. ಬಿ. ರೈನ್ ಮತ್ತು ಡಾ. ಲೂಸಿಯಾ ಇ. ರೈನ್.''

ಡ್ಯೂಕ್ ವಿಶ್ವವಿದ್ಯಾಲಯದಲ್ಲಿನ ತನ್ನ ಮೇಲಾಧಿಕಾರಿ ಪ್ರೊ. ವಿಲಿಯಂ ಮ್ಯಾಕ್‌ಡೌಗಲರೂ ಸೇರಿದಂತೆ ಹಲವು ಸಹೋದ್ಯೋಗಿಗಳೊಡನೆ ಆರು ದಿನಗಳಕಾಲ 'ಲೇಡಿ ವಂಡರ್'ನ ಮೇಲೆ ಅನ್ಯ ಮನೋದರ್ಶನದ ತನ್ನ ಮಹಾನ್ ಪರೀಕ್ಷೆಗಳನ್ನು ನಡೆಸಿ, ಅನಂತರ ಇದರ ಬಗ್ಗೆ ಯೋಚಿಸಲು ಮತ್ತು ತನ್ನ ಸಹೋದ್ಯೋಗಿಗಳೊಡನೆ ಚರ್ಚಿಸಲು ಒಂದು ವರ್ಷ ತೆಗೆದುಕೊಂಡ ಡಾ. ರೈನ್ ಹೀಗೆ ಬರೆದ:

''ಈಗ ಉಳಿದಿರುವುದು ಅನ್ಯ ಮನೋದರ್ಶನದ ವ್ಯಾಖ್ಯಾನ ಮಾತ್ರ. ಯಾವುದೋ ಅರಿಯಲಾರದ ಪ್ರಕ್ರಿಯೆಯಿಂದ ಮನಃಶಕ್ತಿಯ ಪ್ರೇರಣೆ ವರ್ಗಾಯಿಸಲ್ಪಡುತ್ತಿರುವುದು. ಇದನ್ನು ಒಪ್ಪಲಾಗದ ಯಾವುದೇ ಅಂಶವೂ ವ್ಯಕ್ತವಾಗಲಿಲ್ಲ ಮತ್ತು ನಮ್ಮ ಫಲಿತಾಂಶಗಳ ದೃಷ್ಟಿಯಲ್ಲಿ ಇನ್ನಾವುದೇ ಪ್ರಮೇಯಗಳೂ ಸಮರ್ಥನೀಯವೆನಿಸಲಿಲ್ಲ.''

ಸರಳವಾದ ಭಾಷೆಯಲ್ಲಿ ಹೇಳುವುದಾದರೆ ಮೇಲಿನ ಮಾತುಗಳ ಅರ್ಥ ಡ್ಯೂಕ್ ವಿಶ್ವವಿದ್ಯಾಲಯದ ಮನಶ್ಶಾಸ್ತ್ರ ವಿಭಾಗದಲ್ಲಿನ ವಿಜ್ಞಾನಿಗಳು, ಶ್ರೀಮತಿ ಫಾಂಡಳ ಕುದುರೆ ಮನುಷ್ಯನ ಮನಸ್ಸನ್ನು ಓದಬಲ್ಲ ಸಾಮರ್ಥ್ಯ ಪಡೆದಿದೆ ಎಂಬ ತಮ್ಮ ತೀರ್ಮಾನವನ್ನು ಬರವಣಿಗೆಯಲ್ಲಿ ಖಚಿತಪಡಿಸಿದರು ಎಂದಾಗುತ್ತದೆ.

ಡಾ. ರೈನ್‌ರ ಕೃಪೆಯಿಂದಾಗಿ 'ಲೇಡಿ ವಂಡರ್' ಜಗತ್ತಿನಲ್ಲೇ ಪ್ರಖ್ಯಾತವಾದ-ಜೂಜಿನದಲ್ಲದ-ಕುದುರೆಯಾಯಿತಲ್ಲದೆ ತನ್ನ ಒಡತಿಗೆ ದೊಡ್ಡ ಅದೃಷ್ಟವನ್ನು ಗಳಿಸಿಕೊಳ್ಳುವುದಕ್ಕೂ ಸಹಾಯ ಮಾಡಿತು. 'ಲೈಫ್' ಪತ್ರಿಕೆಯಲ್ಲಿನ ವಿವರಣೆಯೂ ಸೇರಿದಂತೆ ಈ ಅದ್ಭುತವಾದ ಕುದುರೆಯ ಕಥೆ ವೃತ್ತಪತ್ರಿಕೆಗಳಲ್ಲಿ ಮತ್ತು ನಿಯತಕಾಲಿಕಗಳಲ್ಲಿ ಬೆಳಕು ಕಂಡಿತು. 'ಚಾಲೇಂಜ್'ನ 1956ರ ಜುಲೈ ತಿಂಗಳ ಸಂಚಿಕೆ, ಯುವಕನೊಬ್ಬನ ಮೃತದೇಹವನ್ನು ಹುಡುಕುವಲ್ಲಿ ಪೊಲೀಸರಿಗೆ ನೆರವಾದ ಗೌರವವನ್ನು 'ಲೇಡಿ ವಂಡರ್'ಗೆ ನೀಡಿದೆ. ಡಾ. ರೈನ್‌ರು ಅಭೌತ ಶಕ್ತಿಯನ್ನು ಉದ್ಧರಿಸಿದ ನಂತರ ಸುಮಾರು 1,50,000 ಜನ 'ಲೇಡಿ ವಂಡರ್'ನ್ನು ತಮ್ಮ ಸಮಸ್ಯೆಗಳ ಪರಿಹಾರಕ್ಕೆ ಸಹಾಯ ಯಾಚಿಸಲು ಭೇಟಿಯಾಗಿ ಮಾತನಾಡಿರುವರೆಂದು ಅಂದಾಜು ಮಾಡಲಾಗಿದೆ.

'ಲೇಡಿ ವಂಡರ್'ನ ಕೀರ್ತಿ ನ್ಯೂಜೆರ್ಸಿಯ ಪ್ರೊ. ಜಾನ್ ಸ್ಕಾರ್ನೆಯನ್ನು ತಲುಪಿದಾಗ ಆತ ತಾನೇ ಈ ಘಟನೆಯ ವಿಚಾರಣೆ ಮಾಡಲು ನಿರ್ಧರಿಸಿದ. ಒಂದು ಮಧ್ಯಾಹ್ನ ಆತ ಸ್ನೇಹಿತ ಡೊನಾಲ್ಡ್ ಗ್ರೇ ಜೊತೆ ಶ್ರೀಮತಿ ಫಾಂಡಳ ತೋಟದ ಮನೆಗೆ ಭೇಟಿಯಿತ್ತ. ಅವರು ತಮ್ಮ ಮನಸ್ಸನ್ನು ಓದಿಸುತ್ತಿದ್ದ ಜನರ ಗುಂಪು ಕರಗುವವರೆಗೆ ಕಾದಿದ್ದು ನಂತರ ಶ್ರೀಮತಿ ಫಾಂಡ್ ಹಾಗೂ ಮೂರು ವರ್ಷದ ಆ ಹೆಣ್ಣು ಕುದುರೆ 'ಲೇಡಿ ವಂಡರ್' ಇದ್ದ ಡೇರೆಯನ್ನು ಪ್ರವೇಶಿಸಿದರು.

ಲೇಡಿ ವಂಡರ್ ಮೇಜೊಂದರ ಮುಂದೆ ನಿಂತಿತ್ತು. ಮೇಜಿನ ಮೇಲೆ ವರ್ಣಮಾಲೆಯ ಅಕ್ಷರಗಳಿದ್ದ ಮರದ ತುಂಡುಗಳಿದ್ದವು. ಅವರ ಮನಸ್ಸನ್ನು ಅರ್ಥೈಸಿಕೊಂಡ ನಂತರ 'ಲೇಡಿ ವಂಡರ್' ಅಕ್ಷರಜೋಡಣೆಯ ಮೂಲಕ ಉತ್ತರಿಸುವಳೆಂದು ಶ್ರೀಮತಿ ಫಾಂಡ್ ಸ್ಕಾರ್ನೆ ಮತ್ತಿತರಿಗೆ ವಿವರಿಸಿದಳು. ಕುದುರೆ ಒಂದೊಂದು ಅಕ್ಷರವನ್ನು ಜೋಡಿಸಿ ಪ್ರಶ್ನೆಗಳಿಗೆ ಉತ್ತರಿಸುವುದೆಂದೂ ಆಕೆ ವಿವರಿಸಿದಳು.

ಸ್ಕಾರ್ನೆ ಒಂದು ಶಬ್ದವನ್ನೂ ಮಾತನಾಡದೆ, ಸಮುಪಸ್ಥದಲ್ಲಿದ್ದ ಪೊಲೀಸ್ ಅಧಿಕಾರಿಯೊಬ್ಬ ಕುದುರೆಯ ಜೊತೆ ಮಾತನಾಡುತ್ತಿರುವುದರತ್ತ ಗಮನ ಹರಿಸಲು ಯತ್ನಿಸಿದ. ಆ ಅಧಿಕಾರಿ ಬ್ಯಾಂಕ್ ದರೋಡೆ ಪ್ರಕರಣ ಒಂದರ ಪರಿಹಾರಕ್ಕಾಗಿ 'ಲೇಡಿ ವಂಡರ್'ನ ಸಲಹೆ ಕೇಳಲು

ಚಿಕಾಗೋದಿಂದ ಬಂದಿದ್ದ. ಆತ ಕುದುರೆಯನ್ನು ಪ್ರಶ್ನಿಸಿದ. ''ಲೇಡಿ, ನಾನು ಬಂದಿದ್ದೇಕೆಂದು ನಿನಗೆ ಗೊತ್ತಿದೆಯೆ?''

ಲೇಡಿ ವಂಡರ್ ಮೂಗಿನಿಂದ ಒಂದೊಂದಾಗಿ ಅಕ್ಷರಗಳನ್ನು ಮುಟ್ಟುತ್ತ ಉತ್ತರಿಸಿತು: y....e...s. (ಹೌದು). ನಂತರ ಆತ ಕಂಪಿಸುವ ಧ್ವನಿಯಲ್ಲಿ ಕೇಳಿದ ''ಆ ಬಗ್ಗೆ ನಾನು ಹೇಗೆ ಮುಂದುವರಿಯಲಿ?'' ಲೇಡಿ ವಂಡರ್ ಮೂಗಿನಿಂದ ಅಕ್ಷರಗಳನ್ನು ಮುಟ್ಟಿತು: ''ಪರಿಶ್ರಮ ಪಡು''. ನಂತರ ಆ ಅಧಿಕಾರಿ ಯಾಚನೆಯ ಧ್ವನಿಯಲ್ಲಿ ಕೇಳಿದ-''ಇಷ್ಟೊಂದು ಪ್ರಶ್ನೆಗಳನ್ನು ಕೇಳುತ್ತಿರುವುದಕ್ಕೆ ನನಗೆ ವಿಷಾದವಿದೆ ಲೇಡಿ, ಆದರೆ ಆ ದರೋಡೆಕೋರರು ಈಗ ಎಲ್ಲಿದ್ದಾರೆಂದು ದಯವಿಟ್ಟು ಹೇಳು'' ಕುದುರೆ ಈಗ C H I ಶಬ್ದಗಳನ್ನು ಮುಟ್ಟಿ ಚಿಕಾಗೋ ಎಂದು ಸೂಚಿಸಿತು. ಅದು ಶಬ್ದವನ್ನು ಪೂರ್ತಿಗೊಳಿಸಲಿಲ್ಲ. ಏಕೆಂದರೆ 'C' ಅಕ್ಷರವನ್ನು ಎರಡು ಬಾರಿ ಉಪಯೋಗಿಸಬೇಕಿತ್ತು. ಮತ್ತು ಅದಕ್ಕಾಗಿ ಶ್ರೀಮತಿ ಫಾಂಡ್ ಆ ಅಕ್ಷರವಿದ್ದ ಮರದ ತುಂಡನ್ನು ಪುನಃ ಸ್ವಸ್ಥಾನಕ್ಕೆ ಚಲಿಸಬೇಕಿತ್ತು. ಆಕೆ ಪ್ರದರ್ಶನದ ಸಂದರ್ಭದಲ್ಲಿ ಎಂದೂ ಕುದುರೆಯ ಎದುರು ಬರದಿರುವುದನ್ನು ರೂಢಿ ಮಾಡಿಕೊಂಡಿದ್ದಳು.

ನಂತರ ಆ ಪೊಲೀಸ್ ಅಧಿಕಾರಿ ಕುದುರೆಯ ಕಡೆಗೆ ತಿರುಗಿ ಹೇಳಿದ, ''ಧನ್ಯವಾದಗಳು ಲೇಡಿ, ನೀನು ನನಗೆ ಬಹಳ ಸಹಾಯ ಮಾಡಿದಿ''. ಈಗ ಶ್ರೀಮತಿ ಫಾಂಡ್, ಸ್ಕಾರ್ನೆಯನ್ನು ತನ್ನ ಮನಸ್ಸಿಗೆ ಬಂದ ಪ್ರಶ್ನೆಯನ್ನು ಕೇಳಲು ಹೇಳಿದಳು. ''ಆದರೆ ಹೇಗೆ?'' ಸ್ಕಾರ್ನೆ ಕೇಳಿದ. ಫಾಂಡ್ ಉತ್ತರಿಸಿದಳು, ''ಲೇಡಿ ನಾನು ಇಲ್ಲಿಗೆ ಹೇಗೆ ಬಂದೆ ಎಂದು ಕೇಳು.'' ಸ್ಕಾರ್ನೆ ಪ್ರಶ್ನೆಯನ್ನು ಪುನರುಚ್ಚರಿಸಿದ. ಲೇಡಿ ವಂಡರ್ ತನ್ನ ತಲೆಯನ್ನು ಸ್ವಲ್ಪ ಚಲಿಸಿ ನಂತರ ಮೇಜಿನ ಮೇಲಿದ್ದ ಮರದ ತುಂಡುಗಳ ಕಡೆ ಬಾಗಿತು. ಕೆಲವು ಕ್ಷಣ ಹಿಂದೆ ಮುಂದೆ ನೋಡಿದ ನಂತರ ತನ್ನ ಮೂಗಿನಿಂದ 'C' ಅಕ್ಷರವನ್ನು ಮುಂದೆ ದೂಡಿತು. ಪುನಃ ತನ್ನ ತಲೆಯನ್ನು ಮೇಲಕ್ಕೆತ್ತಿದ ಕುದುರೆ ಕೆಳಗೆ ಬಗ್ಗಿ 'A' ಅಕ್ಷರವನ್ನು ನೂಕಿತು. ಅನಂತರ 'R' ಅಕ್ಷರ. ಮೂರು ಅಕ್ಷರಗಳ ಜೋಡಣೆಯಿಂದ ಹೊರಟಿದ್ದ ಶಬ್ದ 'CAR'.

ಲೇಡಿ ವಂಡರ್‌ನ 'ಮನಸ್ಸನ್ನು ಓದುವ' ಈ ಪ್ರದರ್ಶನದ ನಂತರ ಸ್ಕಾರ್ನೆ ಶ್ರೀಮತಿ ಫಾಂಡ ಳತ್ತ ತಿರುಗಿ ಹೇಳಿದ, ''ಅದು ಅದ್ಭುತವಾಗಿತ್ತು-ಆದರೆ ನನ್ನದೊಂದು ಪ್ರಶ್ನೆ ಇದೆ. ನಾನು ಆ ಬಗ್ಗೆಯೇ ಯೋಚಿಸುತ್ತಿದ್ದೇನೆ. ಲೇಡಿ ವಂಡರ್‌ಳಿಂದ ಅದಕ್ಕೆ ಉತ್ತರವನ್ನು ಅಪೇಕ್ಷಿಸುತ್ತೇನೆ. ಪ್ರಶ್ನೆ ಏನೆಂದು ಅವಳಿಗೆ ಹೇಳದೆ ಅದನ್ನು ಅವಳಲ್ಲಿ ಕೇಳುವುದು ಹೇಗೆ?''

ಶ್ರೀಮತಿ ಫಾಂಡ್ ಒಂದು ಕ್ಷಣ ದಿಗ್ಭ್ರಾಂತಳಾದಂತೆ ಕಂಡಳು. ನಂತರ ಒಂದು ಲೆಟರ್ ಪ್ಯಾಡ್ ಮತ್ತು ಪೆನ್ಸಿಲನ್ನು ಅವನಿಗೆ ಕೊಟ್ಟು ಹೇಳಿದಳು. ''ನಿನ್ನ ಪ್ರಶ್ನೆಯನ್ನು ಈ ಪ್ಯಾಡ್‌ನಲ್ಲಿ ಬರಿ, ಮತ್ತೆ ಲೇಡಿ ವಂಡರ್‌ಗೆ ಅದನ್ನು ನೋಡಲು ಬಿಡಬೇಡ.'' ಸ್ಕಾರ್ನೆ ಪ್ಯಾಡ್‌ನಲ್ಲಿ ತನ್ನ ಪ್ರಶ್ನೆ ಬರೆದ. ಆದರೆ ಬರೆಯುವಾಗ ಶ್ರೀಮತಿ ಫಾಂಡಳಿಗೆ ಅದು ಕಾಣದಂತೆ ಎಚ್ಚರವಹಿಸಿದ.

ಶ್ರೀಮತಿ ಫಾಂಡ್ ಸ್ವಲ್ಪ ಆಶಾಭಂಗವಾದಂತೆ ಕಂಡಳು. ಆದರೆ ಲೇಡಿಯ ಕಡೆ ತಿರುಗಿ ಸ್ಕಾರ್ನೆಯ ಪ್ರಶ್ನೆಯನ್ನು ಉತ್ತರಿಸಲು ಹೇಳಿದಳು. ಕುದುರೆ ತನ್ನ ತಲೆಯನ್ನು ಚಲಿಸಲಿಲ್ಲ. ಮತ್ತು ಅದರ ಕಾರಣ ಸ್ಕಾರ್ನೆಗೆ ಸ್ಪಷ್ಟವಾಗಿತ್ತು. ಕೆಲವು ನಿಮಿಷ ಕಾದನಂತರ ಸ್ಕಾರ್ನೆಗೆ, ಶ್ರೀಮತಿ ಫಾಂಡ್‌ತನ್ನ ಪ್ರಶ್ನೆಯನ್ನು ನೋಡಿದ ಹೊರತು ಕುದುರೆ ಮರದ ತುಂಡನ್ನು ಮುಂದೆ ನೂಕಲಾರದೆಂದು ಮನವರಿಕೆಯಾಯ್ತು. ಆದ್ದರಿಂದ ಆತ ಶ್ರೀಮತಿ ಫಾಂಡ್‌ಗೆ ಪ್ರಶ್ನೆ ಗೊತ್ತಾಗದಂತೆ ನೋಡಿಕೊಳ್ಳಲು ನಿರ್ಧರಿಸಿದ. ಸ್ಕಾರ್ನೆ ತನ್ನ ಸ್ನೇಹಿತ 'ಗ್ರೇ'ಯೊಡನೆ ಮಾತನಾಡಲು ತಿರುಗುತ್ತಿದ್ದಂತೆಯೇ, 'ನಾನು ಎಲ್ಲಿ ವಾಸಿಸುತ್ತಿದ್ದೇನೆ?' ಎಂದು ಬರೆದ ತನ್ನ ಪ್ರಶ್ನೆಯನ್ನು

ಶ್ರೀಮತಿ ಫಾಂಡ್ ಓದಲು ಅನುಕೂಲವಾಗುವಂತೆ, ಪ್ಯಾಡನ್ನು ಅರಿವಿಲ್ಲದವನಂತೆ ತಿರುಗಿಸಿ ಹಿಡಿದ. ತತ್‌ಕ್ಷಣವೇ ಲೇಡಿ ವಂಡರ್ ಮರದ ತುಂಡುಗಳನ್ನು ದೂಡುತ್ತಾ, ''ನ್ಯೂಯಾರ್ಕ್'' ಎಂದು ಜೋಡಿಸಿತು.

ಸ್ಕಾರ್ನೆ ಚಕಿತನಾದವನಂತೆ ನಟಿಸುತ್ತ ಹೇಳಿದ- ಇದು ಅದ್ಭುತ! ನಾನು ನ್ಯೂಯಾರ್ಕ್‌ನಲ್ಲಿದ್ದೇನೆಂದು ಕುದುರೆಗೆ ಹೇಗೆ ತಿಳಿಯಿತು?'' (ನಿಜವಾಗಿ ಸ್ಕಾರ್ನೆ ಜೀವಿಸುತ್ತಿದ್ದುದು 'ನ್ಯೂಜೆರ್ಸಿ'ಯಲ್ಲಿ). ಸ್ಕಾರ್ನೆ ಶ್ರೀಮತಿ ಫಾಂಡ್‌ಳಿಗೆ ಅವಳ ಶುಲ್ಕ ಐದು ಡಾಲರ್ ತೆತ್ತು, 'ಗ್ಸೌ'ಯ ಜೊತೆ ಹೊರಟ.

ಸ್ಕಾರ್ನೆ ತನ್ನ ಕಾರಿನಲ್ಲಿ ಹಿಂದಿರುಗುತ್ತಿರುವಾಗ ದಾರಿಯಲ್ಲಿ, ಡ್ಯೂಕ್ ವಿಶ್ವವಿದ್ಯಾಲಯದ ಪ್ರೊಫೆಸರ್ ಒಬ್ಬನನ್ನು ಇಷ್ಟು ಸರಳವಾದ ಕುದುರೆ ಆಟದಿಂದ ಮೂರ್ಖನನ್ನಾಗಿಸಿರುವುದು ನಿಜವೇ, ಎಂದು ಯೋಚಿಸಿದ. ಸ್ಕಾರ್ನೆಯ ಪ್ರಕಾರ ಶ್ರೀಮತಿ ಫಾಂಡ್ ಮತ್ತು ಅವಳ ಮನಸ್ಸನ್ನೋದುವ ಕುದುರೆಯ ಒಂದೇ ಚಾಣಾಕ್ಷತನವೆಂದರೆ ಪ್ರೊಫೆಸರರನ್ನು ಮೋಸಮಾಡುವಲ್ಲಿ ಶ್ರೀಮತಿ ಫಾಂಡ್ ತೋರಿದ ಚಾತುರ್ಯ.

ಲೇಡಿ ವಂಡರ್ ಸರಿಯಾದ ಸಮಯಕ್ಕೆ ತನ್ನ ಮೂಗಿನಿಂದ ಮರದ ತುಂಡುಗಳನ್ನು ದೂಡುವಂತೆ ಮಾಡುವ ಸರಳ ವಿಷಯವನ್ನು ಸ್ಕಾರ್ನೆ ಹೀಗೆ ವಿವರಿಸಿದ:

''ಶ್ರೀಮತಿ ಫಾಂಡ್ ಒಂದು ಚಾವಟಿಯನ್ನು ಹಿಡಿದಿರುತ್ತಿದ್ದು ಅದನ್ನು ಚಲಿಸುವುದರ ಮೂಲಕ ಕುದುರೆಗೆ ಸೂಚನೆ ಕೊಡುತ್ತಿದ್ದಳು. ಕುದುರೆ ತನ್ನ ಮೂಗಿನಿಂದ ಅಕ್ಷರವಿದ್ದ ಮರದ ತುಂಡುಗಳನ್ನು ಮುಟ್ಟುವ ಪ್ರತಿಬಾರಿಯೂ ಶ್ರೀಮತಿ ಫಾಂಡ್ ಹೀಗೆ ಮಾಡುವುದನ್ನು ನಾನು ಗಮನಿಸಿದೆ. ಮುಖದ ಎರಡೂ ಕಡೆಗಳಲ್ಲಿರುವ ತನ್ನ ಕಣ್ಣುಗಳಿಂದಾಗಿ ಕುದುರೆಗೆ ಪರಿಧಿಯ ಹಿಂಭಾಗದ ವಿಸ್ತಾರವಾದ ದೃಷ್ಟಿ ಸಾಧ್ಯವಿದೆಯೆಂದು ನನಗೆ ತಿಳಿದಿರದಿದ್ದಲ್ಲಿ ಈ ತಂತ್ರವೂ ನನ್ನನ್ನು ಆಶ್ಚರ್ಯಚಕಿತನನ್ನಾಗಿಸಬಹುದಿತ್ತು. ಆದರೆ ನನಗಿದನ್ನು ಪತ್ತೆ ಮಾಡುವಲ್ಲಿ ಯಾವುದೇ ಸಮಸ್ಯೆ ಎದುರಾಗಲಿಲ್ಲ.

''ಶ್ರೀಮತಿ ಫಾಂಡ್,'ಲೇಡಿ ವಂಡರ್'ಗೆ ಸೂಚನೆ ನೀಡುವ ಸಂದರ್ಭದಲ್ಲಿ ಸುಮಾರು ಎರಡೂವರೆ ಅಡಿಯಷ್ಟು ಹಿಂದೆ ಕುದುರೆಯ ಮುಖಕ್ಕೆ ಸುಮಾರು 60 ಡಿಗ್ರಿ ಕೋನದಲ್ಲಿ ನಿಂತಿರುತ್ತಿದ್ದಳು. ಮೊದಲ ಸಾರಿ ಚಾವಟಿಯಾಡಿಸುವುದು 'ಲೇಡಿ' ಮರದ ತುಂಡುಗಳಿಗೆ ಕೆಲವೇ ಇಂಚುಗಳಿರುವಂತೆ ತನ್ನ ತಲೆಯನ್ನು ಬಗ್ಗಿಸುವುದಕ್ಕೆ ಸೂಚನೆಯಾಗಿತ್ತು. ಎರಡನೇ ಬಾರಿಯ ಚಲನೆ, ಲೇಡಿ ನಿರಂತರವಾಗಿ ಮರದ ತುಂಡುಗಳ ಮೇಲೆ ಹಿಂದೆ ಮುಂದೆ ತನ್ನ ತಲೆಯನ್ನು ಆಡಿಸುವುದಕ್ಕೆ ಸೂಚನೆ. ಲೇಡಿ ವಂಡರ‍ಳ ಮುಖ ಅಗತ್ಯವಾದ ಮರದ ತುಂಡಿನ ಬಳಿ ಬಂದಾಗ, ಮೂರನೆ ಬಾರಿ ಚಾವಟಿ ಆಡಿಸಿ ಸಂಕೇತ ನೀಡುವುದರ ಮೂಲಕ, ಕುದುರೆ ತನ್ನ ಮೂಗಿನಿಂದ ಆ ತುಂಡನ್ನು ದೂಡುವಂತೆ ಮಾಡುತ್ತಿದ್ದಳು ಶ್ರೀಮತಿ ಫಾಂಡ್. ಇಷ್ಟು ಸರಳವಾಗಿತ್ತು ಅದು.'' (ದಿ ಅಮೇಜಿಂಗ್ ವರ್ಲ್ಡ್, ಪು. 247-53)

ಪ್ರೊಫೆಸರ ವಿಲಿಯಂ ಮ್ಯಾಕ್‌ಡೌಗಲ್ ಒಬ್ಬ ತಂತ್ರಗಾರಿ ಹೆಂಗಸಿನ ತರಬೇತಿ ಪಡೆದ ಕುದುರೆಯಿಂದ ಮೋಸಗೊಳಿಸಲ್ಪಟ್ಟನೆಂದರೆ ನನಗೆ ಆಶ್ಚರ್ಯವಾಗುವುದಿಲ್ಲ. ಆದರೆ ಸ್ವತಃ ಜೀವವಿಜ್ಞಾನಿಯಾದ ಡಾ. ರೈನ್, ಕುದುರೆ ತನ್ನ ಪಾರ್ಶ್ವಸ್ಥವಾದ ಕಣ್ಣುಗಳಿಂದಾಗಿ, ಹಿಂಭಾಗದಲ್ಲಿ ಏನು ನಡೆಯುತ್ತದೆಂಬುದನ್ನು ನೋಡಬಲ್ಲದೆಂಬುದನ್ನು ಮರೆತದ್ದು ನನಗೆ ಆಶ್ಚರ್ಯವೆನಿಸುತ್ತದೆ.

ಪ್ರೊ.ಸ್ಕಾರ್ನೆಯ ವಿಚಾರಣಾ ವರದಿಯ ಪ್ರಕಾಶನದೊಂದಿಗೆ ಲೇಡಿ ವಂಡರ್‌ನ 'ಮನಸ್ಸನ್ನೋದುವ ಜೀವನೋಪಾಯ' ಅಂತ್ಯವಾಯಿತು. ●

ನೆನಪು ನೆರಳಿನಲ್ಲಿ

ಬಾಲ್ಯದಿಂದಲೂ ನಾನು ಹಟಮಾರಿ, ಜೊತೆಗೆ ಸಿಡುಕು ಸ್ವಭಾವ ಸೇರಿತ್ತು. ಕೋಪದಲ್ಲಿ ನಾನು ಏನು ಹೇಳುತ್ತಿದ್ದೇನೆಂಬ ಪರಿವೇ ಇಲ್ಲದೆ ಮಾತನಾಡಿಬಿಡುತ್ತಿದ್ದೆ.

ಒಮ್ಮೆ ಹೀಗಾಯಿತು. ಎಂಟನೇ ತರಗತಿಯಲ್ಲಿ ಓದುತ್ತಿದ್ದೆ. ಶಾಲೆಯ ವಾರ್ಷಿಕ ದಿನಾಚರಣೆಯ ಅಂಗವಾಗಿ ಏರ್ಪಡಿಸಲಾಗಿದ್ದ ಒಂದು ಸ್ಪರ್ಧೆಯಲ್ಲಿ ಭಾಗವಹಿಸಲು ಕೆಲವರು ತರಗತಿಯಿಂದ ಹೊರಹೋಗಿದ್ದರು. ಚಿತ್ರಕಲೆಯ ಸ್ಪರ್ಧೆಯೂ ಅಂದೇ ಇದ್ದುದರಿಂದ ಕೆಲವರು ಸ್ಕೆಚ್‌ಪೆನ್, ಪೇಂಟ್ ಇತ್ಯಾದಿ ತಂದಿದ್ದರು. ನನ್ನ ಪಕ್ಕದಲ್ಲಿ ಕುಳಿತಿದ್ದವಳೂ ಸ್ಪರ್ಧೆಗೆ ಹೋಗಿದ್ದ ಕಾರಣ, ಅವಳ ಬ್ಯಾಗು ಅಲ್ಲಿಯೇ ಇತ್ತು. ಬ್ಯಾಗಿನ ಆ ಕಡೆ ಕುಳಿತಿದ್ದವಳ ಕಣ್ಣು ಆಕಸ್ಮಿಕವಾಗಿ ಬ್ಯಾಗಿನಿಂದ ಹೊರಗೆ ಇಣುಕುತ್ತಿದ್ದ ಸ್ಕೆಚ್‌ಪೆನ್ನಿನ ಬಾಕ್ಸ್ ಮೇಲೆ ಬಿದ್ದು, ಅದನ್ನು ಹೊರಕ್ಕೆ ತೆಗೆದು ಅಂಗೈ ಮೇಲೆ ತನ್ನ ಹೆಸರನ್ನು ಬರೆದುಕೊಂಡಳು. ನಾನೂ ಒಂದು ಪೆನ್ನನ್ನು ಹೊರಕ್ಕೆ ಎಳೆದು ಅಂಗೈ ಮೇಲೆ ನನ್ನ ಹೆಸರನ್ನು ಬರೆದುಕೊಂಡೆ. ನಂತರ ಆ ಬಾಕ್ಸನ್ನು [illegible]

ಮರುದಿನ ದಿನ ಶಾಲೆಗೆ ಬಂದೊಡನೆಯೇ, ನಿನ್ನೆ ಸ್ಕೆಚ್‌ಪೆನ್ ಹೊರಗೆ [illegible] ಕೇಳಿದಳು - "ನೀನು ನಿನ್ನೆ ಅವಳ ಬ್ಯಾಗಿನಿಂದ ಎರಡು ರೂಪಾಯಿ ತೆಗೆದುಕೊಂಡೆಯಾ?" ಇಬ್ಬರೂ ಒಟ್ಟಿಗೆ ಬಾಕ್ಸನ್ನು ಒಳಗೆ ಇಟ್ಟಿದ್ದರೂ, ಇವಳು ನನ್ನನ್ನು ಈ ರೀತಿ ಆಪಾದಿಸುತ್ತಿರುವಳಲ್ಲಾ ಎಂದುಕೊಂಡ ನಾನು ಕೋಪದಿಂದ "ಹೌದು ಕಣೆ, ನಾನು ತಗೊಂಡೆ, ನೀನೇ ನೋಡಿದೆಯಲ್ಲ ತಗೊಂಡಿದ್ದನ್ನು" ಎಂದು ವ್ಯಂಗ್ಯವಾಗಿ ಹೇಳಿದೆ. ಆದರೆ ಆ ಮಾತಿನ ಪರಿಣಾಮ ಏನಾಗಬಹುದೆಂದು ಊಹಿಸಲಿಲ್ಲ.

ಶೀಘ್ರದಲ್ಲಿಯೇ ಈ ವಿಚಾರ ತರಗತಿಯ ಉಪಾಧ್ಯಾಯಿನಿಯನ್ನು ತಲುಪಿ, ನನ್ನ ವಿಚಾರಣೆ ನಡೆಯಿತು. ಇಡೀ ತರಗತಿಯೇ ನನ್ನನ್ನು ತಪ್ಪಿತಸ್ಥಳನ್ನಾಗಿ ನೋಡುತ್ತಿತ್ತು. ನಾನು ಹಣ ತೆಗೆದುಕೊಂಡಿಲ್ಲವೆಂದು ಪರಿಪರಿಯಾಗಿ ಹೇಳಿದರೂ ಯಾರೂ ನಂಬುವ ಸ್ಥಿತಿಯಲ್ಲಿರಲಿಲ್ಲ. ಎರಡು ರೂಪಾಯಿಯನ್ನು ತಂದುಕೊಡುವಂತೆ ಹೇಳಿದಾಗ ಒಪ್ಪಿಕೊಂಡೆ. ಇದು ನನ್ನನ್ನು ಬಹಳವಾಗಿ ಘಾಸಿಗೊಳಿಸಿತು. ಅಲ್ಲಿಂದ ಮುಂದೆ ಆ ಶಾಲೆಯಲ್ಲಿ ಓದಲು ಸಾಧ್ಯವಾಗಲೇ ಇಲ್ಲ. ಮನೆಯಲ್ಲಿ ನಾನು ಶಾಲೆಗೆ ಹೋಗುವುದಿಲ್ಲವೆಂದು ಹಟ ಹಿಡಿದಾಗ ಬೇರೆ ಶಾಲೆಗೆ ಸೇರಿಸಿದರು.

ಇಂದು ಯಾವುದಕ್ಕಾದರೂ ಕೋಪ ಬಂದಾಗ ಆ ಘಟನೆ ನೆನಪಾಗುತ್ತದೆ, ಮಾತು ಹಿಡಿತಕ್ಕೆ ಬರುತ್ತದೆ!

● ಶಶಿಕಲಾ ಎಚ್.

ನಮ್ಮ ಊರಿನಲ್ಲಿ ಪಾತ್ರೆ ತೊಳೆಯಲಿಕ್ಕೆ, ಬಟ್ಟೆ ಒಗೆಯಲಿಕ್ಕೆ ಕೆರೆಗೆ ಹೋಗುವ ರೂಢಿ. ಒಮ್ಮೆ ನಾನು ಚಿಕ್ಕವಳಿದ್ದಾಗ ಒಮ್ಮೆ ನಮ್ಮ ತಾಯಿಯ ಜೊತೆ ಸಂಜೆಯ ಹೊತ್ತು ಕೆರೆಗೆ

ಹೋಗಿದ್ದೆ. ಹಾಗೆಯೇ ನೀರಿನಲ್ಲಿ ಕೈ ಆಡಿಸುತ್ತಾ ಕುಳಿತಿದ್ದಾಗ ಏನೋ ಕೈಗೆ ತಾಗಿದಂತಾಯಿತು. ಅರಳಿ ಎಲೆಯೋ, ಮತ್ತನೋ ಕಸ ತಗುಲಿರಬಹುದೆಂದು ಕೈ ಮೇಲಕ್ಕೆಳೆದುಕೊಂಡೆ. ಆದರೆ ಅದು ನನ್ನ ಕೈಜೊತೆಗೆ ಮೇಲಕ್ಕೆ ಬಂತು. ಎದ್ದುನಿಂತು ನೋಡಿದರೆ ಸುಮಾರು ಒಂದು ಮಾರುದ್ದದ ಹಾವು ಬಿಗಿಯಾಗಿ ಹೆಬ್ಬೆರಳನ್ನು ಹಿಡಿದುಕೊಂಡಿತ್ತು. ಚಿಟ್ಟನೆ ಕಿರುಚಿದ ನಾನು ತಟ್ಟನೆ ನನಗರಿವಿಲ್ಲದಂತೆ ಕೈ ಕೊಡವಿದ್ದೆ. ಅದು ಕೂಡಲೇ ನೀರಿನಲ್ಲಿ ಮರೆಯಾಯಿತು. ಅಷ್ಟುದ್ದ ಹಾವನ್ನು ನೋಡಿದ ನಮ್ಮ ತಾಯಿಗೆ ಜಂಘಾಬಲವೇ ಉಡುಗಿಹೋಯಿತು. ನನಗಿಂತ ಹೆಚ್ಚಾಗಿ ಅವರೇ ಹೆದರಿ ನಡುಗತೊಡಗಿದ್ದರು. ನನ್ನ ಕೈಬೆರಳಿನಿಂದಲೂ ರಕ್ತ ಸುರಿಯುತ್ತಿತ್ತು. ನನ್ನನ್ನು ಹಾಗೆಯೇ ಎಳೆದುಕೊಂಡು ಮನೆಗೆ ಬಂದು ನಮ್ಮ ಅಣ್ಣನ ಜೊತೆ ವೈದ್ಯರ ಹತ್ತಿರ ಕಳುಹಿಸಿ ಅಳುತ್ತಾ ಕುಳಿತರು. ಹಾವು ಕಚ್ಚಿದವರು ತಕ್ಷಣವೇ ಸಾಯುತ್ತಾರೆಂದು ತಿಳಿದಿದ್ದ ನಾನು ಗಾಬರಿಯಿಂದ ಅಳುತ್ತಲೇ ವೈದ್ಯರ ಬಳಿಗೆ ಹೋದೆ. ವಿವರ ತಿಳಿದ ವೈದ್ಯರು ಯಾವುದೋ ಔಷಧಿ ಹಚ್ಚಿ, ''ಏನೂ ಆಗುವುದಿಲ್ಲ, ಕೆರೆ ಹಾವು ಕಚ್ಚಿದರೆ ವಿಷವಿಲ್ಲ ಹೆದರಬೇಡ'' ಎಂದು ಧೈರ್ಯ ಹೇಳಿ ಕಳುಹಿಸಿದರು. ನಾನು ಮನೆಗೆ ಬಂದ ಮೇಲೆಯೇ ನಮ್ಮ ತಾಯಿ ಸರಾಗವಾಗಿ ಉಸಿರಾಡಿದ್ದು. ಆದರೆ ಹಾವುಗಳ ಬಗ್ಗೆ ಅಷ್ಟೊಂದು ಅರಿವಿರದ ನಾವು ಪಟ್ಟ ಆತಂಕದ ಕ್ಷಣಗಳನ್ನು ಮರೆಯುವಂತಿಲ್ಲ. ಈಗ ನಮ್ಮ ತಾಯಿ ಇಲ್ಲ. ಆದರೆ ನನಗಾಗಿ ನೋವು ಅನುಭವಿಸಿದ ಅವರ ಮುಖ ಕಣ್ಮುಂದೆ ತೇಲಿ ಬರುತ್ತಿದೆ.

● ಕೆ.ಎಸ್. ಮೈತ್ರಿ

ಇದು 87ರಲ್ಲಿ ನಡೆದ ಘಟನೆ. ಮಾಮೂಲಿನಂತೆ ಬೇಸಿಗೆ ರಜೆಗೆ ಆ ವರ್ಷವೂ ಊರಿಗೆ ಹೋಗಿದ್ದೆ. ಅಲ್ಲಿ ಬೆಳಗಿನ ವೇಳೆ ಹೊಲದ ಕಡೆ ಹೋಗಿ ಮುಖ, ಕೈ, ಕಾಲು ತೊಳೆದುಕೊಂಡು ಹೊಲವನ್ನು ಒಂದು ಸುತ್ತ ಹಾಕಿಬರುವುದು ವಾಡಿಕೆ. ಅಂದು ನಮ್ಮ ಚಿಕ್ಕಪ್ಪನ ಸಂಗಡ ಹೊಲದಿಂದ ಬರುತ್ತಿರಬೇಕಾದರೆ ದಾರಿಯ ಬದಿಯ ಹುತ್ತದಲ್ಲಿ ಒಂದು ಹಾವು ಬಿಲದಿಂದ ಹೊರಗೆ ತಲೆ ಹಾಕಿ ಗರುಡಪಕ್ಷಿಯ ಕಾಲನ್ನು ಬಿಗಿಯಾಗಿ ಹಿಡಿದುಕೊಂಡು ಬಿಲದ ಒಳಗೆ ಸೆಳೆಯುತ್ತಿತ್ತು. ಆ ಪಕ್ಷಿ ಮೇಲಕ್ಕೆ ಹಾರಲು ಪ್ರಯತ್ನಿಸಿ ವಿಫಲವಾಗುತ್ತಿದೆ. ಆ ದೃಶ್ಯವನ್ನು ಕಂಡು ನಾನಂತೂ ನಿಂತಲ್ಲೇ ನಿಂತುಬಿಟ್ಟೆ. ನಮ್ಮ ಚಿಕ್ಕಪ್ಪನವರು ಸ್ವಲ್ಪ ಧೈರ್ಯವಂತರು. ಅವರು ತಕ್ಷಣ ಪಕ್ಷಿಯ ಪ್ರಾಣಾಪಾಯವನ್ನು ಮನಗಂಡು ಅಲ್ಲೇ ಇದ್ದ ಒಂದು ಕೋಲನ್ನು ತಂದು ಹಾವಿನ ಬಾಯಿಗೆ ಬಡಿದರು. ಆಗ ಹಾವು ಬಾಯಿಸಡಿಲಿಸಿ ಬಿಲದೊಳಗೆ ಸೇರಿಕೊಂಡಿತು. ಆ ಪಕ್ಷಿ ಮೇಲಕ್ಕೆ ಹಾರಿಹೋಯಿತು. ಆ ವಿಷಯವಾಗಿ ಚರ್ಚಿಸುತ್ತಾ ಮನೆಗೆ ಮರಳಿದೆವು.

ಆದಾಗಿ ಮಾರನೆ ದಿನ ನಾನು ಮತ್ತು ನಮ್ಮ ಚಿಕ್ಕಪ್ಪನವರು ಬೆಳಿಗ್ಗೆ ಹೊಲದ ಕಡೆ ಹೋಗುತ್ತಿರುವಾಗ ಆ ಹುತ್ತದ ಬಳಿ ಅದೇ ಹಾವು ತಕ್ಷಣ ಎಲ್ಲಿಂದಲೋ ಬಂದು ಬುಸ್ ಎಂದು ಮೊಳದೆತ್ತರ ಹೆಡೆ ಬಿಚ್ಚಿ ನಿಂತಿತು. ನನಗಂತೂ ದಿಕ್ಕೇ ತೋಚದಂತಾಗಿ ನಿತಲ್ಲೇ ನಿಂತು ಬಿಟ್ಟೆ. ಚಿಕ್ಕಪ್ಪ ನನ್ನ ಕೈಯನ್ನು ಬಿಗಿಯಾಗಿ ಹಿಡಿದುಕೊಂಡು ನಿಂತೇಬಿಟ್ಟರು. ಹಾವು ಮಾತ್ರ, ಚಲಿಸಲೇ ಇಲ್ಲಾ. ಆದರೆ ಎರಡು ಸಲ ಬುಸ್ ಬುಸ್ ಎಂದು ಹೆಡೆಯನ್ನು ಮುಂದಕ್ಕೆ ವಾಲಾಡಿಸಿತು. ಹಾಗೆ ಅರ್ಧ ನಿಮಿಷ ಕಳೆದಿರಬೇಕು. ಆ ಗಳಿಗೆಯಂತೂ ಎಂದೂ ಮರೆಯಲಾಗದು. ಅಷ್ಟರಲ್ಲೇ ಅದೆಲ್ಲಿತ್ತೊ ಗರುಡಪಕ್ಷಿ ತಕ್ಷಣ ಹಾವಿನ ಮಧ್ಯಭಾಗವನ್ನು ಹಿಡಿದುಕೊಂಡು ಹಾವು ಕೊಸರಾಡಿದರೂ ಬಿಡದೆ ಮೇಲಕ್ಕೆ ಎತ್ತಿಕೊಂಡು ಹಾರಿಹೋಯಿತು. ತದನಂತರ ಎರಡು ನಿಮಿಷ ಚೇತರಿಸಿಕೊಂಡೆವು.

ಮಂಡ್ಯ ● ಡಿ. ಮಂಜುನಾಥ್

● ಮಧು ಬಗರೆ



ಚೆಲುವ ಚೆನ್ನಿಗ ಚಂದ್ರಮುಕುಟ

ಹಾರಾಟದಲ್ಲಿ ದೊಡ್ಡ ಸುಂದರ ಚಿಟ್ಟೆಯಂತೆಯೂ, ನೆಲದ ಮೇಲೆ ನಡೆದಾಡುವ ಪುಷ್ಪದಂತೆಯೂ ಕಾಣುವ ಚಂದ್ರಮುಕುಟ ಹಕ್ಕಿಯದೊಂದು ಅಕ್ಷರ ಚಿತ್ರ

ಪ್ಕೆ ವೀಕ್ಷಣೆಯಿಂದ ಹೊಟ್ಟೆಹೊರೆಯಲಾಗದಿದ್ದರೂ ತುಲನೆಗೆ ನಿಲುಕದಷ್ಟು ಮಾನಸಿಕ ತೃಪ್ತಿಯನ್ನು ಅನುಭವಿಸುತ್ತಹುದೆಂದು ನಂಬುವವ ನಾನು. ಅಷ್ಟಕ್ಕೂ ತುತ್ತಿನ ಚೀಲ ತುಂಬಿಸಿಕೊಳ್ಳುವುದಷ್ಟೇ ಬದುಕನ್ನಿಸಿಕೊಂಡೀತೇ? ಅನುಭವಿಸುವ ವ್ಯವಧಾನ, ತುಂಬಿಕೊಳ್ಳುವ ಕಣ್ಣುಗಳು, ಮಿಡಿಯುವ ಹೃದಯ ಇದ್ದರೆ ನಮ್ಮ ಸುತ್ತಲಿನ ಅತಿ ಸಹಜ ಹಾಗೂ ಸಾಮಾನ್ಯ ಆಗುಹೋಗುಗಳು ಸಹ ವಿಶಿಷ್ಟ ಮುದ ಕಟ್ಟಿಕೊಡಲು ಸಾಧ್ಯ. ಆದರೆ ಆ ಬಗೆಯ ಅಭಿರುಚಿ ರೂಢಿಸಿಕೊಳ್ಳಬೇಕಷ್ಟೆ.

ಒಮ್ಮೆ ಮನೆಯೊಳಗೆ ಯಾವುದೋ ಕೆಲಸದಲ್ಲಿ ಮಗ್ನನಾಗಿದ್ದಾಗ ಹಕ್ಕಿಯ ಕೂಗೊಂದು ಭಾವನೆಗಳನ್ನು ಬಡಿದೆಬ್ಬಿಸಿತು. Hoo-po... Hoo-po-po.. ಹಕ್ಕಿಯ ಈ ಹಾಡು ಕೇಳುತ್ತಲೇ ಕ್ಯಾಮರಾ ಕೈಗೆತ್ತಿಕೊಂಡು ಬಹುದಿನದ ಬೇಟೆಗೆ ಸಿದ್ಧನಾದೆ. ನೆಲದಿಂದ ಕೇವಲ ಆರಡಿ ಎತ್ತರದ ಕಲ್ಲುಗೋಡೆಯ ಬಿರುಕಿನಲ್ಲಿ ಈ ಪಕ್ಷಿ ಪ್ರತಿ ವರ್ಷದಂತೆ ಗೂಡು ಕಟ್ಟಿಕೊಂಡಿತ್ತು. ಭಾವ ಸಂವಹನಕ್ಕೆ ಅಡ್ಡ ಪರದೆಯಾಗಿ ನಮ್ಮ ನಡುವೆ ಕಿಟಕಿಯ ಜಾಲರಿಯೊಂದಿತ್ತು. ಕಿಟಕಿಯಾಚೆಗಿನ ಸತ್ಯವನ್ನು ನನ್ನ ಕ್ಯಾಮೆರಾ ಫಿಲ್ಮಿನಲ್ಲಿ ಮೂಡಿಸುವ ಹವಣಿಕೆ ನನ್ನದು.

ಒಂದೆರಡು ಪಲ್ಲವಿ ಹಾಡಿದ ಹಕ್ಕಿ

ಮತ್ತೆಲ್ಲೋ ಮರೆಯಾಗಿ ಸತಾಯಿಸತೊಡಗಿತು. ಆದಾಗ್ಯೂ ನಿರಾಶೆಗೆ ಕಾರಣವಿರಲಿಲ್ಲ. ಆ ಹಕ್ಕಿಯ ಎಲ್ಲ ಅನುಮಾನಗಳನ್ನು ಸುಳ್ಳಾಗಿಸಿ ಸೆಳೆಯುವ ಪುಣಾಣಿ ಜೀವವೊಂದು ಗೂಡಿನಲ್ಲಿ ಕಣ್ಣು ಮಿಳುಕಿಸುತ್ತಿತ್ತು. ಮುದ್ದು ಮರಿಯ ತುತ್ತಿನ ಚೀಲ ತುಂಬಲು ಹಕ್ಕಿ ಬರಲೇ ಬೇಕಿತ್ತು. ಆದರೆ ಮಾಯವಾದ ಹಕ್ಕಿ ಮರಳಿ ಬರಲೇ ಇಲ್ಲ. ನಿಮಿಷಗಳು ಗಂಟೆಯ ಗುಡ್ಡೆಯಾಗಿ ಬಿದ್ದವು. ಮಾಳಿಗೆ ಮೇಲಿದ್ದ ನನ್ನ ತುಂಟ ತಮ್ಮನನ್ನು ಅಪಾಯಕಾರಿ ಎಂದು ಭಾವಿಸಿದ್ದೇ ಆ ಹಕ್ಕಿಯ ಅಂತರ್ಧಾನಕ್ಕೆ ಕಾರಣವಾಗಿತ್ತು.

ಕೊನೆಗೂ ಕೊಕ್ಕಿನ ಕೊನೆಯಿಂದ ಸಂಗೀತ ಸಿಂಚಿಸುತ್ತಾ ಬಂದೇ ಬಿಟ್ಟಿತು ಗರಿಬಿಚ್ಚಿದ ಹಕ್ಕಿ. ಅದರ ನೇರ ಗುರಿ ಗೂಡಿನೊಳಗಿನ ಮರಿಯೆಡೆಗೆ. ಅದೊಂದು ಕ್ಷಣ ನನ್ನ ಕ್ಯಾಮರಾ ಮತ್ತು ಮಿದುಳಿನ ಸತ್ವ ಪರೀಕ್ಷೆಯಾಯ್ತು. ಕೊಕ್ಕಿನಲ್ಲಿ ಕೊಕ್ಕು ತೂರಿಸಿ ಗೂಡಿನ ಮರಿಗೆ ಗುಟುಕು ಕೊಟ್ಟ ಆ ದೃಶ್ಯ ನನ್ನ ಕ್ಯಾಮೆರಾದಲ್ಲಿ ಸಾಕಾರಗೊಂಡ ಗಳಿಗೆಯದು.

'ಹೂಪೂ, ಹೂ- ಪೂ-ಪೂ' ಎಂಬ ಅದರ ಕೂಗಿನಿಂದಲೇ ಈ ಪಕ್ಷಿಗೆ Hoopoe ಎಂಬ ಇಂಗ್ಲಿಷ್ ನಾಮಕರಣ. ಹಾರಾಟದಲ್ಲಿ ದೊಡ್ಡ ಸುಂದರ ಚಿಟ್ಟೆಯಂತೆಯೂ, ನೆಲದ ಮೇಲೆ ನಡೆಯುವ ಮನಮೋಹಕ ಪುಷ್ಪದಂತೆಯೂ ಕಾಣುವ ಈ ಪಕ್ಷಿಯನ್ನು ಮರಕುಟಿಕ ಎಂದು ತಪ್ಪಾಗಿ ಭಾವಿಸುವುದುಂಟು. ಮರಕುಟಿಕದಂತೆ ಇದು ತನ್ನ ಬಾಗಿದ ಸಪೂರ ಕೊಕ್ಕನ್ನು ಮರದ ಬೊಡ್ಡೆಗಳಲ್ಲಿ ಅಡಗಿದ ಕ್ರಿಮಿಕೀಟ ಹೆಕ್ಕಲು ಬಳಸುವುದಿಲ್ಲ.

ಪ್ರಾಚೀನ ಈಜಿಪ್ಟಿನ ಗೋರಿ ಮತ್ತು ಗೋಡೆಗಳ ಮೇಲೆಯೂ ಚಂದ್ರಮುಕುಟದ ಚಿತ್ರವನ್ನು ಕಾಣಬಹುದು 'ಹಳೆ ಒಡಂಬಡಿಕೆ'ಯಲ್ಲೂ ಉಲ್ಲೇಖಗೊಂಡ ಈ ಪಕ್ಷಿಯ ಮಾಂಸವನ್ನು ಮಧ್ಯಯುಗದಲ್ಲಿ 'ಸಂಜೀವಿನಿ' ಎಂದು ಪರಿಭಾವಿಸಲಾಗಿತ್ತು. ಹತ್ತು-ಹನ್ನೆರಡು ಅಂಗುಲ ಗಾತ್ರದ ಕೆಂಪು ಮಿಶ್ರಿತ ನಸುಪುಡಿ ಬಣ್ಣದ ಚಂದ್ರಮುಕುಟ ದಕ್ಷಿಣ ಯುರೋಪ್, ಆಫ್ರಿಕಾ, ಏಶಿಯಾಗಳಲ್ಲದೆ ಆಗಾಗ್ಗೆ ಇಂಗ್ಲೆಂಡ್‌ನಲ್ಲೂ ಕಾಣಸಿಗುವ ಅಪರೂಪದ ಅತಿಥಿ.

ತಲೆ ಮೇಲಿನ ತುರಾಯಿಯೇ ಈ ಪಕ್ಷಿಯ ಸೌಂದರ್ಯಕ್ಕೊಂದು ಮುಕುಟವಿಟ್ಟಂತೆ. ಮನುಷ್ಯನ ಆಸುಪಾಸಿನ ಜೀವಿಯಾದರೂ ಸಂಘಜೀವನವನ್ನು ಮೈಗೂಡಿಸಿಕೊಳ್ಳದ ಇದಕ್ಕೆ




ಕಪ್ಪು-ಬಿಳುಪಿನ ಪಟ್ಟೆಪಟ್ಟೆ ವರ್ಣ ಸೌಂದರ್ಯ ನಿಸರ್ಗದತ್ತ ದೇಣಿಗೆಯೇ ಸರಿ. ನೆಟ್ಟಗೆ ಚೂಪಾಗಿರುವ ಇದರ ಜುಟ್ಟು ಪುಳಕಗೊಂಡಾಗ ಗರಿಯರಳಿಸಿದ ಜಪಾನ್ ಸುಂದರಿಯ ಬೀಸಣಿಗೆಯಂತೆ ಮನಮೋಹಕವಾಗಿ ಕಾಣಿಸುತ್ತದೆ. ಹುಲ್ಲುಗಾವಲಿನಲ್ಲಿ ಹುಳುಹುಪ್ಪಡಿ ಹೆಕ್ಕಲು ಅದು ತನ್ನ ಕೊಕ್ಕನ್ನು ಮಣ್ಣಿನ ಸಂದು-ಗೊಂದುಗಳಲ್ಲಿ ಗತ್ತಿನಿಂದ ತೂರಿಸುತ್ತದೆ. ಕೊಕ್ಕನ್ನು ಆಹಾರದೆಡೆ ಕೀಲಿಸಿದ್ದರೂ ಕಣ್ಣುಗಳನ್ನು ಅಪಾಯದ ಅವಲೋಕನಕ್ಕೆ ಬಳಸುವದು ಇವರ ಜಾಯಮಾನ. ಅಪಾಯದ ಕೊಂಚ ಸುಳಿವು ಸಿಕ್ಕರೂ ಪುಟು ಪುಟು ಓಡುವ ಅದರ ಗಾಂಭೀರ್ಯ ನೋಡಲು ಚೆಂದ.

ಮರದ ಪೊಟರೆಯಲ್ಲಿ ಗೂಡು ಮಾಡುವುದು ಈ ಹಕ್ಕಿಗೆ ಅಚ್ಚುಮೆಚ್ಚು. ಬೇರೆ ಪಕ್ಷಿಗಳಂತೆ ಗೂಡಿಗಾಗಿ ಕಲೆ, ಶ್ರಮ, ಕಾಲ ವ್ಯಯಿಸಲಿಚ್ಛಿಸದ ಮೈಗಳ್ಳ ಹಕ್ಕಿಯಿದು. ಕೊಳಕು ಗೂಡನ್ನು ಹೊಂದುವ ಹಕ್ಕು ಮಿಂಚುಳ್ಳಿ (King Fisher)ಗಳಿಗಷ್ಟೇ ಮೀಸಲಲ್ಲ ಎಂಬಂತೆ ಇದು ತನ್ನ ಗೂಡಿನ ಕೊಳಕುತನವನ್ನು ಕಾಪಾಡಿಕೊಳ್ಳುತ್ತದೆ! ಹಾಗಾಗಿ ವಾಸನೆಯಿಂದಲೇ ಇದರ ಗೂಡನ್ನು ಪತ್ತೆ ಹಚ್ಚಲು ಸಾಧ್ಯ. ಹಲವೊಮ್ಮೆ ಹುತ್ತವನ್ನು ಸಹ ಇದು ಗೂಡಾಗಿ ಉಪಯೋಗಿಸುವುದುಂಟು. ಬಿಲವಾಸಿಗಳಾದ ದಾಖಲೆಗಳೂ ಇವೆ.

ನಸು ನೀಲಿ ಬಣ್ಣದ ನಾಲ್ಕಾರು ಮೊಟ್ಟೆಗಳಿಗೆ ಕಾವು ಊಣಿಸಿ ಜೀವಗಳಾಗಿ ಅರಳಿಸುವ ಕಾಯಕ ಹೆಣ್ಣು ಪಕ್ಷಿಯದು. ಕಾವಿಗೆ ಕೂತ ಹೆಣ್ಣಿಗೆ ಆಹಾರ ತಂದು ಸಾಕುವ ಜವಾಬ್ದಾರಿ ಮಾತ್ರ ಗಂಡಿನ ಮೇಲೆ. ಸುಮಾರು ಹದಿನೆಂಟು ದಿನಗಳ ಕಾವಿನ ನಂತರ ಹುಟ್ಟಿದ ಮರಿಗಳಿಗೆ ಪುಟ್ಟ ಗೂಡೇ ಒಂದು ಪ್ರಪಂಚ. ●

ಈ ಜಗತ್ತೊಂದು ಅರಣ್ಯ. ಸತ್ವ, ರಜಸ್, ತಮಸ್ ಎಂಬ ಮೂವರು ಡಕಾಯಿತರು ಇಲ್ಲಿ ಸದಾ ಸುತ್ತುತ್ತಿರುತ್ತಾರೆ.

ಮೂವರು ಡಕಾಯಿತರು

ಯಾತ್ರಿಕನೊಬ್ಬ ಅರಣ್ಯಮಾರ್ಗದಲ್ಲಿಂದ ಹಾದು ತನ್ನ ಗಮ್ಯಸ್ಥಾನದೆಡೆ ಲಗುಬಗೆಯಿಂದ ನಡೆದಿದ್ದ. ಮೂವರು ಡಕಾಯಿತರು ಆತನನ್ನು ಹಿಡಿದು ಅವನ ಬಳಿಯಿರುವುದೆಲ್ಲವನ್ನೂ ದೋಚಿಬಿಟ್ಟರು. ನಂತರ ಅವರಲ್ಲೊಬ್ಬ ಡಕಾಯಿತ,

''ಈಗ ಈತನನ್ನು ಜೀವದಿಂದ ಉಳಿಸುವುದರಿಂದೇನು ಪ್ರಯೋಜನ? ಮುಗಿಸಿಬಿಡುತ್ತೇನೆ,'' ಎಂದವನೇ ಖಡ್ಗಪ್ರಹಾರಕ್ಕೆ ಮುಂದಾದ.

ಆಗ ಎರಡನೆಯವ, ''ಕೊಲ್ಲುವುದು ಬೇಡ. ಕೈಕಾಲು ಕಟ್ಟಿ ಇಲ್ಲಿಯೇ ಎಸೆದು ಹೋಗೋಣ,'' ಎಂದ. ಪಾಪ ಆ ಯಾತ್ರಿ, ಹೆಡಮುರಿಗೆ ಕಟ್ಟಿಸಿಕೊಂಡು ಬಿದ್ದು ರೋದಿಸುತ್ತಿದ್ದಂತೆಯೇ ಆ ಮೂವರು ಹೊರಟುಹೋದರು.

ಸ್ವಲ್ಪ ಹೊತ್ತಿನ ನಂತರ ಆ ಮೂರನೆಯ ಡಕಾಯಿತ ಮರಳಿ ಬಂದ. ಯಾತ್ರಿಯ ಬಳಿ ಮೊಂಡೆಯೂರಿ ಕುಳಿತು, ''ತಮ್ಮಾ, ನಮ್ಮವರ ಕೃತ್ಯಕ್ಕೆ ನಾನು ಕ್ಷಮೆ ಕೇಳಲು ಬಂದಿದ್ದೇನೆ. ತುಂಬಾ ಗಾಸಿಗೊಂಡಿರಬೇಕು ನೀನು. ಇಕೋ, ನಿನ್ನನ್ನು ಬಂಧಮುಕ್ತಗೊಳಿಸುವೆ,'' ಎಂದವನೇ ಹಗ್ಗಗಳನ್ನು ಬಿಚ್ಚಿದ. ಯಾತ್ರಿ ಆತನ ಉಪಕಾರವನ್ನು ಸ್ಮರಿಸುತ್ತಿದ್ದಂತೆಯೆ, ಆ ಡಕಾಯಿತ ''ನಡೆ ತಮ್ಮಾ ನಿನ್ನನ್ನು ಸುರಕ್ಷಿತವಾಗಿ ಆ ದೊಡ್ಡ ಬೀದಿಯವರೆಗೂ ಒಯ್ದು ಬಿಡುತ್ತೇನೆ,'' ಎಂದು ಯಾತ್ರಿಯೊಂದಿಗೆ ಹೆಜ್ಜೆಹಾಕತೊಡಗಿದ.

ಸಾಕಷ್ಟು ದೂರ ಕ್ರಮಿಸಿದ ಮೇಲೆ ಅವರಿಬ್ಬರೂ ದೊಡ್ಡ ರಸ್ತೆಯನ್ನು ತಲುಪಿದರು. ಆಗ ಯಾತ್ರಿ, ''ಅಣ್ಣಾ, ನೀನು ನನ್ನನ್ನಿಂದು ಜೀವದಿಂದುಳಿಸಿದೆ. ಇನ್ನಷ್ಟು ದೂರ ನಡೆದರೆ ನನ್ನ ಮನೆ ಬರುತ್ತದೆ. ದಯವಿಟ್ಟು ಬಂದು ನನ್ನ ಆತಿಥ್ಯ ಸ್ವೀಕರಿಸಿ ಹೋಗು'' ಎಂದು ವಿನಂತಿಸಿದ.

''ಇಲ್ಲಪ್ಪ, ನಾನು ಅಲ್ಲಿಗೆ ಬರುವಂತಿಲ್ಲ. ರಾಜಭಟರು ಕಾವಲಿರುತ್ತಾರೆ. ಅವರು ನನ್ನನ್ನು ಕಂಡರೆ ಅಡವಿಯಲ್ಲಿ ನಿನಗಾದ ಪಾಡೇ ನನಗಿಲ್ಲಿ ಆಗುತ್ತದೆ,'' ಎಂದವನೇ ಆತ ಅಲ್ಲಿಂದ ನಡೆದುಬಿಟ್ಟ.

ಈ ಜಗತ್ತೊಂದು ಅರಣ್ಯ. ಸತ್ವ, ರಜಸ್, ತಮಸ್ ಎಂಬ ಮೂವರು ಡಕಾಯಿತರು ಅಲ್ಲಿ ಸದಾ ಸುತ್ತುತ್ತಿರುತ್ತಾರೆ. ಅವರೇ ಮನುಷ್ಯನನ್ನು ಸತ್ಯ ಜ್ಞಾನದಿಂದ ವಂಚಿತನನ್ನಾಗಿಸುವವರು. ತಮಸ್ಸು ಆ ಮನುಷ್ಯನನ್ನು ಮುಗಿಸಿಬಿಡಬೇಕೆನ್ನುತ್ತದೆ. ರಜಸ್ಸು ಅವನನ್ನು ಸಂಸಾರ ಬಂಧದಲ್ಲಿ ಕಟ್ಟಿಹಾಕಬಯಸುತ್ತದೆ. ಆದರೆ ಸತ್ವ ಅವನನ್ನು ರಜಸ್ಸು-ತಮಸ್ಸುಗಳ ಕಪಿಮುಷ್ಟಿಯಿಂದ ಬಿಡಿಸುತ್ತದೆ.

ಸತ್ವದ ಸಂರಕ್ಷಣೆಯಲ್ಲಿ ಮನುಷ್ಯ ಕ್ರೋಧ-ಮೋಹ ಮುಂತಾದ ತಮೋಗುಣಗಳ ದುಷ್ಪ್ರಭಾವದಿಂದ ಮುಕ್ತನಾಗುತ್ತಾನೆ. ಅಷ್ಟೇ ಅಲ್ಲ, ಆತನನ್ನು ಅದು ಸಾಂಸಾರಿಕ ಬಂಧನದಿಂದ ವಿಮುಕ್ತನನ್ನಾಗಿಸುತ್ತದೆ.

ಆದರೆ ಸತ್ವವೂ ಒಂದು ರೀತಿಯಲ್ಲಿ ಡಕಾಯಿತನೆ. ಅದು ಅಂತಿಮವಾದ ಸತ್ಯಜ್ಞಾನವನ್ನು ತೋರುವುದೇ ಇಲ್ಲ. ಆದರೆ ಮನುಷ್ಯನನ್ನು ಅದರತ್ತ ಸಾಗುವ ಪರಮಮಾರ್ಗಕ್ಕೊಯ್ದು ಬಿಡುತ್ತದೆ ಅಷ್ಟೆ. ●

● ವಾಸ್ಕರ್

ಭೂಮಿಯ ರಕ್ಷಾ ಕವಚಕ್ಕೊಂದು ತೂತು

● *ಮೋಹನರಾವ್ ಮಂಜೇಶ್ವರ*


ಪ್ರಗತಿಯ ಚಕ್ರವೇ ಕಂಟಕಪ್ರಾಯವಾದ ವಿದ್ಯಮಾನವಿದು. ಜೀವ ಸಂಕುಲಕ್ಕೆ ರಕ್ಷಾಛತ್ರಿಯಾಗಿದ್ದ ಓಜೋನ್ ಪದರು ಇದೀಗ ಛಿದ್ರಗೊಂಡಿದೆ. ಈ ತೂತಿನಿಂದ ಅಪಾಯದ ಕಿರಣಗಳಂತೂ ತೂರಿಬರುತ್ತಿವೆ!

ಮಾನವ ಮತ್ತು ಸಕಲ ಜೀವರಾಶಿಯ ತಾಯಿಯಾಗಿರುವ ಈ ನಮ್ಮ ಸಸ್ಯಶ್ಯಾಮಲೆ ವಸುಂಧರೆಯು ಇನ್ನು ಮುಂದಿನ ಕೆಲವೇ ದಶಕಗಳಲ್ಲಿ ತನ್ನ ಸೌಮ್ಯ ಹವಾಗುಣವನ್ನೆಲ್ಲ ಕಳಕೊಂಡು ತಾನು ಸಾಕಿ ಸಲುಹಿದ ಈ ಜೀವಕೋಟಿಗೇ ನರಕಪ್ರಾಯಳಾಗುವ ಸಂಭವವಿದೆ ಎಂದರೆ ನಿಮಗೆ ಆಶ್ಚರ್ಯವಾಗಬಹುದು. ಈ ಶತಮಾನದಲ್ಲಿ ಮನುಷ್ಯನು ಸಾಧಿಸಿದ ಅದ್ಭುತ ತಾಂತ್ರಿಕ ಪ್ರಗತಿಯು ಆತನಿಗೆ ಅನೇಕಾನೇಕ ಸೌಕರ್ಯಗಳನ್ನು ಒದಗಿಸಿಕೊಟ್ಟಿದೆ ನಿಜ. ಆದರೆ ಇದರೊಡನೆ ಅದಕ್ಕಿಂತ ದೊಡ್ಡ ಅನಿಷ್ಟಗಳನ್ನು ಸಹ ತಂದೊಡ್ಡಿದೆ. ಈ ಅನಿಷ್ಟಗಳಲ್ಲಿ ಪ್ರಮುಖವಾದವುಗಳು ಮಾನವನಿಂದಲೇ ನಿರ್ಮಿತವಾದ ಕೆಲವು ರಾಸಾಯನಿಕ ಪದಾರ್ಥಗಳು.

1930ನೇ ಇಸವಿಯ ಮಾತು, ಡಾ. ಥಾಮಸ್ ಮಿಜ್‌ಲೇ ಎಂಬ ಅಮೆರಿಕದ ವಿಜ್ಞಾನಿಯು ತನ್ನ ಪ್ರಯೋಗಾಲಯದಲ್ಲಿ ಮೊತ್ತ ಮೊದಲು ತಯಾರಿಸಿದ ಕ್ಲೋರೊಫ್ಲೂರೊ ಕಾರ್ಬನ್ (ಚುಟುಕಾಗಿ ಸಿ.ಎಫ್.ಸಿ.) ಎಂಬ ರಾಸಾಯನಿಕ ವಸ್ತು ಆಗ ಭಾರೀ ಸಂಶೋಧನೆಯೆಂದೇ ಸ್ವಾಗತಿಸಲ್ಪಟ್ಟಿತು. ಏಕೆಂದರೆ ಆ ದಿನಗಳಲ್ಲಿ ರೆಫ್ರಿಜರೇಟರ್, ಏರಕಂಡೀಶನರ್ ಮೊದಲಾದ ಶೀತಕಾರಕ ಯಂತ್ರಗಳಲ್ಲಿ ಅಮೋನಿಯಾ, ಗಂಧಕದ ಡೈಆಕ್ಸೈಡ್ ಮುಂತಾದ ಹಾನಿಕಾರಕವಾದ ಪದಾರ್ಥಗಳೇ ಅನಿವಾರ್ಯವಾಗಿ ಬಳಸಲ್ಪಡುತ್ತಿದ್ದವು. ಆಗಷ್ಟೆ ಸಂಯೋಜಿಸಲ್ಪಟ್ಟ ಈ ಸಿ.ಎಫ್.ಸಿ ಯಲ್ಲಿ ಮೊದಲಿನವುಗಳಲ್ಲಿದ್ದ ಹಾನಿಕಾರಕ ಗುಣಗಳು ಯಾವುವೂ ಇರಲಿಲ್ಲ. ನಿಜಕ್ಕೂ 'ನಿರುಪದ್ರವಿ' ಎಂದು ಭಾವಿಸಲ್ಪಟ್ಟ ಈ ಸಿ.ಎಫ್.ಸಿ, ಶೀತಕಾರಕ ಯಂತ್ರಗಳ ಉತ್ಪಾದನೆಯಲ್ಲಿ ಒಂದು ಉತ್ಕ್ರಾಂತಿಯನ್ನೇ ತಂದಿತು. ಇವುಗಳಲ್ಲದೇ ಅಗ್ನಿಶಾಮಕಗಳು ಹಾಯಿಸುವ ನೊರೆಯನ್ನು ಉಂಟು ಮಾಡಲು, ಸುಗಂಧ ದ್ರವ್ಯಗಳನ್ನು ತುಂತುರು ಹನಿಗಳಾಗಿ ಚಿಮುಕಿ

ಸಲು (aerosol), ಔಷಧಿ ಮತ್ತು ಇಲೆಕ್ಟ್ರೋನಿಕ್ ಉದ್ಯಮಗಳಲ್ಲಿ ಈಗ ಸಿ.ಎಫ್.ಸಿ ತುಂಬಾ ಉಪಯೋಗಿಸಲ್ಪಡುತ್ತದೆ. ಇದರಿಂದಾಗಿ ಈ ಜಾತಿಯ ರಾಸಾಯನಿಕಗಳ ಉತ್ಪಾದನೆ ಈಗ ದಶಲಕ್ಷ ಟನ್ನುಗಳಿಗೆ ಏರಿದೆ. ಇವುಗಳ ಉಪ ಯೋಗವು ಶೇಕಡಾ ತೊಂಭತ್ತರಷ್ಟು ಮುಂದು ವರೆದ ದೇಶಗಳಲ್ಲೇ! ಇಷ್ಟೇ ಆಗಿದ್ದರೆ ನೆಮ್ಮದಿ ಗೆಡಿಸಿಕೊಳ್ಳಬೇಕಿರಲಿಲ್ಲ. ಆದರೆ ಈ ಸಿ.ಎಫ್. ಸಿ.ಗೆ ಮತ್ತೊಂದು ದುಷ್ಟ ಮುಖವೂ ಇದೆ ಎಂಬುದೇ ಆತಂಕದ ವಿಷಯ.

ನಮ್ಮೆಲ್ಲರ ವಾಸಸ್ಥಳವಾದ ಭೂಮಿಯ ಮೇಲ್ಮೈ ಮೇಲೆ ಹರಡಿರುವ ಗಾಳಿಯಲ್ಲಿ ಆಮ್ಲ ಜನಕ, ಸಾರಜನಕ ಮೊದಲಾದ ಪ್ರಮುಖ ಅನಿಲಗಳಲ್ಲದೆ (ಆಮ್ಲಜನಕದ ಸೋದರನೆನ್ನ ಬಹುದಾದ) ಓಜೋನ್ ಎಂಬ ಇನ್ನೊಂದು ಅನಿಲವೂ ಸೇರಿದೆ. ಇದು ಹಗುರಾದ ಅನಿಲ ವಾದ ಕಾರಣ ಅತ್ಯಂತ ಮೇಲಿನ ಪದರಿನಲ್ಲಿ (stratosphere) ಅಂದರೆ ನೆಲದಿಂದ 25-40 ಕಿಲೋ ಮೀಟರಿನಷ್ಟು ಎತ್ತರದಲ್ಲಿ ಹರಡಿರು ತ್ತದೆ. ಈ ಓಜೋನ್ ಪದರು ನಮ್ಮೆಲ್ಲರ ಜೀವಧಾರಣೆಗೆ ಅವಶ್ಯವಿರುವ ಒಂದು ಅತಿ ಮುಖ್ಯವಾದ ಕೆಲಸವನ್ನು ಮಾಡುತ್ತದೆ. ಅದೇ ನೆಂದರೆ ಸೂರ್ಯನಿಂದ ಹೊರಹೊಮ್ಮುವ (ಆದರೆ ದೃಷ್ಟಿಗೋಚರವಲ್ಲದ) ಅತಿ ನೇರಳೆ (Ultra Violet) ಕಿರಣಗಳನ್ನು ನಡುಹಾದಿಯಲ್ಲೇ ಹೀರಿಕೊಂಡು ಭೂಮಿಗೆ ತಲುಪದಂತೆ ತಡೆಹಿಡಿ ಯುವುದು. ಭೂಮಿಯ ಮೇಲೆ ಬದುಕುವ ಜೀವಕೋಟಿಗೆ ಮಾರಕವಾಗಬಲ್ಲ ಈ ಕಿರಣಗ ಳನ್ನು ತಡೆಯಲು ಆಕಾಶದಲ್ಲಿ ಒಂದು ರಕ್ಷಾಛ ತ್ರಿಯನ್ನೇ ಒದಗಿಸುತ್ತದೆ ಓಜೋನ್ ಪದರು ಮನುಷ್ಯನಿಗೆ ಅತ್ಯುಪಯುಕ್ತವೆನಿಸಿಕೊಂಡ ಸಿ.ಎಫ್.ಸಿ ಹೆಲೋನ್ ಮುಂತಾದ ರಾಸಾಯನಿ



ಕಗಳೇ ನಮ್ಮ ವಾತಾವರಣದಲ್ಲಿನ ಓಜೋನ್ ರಕ್ಷಾಕವಚವನ್ನು ಕಬಳಿಸತೊಡಗಿವೆ ಎಂಬ ಕಟು ಸತ್ಯವನ್ನು 1973 ರಷ್ಟು ಹಿಂದೆಯೇ ಅಮೆರಿಕದ ಇಬ್ಬರು ವಿಜ್ಞಾನಿಗಳು ಹೊರಗೆಡಹಿ ಲೋಕವನ್ನು ದಂಗುಪಡಿಸಿದರು.

ಇದರಿಂದಾಗಿ ನಮ್ಮ ತಲೆಯ ಮೇಲಿನ ಓಜೋನ್ ಪದರು ಇತ್ತೀಚೆಗಿನ ದಶಕಗಳಲ್ಲಿ ಹೆಚ್ಚು ಹೆಚ್ಚಾಗಿ ವಿರಳವಾಗುತ್ತ ಬಂದಿದೆ. ಮಾತ್ರವಲ್ಲದೆ ದಕ್ಷಿಣ ಧ್ರುವ ಪ್ರದೇಶದ ಮೇಲಿನ ಈ ಪದರು ಎಷ್ಟರ ಮಟ್ಟಿಗೆ ಕ್ಷೀಣವಾಗಿದೆಯೆಂದರ ಈ ಕವಚದಲ್ಲಿ 1985 ರಿಂದ ಈಚೆಗೆ ಒಂದು ದೊಡ್ಡ ತೂತು ಹುಟ್ಟಿಕೊಂಡಿದೆ. ಇದು ಪ್ರತಿ ವರ್ಷ ವಸಂತಕಾಲದಲ್ಲಿ ಬೆಳೆದು ಹೆಚ್ಚು ವಿಶಾಲವಾಗುತ್ತಿದೆ. ಇಂತಹ ಮತ್ತೊಂದು ಓಜೋನ್ ತೂತು ಭೂಮಿಯ ಉತ್ತರ ಧ್ರುವ ಪ್ರದೇಶದಲ್ಲಿ ಸಹ ಈಗ ಕಾಣಿಸಿಕೊಂಡಿದೆ. ನಮ್ಮ ಯಂತ್ರಗಳು ಗಾಳಿಯಲ್ಲಿ ಹೊರ ಸೂಸುವ ಸಿ.ಎಫ್.ಸಿ ರಾಸಾಯನಿಕಗಳು ಬೇಗನೆ ಅನಿಲ ರೂಪಕ್ಕೆ ಪರಿವರ್ತನೆಗೊಳ್ಳುತ್ತವೆ. ಆದರೆ ಅವು ಜಡಜಾತಿಯವುಗಳಾದ ಕಾರಣ ಗಾಳಿಯ ಇತರ ಅನಿಲಗಳೊಡನೆ ರಾಸಾಯನಿಕವಾಗಿ ಬೆರೆತುಕೊಂಡು ನಷ್ಟವಾಗುವುದಿಲ್ಲ. ಬದಲು ಮೆಲ್ಲಗೆ ವಾತಾವರಣದ ಮೇಲ್‌ಪದರಿಗೆ ಏರಿ ಅಲ್ಲಿ ತಮ್ಮ ದುಷ್ಟ ಕೆಲಸದಲ್ಲಿ ತೊಡಗುತ್ತವೆ. ಆ ಎತ್ತರದಲ್ಲಿ ಸೂರ್ಯನಿಂದ ಹೊರಹೊಮ್ಮುವ ಅತಿ ನೇರಳೆ ಕಿರಣಗಳಿಂದ ಈ ಸಿಎಫ್‌ಸಿಗಳು ವಿಭಜಿಸಲ್ಪಟ್ಟು ಕ್ಲೋರಿನ್ ಮೊನೊಕ್ಸೈಡ್ ಎಂಬ ಪದಾರ್ಥವಾಗಿ ಮಾರ್ಪಡುತ್ತದೆ. ಅನಂತರ ಈ ಮೊನೊಕ್ಸೈಡ್ ಅಲ್ಲಿನ ಓಜೋನ್ ಕಣಗಳೊಡನೆ ರಾಸಾಯನಿಕವಾಗಿ ಸಂಯೋಗಗೊಂಡು ಓಜೋನನ್ನೇ ಕ್ರಮೇಣ ನಾಶಪಡಿಸುತ್ತದೆ.

ಓಜೋನ್ ನಾಶದಿಂದಾಗಿ ಅತಿ ನೇರಳೆ ಕಿರಣಗಳು ತಡೆಯೇ ಇಲ್ಲದೆ ನೇರವಾಗಿ ಭೂಮಿಯ ಮೇಲ್ಮೈಗೆ ಹಾಯುತ್ತವೆ. ಮನುಷ್ಯನ ಚರ್ಮದ ಮೇಲೆ ಕಪ್ಪು ಕಲೆಗಳನ್ನು (sun burns) ನಿರಿಗೆಗಳನ್ನು ಉಂಟು ಮಾಡುತ್ತವೆ. ಕೆಲವೊಮ್ಮೆ ಚರ್ಮದ ಅರ್ಬುದ ರೋಗವನ್ನೇ ಹುಟ್ಟುಹಾಕುತ್ತವೆ. ಈ ಕಿರಣಗಳ ಮತ್ತೊಂದು ದುಷ್ಪರಿಣಾಮವೇನೆಂದರೆ ಮನುಷ್ಯನ ದೇಹದ ರೋಗ ಪ್ರತಿರೋಧಕ ಶಕ್ತಿಯನ್ನು ಕುಂದಿಸುವುದು. ಪರಿಣಾಮವಾಗಿ ಮಾನವ ಕುಲ ಮುಂದಿನ ದಶಕಗಳಲ್ಲಿ ಅನೇಕ ಸೋಂಕು ರೋಗಗಳಿಗೆ ಬಹು ಸುಲಭವಾಗಿ ಬಲಿ ಬೀಳಬಹುದು. ಲಂಗು ಲಗಾಮಿಲ್ಲದೆ ಪಾಶ್ಚಾತ್ಯ ದೇಶಗಳಲ್ಲಿ ಉತ್ಪಾದಿಸಲ್ಪಡುವ ಸಿಎಫ್‌ಸಿ ಜಾತಿಯ ರಾಸಾಯನಿಕಗಳಿಂದ ಓಜೋನ್ ನಾಶವಲ್ಲದೆ ಇನ್ನೂ ಒಂದು ಹಾನಿ ಕೂಡ ಕಂಡು ಬಂದಿದೆ. ಇವು ವಾತಾವರಣದ ಎತ್ತರದ ಪದರುಗಳಲ್ಲಿ ಓಜೋನನ್ನು ನುಂಗುತ್ತವೆಯಾದರೆ ಭೂಮಿಗೆ ತಾಗಿಕೊಂಡಿರುವ ಕೆಳಗಿನ ಸ್ತರಗಳಲ್ಲಿ ಬೇರೆ ರೀತಿಯ ಅಪಾಯವನ್ನುಂಟು ಮಾಡುತ್ತಿವೆ. ಕಾರಖಾನೆ, ಗಣಿ, ವಾಹನ ಇತ್ಯಾದಿ ದಿನಂಪ್ರತಿ ಉಗುಳುವ ಅಂಗಾರಾಮ್ಲ, ಅಂಗಾರದ ಟೆಟ್ರಾಕ್ಲೋರೈಡ್ ಮುಂತಾದ ಪ್ರದೂಷಕ ಅನಿಲಗಳು ವಾತಾವರಣದ ಕೆಳಸ್ತರಗಳಲ್ಲಿ ಹೆಚ್ಚು ಹೆಚ್ಚಾಗಿ ಶೇಖರವಾಗುತ್ತಿವೆ. (ಇದಕ್ಕೆ ಮತ್ತೊಂದು ಕಾರಣವೆಂದರೆ ಹಸಿರು ಕಾಡುಗಳ ನಿರ್ನಾಮ, ಸಾಗರದಲ್ಲಿರುವ ಪ್ಲಾಂಕ್ಟನ್ ಜೀವಿಗಳ ನಾಶ.) ಈ ಪ್ರದೂಷಕಗಳೊಂದಿಗೆ ಸಿಎಫ್‌ಸಿ ಸಹ ಕೂಡಿಕೊಳ್ಳುತ್ತದೆ. ಇವೆಲ್ಲಾ ಒಟ್ಟುಗೂಡಿ ಸೂರ್ಯ ಪ್ರಕಾಶದೊಡನೆ ವಾತಾವರಣದ ಒಳಗೆ ಪ್ರವಹಿಸುವ ಮತ್ತು ಭೂಮಿಯ ಗರ್ಭದಿಂದ ಹೊರ ಸೂಸುವ ಶಾಖವನ್ನು ಹೀರಿಕೊಂಡು ಹೊರ ಅಂತರಿಕ್ಷಕ್ಕೆ ಪ್ರಸರಿಸದಂತೆ ತಡೆದಿಟ್ಟುಕೊಳ್ಳುತ್ತವೆ. ತತ್ಪರಿಣಾಮವಾಗಿ ವಾತಾವರಣದ ಉಷ್ಣತೆ ಪ್ರತಿ ವರ್ಷ 0.5 ಸೆಲ್ಸಿಯಸ್‌ನಷ್ಟು ಏರುತ್ತಾ ಬಂದಿದೆ. ಈಗಾಗಲೇ ಬ್ರಿಟನ್ ಮೊದಲಾದೆಡೆ ಮಳೆಯ ಕೊರತೆ, ಆಫ್ರಿಕ ಖಂಡದಲ್ಲಿ ಭೀಕರ ಬರಗಾಲಗಳು ಪದೇ, ಪದೇ ಮರುಕಳಿಸುತ್ತಿವೆ. ಮಾತ್ರವಲ್ಲದೆ ವಾತಾವರಣದ ಮಾಲಿನ್ಯ ಇದೇ ಗತಿಯಲ್ಲಿ ಹೆಚ್ಚಾಗುತ್ತ

ಹೋದಲ್ಲಿ ಉಷ್ಣತೆ 1.5 ರಿಂದ 5.5 ಡಿಗ್ರಿ ಸೆಲ್ಸಿಯಸ್‌ತನಕ ಏರಬಹುದು. ಅಂತಹ ಸಂದರ್ಭದಲ್ಲಿ ದಕ್ಷಿಣೋತ್ತರ ಧ್ರುವಗಳಲ್ಲಿ ಹರಡಿರುವ ವಿಶಾಲ ಹಿಮರಾಶಿಗಳು ಕರಗಿ ಸಾಗರದಲ್ಲಿ ತುಂಬಿ ನೀರಿನ ಮಟ್ಟ ಏರುತ್ತ, ಏರುತ್ತ ಕ್ರಮೇಣ ನಮ್ಮ ಲಕ್ಷದ್ವೀಪ ಸಮೂಹವನ್ನು ಶಾಶ್ವತವಾಗಿ ಮುಳುಗಿಸಬಹುದು! ಮೊದಲೇ ತಗ್ಗಾಗಿರುವ ನಮ್ಮ ಪೂರ್ವ ಕರಾವಳಿಯು ಆಗಾಗ ಬೀಸುತ್ತಿರುವ ಬಿರುಗಾಳಿ, ಸುಳಿಗಾಳಿಗಳಿಂದ ಇನ್ನಷ್ಟು ಹೆಚ್ಚು ಜರ್ಜರಿತವಾಗಬಹುದು.

ಮಾನವನೇ ಹುಟ್ಟುಹಾಕಿರುವ ಇವೆಲ್ಲ ಭೀಕರ ವಿಕೋಪಗಳಿಂದ ಜೀವಕೋಟಿಯ ಮುಂದಿನ ಪೀಳಿಗೆಗಳು ಬದುಕುಳಿಯಬೇಕಾದರೆ ನಮ್ಮ ತಲೆಯ ಮೇಲೆಯೇ ಬಾಯಿ ತೆರೆದಿರುವ ಓಜೋನ್ ತೂತು ಇನ್ನಷ್ಟು ಬಾಯಿ ಆಕಳಿಸಬಾರದೆಂದಿದ್ದರೆ, ನಮ್ಮ ನಾಗರಿಕ ರಾಷ್ಟ್ರಗಳು ಸದ್ಯ ಬೇಕಾಬಿಟ್ಟಿ ತಯಾರಿಸುತ್ತಿರುವ ಅಪಾಯಕಾರಿ ಸಿಎಫ್‌ಸಿಗಳ ಉತ್ಪಾದನೆ ಪೂರ್ತಿ ನಿಲುಗಡೆಯಾಗಬೇಕು. ನಿತ್ಯಹಸಿರು ಕಾಡುಗಳ ನಿರ್ನಾಮ ನಿಲ್ಲಬೇಕು. ಕಲ್ಲಿದ್ದಲು, ಖನಿಜ ತೈಲ, ನೈಸರ್ಗಿಕ ಅನಿಲಗಳ ವಿಪರೀತ ಉರಿಸುವಿಕೆ ಮಿತಿಗೊಳಪಡಬೇಕು. ಬದಲಿ ಇಂಧನಗಳ, ಶಕ್ತಿ ಮೂಲಗಳ ಬಳಕೆ ಹೆಚ್ಚು ಹೆಚ್ಚಾಗಬೇಕು.

ತುಂಬ ತಡವಾಗಿಯಾದರೂ ಎಚ್ಚೆತ್ತ ಲೋಕದ ನಾಲ್ವತ್ತೆಂಟು ರಾಷ್ಟ್ರಗಳು ಕೆನಡಾ ದೇಶದ ಮೊಂಟ್ರಿಯಲ್ ಎಂಬಲ್ಲಿ ಒಟ್ಟು ಸೇರಿ ಸಿಎಫ್‌ಸಿ ಉತ್ಪಾದನೆಗೆ ಪೂರ್ಣವಿರಾಮ ಹಾಕಲು ಒಂದು ಒಡಂಬಡಿಕೆಯ ಕಾರ್ಯಕ್ರಮವನ್ನೇನೋ ಹಮ್ಮಿಕೊಂಡಿವೆ. ಇದರೊಟ್ಟಿಗೆ ಸಿಎಫ್‌ಸಿಯಷ್ಟೇ ಉಪಯುಕ್ತವಾದ ಆದರೆ ಓಜೋನನ್ನು ನುಂಗದಂತಹ ಬದಲಿ ರಾಸಾಯನಿಕ ಹೈಡ್ರೊಫ್ಲೊರೊಕಾರ್ಬನ್ ಎಂಬ ವಸ್ತುವನ್ನು ಅಭಿವೃದ್ಧಿಗೊಳಿಸುವ ಪ್ರಯತ್ನಗಳೂ ತೀವ್ರವಾಗಿ ನಡೆಯುತ್ತಿವೆ. ಆದರೆ ಈ ಕಾರ್ಯಕ್ರಮಗಳು ಪೂರ್ತಿಯಾಗಿ ಜಾರಿಗೆ ಬರಲು ಇನ್ನೂ ಇಪ್ಪತ್ತು ವರ್ಷಗಳೇ ಬೇಕು. ಅಷ್ಟರೊಳಗೆ ನಮ್ಮ ವಾತಾವರಣದ ಪ್ರದೂಷಣ ಹತೋಟಿ ಮೀರಿ ನಮ್ಮ ಈ ಸುಂದರ ಭೂಮಿ ನರಕವಾಗಿ ಮಾರ್ಪಡದಿದ್ದರೆ ಅದೊಂದು ಮನು ಕುಲದ ಸೌಭಾಗ್ಯವೇ ಸರಿ. ●

ಔದಾರ್ಯ

ಸಮಾಜ ಸುಧಾರಕರಾದ ಫಯಸಿಟ್ ಬಿಸ್ತಾಮಿ ಮಸೀದಿಯಿಂದ ಬರುತ್ತಿದ್ದರು. ದಾರಿಯಲ್ಲಿ ಒಬ್ಬ ಕುಡುಕ ಕೈಲಿ ಒಂದು ವಾದ್ಯವನ್ನು ಹಿಡಿದು ಬರ ಹೋಗುವವರನ್ನೆಲ್ಲ ಬಾಯಿಗೆ ಬಂದಂತೆ ನಿಂದಿಸುತ್ತಿದ್ದ. ಅವನಿಗೆ ಬುದ್ಧಿವಾದ ಹೇಳಲು ಬಿಸ್ತಾಮಿ ಪ್ರಯತ್ನಿಸಿದರು. ಆದರೆ ಕುಡುಕ ಸಿಟ್ಟಾಗಿ ಕೈಲಿದ್ದ ವಾದ್ಯವನ್ನು ಅವರ ತಲೆಯ ಮೇಲೆ ರಾಚಿದ.

ಬಿಸ್ತಾಮಿಯವರ ತಲೆಗೆ ಬಲವಾದ ಪೆಟ್ಟು ಬಿತ್ತು. ವಾದ್ಯವೂ ಚೂರು ಚೂರಾಯಿತು.

ಮಾರನೇ ದಿನ ಬೆಳಗ್ಗೆ ಬಿಸ್ತಾಮಿಯವರು ಕುಡುಕನಿಗೆ ಸ್ವಲ್ಪ ಸಿಹಿತಿಂಡಿ ಮತ್ತು ಹಣವನ್ನು ಕಳುಹಿಸಿಕೊಟ್ಟರು. ಅವರು ಕಳುಹಿಸಿದ್ದ ಚೀಟಿಯಲ್ಲಿ 'ನಿಮ್ಮ ವಾದ್ಯ ಒಡೆದು ಚೂರಾಗಲು ನನ್ನ ತಲೆ ಕಾರಣವಾದುದಕ್ಕೆ ನನಗೆ ವಿಷಾದವಾಗುತ್ತಿದೆ. ಇದರ ಸಂಗಡ ಇರುವ ಹಣದಲ್ಲಿ ಬೇರೆ ವಾದ್ಯವನ್ನು ಕೊಂಡುಕೊಳ್ಳಿ' ಎಂದು ಬರೆದಿತ್ತು.

ಅವರ ಔದಾರ್ಯವನ್ನು ಕಂಡು ಕುಡುಕ ಕುಗ್ಗಿಹೋದ; ತನ್ನ ನಡತೆಯನ್ನು ಮಾರ್ಪಡಿಸಿಕೊಂಡ.

● ಬಾಲಯೋಗಿ

ಈ ನೆಲ ಈ ಜನ

ಮಣಿಪುರದ ಮಹಿಳಾ ಮಾರುಕಟ್ಟೆ

● ಕೆ.ಎ. ಶ್ರೀನಿವಾಸ

ಮನೋಲ್ಲಾಸಕರ ಮಣಿಪುರದ ಮತ್ತೊಂದು ಪ್ರಮುಖ ಆಕರ್ಷಣೆಯೆಂದರೆ ಇಂಫಾಲ, ಮೊಯಿರಾಂಗ ಮತ್ತು ಚೆನ್ನಪುರಗಳಲ್ಲಿರುವ ವಿಶಿಷ್ಟ ಮಾರುಕಟ್ಟೆಗಳು. ಇಲ್ಲೆಲ್ಲ ಒಂದು ರೀತಿ 'ಮಹಿಳಾದಳಿತ'ವೆ. ಮಣಿಪುರಿ ಸರಕಾರದ ಕೋಶಕ್ಕೆ ದೊಡ್ಡ ಮೊತ್ತ ದೊರೆಯುವುದು ಈ ಮಾರುಕಟ್ಟೆಗಳಿಂದಲೆ.

ಇಂಫಾಲದ ನಟ್ಟನಡುವಿರುವ ಖ್ವಾಇರಾಮ್ ಬಂದ್ ಬಜಾರ್ ಇವುಗಳಲ್ಲಿ ದೊಡ್ಡದು. ಲೋಹದ ಗಂಟೆಗಳು, ಕೈಮಗ್ಗದ ಬಟ್ಟೆಗಳಿಂದ ಹಿಡಿದು ನಿತ್ಯೋಪಯೋಗಿ ವಸ್ತುಗಳು, ಸ್ತ್ರೀಅಲಂಕಾರ ಸಾಮಗ್ರಿಗಳವರೆಗೆ ಎಲ್ಲವೂ ಇಲ್ಲಿ ಲಭ್ಯ. ಇದೀ ಮಾರುಕಟ್ಟೆ ಎರಡು ಭಾಗಗಳಲ್ಲಿ ವಿಂಗಡಿಸಲ್ಪಟ್ಟಿದ್ದು, ಒಂದೆಡೆ ಮಣಿಪುರದಲ್ಲಿ ಹೆಂಗಸರಿಂದ ತಯಾರಿಸಲ್ಪಡುವ ಕಲಾಕೌಶಲಮಯ ಕೈಮಗ್ಗದ ಬಟ್ಟೆ, ರಗ್ಗು ಇತ್ಯಾದಿಗಳು ಮಾರಲ್ಪಟ್ಟರೆ ಇನ್ನೊಂದೆಡೆ ಇನ್ನಿತರ ವಸ್ತುಗಳ ವ್ಯಾಪಾರ ನಡೆಯುತ್ತದೆ.

ಖ್ವಾಇರಾಮ್‌ಬಂದ್ ಬಜಾರಿನ ಇತಿಹಾಸದಲ್ಲಿ ಮಹಿಳೆಯರ ಸಾಹಸ-ಹೋರಾಟಗಳದೊಂದು ಮುಖ್ಯ ಅಧ್ಯಾಯ. 1937 ರಲ್ಲಿ ಬ್ರಿಟಿಷರು ಇವರ ಮೇಲೆ ತಮ್ಮ ವಸ್ತುಗಳ ವ್ಯಾಪಾರ ಮಾಡಿ ಎಂದು ಒತ್ತಾಯ ತಂದಾಗ ಮಾರುಕಟ್ಟೆಯನ್ನೇ ಮುಚ್ಚಿ, ಅವರ ಅಕ್ಕಿ ಲಾರಿಗಳನ್ನು, ಎತ್ತಿನಗಾಡಿಗಳನ್ನು ಒಂದಂಗುಲವೂ ಅಲುಗದಂತೆ ತಡೆಹಿಡಿದಿದ್ದರು. ಬ್ರಿಟಿಷ್ ಸೈನ್ಯದ ಬೂಟುಗಾಲಿಗೂ, ಲಾಠಿ-ಗುಂಡುಗಳಿಗೂ ಅಂಜಲಿಲ್ಲ ಈ ವೀರವನಿತೆಯರು. ತೀರ ಇತ್ತೀಚೆಗೆ ಅಂದರೆ 1988 ರಲ್ಲಿ ಮಾರುಕಟ್ಟೆ ಜಾಗದಲ್ಲಿ ಒಂದು ಬಹು ಮಹಡಿ ಕಟ್ಟಡ ನಿರ್ಮಿಸುವುದಕ್ಕೆ ಸರಕಾರ ಯೋಚಿಸಿದಾಗ ಈ ವಣಿಕಮಣಿಗಳು ಪ್ರತಿಭಟಿಸಿ ಆ ಯೋಜನೆ ಕೈಗೂಡದಂತೆ ಮಾಡಿದರು.

ಮಣಿಪುರದ ಕೈಮಗ್ಗಗಳೆಂದರೆ ಸರಕಾರಕ್ಕೊಂದು ಮುಖ್ಯ ಉತ್ಪನ್ನಮೂಲ. ಪರಂಪರಾಗತವಾಗಿ ನಡೆದು ಬಂದದ್ದು ಈ ನೇಯ್ಗೆ. ಮಣಿಪುರಿ ಹುಡುಗಿಯ ಮದುವೆಯ ಸಂದರ್ಭದಲ್ಲಿ ಆಕೆಗೆ ಎಷ್ಟು ರೀತಿಯ ನೇಯ್ಗೆಯ ಜ್ಞಾನವಿದೆ ಎಂಬ ಅಂಶ ಮುಖ್ಯವಾಗಿ ಪರಿಗಣಿಸಲ್ಪಡುತ್ತದೆ. ಅಲ್ಲಿಯ ಪ್ರತಿಮನೆಯಲ್ಲೂ ನೇಯ್ಗೆ-ನೂಲು ರಾಟೆ ಕಾಣುವುದು ತೀರ ಸಾಮಾನ್ಯ.

ವಿದೇಶಿ ಪ್ರವಾಸಿಗರಿಗೆ ಈ ಕೈ ಮಗ್ಗದ ಬಟ್ಟೆಗಳೆಂದರೆ ಕೇಳಿದಷ್ಟು ಹಣಕೊಟ್ಟು, ಕೊಂಡುಕೊಳ್ಳುವ ಹುಚ್ಚು. ಹೌದು, ಮಣಿಪುರಿ ಕೈಮಗ್ಗದ ಬಟ್ಟೆಗಳ ಮೋಡಿಯೆ ಅಂಥದು.

ಖ್ವಾಇರಾಮ್ ಬಂದ್ ಬಜಾರಿನ ಕೈಮಗ್ಗದ ಮಾರುಕಟ್ಟೆಯನ್ನು ಪ್ರಧಾನವಾಗಿ ಆಕ್ರಮಿಸಿರುವವರು ಮೇಯ್‌ಟೀ ಹೆಂಗಸರು. ಹಣೆಗೆ ಗಂಧದ ಬೊಟ್ಟುಗಳನ್ನಿಟ್ಟ ಮೊಂಡಮೂಗಿನ ಈ ಚೆಲುವೆಯರು ವ್ಯಾಪಾರ ನಿಭಾಯಿಸುವ ರೀತಿ ನೋಡುವಂಥದು. ●

ಜನಸಾಮಾನ್ಯರನ್ನು ಸಾಮಾಜಿಕ ಕ್ರಾಂತಿಯ ಪಥದಿಂದ ದೂರವೆಳೆಯುವುದಕ್ಕೆ ಪುನರ್ಜನ್ಮದ ಕಲ್ಪನೆ ಹುಟ್ಟಿಕೊಂಡಿತು. ಆದರೆ ಇದುವರೆಗೂ ಪುನರ್ಜನ್ಮ ಇದೆಯೆನ್ನುವುದಕ್ಕೆ ಖಚಿತವಾದ ಯಾವುದೇ ಆಧಾರಗಳು ಸಿಕ್ಕಿಲ್ಲ.

ನೆನಪುಗಳು ಮರುಕಳಿಸುತ್ತವೆಯೇ?

● ಡಾ. ಕೆ.ಎಂ. ಮ್ಯಾಥ್ಯೂ

ಕ್ರಿಸ್ತಶಕ 1952ರಲ್ಲಿ ಅಮೆರಿಕಾದ ಜನತೆಗೆ ದಿಗ್ಭ್ರಮೆ ಹಿಡಿಸುವಂಥ ವಿಚಿತ್ರ ಘಟನೆಯೊಂದು ನಡೆಯಿತು. ರೀತ್ ಸೈಮನ್ ಎಂಬಾಕೆ ''ನಾನು ಹಿಂದಿನ ಜನ್ಮದಲ್ಲಿ ಐರಿಷ್ ಮಹಿಳೆಯಾಗಿದ್ದೆ. ಆಗಿನ ನನ್ನ ಹೆಸರು ಬೆಟ್ಟಿ ಎಂದಾಗಿತ್ತು,'' ಎಂದು ತನ್ನ ಒಂದೊಂದೇ ನೆನಪುಗಳನ್ನು ನೇಯುತ್ತಿದ್ದಳು. ಹತ್ತೊಂಬತ್ತನೇ ಶತಮಾನದಲ್ಲಿ ಐರಿಷ್ ಜನಾಂಗ ಹೇಗೆ ಬದುಕುತ್ತಿತ್ತು ಎನ್ನುವುದನ್ನು ಕೂಡ ಆಕೆ ಅತ್ಯಂತ ನಿಖರವಾಗಿ ಹೇಳಬಲ್ಲವಳಾಗಿದ್ದಳು. ಈ ಘಟನೆಯನ್ನು ಜನರು ಶ್ರವಣ ಮಾಧ್ಯಮದ ಮೂಲಕ ಹರಡತೊಡಗಿದರು. ಅಲ್ಲದೆ ಇಂಥ ಗಾಳಿಸುದ್ದಿಗೆ ಪುನರ್ಜನ್ಮವಾದಿಗಳ ಕುಮ್ಮಕ್ಕೂ ಸಿಕ್ಕಿತು. ಈ ಘಟನೆಯನ್ನು ಆಧರಿಸಿ ಪತ್ರಿಕೆಗಳು ಒಂದೊಂದು ರೀತಿಯ ವ್ಯಾಖ್ಯಾನ ನೀಡಿದವು. ಕೊನೆಗೆ ಇದನ್ನು ಕೇಳಿಸಿಕೊಂಡ ಮನಃಶಾಸ್ತ್ರಜ್ಞರು ರೀತ್‌ಳನ್ನು ಕೂಲಂಕಷವಾಗಿ ಪರಿಶೀಲಿಸಿದಾಗ, ಆಕೆಯ ನೆರೆಮನೆಯಲ್ಲೇ ಆಕೆ ಹೇಳಿದ ಹೆಸರಿನ ಮಗು ಇರುವುದು ಕಂಡು ಬಂತು. ಇದನ್ನು ಕೇಳಿಸಿಕೊಂಡ ಐರಿಷ್ ಕುಟುಂಬದವರಿಗೂ ಆಶ್ಚರ್ಯವೆನಿಸದೆ ಇರಲಿಲ್ಲ. ಇದೆಲ್ಲಾ ಅಪ್ರಜ್ಞಾಪೂರ್ವಕ ಮೋಸವೆಂದು ತಿಳಿಯಲು ಹೆಚ್ಚು ಕಾಲ ಬೇಕಾಗಲಿಲ್ಲ.

ಇದೇ ರೀತಿ ಈ ಶತಮಾನದ ಎಂಬತ್ತರ ದಶಕದಲ್ಲಿ ಲಕ್ಷ್ಮಣಸಿಂಗ್ ಎನ್ನುವ ನಾಲ್ಕು ವರ್ಷದ ಬಾಲಕ ಒಂದು ದಿನ ಇದ್ದಕ್ಕಿದ್ದಂತೆಯೇ ತನ್ನ ಹಿಂದಿನ ಜನ್ಮದ ನೆನಪುಗಳನ್ನು ಹೇಳತೊಡಗಿದ: ''ನಾನು ಹೆಚ್.ಎಲ್. ಜೈನ್. ನನ್ನನ್ನು 'ಜೈನ್ ಸಾಬ್' ಎಂದು ಕರೆಯಿರಿ.'' ತಾನಿರುವ ಸದ್ಯದ ಬಡತನದ ಬಗ್ಗೆ ಟೀಕಿಸುತ್ತಾ, ತನ್ನ ಹಳೆಯ ಬದುಕು ಎಷ್ಟೊಂದು ಭೋಗದಿಂದ ಕೂಡಿತ್ತೆಂಬುದನ್ನು ವಿವರಿಸುತ್ತಿದ್ದ. ಈ ಘಟನೆಯ ಕುರಿತು ವಿಚಾರಣೆಗಳು ನಡೆವಾಗ ಹತ್ತಿರದ ಹಳ್ಳಿಯಲ್ಲೇ ಹೆಚ್.ಎಲ್. ಜೈನ್ ಎಂಬುವರು ಇದ್ದುದು ನಿಜವಾಗಿತ್ತು. ಜೈನ್ ಕುಟುಂಬದ ಸದಸ್ಯರು ಬಂದು ಲಕ್ಷ್ಮಣ್‌ಸಿಂಗನನ್ನು ಹಲವಾರು ರೀತಿಯಲ್ಲಿ ಪ್ರಶ್ನಿಸಿ, ''ಇದು ಹೆಚ್. ಎಲ್. ಜೈನ್‌ನ ಮರುಹುಟ್ಟು'' ಎನ್ನುವ ನಿರ್ಧಾರಕ್ಕೆ ಬಂದರು. ಆದರೆ ಈ ಬಾಲಕ ಹೆಚ್.ಎಲ್. ಜೈನ್ ಅವರ ಮರುಹುಟ್ಟಿನ ಅಭ್ಯರ್ಥಿ ಎನ್ನುವುದರ ಕುರಿತು ಯಾವುದೇ ರೀತಿಯ ವೈಚಾರಿಕ ವಿವರಣೆ ಲಭ್ಯವಾಗಿಲ್ಲ.

ಪುನರ್ಜನ್ಮವೆನ್ನುವುದು ಬದುಕಿನ ಒಂದು ಸತ್ಯ ಎಂದು ಹಲವಾರು ಮತಗಳು ಅಂಗೀಕರಿಸಿವೆ. ಅವುಗಳಲ್ಲಿ ಹಿಂದೂ ಮತ್ತು ಬೌದ್ಧ ಮತಗಳು ಪ್ರಮುಖವಾದವು. ಒಮ್ಮೆ ಮನುಷ್ಯನಾಗಿ ಹುಟ್ಟಿದ ಮೇಲೆ ಈ ಭೂಮಿಯಲ್ಲಿ ಹಲವಾರು ಜನ್ಮಗಳನ್ನು ಎತ್ತಬೇಕಾಗುತ್ತದೆ. ಇದರ ಅವಧಿಯು ಮನುಷ್ಯ ತಾನು ಬದುಕಿರುವಾಗ ಮಾಡುವ ಕರ್ಮಗಳಿಂದ ನಿಗದಿತವಾಗು

ತ್ತದೆ. ಇತ್ತೀಚೆಗಿನ ದಿನಗಳಲ್ಲಿ ಅತ್ಯಂತ ವೈಜ್ಞಾನಿಕ ಪದ್ಧತಿಗಳಿಂದ, ಕ್ಷೇತ್ರಕಾರ್ಯ ಮತ್ತು ಅಥೆಂಟಿಕ್ ನಿಲುವುಗಳಿಂದ ಮರುಹುಟ್ಟು ಇದೆಯೇ ಎಂದು ಪರಿಶೀಲಿಸಲಾಗುತ್ತಿದೆ. ಈ ಕ್ಷೇತ್ರದಲ್ಲಿ ಕೆಲಸ ಮಾಡಿದವರಲ್ಲಿ ಇವಾನ್ ಸ್ಟೀಫನ್ ಮತ್ತು ಪ್ರೊ. ಕಾರ್ಲ್ಸನ್ ಪ್ರಮುಖರು. ಆಧ್ಯಾತ್ಮವಾದಿಗಳು ನಿರ್ಮಿಸಿದ ಕಪಟ ವಿಜ್ಞಾನದಲ್ಲಿ 'ಪುನರ್ಜನ್ಮ'ವೆನ್ನುವುದು ಹೆಚ್ಚು ಕಾಲ ಒಂದು ಮಬ್ಬಾದ ಗಡ್ಡೆಯಾಗಿ ಉಳಿಯಲಾರದು.

ವೈಜ್ಞಾನಿಕ ರೀತಿಯ ಸಂಭಾವ್ಯ ಕಲ್ಪನೆಯಿಂದ ಪುನರ್ಜನ್ಮ ಕುರಿತ ಘಟನೆಗಳನ್ನು ಪರೀಕ್ಷೆಗೆ ಒಳಪಡಿಸಿದಾಗಲೆಲ್ಲ ಜನರು ನೀಡುತ್ತಿರುವ ಮಾಹಿತಿ ಯಾವುದೇ ರೀತಿಯಿಂದಲೂ ಹೊಂದಿಕೆಯಾಗುತ್ತಿರಲಿಲ್ಲ. ಅಲ್ಲದೆ ಪುನರ್ಜನ್ಮದ ಕಲ್ಪನೆ ಕೆಲವರಿಗೆ ಬೇಸರವನ್ನುಂಟು ಮಾಡಿದ್ದೂ ಇದೆ. ಈವರೆಗೆ ನಡೆದಿರುವ ಸಂಶೋಧನೆಯಿಂದ ಯಾವುದೇ ಒಂದು ಘಟನೆ ಕೂಡ ಪುನರ್ಜನ್ಮ ಇದೆಯೆನ್ನುವುದನ್ನು ಸಾಬೀತುಪಡಿಸಿಲ್ಲ. ಮನಃಶಾಸ್ತ್ರ, ಮಾನವಶಾಸ್ತ್ರ, ಸಂಖ್ಯಾಶಾಸ್ತ್ರ, ಭಾಷಾವಿಜ್ಞಾನ, ಮತ್ತು ವಸ್ತುವಿವೇಚನಾ ಶಾಸ್ತ್ರದಿಂದ ಅಭ್ಯಸಿಸಿದಾಗ ಮರುಹುಟ್ಟಿನ ಬಗ್ಗೆ ನಂಬಿಕೆ ಕಳೆದುಕೊಂಡವರೇ ಅಧಿಕ.

ಪುನರ್ಜನ್ಮ ಸಿದ್ಧಾಂತ ನಮಗೆ ಮೊತ್ತಮೊದಲು ಉಪನಿಷತ್ತಿನಲ್ಲಿ ಕಂಡುಬರುತ್ತದೆ. ಇದು (ವೇದದಲ್ಲಿ ಹೇಳಿದಂತೆ) ಪರಲೋಕದಲ್ಲಿ 'ಅಮರ'ವಾಗುವ ಬದಲಿಗೆ ಈ ಲೋಕದಲ್ಲಿಯೇ ಆವಾಗಮನವಾಗುವ ಬಗ್ಗೆ ಒತ್ತಿ ಹೇಳುತ್ತದೆ. ವರ್ಗವಿಭಕ್ತ ಸಮಾಜ ವ್ಯವಸ್ಥೆಯನ್ನು ಶಾಶ್ವತವಾಗಿಸಲು ಇದೊಂದು ಬಲವಾದ ಅಸ್ತ್ರ. ಈ ಲೋಕದಲ್ಲಿಯೇ ಮಹಾ ಶ್ರೀಮಂತ ಮತ್ತು ಮಹಾ ಭೋಗಜೀವಿಗಳನ್ನು ನೋಡುತ್ತೇವಲ್ಲ - ಅದೆಲ್ಲ ಹಿಂದಿನ ಜನ್ಮದ ಗಳಿಕೆ ಎನ್ನಲಾಯಿತು. ಇದು ಒಂದು ರೀತಿಯಲ್ಲಿ ಸಮಾಜದ ಅಸಮಾನತೆಯನ್ನು ಉಚಿತವಾದುದೆಂದು ಸಾಧಿಸುವುದಾಗಿದೆ.

ಪುನರ್ಜನ್ಮ ಸಿದ್ಧಾಂತದ ಮೂಲಕ ಪೀಡಿತ ವರ್ಗಗಳಿಗೆ ಹೀಗೆ ಹೇಳಲ್ಪಡುತ್ತಿತ್ತು. ''ಈ ಜನ್ಮ ಮಾತ್ರವೆ ಸತ್ಯ - ಏನಿದ್ದರೂ ಎಲ್ಲವೂ ಇದರಲ್ಲಿಯೇ ಎಂದು ತಿಳಿಯಬೇಡ. ಅಲ್ಲದೆ ಸಾಮಾಜಿಕ ವಿಷಮತೆಯನ್ನು ತೊಲಗಿಸಲು, ದರಿದ್ರತೆಯನ್ನು ತೊಲಗಿಸಲು ಪ್ರಯತ್ನಿಸಬೇಡ. ದಾರಿದ್ರ್ಯ ಕೇವಲ ದೇವರ ಆಟ ಮಾತ್ರವಲ್ಲ, ನಿನ್ನ ಹಿಂದಿನ ಕರ್ಮಗಳು ಅದಕ್ಕೆ ಜವಾಬ್ದಾರವಾಗಿವೆ; ಇನ್ನೊಬ್ಬರ ಸಂಪತ್ತನ್ನು ನೋಡಿ ಮತ್ಸರಿಸಬೇಡ. ಸಮಾಜದಲ್ಲಿ ಸಿರಿತನ, ಬಡತನ, ವರ್ಗಗಳು ಶಾಶ್ವತವಾದವುಗಳು. ಒಳ್ಳೆಯ ಬದುಕು ನಿನಗೆ ಬೇಕಿದ್ದರೆ ಒಳ್ಳೊಳ್ಳೆಯ ಕೆಲಸ ಮಾಡು. ದಾನ, ಯಜ್ಞಯಾಗ ನಡೆಸು. ಹಾಗೆ ಮಾಡಿ ಮುಂದಿನ ಜನ್ಮದಲ್ಲಿ ರಾಜನಾಗಿ ಅಥವಾ ಧನಾಢ್ಯ ಕುಲದಲ್ಲಿ ಜನ್ಮವೆತ್ತಿ ನೀನು ಎಲ್ಲಾ ಭೋಗಗಳ ಅಧಿಕಾರಿಯಾಗು.''

ಪುನರ್ಜನ್ಮದ ಆವಿಷ್ಕಾರದೊಂದಿಗೆ ಸ್ವರ್ಗ ನರಕಗಳ ಪ್ರಶ್ನೆಯೂ ಬಿಟ್ಟುಬಿಡಲಿಲ್ಲ. ಆ ಹಳೆಯ ಆಯುಧವನ್ನೂ ಇಟ್ಟುಕೊಳ್ಳಲಾಯಿತು. ಈ ರೀತಿ ಉಪನಿಷತ್ ಕಾಲದ ಸಾಮಂತವಾದವು ವಿಕಸಿತ ಬುದ್ಧಿಜೀವಿಗಳಿಗೆ 'ಬ್ರಹ್ಮವಾದ', 'ನೇತಿ ನೇತಿ' ಮತ್ತು 'ಅಜ್ಞೇಯ'ದ ಮಾಯಾಚಕ್ರವಾಯಿತು. ವಾಸ್ತವಿಕ ಜಗತ್ತಿನ ಅಸ್ತಿತ್ವ ಹಾಗೂ ಅದರ ಸಮಸ್ಯೆಗಳನ್ನು ಶಾಶ್ವತವಾಗಿ ತುಚ್ಛ, ನಿಸ್ಸಾರವೆಂಬುದಾಗಿ ಹೇಳಿ ಅವರ ಪ್ರಯತ್ನವನ್ನು ಇನ್ನೊಂದು ದಾರಿಯಲ್ಲಿ ಎಸೆಯಲಾಯಿತು. ಉಳಿದ ಸಾಧಾರಣ ಜನರನ್ನು ಸಾಮಾಜಿಕ ಕ್ರಾಂತಿಯ ಪಥದಿಂದ ದೂರವಿಳೆಯುವುದಕ್ಕೆ ಸ್ವರ್ಗ-ನರಕ, ಪುನರ್ಜನ್ಮದ ಕಲ್ಪನೆಯೆ ಸಾಕಿತ್ತು.

1980ರಿಂದ ರವೀನ್ ಎನ್ನುವ ಐಂದ್ರಜಾಲಿಕ ಜನರಿಗೆ ದಿನನಿತ್ಯ ಇಂದ್ರಜಾಲದ ಮೋಡಿಗಳನ್ನು ಮಾಡಿ ತೋರಿಸುತ್ತಿದ್ದ. ಪ್ರತಿಯೊಂದು ದೇಖಾವೆಗಳಲ್ಲೂ ಜನರನ್ನು ವೇದಿಕೆಗೆ ಆಹ್ವಾನಿಸಿ, ಸಮ್ಮೋಹಿನಿ ತಂತ್ರವನ್ನು ಒತ್ತಾಯದಿಂದ ಅವರ ಮೇಲೆ ಪ್ರಯೋಗಿಸುತ್ತಿದ್ದ. ಸಮ್ಮೋಹಿನಿ

ಸಂದರ್ಭದಲ್ಲಿ ಅವರ ಕಿವಿಯಲ್ಲಿ "ನೀವು ಹಿಂದಿನ ಜನ್ಮದಲ್ಲಿ 'ಮಹಾಪುರುಷ'ರಾಗಿದ್ದಿರಿ" ಎಂದು ಪಿಸುಗುಟ್ಟುತ್ತಿದ್ದ. 1985ರಲ್ಲಿ ನಡೆದ ಒಂದು ಪ್ರದರ್ಶನದಲ್ಲಿ ಇಬ್ಬರು ಮಾತ್ರ ಹಿಂದಿನ ಜನ್ಮದ ಬಗ್ಗೆ ಹೇಳಿದರು. ಅದರಲ್ಲಿ ಒಬ್ಬ ಕ್ರಿಸ್ಟೋಫರ್ ಕೊಲಂಬಸ್‌ನೆಂದು ಘೋಷಿಸಿಕೊಂಡ. ಇನ್ನೊಬ್ಬ ತಾನು ರಾಜಕುಮಾರ ಚಾರ್ಲ್ಸ್‌ನ ಮರುಹುಟ್ಟು (ಅದೂ ಚಾರ್ಲ್ಸ್ ಬದುಕಿರುವಾಗಲೆ!!) ಎಂದ. ರವೀನ್ ಈ ಎಲ್ಲ ಪ್ರದರ್ಶನದ ಹಿಂದೆ ಸಮ್ಮೋಹಿನಿ ತಂತ್ರವನ್ನು ಬಳಸಿದ್ದ. ಇದೊಂದು ಮೂರ್ಖತನದ ಕೆಲಸವೆಂದು ಪ್ಯಾರಾ ಸೈಕಾಲಜಿಸ್ಟರು ಆಪಾದಿಸಿದ್ದಾರೆ.

ಸಾವಿರಾರು ವರ್ಷಗಳಿಂದ ಈ ಸಮ್ಮೋಹಿನಿ ಶಾಸ್ತ್ರ ಮನುಷ್ಯನ ಸುಪ್ತಾವಸ್ಥೆಯಲ್ಲಿರುವ ನೆನಪುಗಳನ್ನು ಜಾಗೃತಗೊಳಿಸುತ್ತದೆ ಎಂದು ನಂಬಲಾಗಿತ್ತು. ಅಲ್ಲದೆ ಪ್ರತಿಯೊಬ್ಬ ವ್ಯಕ್ತಿಯ ಪ್ರಜ್ಞೆಯ ತಳದಲ್ಲಿ ನೆನಪುಗಳು ಪದರುಗಟ್ಟಿರುತ್ತವೆ. ಅದನ್ನು ಹೊರಗೆಡಹಲು ಈ ಸಮ್ಮೋಹಿನಿ ತಂತ್ರ ನೆರವಿಗೆ ಬರುತ್ತದೆಂದು ತಿಳಿದಿದ್ದರು. ಪುನರ್ಜನ್ಮವಾದಿಗಳು ಇಂಥ ನೆನಪುಗಳು ಹಿಂದಿನ ಜನ್ಮದಿಂದ ಬರುತ್ತವೆ ಎಂದು ಹೇಳುತ್ತಿದ್ದರು. ಈ ಕೆಲ ಧೂರ್ತರುಗಳ ವಿಶೇಷ ಅಸ್ತ್ರವೆಂದರೆ - Hypnotism ಯಾ ಇಂದ್ರಜಾಲದ ಮಾನಸಿಕ ಶಕ್ತಿ. ಅದರ ಬಲದಿಂದ ಅವರು ಮತ್ತು ಅವರ ಅನುಯಾಯಿಗಳು ಸಾವಿರಾರು ಸುಳ್ಳುಗಳನ್ನು ಪ್ರಚಾರಮಾಡುತ್ತಾರೆ. ಅಲ್ಲದೆ ವಿದ್ವಾಂಸರು ತಮ್ಮದನ್ನು ವೈಜ್ಞಾನಿಕವಾಗಿ ವಿಶ್ಲೇಷಿಸಲಾರರೆಂದು ಸದಾ ಕೊಚ್ಚಿಕೊಳ್ಳುತ್ತಿರುತ್ತಾರೆ! ಸಮ್ಮೋಹಿನಿ ತಂತ್ರವನ್ನು ಪರೀಕ್ಷೆಗೆ ಒಡ್ಡಿದಾಗಲೆಲ್ಲ ನೆನಪಿನ ಮರುಕಳಿಕೆ ಆಗುವುದಿಲ್ಲವೆಂದೇ ತಿಳಿದು ಬಂದಿದೆ. ಇಂಥ ಫಲಿತಾಂಶದಿಂದ ಪುನರ್ಜನ್ಮವಾದಿಗಳು ಬೇಸ್ತುಬಿದ್ದು ಹೋದರು.

22 ವರ್ಷಗಳ ಹಿಂದೆ ಕಕೇಸಿಯನ್ ಹೆಣ್ಣೊಬ್ಬಳು "ನಾನು ಹಿಂದಿನ ಜನ್ಮದಲ್ಲಿ ಜಪಾನದಲ್ಲಿ



ಯೋಧಳಾಗಿದ್ದೆ" ಎಂದು ಹೇಳುತ್ತಿದ್ದಳು. ಆಕೆಯನ್ನು ಜಪಾನ್‌ಲ್ಲಿ ಶಾಂತಿ ಯಾವಾಗ ನೆಲೆಸಿತ್ತು ಎಂದು ಕೇಳಿದಾಗ 1940ರಲ್ಲಿ ಎಂದು ತಪ್ಪಾಗಿ ಹೇಳಿದಳು. ಇನ್ನೊಂದು ಸಂದರ್ಭದಲ್ಲಿ ಒಬ್ಬ ಯುವಕ ತಾನು ಜೂಲಿಯಸ್ ಸೀಜರನ ಮರುಹುಟ್ಟು ಎಂದು ಪದೇ ಪದೇ ಹೇಳುತ್ತಿದ್ದ. ಆದರೆ ಆತನನ್ನು ಹೆಚ್ಚಿನ ಸಂಶೋಧನೆಗೆ ಗುರಿಪಡಿಸಿದಾಗ ಸೀಜರ್ ಕ್ರಿಸ್ತ ಪೂರ್ವ 50ರಲ್ಲಿ ಸತ್ತನೆಂದು ತಪ್ಪಾಗಿ ಹೇಳಿದ. ಅಲ್ಲದೆ ಆತ ಪ್ರಾಚೀನ ಜಾಗತಿಕ ಇತಿಹಾಸವನ್ನು ಅಭ್ಯಾಸ ಮಾಡಿದ್ದು ಬೆಳಕಿಗೆ ಬಂತು. ಆತನಿಗೆ ರೋಮನ್ ಇತಿಹಾಸದ ಬಗ್ಗೆ ಹೆಚ್ಚಿನ ಆಸಕ್ತಿ ಬೇರೆ ಇತ್ತು. ಇತಿಹಾಸ, ಸಿನಿಮಾ ಮತ್ತು ಇನ್ನಿತರ ಪುಸ್ತಕಗಳನ್ನು ಓದಿ-ನೋಡಿ, ಏನೇನೋ ಕಲ್ಪಿಸಿಕೊಂಡು 'ಮರುಹುಟ್ಟು' ಎಂದು ಭ್ರಮಿಸಿ ಜನರು ಆಗಾಗ ಸುಳ್ಳುಗಳನ್ನು ನೇಯುತ್ತಿರುತ್ತಾರೆ.

ಪ್ರಾಚ್ಯ ದೇಶಗಳ ಜನರು ಪುನರ್ಜನ್ಮವೆನ್ನುವುದು ತಮ್ಮ ಸಾಂಸ್ಕೃತಿಕ ಜೀವನದ ಒಂದು ಅಂಗವೆಂದೇ ಭಾವಿಸಿದ್ದಾರೆ. ಆದ್ದರಿಂದ ಎಲ್ಲಾದರೂ ಪುನರ್ಜನ್ಮಕ್ಕೆ ಸಂಬಂಧಿಸಿದ ಘಟನೆಗಳು

ನಡೆದರೆ ಅದನ್ನು ವರದಿ ಮಾಡುತ್ತಿದ್ದರು. ಆದರೆ ಪಾಶ್ಚಾತ್ಯರು ಇಂಥ ಘಟನೆಗಳನ್ನು ತಿರಸ್ಕರಿಸುತ್ತಿದ್ದರು. (ಪಾಶ್ಚಾತ್ಯರು ಮನುಷ್ಯ ಸತ್ತ ಮೇಲೆ ಅವರ ಆತ್ಮಗಳು ನಮ್ಮೊಂದಿಗೆ ಬದುಕುತ್ತವೆ. ಅದಕ್ಕೆ ಅತೀಂದ್ರಿಯ ಶಕ್ತಿ ಇವೆ ಎಂದು ತಿಳಿಯುತ್ತಾರೆ. ಇದೂ ಪುನರ್ಜನ್ಮ ಎನ್ನುವ ನಾಣ್ಯದ ಇನ್ನೊಂದು ಮುಖ ಅಷ್ಟೆ!)

ದುರ್ಮರಣ ಹೊಂದಿದವರ ಆತ್ಮಗಳು ಅತೃಪ್ತಿಯಿಂದ ಪುನಃ ಭೂಮಿಗೆ ಬರುತ್ತವೆಂಬ ಬಲವಾದ ನಂಬಿಕೆ ಭಾರತೀಯರಲ್ಲಿದೆ. ಇದೊಂದು ರೀತಿಯ ಸಾಂಸ್ಕೃತಿಕ ನಂಬಿಕೆಯೇ ಹೊರತು ಯಾವುದೇ ರೀತಿಯ ವಾಸ್ತವ ತಳಹದಿಯಿಂದ ಕೂಡಿದ್ದಲ್ಲ.

ಉತ್ತರ ಕರ್ನಾಟಕದಲ್ಲಿ ನಡೆದ ಪುನರ್ಜನ್ಮದ ಘಟನೆಯೊಂದನ್ನು 15-11-90ರ ಪತ್ರಿಕೆಯಲ್ಲಿ ಹೀಗೆ ವರದಿ ಮಾಡಲಾಗಿತ್ತು - ಮುಧೋಳದ ಬಸವಾನಂದ ಪ್ರಾಥಮಿಕ ಶಾಲೆಯ ಪ್ರಮೋದ ಕಟ್ಟೀಮನಿ ಎಂಬ ಎಂಟು ವರ್ಷದ ವಿದ್ಯಾರ್ಥಿ "ತಾನು ಹಿಂದಿನ ಜನ್ಮದಲ್ಲಿ ಮುಂಬಯಿ ರಹವಾಸಿಯಾಗಿದ್ದು ವಕೀಲಿ ವೃತ್ತಿ ಮಾಡುತ್ತಿದ್ದೆ. ಆಗ ನನ್ನ ಹೆಸರು ಗುರುಲಿಂಗ ಶಿರೋಳ ಎಂದಿತ್ತು," ಎಂದು ಅವನು ಹೇಳುತ್ತಾನೆ!

"ನನ್ನ ಹೆಂಡತಿಯ ಹೆಸರು ಮಹಾದೇವಿ ಇದ್ದಿತು. ನನಗೆ ಎಂಜನಿಯರ್ ವೃತ್ತಿಯ ರಮೇಶ ಎಂಬ ಮಗನಿದ್ದ. ನನ್ನ ಹೆಂಡತಿಯ ತವರು ಮನೆ ಮೈಸೂರಿನಲ್ಲಿದೆ," ಎಂದು ಅವನು ತನ್ನ ಹಿಂದಿನ ಜನ್ಮದ ಸ್ಮರಣೆಯ ಸುಳುಹು ಬಿಚ್ಚುತ್ತಾನೆ. ಮೈಸೂರು ಮತ್ತು ಮುಂಬಯಿ ನಗರಗಳನ್ನು ಪ್ರಮೋದ ನೋಡಿಲ್ಲ. ಆದರೆ ಅಲ್ಲಿಯ ಸ್ಥಳಗಳ ಬಗ್ಗೆ ವಿವರಗಳನ್ನು ನೀಡುತ್ತಿರುವುದು ಗಮನಾರ್ಹ ಸಂಗತಿ. ಪ್ರಮೋದನ ಹಿಂದಿನ ಜನ್ಮದ ಸ್ಮರಣೆಯ ಕುರಿತು ಮುಂಬಯಿಯ 'ಸೋಮಯ್ಯ ವಿದ್ಯಾವಿಹಾರ'ದ ಡಾ. ಸಂಜೀವ ಶೆಟ್ಟಿ ಹೆಚ್ಚಿನ ಸಂಶೋಧನೆ ನಡೆಸಿದ್ದಾರೆ ಎಂದೂ ವರದಿಯಾಗಿತ್ತು.

ಡಾ. ಶೆಟ್ಟಿಯವರಿಗೆ ಈ ಬಗ್ಗೆ ಸುದ್ದಿ ಪ್ರಕಟವಾದ ಒಂದು ತಿಂಗಳ ನಂತರವೇ ತಿಳಿದಿದ್ದು. ಅವರು ಈ ಕುರಿತು ಸಂಶೋಧನೆ ನಡೆಸಿದ್ದಾರೆಂದು ಸುಳ್ಳು ಮಾಹಿತಿ ನೀಡಲಾಗಿತ್ತು. ಪುನರ್ಜನ್ಮವಾದಿಗಳು ಜನರನ್ನು ಹೀಗೆ ಮೋಸಗೊಳಿಸುತ್ತಲೇ ತಮ್ಮ ಬದುಕನ್ನು ಸಾಗಿಸುತ್ತಿರುತ್ತಾರೆ.

ಕೆಲವು ತಾಯಂದಿರು ತಮ್ಮ ಮಕ್ಕಳಿಗೆ ಪೂರ್ವಜರ ಕುರಿತು ವಿವರವಾದ ಮಾಹಿತಿಯನ್ನು ಒದಗಿಸಿರುತ್ತಾರೆ. ಈ ವಿವರಗಳು ಮಕ್ಕಳ ಸುಪ್ತ ಮನಸ್ಸಿನಲ್ಲಿ ಶೇಖರಣೆಯಾಗುತ್ತವೆ. ತಮ್ಮ ತಾಯಿ ಸತ್ತ ಮೇಲೆ ಅಥವಾ ದೊಡ್ಡವರಾದನಂತರ ಯಾವುದೋ ಒಂದು ಸಂದರ್ಭದಲ್ಲಿ ಹಿಂದಿನವರ ಕುರಿತು ಹೇಳುತ್ತಾರೆ. ಇಂಥದನ್ನು ಜನರು ಪುನರ್ಜನ್ಮದ ಮರುಕಳಿಕೆ ಎಂದು ಕೊಂಡಾಡುತ್ತಾರೆ. ಆದರೆ ಇದೊಂದು ರೀತಿಯ ಮಾನಸಿಕ ರೋಗವೆಂದು ಸಾಬೀತಾಗಿದೆ. ಇದಕ್ಕೆ ಕ್ರಿಪ್ಟೋಮ್ನೇಷಿಯಾ (cryptomnesia) ಎನ್ನುತ್ತಾರೆ.

ಪುನರ್ಜನ್ಮವಾದಿಗಳು ಎಷ್ಟೇ ಪ್ರಯತ್ನಪಟ್ಟರೂ ಸತ್ತಮೇಲಿನ ಬದುಕಿನ ಸತ್ಯತೆಯನ್ನು ಕಂಡುಕೊಳ್ಳಲು ಸಾಧ್ಯವಾಗಿಲ್ಲ. ಸಾಮಂತವಾದಿ ಸಮಾಜ ವ್ಯವಸ್ಥೆಯನ್ನು ಸ್ಥಿರವಾಗಿರಿಸಲು ಹಾಗೂ ಶಾಸಕ ವರ್ಗದ ಸ್ವಾರ್ಥದ ರಕ್ಷಣೆಗಾಗಿ ಪುನರ್ಜನ್ಮ ಎನ್ನುವ ಗುರಾಣಿ ಕೆಲಸ ಮಾಡಿತೆನ್ನಬಹುದು. ಇಂದಿನವರೆಗೂ ಯಾವುದೇ ಒಂದು ಘಟನೆ ಕೂಡ ಈ ನಿಟ್ಟಿನಲ್ಲಿ ವೈಜ್ಞಾನಿಕವಾಗಿ ಸಾಬೀತಾಗಲಿಲ್ಲ. ●

(ಸಾಧಾರ)

ಟಿ.ವಿ. ಚಾಣಕ್ಯನ ಸುತ್ತಮುತ್ತ: ಪ್ರತಿಕ್ರಿಯೆಗಳು

ಲೇಖನದಲ್ಲಿ ಹೇಳಿದಂತೆ ಮಗೆಸ್ತಾನೀಸನ 'ಇಂಡಿಕಾ' ಕೃತಿ ಸಂಪೂರ್ಣ ದೊರೆತಿಲ್ಲ. ಈ ಕೃತಿಯಲ್ಲಿ ಚಾಣಕ್ಯನನ್ನು ಪ್ರಸ್ತಾಪಿಸಿಲ್ಲವೆಂಬುದೇ ವಿದ್ವಾಂಸರ ಭಿನ್ನಾಭಿಪ್ರಾಯಗಳಿಗೆ ಕಾರಣವೆಂಬುದೂ ಸರಿ. ಆದರೆ ಹಲವು ಸಾಹಿತ್ಯ ಕೃತಿಗಳಲ್ಲಿ ಚಾಣಕ್ಯನ ಪ್ರಸ್ತಾಪ ಬರುತ್ತದೆ. ಆತ ನಂದ ವಂಶ ನಿರ್ಮೂಲ ಮಾಡಿದ ಆಚಾರ್ಯ ಎಂಬುದಾಗಿಯೇ ಬಿಂಬಿಸಲಾಗಿದೆ. ಅಂದಮೇಲೆ ಆತ ಐತಿಹಾಸಿಕ ವ್ಯಕ್ತಿಯಲ್ಲವೇ?

ಕೇಸರಿ ಬಾವುಟ ಶೈಶವಾವಸ್ಥೆಯಲ್ಲಿದ್ದ ರಾಷ್ಟ್ರದ ಸಂಕೇತವಷ್ಟೇ ಎಂದೇಕೆ ಭಾವಿಸಬಾರದು? ಇಂದು ನಮ್ಮ ರಾಷ್ಟ್ರ ಧ್ವಜ ಕೇಸರಿ ಬಿಳಿ ಹಸಿರು ಬಣ್ಣದಿಂದ ಕೂಡಿಲ್ಲವೇ?

ಪ್ರಾಚೀನ ಭಾರತೀಯರ ರಾಜನೀತಿಯ ಬಗ್ಗೆ ಯುರೋಪಿಯನ್ನರಲ್ಲಿದ್ದ ತಪ್ಪು ಕಲ್ಪನೆಗಳನ್ನು ದೂರ ಮಾಡಿದ್ದೇ ಚಾಣಕ್ಯ ಅಥವಾ ಕೌಟಿಲ್ಯನ ಅರ್ಥಶಾಸ್ತ್ರ. 1905ರಲ್ಲಿ ಪತ್ತೆಯಾದ ಈ ಗ್ರಂಥ 1914ರಲ್ಲಿ ಮೊದಲ ಪ್ರಕಟಣೆ ಕಂಡಿತು. ಜರ್ಮನ್ ಭಾಷೆಗೆ ತರ್ಜುಮೆಯಾದ ಇದು ಇತ್ತೀಚೆಗೆ ಉರ್ದುವಿನಲ್ಲೂ ಬಂದಿದೆ. ಈ ಎಲ್ಲಾ ಅಂಶಗಳನ್ನು ಗಮನದಲ್ಲಿಟ್ಟುಕೊಂಡು 'ಚಾಣಕ್ಯ'ನನ್ನು ವೀಕ್ಷಿಸಿದರೆ ದೇಶೀಯ ನಿರ್ದೇಶಕನ ಶ್ರಮ ಸಾರ್ಥಕ.

ಮೈಸೂರು ಡಾ. ಹೆಚ್.ಎಸ್. ಉಪಾರಾಣಿ

○

ಲೇಖಕರು ಎತ್ತಿರುವ ಪ್ರಶ್ನೆಗಳು ಉಚಿತವೇನೋ ಹೌದು. ಆದರೆ ''ರಾಷ್ಟ್ರೀಯತಾ ಭಾವವು ಭಾರತೀಯರಲ್ಲಿ ಮೊಳೆತದ್ದು ಇಂಗ್ಲಿಷರ ಆಗಮನದ ನಂತರವೇ'' ಮುಂತಾದ ಲೇಖಕರ ಅಭಿಪ್ರಾಯಗಳು ಅವರ ಇತಿಹಾಸಾಭ್ಯಾಸದ ಕೊರತೆಯನ್ನಷ್ಟೇ ಸೂಚಿಸುತ್ತವೆ.

ಜೆ.ಪಿ. ತಾಂಡಾ ಲಾಲಪ್ಪ ಸಕ್ರೆಪ್ಪ ಲಂಬಾಣಿ

○

ಸಾಮಾಜಿಕ ಕಥೆಗಳಿಗಿಂತ ಪೌರಾಣಿಕ ಯಾ ಐತಿಹಾಸಿಕ ಕಥೆಗಳನ್ನು ಟಿ.ವಿ. ಯಲ್ಲಿ ಚೆಲ್ಲುವುದು ಒಳ್ಳೆಯದಲ್ಲವೇ?

ಕಟಪಾಡಿ ಕೆ. ವಾಮನ ಕಿಣಿ

○

ಮನರಂಜನೆ ಮಾತ್ರವೇ ದೂರದರ್ಶನ ಧಾರವಾಹಿಗಳ ಉದ್ದೇಶವೆನ್ನುವುದಾದರೆ ಬರಿ ಕಾರ್ಟೂನ್ ಷೋಗಳನ್ನೇ ಪ್ರಸಾರ ಮಾಡಬೇಕಷ್ಟೆ! ಈ ಅಳತೆಗೋಲಿನಲ್ಲಿ ಲೇಖಕರು ಮೆಚ್ಚುವ 'ಭಾರತ್ ಏಕ್ ಖೋಜ್' ಕೂಡ ಪ್ರಸಾರಾರ್ಹತೆ ಪಡೆಯುವುದು ಅನುಮಾನ.

ಒಂದು ಧರ್ಮದ ಪುಣ್ಯಕಥೆಯನ್ನು ರಾಷ್ಟ್ರೀಯ ಜಾಲದಲ್ಲಿ ಪ್ರಸಾರ ಮಾಡುವುದರ ಔಚಿತ್ಯ ಪ್ರಶ್ನಿಸುವ ಲೇಖಕರು ಈ ಭಾವನೆಯ ಹೊರತಾಗಿಯೂ ರಾಮಾಯಣ ಅಥವಾ ಮಹಾಭಾರತ ವಿಶ್ವದ ಶ್ರೇಷ್ಠ ಕಾವ್ಯಗಳ ಸಾಲಿನಲ್ಲಿ ನಿಲ್ಲುತ್ತವೆಂಬುದನ್ನು ಮರೆತಂತಿದೆ. ಇದೇ ಪ್ರಕಾರ ರೇಡಿಯೋದಲ್ಲಿ ಬರುವ ಎಲ್ಲ ಸಂಗೀತ ಕಾರ್ಯಕ್ರಮಗಳನ್ನೂ ಕೂಡಲೆ ನಿಲ್ಲಿಸಬೇಕಾಗುತ್ತದೆ. ಏಕೆಂದರೆ ಸಾಧಾರಣವಾಗಿ ಎಲ್ಲ ಸಂಗೀತ ರಚನೆಗಳೂ ಒಂದಲ್ಲ ಒಂದು ಧರ್ಮದ ದೇವತಾಸ್ತುತಿಗಳೇ ಆಗಿರುತ್ತವೆ!

ರಾಷ್ಟ್ರೀಯತಾ ಭಾವವು ನಮ್ಮಲ್ಲಿ ಮೊಳೆತದ್ದೇ ಆಂಗ್ಲರ ಆಗಮನದ ನಂತರ ಎಂಬುದೂ ಸರಿಯಲ್ಲ. ಸಿಂಧೂವಿನಿಂದ ಬ್ರಹ್ಮಪುತ್ರಾ ನದಿಯವರೆಗೆ, ಹಿಮಾಲಯದಿಂದ ಹಿಂದೂ ಮಹಾಸಾಗರದವರೆಗೆ ಒಂದು ಸಂಕೀರ್ಣ ಸಾಂಸ್ಕೃತಿಕ ಪರಂಪರೆ ಬೆಳೆದಿತ್ತು. ಈ ಪ್ರದೇಶದಲ್ಲಿ ಸಂಪರ್ಕ ಭಾಷೆಯಾಗಿ ಸಂಸ್ಕೃತ ಬಳಸಲ್ಪಡು

ತ್ತಿತ್ತು. ಕಾಳಿದಾಸ, ಜಯದೇವ, ಶಂಕರಾಚಾರ್ಯರು ದೇಶಾದ್ಯಂತ ಪ್ರಸಿದ್ಧರಾಗಲು ಕಾರಣ ಈ ಸಾಂಸ್ಕೃತಿಕ ಒಮ್ಮತವೇ.

'ಛಾತ್ರ' ಮತ್ತು 'ಶಿಕ್ಷಕ' ಪದಗಳ ಬಗ್ಗೆ ಟೀಕಿಸಿರುವ ಲೇಖಕರು ಚಾಣಕ್ಯನ ಕಾಲದಲ್ಲಿ ಹಿಂದಿಯಲ್ಲಿ ಸಂಭಾಷಣೆ ನಡೆಯುತ್ತಿರಲಿಲ್ಲ ಎಂಬುದನ್ನು ಮರೆತರೇ?

ಮದ್ರಾಸು — ರಾಮಪ್ರಸಾದ್. ಟಿ.ಎ.

○

ರಾಮಾಯಣ, ಮಹಾಭಾರತಗಳು ಜನರನ್ನು ಕಂಗಾಲು ಮಾಡಿದವು.... ಉತ್ತರ ರಾಮಾಯಣ ಮತ್ತೆ ಪ್ರಾರಂಭವಾಗಿ ಗವಾಕ್ಷಿಯೊಳಗಿನಿಂದ ಭೂತ ಬಂದಂತಾಯ್ತು ಎಂದೆಲ್ಲ ಬರೆದಿದ್ದಾರೆ ಲೇಖಕರು. ವಾಸ್ತವವೆಂದರೆ ನಮ್ಮ ದೇಶದ ಸಾಂಸ್ಕೃತಿಕ ಮಹಾಕಾವ್ಯಗಳನ್ನು ಜನ ಆದರದಿಂದ ವೀಕ್ಷಿಸಿದರು. ಅಷ್ಟೇ ಅಲ್ಲ, ಅನೇಕ ಮುಸ್ಲಿಂ, ಕ್ರೈಸ್ತ ಬಹುಸಂಖ್ಯಾತ ರಾಷ್ಟ್ರಗಳಲ್ಲೂ ಈ ಧಾರಾವಾಹಿಗಳು ಅತ್ಯಂತ ಜನಪ್ರಿಯವಾದವು. ಈ ಎರಡೂ ಕಥೆಗಳು ಕೇವಲ ಒಂದು ಧರ್ಮಕ್ಕೆ ಸೇರಿದವಾಗಿರದೆ ಭಾರತದ ಜೀವನಶೈಲಿ, ಸಾಂಸ್ಕೃತಿಗೆ ಪ್ರತೀಕವಾಗಿವೆ......

ಮುಸ್ಲಿಂ ಬಹುಸಂಖ್ಯಾತ ಇಂಡೋನೇಶಿಯಾದಲ್ಲಿಯೂ ಪ್ರತಿವರ್ಷ ಅಂತಾರಾಷ್ಟ್ರೀಯ ಮಟ್ಟದ 'ರಾಮಾಯಣ' ಕುರಿತಾದ ಸಮ್ಮೇಳನವನ್ನೂ ಅಲ್ಲಿಯ ಸರ್ಕಾರವೇ ನಡೆಸುತ್ತಿದೆ. ಸಂಸ್ಕೃತಿಯ ಅರ್ಥವನ್ನು ಅರಿತಿರುವ ಅವರು ಈ ಮಹಾಕಾವ್ಯಗಳನ್ನು ಒಂದು ಧರ್ಮದ ಸಂಕೇತಗಳೆಂದು ಭಾವಿಸಿಲ್ಲ. ಇದೇ ರೀತಿ ನಮ್ಮ ದೇಶದಲ್ಲೂ ನಡೆದಿದ್ದರೆ ಇಂದು ನಾವು ಕಾಣುತ್ತಿರುವ ಪ್ರತ್ಯೇಕತೆಯ ಕಂದರ ಇರುತ್ತಿರಲಿಲ್ಲವೇನೋ! ಆದರೆ ಅಲ್ಪಸಂಖ್ಯಾತರನ್ನು ಈ ದೇಶದ ಆದರ್ಶಗಳಿಂದ ದೂರವಿಡುವ ತುಷ್ಟೀಕರಣದ ಪರಿಪಾಠವೇ ಇಲ್ಲಿ ಬೆಳೆದು ಬಂದಿದೆ.

ಇಂತಹ ಧಾರಾವಾಹಿಗಳನ್ನು ಪ್ರದರ್ಶಿಸಬಾರದು ಎಂದರೆ ನಮ್ಮ ಸಾಂಸ್ಕೃತಿಕ ಬೇರುಗಳನ್ನು ನಾವೇ ಕಡಿದುಕೊಂಡಂತೆ. ಅಲ್ಲದೆ ಸಾಂಸ್ಕೃತಿಕ ನೆಲೆ ಇಲ್ಲದ ಯಾವ ಜನಾಂಗವೂ ಒಂದಾಗಿರಲು ಸಾಧ್ಯವಿಲ್ಲ.

ಹಿಂದೆ ದಿ. ಮೌಲಾನಾ ಆಜಾದ್‌ರನ್ನೊಳಗೊಂಡ ಧ್ವಜ ಸಮಿತಿ ಭಗವಾ ಬಣ್ಣದ ರಾಷ್ಟ್ರಧ್ವಜವನ್ನು ಶಿಫಾರಸ್ಸು ಮಾಡಿತ್ತು. ಡಾ. ಅಂಬೇಡ್ಕರ್ ಕೂಡ ಭಗವಾ ಧ್ವಜವನ್ನೇ ಅನುಮೋದಿಸಿದ್ದರು. ಅಂಥ ಧ್ವಜವನ್ನು ದೂರದರ್ಶನದಲ್ಲಿ ತೋರಿಸಿದರೆ ಸೆಕ್ಯೂಲರ್ ವಾದಿಗಳಿಗೇಕೆ ತಲೆ ತಿರುಗಬೇಕು?.....ಕೊನೆಗೂ ಸರ್ಕಾರ ಚಾಣಕ್ಯನ ಪೂರ್ಣ ಪ್ರಸಾರಕ್ಕೆ ಅನುಮತಿಸಿರುವುದು ಸಂತಸದ ವಿಷಯ.

ಧಾರವಾಡ — ಅರುಣ ಜೋಶಿ

○

ಲೇಖನ ತುಂಬಾ ಔಚಿತ್ಯಪೂರ್ಣವೂ ಅಷ್ಟೇ ಉತ್ಕೃಷ್ಟವೂ ಆಗಿದೆ. ಐತಿಹಾಸಿಕ ಪ್ರಜ್ಞೆ ಹಾಗೂ ಸಮಕಾಲೀನ ಸಾಮಾಜಿಕ ಜೀವನ ಚಿತ್ರಣ ನೀಡುವಲ್ಲಿ ಎಡವಿರುವ ದೂರದರ್ಶನದ ದೋಷವನ್ನು ಎತ್ತಿ ತೋರಿಸಿದ ರೀತಿ ಇತಿಹಾಸಕಾರನ ಭಾಷ್ಯದಂತಿದೆ. ಟಿ.ವಿ. ಧಾರಾವಾಹಿ ನಿರ್ಮಾಪಕರಿಗೆ ಇದೊಂದು ಮಾರ್ಗದರ್ಶಿ.

ಮನಗೋಳಿ — ಸಿದ್ಧರಾಮ ಈ ಬಿರಾದಾರ

○

ಟಿ.ವಿ. ಚಾಣಕ್ಯನ ಸುತ್ತ ಸಂಚರಿಸಿದ ಲೇಖನಿ ಅಭದ್ರ ರಾಷ್ಟ್ರ, ಜಾತೀಯತೆಯ ಬಗ್ಗೆಯೂ ತಿಳಿಸುತ್ತಾ ತುಂಬಾ ಪರಿಣಾಮಕಾರಿಯಾಗಿ ಮೂಡಿದೆ.

ಧಾರವಾಡ — ಕೆ. ಜಗದೀಶ್ ರೆಡ್ಡಿ

○

'ಚಾಣಕ್ಯ' ಸೀರಿಯಲ್ ನಿರ್ಮಿಸುವಲ್ಲಿ ಚಂದ್ರಪ್ರಕಾಶ್ ದ್ವಿವೇದಿಯವರು ಎಲ್ಲಿ ಎಡವಿದ್ದಾರೆ ಮತ್ತು ಎಂಥ ಶ್ರದ್ಧೆಯಿಂದ ಇದಕ್ಕಾಗಿ ದುಡಿದಿದ್ದಾರೆ ಎಂಬ ಗುಣಾವಗುಣಗಳನ್ನು ಅತ್ಯಂತ ನಿಷ್ಠುರತೆಯಿಂದಲೇ ವಿವರಿಸಿದ್ದಾರೆ ಲೇಖಕರು. ಪುರಾಣಕತೆಗಳ ಪಾತ್ರಗಳನ್ನೇ ದೇವರನ್ನಾಗಿಸಿ ಅವನ್ನೇ ಪ್ರಸಾರ ಮಾಡುತ್ತಿರುವುದು ಸರಿಯಲ್ಲ ಎಂಬ ಚಿಂತನೆ ಸ್ವಾಗತಾರ್ಹ.

ಶಹಾಪೂರ — ಶಿವರಂಜನ ಸತ್ಯಂಪೇಟೆ

ಮನೆಯ ಅಂದ ಹಾಳು ಮಾಡುತ್ತದೆಂದು ಜೇಡರ ಹುಳುವನ್ನು ಹೀಯಾಳಿಸುವ ಮುಂಚೆ ಈ ಲೇಖನ ಓದಿದರೆ ನಿಮ್ಮ ನಿಲುವು ಬದಲಾದೀತು. ಏಕೆಂದರೆ ಜೇಡವೀಗ ರೈತರ ಮಿತ್ರ, ಮೂರ್ಛೆರೋಗಕ್ಕೆ ಔಷಧಿ. ಅಷ್ಟೇ ಅಲ್ಲ ಅದರ ರೇಷ್ಮೆಯಂತಹ ಎಳೆ ಬಟ್ಟೆ ಹಾಗೂ ಗುಂಡು ನಿರೋಧಕ ಕವಚದ ತಯಾರಿಕೆಗೂ ಬಳಸಲ್ಪಡುತ್ತದೆ!

ಜೇಡ: ಅದಕ್ಕೀಗ ಶುಕ್ರದೆಸೆ!

● ಸುಶೀಲ ಸೂರ್ಯನಾರಾಯಣ

ಜೇಡ ಎಂದಾಕ್ಷಣ ಮನೆಯ ಮೂಲೆ ಮೂಲೆಯಲ್ಲಿ ಕಟ್ಟಿರುವ ಬಲೆಯೇ ಮೊದಲು ನಮ್ಮ ಮನಸ್ಸಿಗೆ ಬರುತ್ತದೆ. ಆ ಬಲೆಗಳಲ್ಲಿ ಜೋತಾಡುತ್ತಿರುವ ಕ್ರಿಮಿ ಕೀಟಗಳ ಅಸ್ಥಿಪಂಜರ ಮನಕ್ಕೆ ಮುದವನ್ನೇನೂ ನೀಡವು. ಮನೆಯ ಅಂದ ಚಂದವನ್ನೆಲ್ಲಾ ಹಾಳು ಮಾಡುವ ಇದರ ಮೇಲೆ ಗೃಹಿಣಿಯ ಮೊದಲ ಕಾಕದೃಷ್ಟಿ. ಇಂಥ ಜೇಡರ ಹುಳು ಯಾರಿಗೆ ತಾನೆ ಬೇಕು?

ಆದರೆ ಈಗ ಬೇಕು ಬೇಕು ಎನ್ನುವ ಕಾಲ ಬಂದಿದೆ. ಜೇಡರ ಹುಳುಗಳನ್ನು ಪೋಷಿಸಿ ಸಂರಕ್ಷಿಸುವ ದಿನಗಳಿವು.

ಜೇಡ, ಪ್ರಾಣಿಶಾಸ್ತ್ರದ ವರ್ಗೀಕರಣದಂತೆ 'ಅರ್‍ನಾಕಿಡ್' ಎಂಬ ವರ್ಗಕ್ಕೆ ಸೇರಿದ ಪ್ರಾಣಿ. ಕ್ರಿಮಿ ಕೀಟಗಳ ಬದ್ಧ ವೈರಿ. ಕೃಷಿ ವಲಯದಲ್ಲಿ ಕ್ರಿಮಿ ಕೀಟ ನಿಯಂತ್ರಿಸಲು ಈ ಹುಳದ ಉಪಯೋಗ ಹೇಗೆ ಮಾಡಿಕೊಳ್ಳಬಹುದು ಎಂದು ಕೃಷಿ ವಿಜ್ಞಾನಿಗಳು ತಲೆಕೆಡಿಸಿಕೊಂಡರು. ಅದರ ಪರಿಣಾಮವಾಗಿ 1988ರ ಶರದೃತುವಿನಲ್ಲಿ ಚೀನಾದ ಭತ್ತದ ಗದ್ದೆಗಳಲ್ಲಿ ಒಂದು ಅಸಾಮಾನ್ಯ ದೃಶ್ಯ ಕಂಡುಬಂತು. ಸಾವಿರಾರು ಹೆಕ್ಟೇರ್ ಜಮೀನಿನಲ್ಲಿ ರೈತರು ಸಣ್ಣಸಣ್ಣ ಹುಲ್ಲು ಕಂತೆಗಳನ್ನು ಸೊಂಟದವರೆಗೆ ಕಟ್ಟಿ ಕೋನಾಕಾರದಲ್ಲಿ ನಿಲ್ಲಿಸಿದುದು ವಿಚಿತ್ರವಾಗಿ ಕಾಣುತ್ತಿತ್ತು. ಹೀಗೆ ಕಟ್ಟಿದುದರ ಉದ್ದೇಶ ಜೇಡರ ಹುಳುಗಳಿಗೆ ಮನೆ ಮಾಡಿಕೊಡುವುದು! ಅಂದರೆ ಅವುಗಳು ಬಲೆ ನೇಯ್ದು ಮನೆ ಮಾಡಿಕೊಳ್ಳಲು ಸೂಕ್ತ ಜಾಗ ನಿರ್ಮಿಸುವುದು. ಗದ್ದೆಗಳಲ್ಲಿ ಹುಲ್ಲುಕಡ್ಡಿಗಳ ಮಧ್ಯೆ ಬಲೆ ನೇಯ್ದು ವಾಸಿಸಲು ಪ್ರಾರಂಭಿಸಿದ ಜೇಡಗಳು, ಗುಂಪು ಗುಂಪಾಗಿ ಭತ್ತದ ಪೈರು ಮತ್ತು ಹತ್ತಿಯ ಗಿಡಗಳನ್ನು ಮೊಳಕೆಯಲ್ಲೇ ಚಿವುಟಿ ಹಾಕುತ್ತಿದ್ದ ಕೀಟಗಳನ್ನೆಲ್ಲಾ ತಿಂದು ಧ್ವಂಸ ಮಾಡಿದವು. ಈ ರೀತಿ ಜೇಡಗಳಿಗೆ ಸೂಕ್ತ ಸಮಯದಲ್ಲಿ ಮನೆ ಮಾಡಲು ತಕ್ಕ ಜಾಗ ನಿರ್ಮಿಸಿಕೊಟ್ಟು ಚೀನಾದ ರೈತರು ತಮ್ಮ ಇಳುವರಿಯನ್ನು ಸಾಕಷ್ಟು ಹೆಚ್ಚಿಸಿಕೊಂಡರು.

ಜೇಡಗಳನ್ನು ಸಂರಕ್ಷಿಸಿ ಅದನ್ನು ದೊಡ್ಡ ಪ್ರಮಾಣದಲ್ಲಿ ಉಪಯೋಗಿಸಿಕೊಂಡವರಲ್ಲಿ ಚೀನೀಯರು ಮೊದಲಿಗರಾದರೂ ಈಗೀಗ ಬೇರೆ ಬೇರೆ ದೇಶದ ಕೃಷಿ ತಜ್ಞರು ಇದರ ಉಪಯುಕ್ತತೆಯನ್ನು ಅರಿತುಕೊಂಡು ಜೇಡರ ಹುಳುವನ್ನು ಸಂರಕ್ಷಿಸುವ ಕೆಲಸದಲ್ಲಿ ತೊಡಗಿದ್ದಾರೆ.

ಕ್ಯಾಲಿಫೋರ್ನಿಯಾದ ಒಬ್ಬ ವಿಜ್ಞಾನಿ ಸೇಬಿನ ಹಣ್ಣಿನ ತೋಟಗಳ ಮಧ್ಯೆ ನೆಲದ ಮೇಲೆ ಜೇಡ ವಾಸಿಸಲು ಅನುಕೂಲವಾದ ಹೊದಿಕೆ ನಿರ್ಮಿಸಿ

ಜೇಡಗಳ ಸಂತತಿ ವೃದ್ಧಿಸುವಂತೆ ಮಾಡಿದರು. ಪತಂಗಗಳು ಇಟ್ಟ ಮೊಟ್ಟೆಯಿಂದ ಹೊರಬಂದ ಸಣ್ಣ ಸಣ್ಣ ಹುಳುಗಳನ್ನು ಈ ಜೇಡಗಳು ಕಬಳಿಸಿದವು. ಸೇಜಿನ ಹಣ್ಣಿನಲ್ಲಿ ಸೇರಿ ಹಣ್ಣುಗಳನ್ನು ಕೊಳೆಯಿಸುತ್ತಿದ್ದ ಈ ಹುಳುಗಳ ಹಾವಳಿ ನಿಂತು ಹಣ್ಣಿನ ಗುಣಮಟ್ಟ ಹಾಗೂ ಇಳುವರಿ ಎರಡೂ ಹೆಚ್ಚಾಯ್ತು.

ಬೆಳೆಗಳ ಮಧ್ಯೆ ಸಣ್ಣ ಸಣ್ಣ ಮುಳ್ಳು ಗಿಡಗಳನ್ನು ಹಾಗೇ ಬಿಟ್ಟರೂ ಜೇಡಗಳು ಅದರಲ್ಲಿ ಬಲೆ ಕಟ್ಟಿ ವಾಸ ಮಾಡಿ ಕೂಲಿ ಇಲ್ಲದ ಕಾವಲುಗಾರನಂತೆ ಬೆಳೆಗಳನ್ನು ರಕ್ಷಿಸುತ್ತವೆ ಎಂದು ವಿಜ್ಞಾನಿಗಳು ಹೇಳುತ್ತಾರೆ. ರಾಸಾಯನಿಕ ಕೀಟನಾಶಕಗಳಿಗಿಂತ ಹೆಚ್ಚು ಕೀಟಗಳನ್ನು ಜೇಡಗಳು ಕೊಂದು ತಿಂದುಹಾಕುತ್ತವೆ ಎಂಬುದು ವಿಜ್ಞಾನಿಗಳ ಅಭಿಪ್ರಾಯ. ಅಂತೂ ಜೇಡರ ಹುಳು ರೈತನ ಮಿತ್ರನಾಗಿ, ಬಂಧುವಾಗಿ ಸಹಕರಿಸುವ ಕಾಲ ಬಂದಿದೆ.

ನೈಸರ್ಗಿಕವಾಗಿ ಕಣಜದ ಹುಳು, ಜೀರುಂಡೆಗಳಿಂದ ಕೀಟನಿಯಂತ್ರಣವೇನೋ ಆಗುತ್ತದೆ. ಆದರೆ ಇವುಗಳಿಗೆ ಸಂಯಮ ಕಡಿಮೆ. ತನ್ನ ಬೇಟೆಗಾಗಿ ಹಸಿದು ಕಾದು ಕೂಡುವಂಥ ಮನೋಭಾವ ಇವಕ್ಕಿಲ್ಲ. ತನ್ನ ಹಸಿವನ್ನು ತಣಿಸುವ ಹುಳುಗಳು ಕಡಿಮೆಯಾಗುತ್ತಿದ್ದ ಹಾಗೇ ಬೇರೆಡೆಗೆ ಹಾರಿ ಹೋಗಿ ಬಿಡುತ್ತವೆ. ಆದರೆ ಜೇಡ ಹಾಗಲ್ಲ, ತನ್ನ ಬೇಟೆಗಾಗಿ ಅಪಾರ ತಾಳ್ಮೆಯಿಂದ ಕಾದು ಕೂತುಕೊಳ್ಳುತ್ತವೆ.

ಜೇಡ ಎಂಬ ಹೆಸರೇ ನೇಕಾರ ಎಂದು ಸೂಚಿಸುತ್ತದೆಯಾದರೂ ಎಲ್ಲಾ ಜೇಡಗಳೂ ಬಲೆ ನೇಯುವುದಿಲ್ಲ. ಜೇಡಗಳು ವಿವಿಧ ರೀತಿಯ ನೆಲೆಗಳಲ್ಲಿ ಕಾಣಬರುತ್ತವೆ. ನೆಲದಲ್ಲಿ, ಸುರಂಗಗಳಲ್ಲಿ, ಬಿರುಕುಗಳಲ್ಲಿ ಇವು ಜೀವಿಸುತ್ತವೆ. ಇನ್ನು ಕೆಲವು ಕಲ್ಲು ಅಥವಾ ದಿಮ್ಮಿಗಳ ಅಡಿಯಲ್ಲಿ ವಾಸಿಸುತ್ತವೆ. ಹುಲ್ಲಿನ ಪೊದರುಗಳಲ್ಲೂ, ಮರಗಳಲ್ಲೂ ವಾಸಿಸುವ ಜೇಡಗಳಿವೆ.

ಜೇಡ ತನ್ನದೇ ಆದ ವಿಶಿಷ್ಟವಾದ ಬೇಟೆ ವಿಧಾನ ಹೊಂದಿದೆ. ಆದ್ದರಿಂದ ಎಲ್ಲಾ ಹುಳು ಹುಪ್ಪಡಿಗಳಿಗೂ ಜೇಡವೆಂದರೆ ಪ್ರಾಣಭಯ. ಜೇಡ ನೋಡುವುದಕ್ಕೆಷ್ಟು ಸೋಮಾರಿ ಎಂದರೆ ಅದು ಕುಳಿತಿರುವ ಭಂಗಿಯನ್ನು ಗಮನಿಸಿದರೆ ಅದು ಎದ್ದು ಬಂದು ಪ್ರಾಣ ಹೀರುತ್ತದೆ ಎಂದು ಊಹಿಸಲಿಕ್ಕೂ ಆಗದು. ಹುಳು ಹತ್ತಿರ ಬಂದೊಡನೆ ತನ್ನ ಶರೀರವನ್ನು ಹೊರಳಿಸಿ ಬೇಟೆಯ ಮೇಲೆ ಕ್ಷಣಮಾತ್ರದಲ್ಲಿ ಎಷ್ಟೊಂದು ಚಾಣಾಕ್ಷತನದಿಂದ ಉಗಿಯುತ್ತದೆಂದರೆ ಆ ಹುಳುವಿಗೆ ಮಿಸುಕುವ ಅವಕಾಶವೂ ಸಿಕ್ಕದು. ಅಂಟನಂತಹ ದ್ರವದ ಮಳೆಗೆ ಬೇಟೆ ನಿಶ್ಚಲವಾಗಿಬಿಡುತ್ತದೆ. ನಂತರ ಜೇಡ ಅದರ ಮೇಲೆ ಆರಾಮವಾಗಿ ಮೆರೆದಾಡಿ ತನ್ನಲ್ಲಿರುವ ವಿಷದಿಂದ ಅದನ್ನು ದುರ್ಬಲಗೊಳಿಸಿ ತಿನ್ನುತ್ತದೆ. ಜೇಡಗಳ ವಿಷ ಶೀಘ್ರ ಪರಿಣಾಮಕಾರಿ. ಅದು ಹುಳದ ನರಮಂಡಲವನ್ನು ಹೊಕ್ಕು ನರವಾಹಿನಿಯನ್ನು ನಿಷ್ಕ್ರಿಯಗೊಳಿಸುತ್ತದೆ. ಮೆದುಳಿಗೆ ಎಚ್ಚರಿಕೆಯ ಸಂದೇಶ ಹೋದರೂ ಅಂಗಾಂಗಗಳಿಗೆ ಅದರ ಆದೇಶ ತಲುಪದೆ ಹುಳು ಅಲುಗಾಡದಂತಾಗಲು ಜೇಡ ಅದನ್ನು ಜೀವಂತವಾಗೆ ತಿನ್ನುತ್ತದೆ.

ಸುಮಾರು ಐವತ್ತು ಸಾವಿರ ಬಗೆಬಗೆಯ ಜೇಡಗಳು ಪ್ರಪಂಚದಾದ್ಯಂತ ಇವೆ. ಎರಡು ಬಗೆಯ ಜೇಡಗಳನ್ನು ಬಿಟ್ಟರೆ ಮಿಕ್ಕೆಲ್ಲ ವಿಷಯುಕ್ತವಾದವು. ಆದರೂ ಕೆಲವೇ ಜೇಡಗಳು ಮನುಷ್ಯನಿಗೆ ಅಪಾಯಕಾರಿ. ಕರಿಜೇಡ (Black Widow) ಮತ್ತು ಕಂದುಜೇಡ (Brown Recluse) ಎಂದು ಕರೆಯಲ್ಪಡುವ ಈ ಎರಡು ಜಾತಿಯ ಜೇಡದ ವಿಷ ಮನುಷ್ಯನಿಗೆ ಸಾವನ್ನು ತರಬಲ್ಲದು. ಆದರೆ ಜೇಡದ ವಿಷದೊಳಗಿನ ಕೆಲವು ರಾಸಾಯನಿಕ ದ್ರವಗಳು ಮಾನವನ ಆರೋಗ್ಯಕ್ಕೂ ಪೂರಕವಾಗಬಲ್ಲವೆಂದರೆ ನಮಗೆ ಗಾಬರಿಯೂ ಆಗಬಹುದು. ಮೂರ್ಛೆರೋಗಕ್ಕೆ ಈ ರಾಸಾಯನಿಕದಿಂದ ಔಷಧಿ ತಯಾರಿಸುವುದರ ಬಗ್ಗೆ ಪ್ರಯತ್ನ ನಡೆಸಿದ್ದಾರೆ ವಿಜ್ಞಾನಿಗಳು. ಜೇಡರ ಬಲೆಗೂ ಕೂಡ ಔಷಧೀಯ ಮಹತ್ವ

ಜೇಡ ಹೇಗೆ ಹುಟ್ಟಿತು?

ಜೇಡದ ಹುಟ್ಟಿನ ಬಗ್ಗೆ ಗ್ರೀಕ್ ಪುರಾಣದಲ್ಲೊಂದು ಸ್ವಾರಸ್ಯಕರ ಕಥೆ ಬರುತ್ತದೆ:


ಅಥೀನಾ ದೇವತೆ ಬಟ್ಟೆಯ ನೇಯ್ಗೆ ಹಾಗೂ ಕಸೂತಿಯಲ್ಲಿ ಪ್ರವೀಣೆ. ಈ ವಿಷಯದಲ್ಲಿ ತನ್ನನ್ನು ಮೀರಿಸುವವರು ಯಾರಿದ್ದಾರೆಂಬ ಹಮ್ಮು ಅವಳದು. ಆದರೆ ಲಿಡಿಯಾ ದೇಶದ ಅರಾಕ್ನೆ ಎಂಬ ಹುಡುಗಿ ಸಹ ಕಸೂತಿಯಲ್ಲಿ ನಿಪುಣತೆ ಗಳಿಸಿದ್ದಳು. ತಾನು ಅಥಿನಾ ದೇವತೆಗಿತಲೂ ಚೆನ್ನಾಗಿ ಕಸೂತಿ ಹಾಕುತ್ತೇನೆಂದು ಆ ಹುಡುಗಿ ಹೇಳಿಕೊಂಡಳು. ಇದರಿಂದ ಅಸಮಾಧಾನಗೊಂಡ ಅಥೀನಾ ಮುದುಕಿಯ ವೇಷದಲ್ಲಿ ಬಂದು ಅರಾಕ್ನೆಯನ್ನು ಕಾಣುತ್ತಾಳೆ.

''ದೇವತೆಯ ಬಗ್ಗೆ ಹಗುರವಾಗಿ ಮಾತಾಡಕೂಡದು. ನಿನ್ನ ಮಾತುಗಳನ್ನು ಹಿಂದೆಗೆದುಕೋ,'' ಅಥೀನಾ ಒತ್ತಾಯಿಸಿದಳು. ಸೋಲಲೊಪ್ಪದ ಹುಡುಗಿ ತನ್ನ ಮುಂಚಿನ ಅಭಿಪ್ರಾಯವನ್ನೇ ಪುನರುಚ್ಚರಿಸಿದಳು. ಕೋಪಗೊಂಡ ದೇವತೆ ನಿಜರೂಪದಲ್ಲಿ ಪ್ರತ್ಯಕ್ಷಳಾಗಿ ಸವಾಲೆಸೆದಳು. ಹುಡುಗಿಯೂ ಅಂಜದೆ ಸ್ಪರ್ಧೆಗಿಳಿದಳು.

ಮೋಹಕವಾಗಿ ಬಟ್ಟೆಯನ್ನು ನೇಯ್ದ ಹುಡುಗಿ ದೇವರ ಪ್ರಣಯ ವಿಲಾಸಗಳನ್ನೇ ಅದರಲ್ಲಿ ಕಸೂತಿ ಹಾಕಿದಳು. ಹುಡುಗಿಯ ಪರಿಪೂರ್ಣ ಕಲಾತ್ಮಕತೆಯನ್ನು ದೇವತೆಯಿಂದ ಸಹಿಸಲಾಗಲಿಲ್ಲ. ತನ್ನ ಸರಿಸಮಕ್ಕೆ ಬಂದ ಅರಾಕ್ನೆಗೆ ಶಾಪ ಹಾಕಿದಳು.

''ನೀನು ಜೇಡನಾಗಿ ನಿನ್ನ ಮೈಯಿಂದಲೇ ನೂಲು ತೆಗೆದು, ಸದಾ ನೇಯುತ್ತಲೇ ಇರು.'' ಹೀಗೆ ಹುಟ್ಟಿದ ಜೇಡಕ್ಕೆ ಯಾವಾಗಲೂ ನೇಯುವುದೇ ಕೆಲಸವಾಯಿತು!


ಉಂಟು. ಗಾಯ ಹಾಗೂ ಕೊಯ್ದ ಹುಣ್ಣುಗಳಲ್ಲಿ ಇದನ್ನು ಕಟ್ಟುಪಟ್ಟಿಯಾಗಿ ಬಳಸುವ ಕ್ರಮ ಆಫ್ರಿಕದ ಕೆಲವು ಜನಾಂಗಗಳಲ್ಲಿ ಇದೆ. ಬಲೆ ನೇಯುವ ಜೇಡಗಳು ಕೀಟಗಳ ಪ್ರಚಂಡ ಬೇಟೆಗಾರರು. ಅವುಗಳ ಉದರದ ಗ್ರಂಥಿಗಳಲ್ಲಿ ಒಸರುವ ದ್ರವವೇ ಬಲೆಯನ್ನು ಹೊಸೆಯಲು ಸಹಾಯಕ. ಜೇಡಗಳಿಗೆ ಸ್ಪರ್ಶಜ್ಞಾನ ಬಲು ಚೆನ್ನಾಗಿದೆ. ಬಲೆ ನೇಯುವ ಜೇಡಗಳಲ್ಲಂತೂ ಇದು ಇನ್ನೂ ತೀಕ್ಷ್ಣ. ಬಲೆಯ ಯಾವ ಮೂಲೆಯಲ್ಲಾದರೂ ಕೊಂಚ ಚಲನೆಯಾದರೂ ಜೇಡ ಅದನ್ನು ತಕ್ಷಣ ಗ್ರಹಿಸುತ್ತದೆ.



ಟರೆಂಟುಲ

ಜೇಡರ ಬಲೆಗಳಲ್ಲಿ ಹಲವಾರು ಬಗೆಗಳುಂಟು. ಗೋಜು ಗೋಜಲಾದ ಬಲೆ, ತ್ರಿಕೋಣಾಕಾರದ ಬಲೆ, ವೃತ್ತಾಕಾರದ ಬಲೆ.... ಹೀಗೆ. ಕೆಲವು ಜೇಡಗಳು ಹಡಗಿನ ಹಾಯಿಪಟದ ಮಾದರಿಯಲ್ಲಿ ಬಲೆಗಳನ್ನು ನೇಯುತ್ತವೆ. ಇನ್ನು ಕೆಲವು ಗುಮ್ಮಟ, ಆಲಿಕೆ ಕೊಳವೆ, ಇಲ್ಲವೆ ಸಂಚಿಗಳಂಥ ಬಲೆಯನ್ನು ನೇಯುತ್ತವೆ. ಜೇಡರ ಹುಳದ ಬಲೆ ನೇಯುವ ಜಾಣ್ಮೆ ಎಲ್ಲರಿಗೂ ತಿಳಿದದ್ದೇ. ಮೊದಲು ಒಂದು ಬಿಂದುವನ್ನು ಆಧಾರವಾಗಿ ಇಟ್ಟುಕೊಂಡು ಎಳೆಯನ್ನು ಒಂದು ನೆಲೆಗೆ ಅಂಟಿಸಿ ಅಲ್ಲಿಂದ ನಿರ್ದಿಷ್ಟ ದೂರದಲ್ಲಿನ ನೆಲೆಗಳಿಗೆ ಎಳೆಗಳನ್ನು ವಿಸ್ತರಿಸುತ್ತ ಹೋಗುತ್ತವೆ.

'ತ್ರಿಕೋಣ ಜೇಡ' ತ್ರಿಕೋಣಾಕಾರದ ಬಲೆ ನೇಯ್ದು ತಾನು ಓಡಾಡಲು ಜಾಡು ಎಳೆಯನ್ನು



ಆಯ್ದುಕೊಂಡು ಎಲ್ಲಾ ಎಳೆಗಳನ್ನು ಜಗ್ಗಿ ಬೇಟೆಗೆ ತಯಾರಾಗಿ ಕುಳಿತಿರುತ್ತದೆ - ತುಂಟ ಹುಡುಗ ಕವಣೆ ಬೀಸಲು ಸಿದ್ಧವಾಗಿರುವಂತೆ. ಒಮ್ಮೆ ಕೀಟ ಬಲೆಗೆ ತಗುಲಿದರೂ ಸಾಕು, ಜೇಡ ಎಳೆಗಳನ್ನು ಸಡಿಲಗೊಳಿಸಿ ಹುಳು ಅತ್ತಿಂದಿತ್ತ ಪುಟನೆಗೆದು ಬಿಡಿಸಿಕೊಳ್ಳದಂತೆ ತಂತ್ರ ಹೂಡುತ್ತದೆ.

'ಪರ್ಸ್ ವೆಬ್ ಸ್ಪೈಡರ್' ಇದು ರೇಶ್ಮೆಯಂಥ ಎಳೆಗಳಿಂದ ಕೊಳವೆಯಾಕಾರದ ಬಲೆ ನೇಯ್ದು ದಟ್ಟವಾದ ಪರದೆ ಹಿಂದೆ ಅವಿತಿಟ್ಟುಕೊಳ್ಳುತ್ತದೆ. ಯಾವುದಾದರೂ ಹುಳು ಹೊರಪದರದ ಮೇಲೆ ತೆವಳಾಡಿದರೂ ಸಾಕು ಜೇಡ ಒಂದು ಹೊಡತ ಕೊಟ್ಟು ಅದನ್ನು ಬಲೆಗೆ ಬೀಳಿಸುತ್ತದೆ.

ಬಲೆಗಳಲ್ಲೆಲ್ಲಾ ಅತ್ಯಂತ ಕುತೂಹಲಕಾರಿ ಮತ್ತು ಸಂಕೀರ್ಣ ಬಲೆಯೆಂದರೆ ವೃತ್ತಾಕಾರದ ಬಲೆ (ಆರ್ಬ್‌ವೆಬ್). ಈ ಜೇಡಗಳು ಜಾಗ ಹುಡುಕಲು ಓಡಾಡುವುದೇ ಒಂದು ವಿಚಿತ್ರ. ಸದೃಢವಾದ ಎಳೆಯನ್ನು ರಚಿಸುತ್ತ, ಅದರ ಆಧಾರದಿಂದ ತೇಲಾಡುತ್ತ ಒಡಾಡುತ್ತಿರುತ್ತದೆ. ಮರದಿಂದ ಮರಕ್ಕೆ ಸಾಗುವಾಗ ಅಥವಾ ಸಣ್ಣ ಝರಿ, ಹಳ್ಳ ಮುಂತಾದವುಗಳ ಮೇಲೆ ಹಾದು ಹೋಗುವಂಥ ಸಂದರ್ಭದಲ್ಲಿ ಈ ಎಳೆಗಳನ್ನು ಹೊರಸೂಸುತ್ತದೆ. ಗಾಳಿಯ ಮೂಲಕ ಈ ಎಳೆ ಒಯ್ಯಲ್ಪಟ್ಟು ಯಾವುದಾದರೂ ಟೊಂಗೆಗೋ ಎಲೆಗೋ ಸಿಕ್ಕಿಕೊಳ್ಳುತ್ತದೆ. ಆಗ ಜೇಡ ಎಳೆಯನ್ನು ಬಿಗಿಯಾಗಿ ಎಳೆದು ಜಗ್ಗಿ ಬಂಧಿಸುತ್ತಲೇ ಅತ್ತಿಂದಿತ್ತ ಓಡಾಡಿ ಎಳೆಯನ್ನು ಬಲಪಡಿಸುತ್ತದೆ. ಇದನ್ನು ಇನ್ನೂ ದಪ್ಪಗೊಳಿಸಿದರೆ ವಿಮಾನಗಳಲ್ಲಿ ಉಪಯೋಗಿಸುವ ನೈಲಾನ್ ಮತ್ತು ಕಾರ್ಬನ್ ಎಳೆಗಳಿಗಿಂತ ಸದೃಢವಾಗಬಲ್ಲದು ಎಂದು ವಿಜ್ಞಾನಿಗಳು ಹೇಳುತ್ತಾರೆ. ಜೊತೆಗೆ ಜೇಡರ ಎಳೆಗಳಿಗೆ ಹಿಗ್ಗಿ ಕುಗ್ಗುವ ಇಲ್ಯಾಸ್ಟಿಕ್ ಗುಣ ಕೂಡ ಕೃತಕ ನೂಲುಗಳಿಗಿಂತ ಹೆಚ್ಚಿರುತ್ತದೆ. ಇದೇ ಜೇಡ ವೃತ್ತಾಕಾರವಾಗಿ ಬಲೆ ನೇಯುವಾಗ ಒಂದು ಬಿಂದುವಿನಿಂದ ವಿವಿಧ ಬಿಂದುಗಳಿಗೆ ಎಳೆಗಳನ್ನು ಸೇರಿಸುತ್ತದೆ. ಹೀಗೆ

ಜೇಡ: ಕೆಲವು ವಿಸ್ಮಯಗಳು

★ ಇದು ಭೂಮಿಯಲ್ಲಿ ಕಾಣಿಸಿಕೊಂಡದ್ದು 38 ಕೋಟಿ ವರ್ಷಗಳ ಹಿಂದೆ.

★ ಚೇಳಿನಂತೆಯೇ ವಿಷವುಳ್ಳ, ಚೇಳಿನ ಹತ್ತಿರ ಸಂಬಂಧಿಯಾದ ಜೇಡದಿಂದ ಮನುಷ್ಯರಿಗೇನೂ ಅಪಾಯವಿಲ್ಲ.

★ ಏಷ್ಯಾ ಖಂಡವೊಂದರಲ್ಲೇ ಜೇಡದ 30,000 ಪ್ರಬೇಧಗಳಿವೆ.

★ ಕೀಟದಂತೆ ಕಂಡರೂ ಕೀಟವಲ್ಲದ ಜೇಡಕ್ಕೆ ಎಂಟು ಕಾಲುಗಳು, ಎಂಟು ಕಣ್ಣುಗಳು ಇವೆ. ರೆಕ್ಕೆ, ಸ್ಪರ್ಶಾಂಗ ಇಲ್ಲದ ಜೇಡ ಮಾಂಸಾಹಾರಿ.

★ ಜೇಡರ ಬಲೆ 0.00001 ಸೆಂ.ಮೀ. ನಷ್ಟು ಸಪೂರವಾಗಿದ್ದರೂ ಅಷ್ಟೇ ಗಾತ್ರದ ಉಕ್ಕಿನೆಳೆಗಿಂತ ಬಲಿಷ್ಠ. ಈ ಎಳೆಗಳೇ ಅವುಗಳ ಪಾಲಿಗೆ ಕಣ್ಣು, ಕಿವಿ, ಬೆರಳು, ಧ್ವನಿ ಇತ್ಯಾದಿ.

★ ಜೇಡ ಲೋಕದ 'ಹುಲಿ' ಎಂದೇ ಕರೆಸಿಕೊಳ್ಳುವ 'ಜಗಿಯುವ ಜೇಡ' ಬೇಟೆಯಾಡುವ ರೀತಿಯಲ್ಲಿ ಸಂಪೂರ್ಣ ಹುಲಿಯನ್ನೇ ಹೋಲುತ್ತದೆ.

★ ಕೆಲವು ದೊಡ್ಡ ಗಾತ್ರದ ಜೇಡಗಳು ಮೀನು, ಇಲಿ, ಹಲ್ಲಿ, ಹಾವು ಮತ್ತು ಸಣ್ಣ ಹಕ್ಕಿಗಳನ್ನು ಹಿಡಿಯಬಲ್ಲವು.

★ ಬಲೆಯನ್ನೇ ಕಟ್ಟದ ಅನೇಕ ಜೇಡಗಳು ನಮ್ಮ ಸುತ್ತಮುತ್ತಲೇ ಇವೆ.

ಅಸ್ತಿಭಾರ ಹಾಕಿದಮೇಲೆ ಬಲೆಯ ಕೇಂದ್ರ, ನಿರ್ಧರಿಸಿ ರೇಖೆಗಳನ್ನು ರಚಿಸುತ್ತ ಬಲೆ ನೇಯುತ್ತದೆ. ಬಲೆ ಸಂಪೂರ್ಣಗೊಂಡು ಒಪ್ಪವಾದ ಮೇಲೆ ಜಾಡುಎಳೆ ಹಿಡಿದು ಬೇಟೆಗಾಗಿ ಕಾಯುತ್ತದೆ. ರಂಟೆ ಕುಂಟೆಗಳಿಂದ ಇಳಿಯುವಾಗ , ಇಲ್ಲವೆ ಅಪಾಯ ಬಂದಾಗ ಮೇಲೇರಲು ಜಾಡುಎಳೆಯೇ ಇದಕ್ಕೆ ಆಧಾರ ಮತ್ತು ಸಹಾಯಕಾರಿ. ಹಲವು ಜೇಡಗಳು ಪ್ರತಿದಿನ ಒಂದೊಂದು ಹೊಸ ಬಲೆ ನೇಯುತ್ತವಾದರೂ, ಇನ್ನು ಕೆಲವು ಒಂದೇ ಬಲೆಯನ್ನು ಅನೇಕ ದಿನಗಳವರೆಗೆ ಉಪಯೋಗಿಸಬಲ್ಲವು. ಸಾಧಾರಣವಾಗಿ 20-30 ನಿಮಿಷಗಳಲ್ಲಿ ಒಂದು ಬಲೆಯನ್ನು ರಚಿಸುವ ಸಾಮರ್ಥ್ಯ ಇವುಗಳಿಗಿದೆ.

ಜೇಡಗಳ ಬಲೆ ನೇಯುವ ಕ್ರಿಯೆಯನ್ನು ಪ್ರಯೋಗಾಲಯದಲ್ಲಿ ವಿಜ್ಞಾನಿಗಳು ಅಭ್ಯಸಿಸಿದ್ದಾರೆ. ಈ ಚಟುವಟಿಕೆ ಜೇಡಗಳಿಗೆ ಕಲಿಕೆಯಿಂದ ಬಂದ ಚಾತುರ್ಯವಲ್ಲ. ಇದು ಅದರ ಸಹಜ ಪ್ರವೃತ್ತಿ - ಹಕ್ಕಿಗಳು ಗೂಡು ಕಟ್ಟಿದಂತೆ. ಮರಿ ಜೇಡಗಳು ಮೊದಲು ಚಿಕ್ಕ ಚಿಕ್ಕ ಬಲೆ ನೇಯ್ದು ಕ್ರಮೇಣ ದೊಡ್ಡ ಬಲೆ ನೇಯುತ್ತವೆ. ಮೊಟ್ಟೆಯಿಂದ ಹೊರ ಬಂದ ಜೇಡವನ್ನು ಅದರ ತಾರುಣ್ಯದವರೆಗೂ ಒಂದು ಎಳೆಯನ್ನೂ ನೂಲದಂತೆ ಏಕಾಂತದಲ್ಲಿ ಬಂಧಿಸಿ ಹೊರಬಿಟ್ಟಾಗ ಅದರ ಪ್ರಥಮ ಪ್ರಯತ್ನದಲ್ಲೇ ಪರಿಪೂರ್ಣವಾದ ದೊಡ್ಡ ಗಾತ್ರದ ಬಲೆ ನೇಯುತ್ತದೆ ಎಂದು ರಷ್ಯನ್ ವಿಜ್ಞಾನಿಗಳು ಕಂಡುಕೊಂಡಿದ್ದಾರೆ. ಬಲೆ ನೇಯ್ಗೆಗೆ ಕಾರಣವಾದ ಜೀವಸತ್ವವನ್ನು ಜೇಡಗಳಿಗೆ ಹೊರಗಿನಿಂದ ಒದಗಿಸಿ ದೊಡ್ಡ ಗಾತ್ರದ ಬಲೆಯನ್ನು ನೇಯಿಸುವ ಪ್ರಯತ್ನವೂ ಸಾಗಿದೆ.

ಬಲೆ ನೇಯಲು ಜೇಡದ ಹಲವು ಅಂಗಾಂಗಗಳ ಸುಸಂಘಟಿತ ಕಾರ್ಯ ಅಗತ್ಯ. ಮುಂಗಾಲುಗಳನ್ನು ಕತ್ತರಿಸಿದಾಗ ಬಲೆಯಲ್ಲಿ ಆಗುವ ಬದಲಾವಣೆ, ಮಿದುಳಿಗೆ ಗಾಯವನ್ನುಂಟು ಮಾಡಿದಾಗ ಬಲೆಯ ಮೇಲಾಗುವ ಪರಿಣಾಮ ಎಲ್ಲವನ್ನೂ ವಿಜ್ಞಾನಿಗಳು ಅಭ್ಯಸಿಸಿದ್ದಾರೆ.

ನೀರಿನಲ್ಲೂ ಬಲೆ ಕಟ್ಟಿ ವಾಸಿಸುವ ಜೇಡುಗಳಿವೆ. ನೀರಿನಲ್ಲೇ ಬಲೆ ರಚಿಸಿ ಸಣ್ಣ ಪುಟ್ಟ ಮೀನುಮರಿಗಳನ್ನು ಇವು ಹಿಡಿದು ತಿನ್ನುತ್ತವೆ. ಇಂಥ ಜೇಡಗಳು ಹೆಚ್ಚಾಗಿ ನೀರಿನ ಪಾತಳಿಯ

ಮೇಲೆ ಇರುತ್ತವಾದರೂ ನೀರಿನೊಳಗೆ ಹೋಗಬೇಕಾದಾಗ ಒಂದು ದೊಡ್ಡ ಗಾಳಿ ಗುಳ್ಳೆಯನ್ನು ಮೈಗೆ ಅಂಟಿಸಿಕೊಂಡು ಮುಳುಗುತ್ತವೆ. ಹಾಗಾಗಿ ನೀರಿನೊಳಗೂ ಉಸಿರಾಡಬಲ್ಲವು.

ಜೇಡಗಳ ಉಪಯೋಗವನ್ನು ಕೀಟನಾಶಕಗಳಲ್ಲಿ ಕಂಡುಕೊಂಡಿರುವುದು ಅದರ ಹಲವು ಉಪಯುಕ್ತತೆಗಳಲ್ಲಿ ಒಂದು ಮಾತ್ರ. ಜೇಡರ ಬಲೆಯ ರೇಷ್ಮೆ ನಿಜವಾದ ರೇಷ್ಮೆಗಿಂತ ಹೆಚ್ಚು ದೃಢವಾದುದೂ, ಹಗುರಾದುದೂ, ನಾಜೂಕಾದುದೂ ಆಗಿದೆ. ಹಾಗಾಗಿ ಜೇಡರ ಬಲೆಯನ್ನು ರೇಷ್ಮೆಬಟ್ಟೆ ತಯಾರಿಕೆಯಲ್ಲಿ ಉಪಯೋಗಿಸಲು ಸಾಕಷ್ಟು ಪ್ರಯತ್ನ ನಡೆದಿದೆಯಾದರೂ ಯಶಸ್ವಿಯಾಗಿಲ್ಲ. ಜೇಡಗಳಿಂದ ಬಟ್ಟೆ ತಯಾರಿಕೆಗೆ ಸಾಕಾಗುವಷ್ಟು ರೇಷ್ಮೆಯನ್ನು ಪಡೆಯಲು ತಗಲುವ ಅಪಾರ ವೆಚ್ಚ ಇದಕ್ಕೆ ಕಾರಣ. ಕ್ಯಾಲಿಫೋರ್ನಿಯಾದ ಒಂದು ಸಂಸ್ಥೆ ಜೇಡರ ರೇಷ್ಮೆ ಎಳೆಗಳ ಮೇಲೆ ವಿಪುಲ ಪ್ರಯೋಗ ನಡೆಸುತ್ತಿದೆ. ಶಸ್ತ್ರಚಿಕಿತ್ಸೆಗಳಲ್ಲಿ, ಕೃತಕ ರಕ್ತನಾಳಗಳಲ್ಲಿ ಜೇಡದ ಎಳೆಗಳನ್ನು ಬಳಸುವ ಪ್ರಯೋಗ ನಡೆದಿದ್ದು ಯಶಸ್ಸಿನ ದಿನ ಬಹು ದೂರವಿಲ್ಲವೇನೋ! ಅಮೆರಿಕ ಸೇನೆಯ ಸಂಶೋಧನ ವಿಭಾಗದಲ್ಲಿ ಜೀವ ರಸಾಯನ ಶಾಸ್ತ್ರಜ್ಞರು ಜೇಡರ ಬಲೆಯ ರೇಷ್ಮೆ ಎಳೆಗಳಿಂದ ಗುಂಡು ನಿರೋಧಕ ಕವಚ ತಯಾರಿಸುವ ಬಗ್ಗೆಯೂ ಆಲೋಚಿಸುತ್ತಿದ್ದಾರೆ. ಕಾರಣ ಇಂಥ ಕವಚ ಈಗಿರುವ ಗಡಸಾದ, ಒರಟಾದ ಕವಚಗಳಿಗಿಂತ ಹಾಕಿಕೊಳ್ಳಲು ಹೆಚ್ಚು ಆರಾಮವಾಗಿರಬಹುದೆಂದು ಅವರ ನಂಬಿಕೆ.

ಒಂದು ಬಗೆಯ ಜೇಡವನ್ನು ಆಹಾರವಾಗಿ ಉಪಯೋಗಿಸುವುದರ ಬಗ್ಗೆಯೂ ಸುಳಿವುಗಳಿವೆ. ಆಸ್ಟ್ರೇಲಿಯಾ ಖಂಡದ ನ್ಯೂಗಿನಿಯಲ್ಲಿ ಸಿಗುವ ಒಂದು ಜಾತಿಯ ಜೇಡ ಸೈಕಲ್ ಚಕ್ರಕ್ಕೂ ದೊಡ್ಡದಾದ ವೃತ್ತಾಕಾರದ ಬಲೆ ನೇಯುತ್ತದೆ. ಸಾಮಾನ್ಯವಾಗಿ ಎಲ್ಲಾ ಜೇಡಗಳಲ್ಲೂ ಹೆಣ್ಣು ಜೇಡ ಗಂಡು ಜೇಡಕ್ಕಿಂತ ದೊಡ್ಡದಿರುತ್ತದೆ. ನ್ಯೂಗಿನಿಯ ಹೆಣ್ಣು ಜೇಡ ಸಹ ಗಂಡು ಜೇಡಕ್ಕಿಂತ ಸುಮಾರು ಪಟ್ಟು ದೊಡ್ಡದು. ಮನುಷ್ಯನ ಅಂಗೈ ಅಗಲಕ್ಕೂ ದೊಡ್ಡದಾದ ಈ ಹೆಣ್ಣು ಜೇಡಗಳನ್ನು ಪೊಳ್ಳಾದ ಬೊಂಬಿನೊಳಗೆ ಶೇಖರಿಸಿ, ಎರಡೂ ರಂಧ್ರಗಳನ್ನು ಮುಚ್ಚಿ ಸ್ವಲ್ಪ ಹೊತ್ತು ಕಪ್ಪಾಗುವವರೆಗೆ ಕಾಯಿಸಿ ಒಳಗಿರುವ ಹುರಿದ ಜೇಡವನ್ನು ಅಲ್ಲಿಯ ಜನ ತಿನ್ನುತ್ತಾರಂತೆ.

ಏನೇ ಆಗಲಿ, ನಮ್ಮ ದೇಶದಲ್ಲಿ ಜೇಡಗಳನ್ನು ತಟ್ಟೆಗಳಿಗೆ ಬಡಿಸುವ ಕಾಲ ಬರಲಿ ಬಿಡಲಿ ರೈತರಂತೂ ಜೇಡಗಳ ಸೈನ್ಯವನ್ನು ಕ್ರಿಮಿಕೀಟ ನಿಯಂತ್ರಣಕ್ಕೆ ಉಪಯೋಗಿಸಿಕೊಳ್ಳುವಂತಾದರೆ ಸಾಕು. ಇದರಿಂದ ಬೆಳೆ ಹೆಚ್ಚಾಗಿ ದಿನಸಿ ಸಾಮಾನಿನ ಬೆಲೆಯೂ ಕಡಿಮೆಯಾಗಬಹುದು. ಎಲ್ಲಕ್ಕೂ ಮಿಗಿಲಾಗಿ ಧಾನ್ಯಗಳಲ್ಲಿ ರಾಸಾಯನಿಕ ಕೀಟನಾಶಕಗಳ ಅವಶೇಷ ಕಡಿಮೆಯಾಗುವಂತಾದರೆ ಎಷ್ಟೊಂದು ಚೆನ್ನ? ●

(ವಿವಿಧ ಮೂಲಗಳಿಂದ)

ಪಾರ್ಶ್ವವಾಯುವಿಗೆ ಜೇಡನ ಜೊಲ್ಲು ಮದ್ದು

ಪಾರ್ಶ್ವವಾಯು ಬಡಿದಾಗ ಮೆದುಳಿನಲ್ಲಿ ಒಂದು ವಿಷಪೂರಿತವಾದ ರಾಸಾಯನಿಕ ವಸ್ತು ಸ್ರವಿಸುತ್ತದೆ. ಆ ವಿಷದ ರಾಸಾಯನಿಕದ ಪರಿಣಾಮವನ್ನು ಜೇಡನ ವಿಷಯುಕ್ತ ಜೊಲ್ಲು ತಡೆಯುತ್ತದೆಂದು 'ಉಟಾ' ನಗರದ ಖ್ಯಾತ ವೈದ್ಯ ಡಾ. ಹಂಟರ್ ಜಾನ್‌ಸನ್ ತಿಳಿಸಿದ್ದಾರೆ.

ಸಂಗ್ರಹ: *ಶಂಕರಗೌಡ ವಾಯ್. ಪಾಟೀಲ*

ಬಾಲ್ಯದ ಬದುಕಿನ ಮೆಲುಕು...

ಹಸಿರು ಆವಿಯಾಗಿಹೋದ ನಗರ ಪರಿಸರದಲ್ಲಿ ನೆನಪುಗಳಿಗೂ ಕೊರತೆ ಬರಬೇಕಿಲ್ಲ. ಕನಸುವ ಕಣ್ಣು, ನೆನಪಿನ ಕಣಜ ಬಳಕೆಗೊಂಡರೆ ಮನದೊಳಗೊಂದು ಬೃಂದಾವನ ನಿರ್ಮಿಸಿಕೊಳ್ಳಬಹುದು. ಪ್ರಕೃತಿಯ ಒಡನಾಟವನ್ನು ಪದಗಟ್ಟಿಸಿದ ಲಲಿತ ಪ್ರಬಂಧವಿದು.

● *ಶಂಸ ಐತಾಳ*

'ನೆನೆವುದೆನ್ನ ಮನಂ ಬನವಾಸಿ ದೇಶಮಂ' ಎಂಬಂತೆ, ಇಳಿವಯಸ್ಸಿನಲ್ಲಿರುವ ನನಗೆ ಸಹಜವಾಗಿಯೇ ನಾನು ಹುಟ್ಟಿದ ಊರು, ಬಾಲ್ಯವನ್ನು ಕಳೆದ ಪರಿಸರ ನೆನಪಾಗುತ್ತವೆ-ಆಗಾಗ. ಈಗ ನಾನಿರುವ ಈ ಸಿಮೆಂಟ್ ಕಾಡಿಗೂ, ಆಗ ನಾನಿದ್ದ ಆ ನಿಸರ್ಗಸುಂದರವಾದ ಪುಟ್ಟ ಹಳ್ಳಿಗೂ ಅದೆಷ್ಟು ಅಂತರ! ಈಗ ಆ ಹಳ್ಳಿಯೂ ಸಿಕ್ಕಾಪಟ್ಟೆ ಬದಲಾಗಿದೆ. ಯದ್ವಾತದ್ವಾ ಅಭಿವೃದ್ಧಿ ಹೊಂದಿದೆ. ಎರಡು ಮೂರು ವರ್ಷಗಳ ಹಿಂದೆ ಧರ್ಮಸ್ಥಳಕ್ಕೆ ಹೋದಾಗ, ಹೇಗೂ ಹತ್ತಿರ, ಹುಟ್ಟೂರನ್ನೊಮ್ಮೆ ನೋಡಿಕೊಂಡು ಬರೋಣ ಎಂಬ ವ್ಯಾಮೋಹದಿಂದ, ಮಗ ಸೊಸೆ ಮತ್ತು ಮೊಮ್ಮಕ್ಕಳ ಜೊತೆ ಊರಿಗೆ ಹೋಗಿಬಂದಿದ್ದೆನಲ್ಲ! ಬಸ್ಸಿನಿಂದ ಇಳಿಯುತ್ತಲೇ ಕಕ್ಕಾಬಿಕ್ಕಿಯಾಗಿತ್ತು. ಎಲ್ಲಿ ಆ ಮಿಷನ್ ಶಾಲೆ? ಎಲ್ಲಿ ಆ ಗುಡ್ಡೆ ಶಾಲೆ? ಎಲ್ಲಿ ಪಿಣಿಯನ ಆ ಕ್ಷೌರದಂಗಡಿ? ಎಲ್ಲಿ ಆ ಮಸ್ರೋೕ ಬಾವಿ? ಊರಿನ ಮಕ್ಕಳ ಪಾಲಿಗೆ ಸ್ವರ್ಗ ಲೋಕವೇ ಆಗಿದ್ದ ಆ ಬಯಲು ಮೈದಾನಗಳೆಲ್ಲ ಸಾಲು ಸಾಲು ಮನೆಗಳಿಂದ ತುಂಬಿಕೊಂಡಿದ್ದವು. ಬೋಗಿ ಕಿರಿಬೋಗಿ ದೂಪ ನಂದಿ ಹೊನ್ನೆ ಮತ್ತಿ ಹೆಬ್ಬಲಸು ತೇಗ-ಹೀಗೆ ನಾನಾ ಜಾತಿಯ ಮರಗಳಿಂದ ಇಡಿಕಿರಿದಿದ್ದ ಹಾದಿಗಳೆಲ್ಲ ನಿರ್ನಾಮವಾಗಿ ತಾಲೂಕು ಕೇಂದ್ರದ ಹೊರವಲಯಕ್ಕೆ ಸೇರಿಹೋಗಿದ್ದವು. ಆಸುಪಾಸಿನಲ್ಲಿ ಮರಗಳ ಹುಟ್ಟನ್ನೇ ಕಾಣುವಂತಿರಲಿಲ್ಲ. ಮಂಗಳೂರು ಹಂಚಿನ ಹಾಗೂ ತಾರಸಿ ಮನೆಗಳ ನಡುವೆ ನಾನು ಹುಟ್ಟಿದ ಆ ಸುಂದರ ಹಳ್ಳಿ ಕಳೆದೇ ಹೋಗಿತ್ತು.

ಆದರೆ ನೆನಪುಗಳಿಗೆ ಸಾವುಂಟೆ?

ಒಂದು ಕ್ಷಣ ಕಣ್ಣುಮುಚ್ಚಿ ಧ್ಯಾನಿಸಿದರೆ ಸಾಕು, ಸುಮಾರು ನಲವತ್ತು ವರ್ಷಗಳ ಹಿಂದಿನ ದೃಶ್ಯಾವಳಿಗಳು ಒಂದೊಂದಾಗಿ ಮನಶ್ಚಕ್ಷುವಿನೆದುರು ಹಾದು ಹೋಗತೊಡಗುತ್ತವೆ.

ನಾವು ಓದುತ್ತಿದ್ದ ಶಾಲೆಯ ಹತ್ತಿರವೆ ತಲೆಯೆತ್ತಿ ನಿಂತಿದ್ದ, ನೂರಾರು ಅಡಿ ವಿಸ್ತರಿಸಿದ್ದ ಆ ಗೋಳಿಮರ. ಏನದರ ರಾಕ್ಷಸ ಆಕಾರ! ಪರೀಕ್ಷೆಯ ದಿನಗಳಲ್ಲಿ ನಾನೂ ನನ್ನ ಗೆಳೆಯರೂ ಅದನ್ನೇರಿ ಅದರ ಕೊಂಬೆರೆಂಬೆಗಳಲ್ಲಿ ಕುಳಿತು 'ಎಂಟೊಂದ್ಲ ಎಂಟು, ಎಂಟೆರಡ್ಲ ಹದಿನಾರು,' 'ಭಾರತ ಒಂದು ಪರ್ಯಾಯ ದ್ವೀಪ,' 'ನಮ್ಮದು ಕೃಷಿ ಪ್ರಧಾನವಾದ ರಾಷ್ಟ್ರ' ಇತ್ಯಾದಿ ಉರುಹೊಡೆಯುತ್ತಿದ್ದೆವು. ಕೆಲಸಕ್ಕೆ ಬಾರದ ಮಾತುಗಳನ್ನು ಆಡುತ್ತಿದ್ದೆವು. ಬೇಜಾರು ಎನಿಸಿದಾಗ ಅದರ ದಪ್ಪನೆಯ, ತೇರಿಗೆ ಕಟ್ಟಿದ ಹಗ್ಗಗಳಂತಹ, ಬಿಳಲುಗಳನ್ನು ಹಿಡಿದು ತೂಗಾಡುತ್ತಿದ್ದೆವು. ಈಗ ಅಂಥ ಮರಗಳನ್ನಾದರೂ ನೋಡಲು ಎಲ್ಲಿ ಸಾಧ್ಯ? ಅದರ ಕೆಳಗಿನ ತಂಪು ನೆರಳು, ಟಪ್‌ಟಪ್ ಎಂಬ ಸದ್ದು ಮಾಡುತ್ತ ಕೆಳಗೆ ಬೀಳುವ ಅದರ ಪರಿಪಕ್ವ ಫಲಗಳು, ಆ ಮರದ ಆಶ್ರಯ ಪಡೆದಿರುವ ಗಿಣಿ, ಚಣಿಲ, ಬಾವಲಿ ಮೊದಲಾದ ಅಸಂಖ್ಯಾತ

ಜೀವಜಾತಿಗಳು, ಅದರ ಕಾಂಡದ ಮೇಲೆ ಸದಾ ಹರಿದಾಡುತ್ತಿರುವ, ಹಾಗೂ ಕುಶಲಕಲಾ ನೈಪುಣ್ಯದಿಂದ ಆ ಮರದ ಎಲೆಗಳನ್ನೇ ಜೋಡಿಸಿ, ಚೆಂದದ ಗೂಡು ಕಟ್ಟಿಕೊಳ್ಳುವ 'ಚೌಳಿ' ಎಂಬ ವಿಶಿಷ್ಟ ಜಾತಿಯ ಕೆಂಪು ಇರುವೆಗಳು-- ಅಬ್ಬ! ಅವೆಲ್ಲಾದರೂ ಕಚ್ಚಿದವೋ, ಮೈಯಲ್ಲೆಲ್ಲ ಕೆಂಪು ದದ್ದುಗಳು ಮೂಡುತ್ತಿದ್ದವು. ಬಟ್ಟೆ ಎಲ್ಲ ಬಿಚ್ಚಿಹಾಕಿ, ತುರಿಸಿಕೊಳ್ಳುತ್ತ, ತಕತಕ ಕುಣಿಯಬೇಕು ಅನಿಸುತ್ತಿತ್ತು. ಅಷ್ಟು ಉರಿ, ಅಷ್ಟು ನೋವು. ನಮ್ಮ ಪಾಲಿಗಂತೂ ಚೇಳಿಗಿಂತಲೂ ಭಯಾನಕವಾಗಿತ್ತು ಚೌಳಿ.

ಮನೆಯ ಹಿತ್ತಲಿನಾಚೆಗಿರುವ ದೂಪದ ಮರ. ಅದರ ಕೆಳಗಿರುವ ಜೊಬ್ಬಯ್ಯನ ಗುಡಿ. ಅಲ್ಲಿ ಬಿಡಾರ ಹೂಡಿದ ಬಾವಲಿಗಳು. ದಿನಕ್ಕೊಂದು ಸಲ ಪೂಜೆಗೆ ಹೋದಾಗ ಬಾಗಿಲು ತೆರೆದೊಡನೆ ಪಟಪಟ ರೆಕ್ಕೆ ಹಾರಿಸುತ್ತ ವಿಚಿತ್ರ ಸದ್ದಿನೊಂದಿಗೆ ಅವು ಗಪ್ಪೆಂದು ಹೊರಗೆ ಹಾರಿಹೋಗುತ್ತಿದ್ದವು; ಕೆಲವು ಸಲ ಮುಖಕ್ಕೆ ಡಿಕ್ಕಿ ಹೊಡೆಯುತ್ತಿದ್ದವು. ವಾರಕ್ಕೊಂದು ಅಥವಾ ಎರಡು ಸಲ ಗುಡಿಯೊಳಗೆ ಗುಡಿಸದೆ ಇದ್ದರೆ, ಸ್ವಚ್ಛ ಮಾಡದೆ ಇದ್ದರೆ, ಮತ್ತೆ ಯಾರೂ ಒಳಗೆ ಕಾಲಿಡಲಾಗದಂತಹ ರೀತಿಯಲ್ಲಿ ಅವುಗಳ ಹಿಷ್ಟೆ ತುಂಬಿಕೊಳ್ಳುತ್ತಿತ್ತು.

ನಮ್ಮ ಮನೆಯ ಹಿಂದಿದ್ದ ಮಾವಿನ ಮರ. ಫಲಗಳಾಗುವ ಕಾಲದಲ್ಲಿ ಹಿಂಡು ಹಿಂಡಾಗಿ ಬಂದು ಹಾವಳಿ ಮಾಡುತ್ತಿದ್ದ ಮಂಗಗಳು. ಆ ಮರದಿಂದ ನಮ್ಮ ಮನೆಯ ಮಾಡಿನ ಮೇಲೆ ದುಡುಮ್ಮನೆ ಹಾರುವುದು ಅವುಗಳ ಮೆಚ್ಚಿನ ಆಟ. ಆಗ ಮನೆಗೆ ಹೊದಿಸಿದ ಹುಲ್ಲು ಹಾರಿ, ಮನೆಯೊಳಗೂ ಸೂರ್ಯಕಿರಣಗಳ ಆಗಮನ. ವರ್ಷದಲ್ಲಿ ಹಲವು ಸಲ ಮನೆ ಹೊದಿಸಬೇಕು. ಇಲ್ಲವಾದರೆ ಮಳೆಗಾಲದಲ್ಲಿ ಛತ್ರಿ ಹಿಡಿದುಕೊಂಡೇ ಓಡಾಡಬೇಕಾದ ವಿಷಮ ಪರಿಸ್ಥಿತಿ. ನೀರು ಸೋರುವಲ್ಲೆಲ್ಲ ಬೋಗುಣಿ ಹರಿವಾಣ ಹಾಗೂ ಅಗಲ ಬಾಯಿಯ ಪಾತ್ರೆ, ಪಡಗಗಳನ್ನಿಡದಿದ್ದರೆ, ಮನೆಯಲ್ಲಿ ಗಂಗೆ ಯಮುನೆ ಗೋದಾವರಿ. ಮಾವಿನ ಮರ ಪಕ್ಕದ ಮನೆಗೆ ಸೇರಿದ್ದು. ಅವರ-ನಮ್ಮ ಸಂಬಂಧ ಅಷ್ಟಕಷ್ಟೆ! ಪರಸ್ಪರ ಮಾತೂ ಆಡುವ ಪರಿಪಾಟಿಯಿಲ್ಲ- ಆಣೆ ಭಾಷೆ. ಮಂಗಗಳು ಮರದಿಂದ ಮಾಡಿನ ಮೇಲೆ ಹಾರುವಾಗ ಅವರ ಮನೆಯವರಿಗೆ ಆಟ; ನಮಗೆ ಪ್ರಾಣಸಂಕಟ. ಮಂಗಗಳ ಹಾವಳಿ ಇಷ್ಟೆಯೇ? ಊಹು. ನಮ್ಮ ಮನೆಯ ಎರಡು ತೆಂಗಿನ ಮರಗಳೂ ನಮ್ಮ ಪಾಲಿಗೆ ನಿಷ್ಪ್ರಯೋಜಕ. ತೆಂಗಿನ ಕಾಯಿಗಳೇನು? ಸೀಯಾಳಗಳೂ ನಮಗೆ ದಕ್ಕುವುದಿಲ್ಲ. ಎಲ್ಲ ಕೋತಿಗಳ ಕೈಗೆ. ಹೋಗಲಿ ಎಂದರೆ ಅವುಗಳಾದರೂ ಎಳನೀರು ಕುಡಿಯುತ್ತವೆಯೆ? ಎಳನೀರ ತಲೆಯನ್ನು ತೂತುಮಾಡುತ್ತವೇನೋ ನಿಜ - ಆಸೆಯಿಂದ. ಆದರೆ ಅದರ ಸಿಹಿ ನೀರೆಲ್ಲ ಧಾರೆಧಾರೆಯಾಗಿ ನೆಲಕ್ಕೆ.

ಮನೆಯಿಂದ ಶಾಲೆಗೆ ಹೋಗುವ ದಾರಿಯ ಉದ್ದಕ್ಕೂ ಆಚೀಚೆ ಇರುವ ಗೋವೆ ಮರಗಳು. ಗೋವೆ ಹಣ್ಣಾಗುವ ಕಾಲದಲ್ಲಿ ನಾವು ಗೋವೆ ಬೀಜಗಳನ್ನು ಸಂಗ್ರಹಿಸಲು ಎಷ್ಟು ಒದ್ದಾಡುತ್ತಿದ್ದೆವು! ಶಾಲೆಗೆ ಹೋಗುವಾಗ, ಶಾಲೆಯಿಂದ ಬರುವಾಗ, ಹಣ್ಣಿಗೆ ಗುರಿಯಿಟ್ಟು ಕಲ್ಲು ಹೊಡೆದು, ಉದುರಿಸಿ, ಬೀಜಗಳನ್ನು ಯಾವುದಾದರೂ ಗಿಡಗಳ ಬುಡದಲ್ಲಿ ಅಡಗಿಸಿಡುತ್ತಿದ್ದೆವು. ಬೀಜಗಳು ಸಾಕಷ್ಟು ಶೇಖರವಾದ ಅನಂತರ ಅಂಗಡಿ ಸೇರೆಗಾರನಿಗೆ ಮಾರುತ್ತಿದ್ದೆವು. ಅದಕ್ಕೆ ಅವನು ಕೊಟ್ಟದ್ದೇ ದರ. ನಾವೂ ಚೌಕಾಶಿ ಮಾಡುವಂತಿಲ್ಲ. ಎಷ್ಟಾದರೂ ಕಳ್ಳವ್ಯಾಪಾರ! ಆದರೆ ಆಗಲೂ ಒಳ್ಳೆಯ ದರವೇ ಇತ್ತು ಗೋಡಂಬಿಗೆ.

ಈ ಸಂದರ್ಭದಲ್ಲಿ ನಾವು ಮಾಡುತ್ತಿದ್ದ ಹಗಲು ದರೋಡೆಯ ಬಗೆಗೂ ಒಂದು ಮಾತು. ಮಟಮಟ ಮಧ್ಯಾಹ್ನದ ಸಮಯದಲ್ಲಿ, ಸಾಮಾನ್ಯವಾಗಿ ಉಂಡು ಮಲಗಿ ನಿದ್ರಿಸುವ ಹೊತ್ತು., ನಾವು ಅವರಿವರ ಮನೆಗಳ ಹಿತ್ತಲಿಗೆ, ಹಾಡಿಗೆ ನುಗ್ಗಿ ಗೋವೆಬೀಜಗಳನ್ನು ಕದಿಯುತ್ತಿದ್ದೆವು- ಇನ್ನೂ ಬಲಿಯದ ಎಳೆಯ ಬೀಜಗಳನ್ನು ಕೂಡ.

ಹಬ್ಬಹರಿದಿನಗಳಲ್ಲಿ ಎಳೆಯ ಹಸಿ-ಗೋವೆಬೀಜ ಹಾಕಿ ಮಾಡುವ ಹೆಸರು ಪಾಯಸ ನೆನೆಸಿಕೊಂಡರೆ ಈಗಲೂ ಬಾಯಿಯಲ್ಲಿ ನೀರೂರುತ್ತದೆ. ಅದೆಷ್ಟು ರುಚಿ! ಚಪ್ಪರಿಸಿಯೇ ಅನುಭವಿಸಬೇಕು ಅದರ ಅವರ್ಣನೀಯ ಸವಿಯನ್ನು ! ಇವಿಷ್ಟು ವೃಕ್ಷಸಂಪತ್ತಿನ ವಿಚಾರವಾದರೆ, ಪಕ್ಷಿ-ಪ್ರಾಣಿಗಳ ಜಗತ್ತಿನ ವಿಷಯ ಇನ್ನೂ ಸ್ವಾರಸ್ಯಕರವಾದದ್ದು. ನಾನು ಬಾಲ್ಯದ ದಿನಗಳನ್ನು ಕಳೆದ ಅಂದಿಗೇ ಸುಮಾರು ನೂರು ವರ್ಷಗಳಷ್ಟು ಹಳೆಯದಾಗಿದ್ದ , ಆ ಮನೆಯೇ ಒಂದು ಮೃಗಾಲಯದಂತೆ ಇದ್ದಿತ್ತು. ಮನೆಯೊಳಗೆ, ಹೊರಗೆ ಸುತ್ತಮುತ್ತ, ಬಗೆಬಗೆಯ ಜೀವ ಜಾತಿಗಳನ್ನು ಕಾಣಬಹುದಾಗಿತ್ತು.

ಮೊತ್ತಮೊದಲು ನೆನಪಿಗೆ ಬರುವುದೇ ಕಡಸು ಬಂಗಾರಿ; ಅಪ್ಪಯ್ಯನಿಗೆ ದಾನವಾಗಿ ಬಂದ ದನ. ಅದು ನಮ್ಮ ಮನೆಯಲ್ಲಿ ಎಂಟು ಹತ್ತು ಕರುಗಳನ್ನಾರೂ ಹಾಕಿರಬಹುದು. ಆ ಕರುಗಳಲ್ಲಿ ನಾನೆಂದೂ ಮರೆಯಲಾರದ್ದೆಂದರೆ ಗೋಪಿ. ಇದಕ್ಕೆ ಕಾರಣವೂ ಇಲ್ಲದೆ ಇಲ್ಲ. ಬಹಳ ಚುರುಕಾಗಿದ್ದ ಆ ಕರು ಹುಟ್ಟಿದ ದಿನ ಸಂಜೆಯೇ ಬಾಲಹಾರಿಸುತ್ತ ಕುಣಿಯತೊಡಗಿತ್ತು. ಮುಂದಿನ ದಿನಗಳಲ್ಲಿ ಅದನ್ನು ಹಿಡಿಯುವುದೇ ಒಂದು ಸಾಹಸಕಾರ್ಯವಾಗಿತ್ತು. ಒಂದು ದಿನ ಹಾಲು ಕರೆದ ಅಮ್ಮ ಹಾಲು ಕುಡಿದ ನಂತರ ಕರುವನ್ನು ಕಟ್ಟೋಣವೆಂದುಕೊಂಡು ಅಡುಗೆ ಮನೆಗೆ ಹೋಗಿದ್ದಳು. ಐದು ನಿಮಿಷದಲ್ಲಿ ಅವಳಿಗೆ ಕರುವೇ ಮರೆತು ಹೋಗಿತ್ತು. ಹಾಲು ಕುಡಿದು ತೃಪ್ತವಾಗಿ ತಾಯಿಯ ಕೆಚ್ಚಲಿನಿಂದ ಬಾಯಿ ತೆಗೆದ ಕರು, ಗೋಪಿ, ಖುಷಿಯಿಂದ ಹಿತ್ತಲಿಗೆ ಓಡಿ ಕಿವಿಗೆ ಗಾಳಿ ಹೊಕ್ಕ ಹಾಗೆ ಸ್ವಯವಿಲ್ಲದಂತೆ ಕುಣಿಯತೊಡಗಿತ್ತು. ಅಮ್ಮ ಅದನ್ನುಹಿಡಿದು ಕಟ್ಟಲೆಂದು ಅದರ ಹಿಂದೆ ತಾನೂ ಕುಣಿಯತೊಡಗಿದ್ದಳು. ಆದರೆ ಗೋಪಿ ಯಾವ ಮಾಯಕದಲ್ಲಿಯೋ ಅವಳ ಕೈಗೆ ಸಿಗದೆ ಕುಣಿಯುತ್ತಾ, ಕುಣಿಯುತ್ತಾ ಹಿತ್ತಲಿನಿಂದ ಅಂಗಳಕ್ಕೆ ಬಂದು, ಅಂಗಳದ ಮೂಲೆಯಲ್ಲಿದ್ದ



ಬಾವಿಗೆ ದುಡುಮ್ಮೆಂದು ಬಿದ್ದೇಬಿಟ್ಟಿತ್ತು. ಅದೃಷ್ಟವಶಾತ್ ಆ ವೇಳೆಗೆ ಅಪ್ಪಯ್ಯ ಬಂದು ಮುಳುಗುಹಾಕಿ ಮೇಲೆ ಬಂದಿದ್ದ ಗೋಪಿಯನ್ನು ಎತ್ತಿ ಹೆಗಲಮೇಲೆ ಹಾಕಿಕೊಂಡು ಮೇಲೆ ಬಂದರು ಎನ್ನಿ. ಅಂತೂ ಗೋಹತ್ಯಾ ಪಾಪ ತಪ್ಪಿದಂತಾಯಿತು-ನಮ್ಮ ವಂಶಕ್ಕೆ.

ನಮ್ಮ ಹಳ್ಳಿಯ ಸುತ್ತಲ ಹಾಡಿಗಳಲ್ಲಿ ಹುಲಿಗಳೂ, ಕಿರಬುಗಳೂ, ಕಾಡು ಕೋಣಗಳೂ ಸಾಮಾನ್ಯವಾಗಿ ಇರುತ್ತಿದ್ದವು. (ಈಗ ನಾವು ಅವುಗಳನ್ನು ಕಾಣಲು ಮೃಗಾಲಯಕ್ಕೇ ಟಿಕೆಟ್ ಪಡೆದು ಹೋಗಬೇಕು. ನಮ್ಮ ಮುಂದಿನ ಪೀಳಿಗೆಯ ಮಕ್ಕಳು ಅವುಗಳ ಚಿತ್ರಗಳನ್ನು ಮಾತ್ರ ನೋಡಲು ಸಾಧ್ಯವಾದೀತು, ಅಷ್ಟೆ!) ಹುಲಿಗಳ ಉಪದ್ರವವಂತೂ ಹೇಳತೀರದಷ್ಟು. ಬೆಳಿಗ್ಗೆ ಮೇಯಲೆಂದು ಹಟ್ಟಿಯಿಂದ ಹೊರಗೆ ಬಿಟ್ಟ ಜಾನುವಾರುಗಳು ರಾತ್ರಿ ಮನೆಗೆ ಬಂದ ಮೇಲೆಯೇ ಮನೆಯವರಿಗೆ ಸಮಾಧಾನ. ನಮ್ಮ ಮನೆಯ ಹಟ್ಟಿಯ ಮುಂಭಾಗದ ಅರ್ಧ ಗೋಡೆಯ ಮೇಲೆ ನಾವು ಬೆಲ್ಲದ ಡಬ್ಬಗಳನ್ನು ಸಾಲುಸಾಲಾಗಿ ಹಾಗೂ ಒಂದು ಸಾಲಿನ ಮೇಲೆ ಇನ್ನೊಂದು ಸಾಲಿನಂತೆ ಜೋಡಿಸಿಟ್ಟ ನೆನಪು ನನಗಿನ್ನೂ ಇದೆ. ರಾತ್ರಿ ಎಲ್ಲಾದರೂ ಹುಲಿ-




ಗಿಲಿ ಅಕಸ್ಮಾತ್ ದಾಳಿ ಗೀಳಿ ಮಾಡಿದರೆ ಆಗ ಬೆಲ್ಲದ ಡಬ್ಬಗಳು ದಡದಡ ಸದ್ದುಮಾಡುತ್ತ ಕೆಳಗೆ ಉರುಳಿಬಿದ್ದು ಆ ಭಯಾನಕ ಸದ್ದಿಗೆ ಹೆದರಿ ಹುಲಿ ಪರಾರಿಯಾಗಲೆಂದು, ಅಥವಾ ಆ ಸದ್ದಿನಿಂದ ಮನೆಯವರಿಗೇ ಎಚ್ಚರವಾಗಿ ಅವರು ಎದ್ದು ಹುಲಿಯನ್ನು ಓಡಿಸಲೆಂದು ಈ ಉಪಾಯ!

ನಮ್ಮ ಮನೆಯೊಳಹೊಕ್ಕರಂತೂ ಅನೇಕ ಜೀವಜಾತಿಗಳ ವಿಶಿಷ್ಟ ಪ್ರಪಂಚ. ಮಾರ್ಜಾಲ ಹಾಗೂ ಗುಬ್ಬಿಗಳ ಸಂತಾನವಂತೂ ಯಾವಾಗಲೂ ನಮ್ಮಲ್ಲಿ ಇದ್ದದ್ದೆ. ಹಳೆಯ ದೊಡ್ಡ ಮನೆಯಾದ್ದರಿಂದ, ಆ ಮನೆಯ ಗಾತ್ರಕ್ಕೆ ಅನುಗುಣವಾದ ಸಂಖ್ಯೆಯ ಸದಸ್ಯರು ಮನೆಯಲ್ಲಿ ಇಲ್ಲದುದರಿಂದ, ಸಹಜವಾಗಿಯೇ ಎಷ್ಟೋ ಕೊಠಡಿಗಳು ಜನವಿಹೀನವಾಗಿರುತ್ತಿದ್ದವು. ಅಂತಹ ಕೊಠಡಿಗಳನ್ನು ಅಪರೂಪಕ್ಕೊಮ್ಮೊಮ್ಮೆ ಪ್ರವೇಶಿಸಿದಾಗ, ಈ ವಿಶಿಷ್ಟ ಜೀವ ಜಗತ್ತು ಪ್ರತ್ಯಕ್ಷವಾಗುತ್ತಿತ್ತು. ಕೊಠಡಿಯ ಮೂಲೆಮೂಲೆಗಳಲ್ಲಿ ಜೇಡರ ಬಲೆಗಳು- 'ಬಾ ನೊಣವೆ,ಬಾ ನೊಣವೆ, ಬಾ ನನ್ನ ಬಳಿಗೆ'. ಅಲ್ಲಲ್ಲಿ ಇರುವ ಈರುಳ್ಳಿ ಬೂದಿಗುಂಬಳ ಸೌತೆಕಾಯಿ ಇತ್ಯಾದಿ ತರಕಾರಿಗಳ ರಾಶಿಗಳ ಸುತ್ತ ಮುತ್ತ, ಪಡಸಾಲೆಯಲ್ಲಿನ ಪತ್ತಾಸಿನ ಕೆಳಗೆ ಸದಾ ಓಡಾಡುವ ಸಣ್ಣಿಲಿ ದೊಡ್ಡಿಲಿ ಕಪ್ಪಿಲಿ ಬಿಳಿಯಿಲಿಗಳು, ಭಾರೀ ಹೆಗ್ಗಣಗಳು. ಅಟ್ಟದ ಮೇಲೆ ಮನೆ ಮಾಡಿದ ಪಾರಿವಾಳಗಳು. ಸಿಹಿಪದಾರ್ಥಗಳನ್ನು ಹುಡುಕುತ್ತ ಸಾಲುಸಾಲಾಗಿ 'ಪೆರೇಡ್' ಮಾಡುವ ಇರುವೆಗಳು, ಕಟ್ಟೆಗಳೆಂಬ ಹೆಸರಿನ ಕೊಂಚ ದೊಡ್ಡ ಇರುವೆಗಳು. ಅನಿರೀಕ್ಷಿತವಾಗಿ ಒಂದೆಡೆ ಗುಂಪು ಸೇರಿ, ಅರ್ಧಮುಕ್ಕಾಲು ಗಂಟೆ ಸಭೆ ನಡೆಸಿ, ಮತ್ತೆ ಚದುರಿಹೋಗುವ, ಯಾರಿಗೂ ಏನೂ ಅಪಾಯವುಂಟುಮಾಡದ 'ದೇವರ' ಇರುವೆಗಳು; (ಇವುಗಳಿಗೆ ಈ ಹೆಸರೇಕೋ ನನಗೆ ಇನ್ನೂ ತಿಳಿದಿಲ್ಲ.) ದೇವರ ಪೀಠದಡಿ, ಬಳಸದೆ ಇರುವ ಪಾತ್ರೆಪರಡಿಗಳ ಅಡಿ, ಕತ್ತಲೆಯ ಮೂಲೆಗಳಲ್ಲಿ ಹಗಲಿಡೀ ಅಡಗಿಕುಳಿತಿದ್ದು , ರಾತ್ರಿಯಾಗುತ್ತಲೇ ಸಂಚಾರ ಮಾಡಹೊರಡುವ ಜಿರಲೆಗಳು, ಜಿರಲೆಮರಿಗಳು, ರಾತ್ರಿ ಎದ್ದು ದೀಪ ಹಚ್ಚುವ ಸಂದರ್ಭ ಬಂದಾಗ, ನೆಲದ ತುಂಬ ನಿರ್ಭಯವಾಗಿ ಓಡಾಡುತ್ತಿರುವ ಜಿರಲೆ ಸಂತತಿಯನ್ನು ಕಂಡಾಗ, ಇವು ಹಗಲು ಹೊತ್ತು ಹೇಗೆ ನಮ್ಮ ಕಣ್ಣಿಗೆ ಬೀಳದೆ ಇರುತ್ತವೆ? ಎಲ್ಲಿ ಇರುತ್ತವೆ ಎಂದು ನಮಗೆ ತುಂಬ ಅಚ್ಚರಿಯಾಗುತ್ತಿತ್ತು.

ಗೋಡೆಗಳ ಮೇಲೆ ತಲೆಕೆಳಗಾಗಿ ಸಂಚಾರ ಮಾಡುವ ಹಲ್ಲಿಗಳು, ಅವುಗಳ ಬೇಟೆಯಾಗಿರುವ ಬಲಿಪಶು ನೊಣಗಳು. ಕಿವಿಯ ಹತ್ತಿರವೇ ಹಾರಿ ಬಂದು ಗೊಯ್ಯೆಂದು ಸಂಗೀತ ಹಾಡುವ ಸೊಳ್ಳೆಗಳು, ಕಣ್ಣೆದುರು ಹಾರಾಡುತ್ತ ಕಿರುಕುಳ ಕೊಡುವ ಬಹಳ ಸೂಕ್ಷ್ಮ ಆಕಾರದ ನುಸಿಗಳು.....

ನಮ್ಮ ಮನೆಯಲ್ಲಿಯೇ ನಿವಾಸಹೂಡಿ ತಮ್ಮ ಹೀಳಗೆಗಳನ್ನು ತಯಾರು ಮಾಡಿದ ಜೀವ ಜಂತುಗಳಲ್ಲಿ ಹೆಸರಿಸಬಹುದಾದವೇ ಬೆಕ್ಕು ಮತ್ತು ಗುಬ್ಬಿಗಳು. ನನ್ನ ಅಪ್ಪಯ್ಯನಿಗೆ ಬೆಕ್ಕುಗಳೆಂದರೆ ಅದೇಕೋ ಪರಮವೈರ; ಆದರೆ ಬೆಕ್ಕುಗಳಿಗೆ ಅವರನ್ನು ಸ್ನೇಹಿತನನ್ನಾಗಿ ಮಾಡಿಕೊಳ್ಳುವ

ಕಾತರ- ಬೆಳಿಗ್ಗೆ ಸ್ನಾನಮಾಡಿ ಮಡಿ ಪಂಚೆಯುಟ್ಟ ಅಪ್ಪಯ್ಯ ಚಟ್ಟೆಮುಟ್ಟೆಹಾಕಿ ಪೂಜೆಗೆ ಕುಳಿತುಕೊಂಡು ಆಚಮನ ಶುರುಮಾಡುವಷ್ಟರಲ್ಲಿಯೇ, ಅವರ ತೊಡೆಯನ್ನೇರಿ ಗೊರಕೆ ಹೊಡೆಯುತ್ತ ಕುಳಿತುಕೊಳ್ಳುತ್ತಿತ್ತು ಒಂದು ಬೆಕ್ಕು. ಪರಶುರಾಮಾವತಾರ ತಾಳಿದ ಅಪ್ಪಯ್ಯ, ತಮ್ಮ ಹೆಬ್ಬೆರಳು ಮತ್ತು ತರ್ಜನಿ ಬೆರಳುಗಳಿಂದ ಅದರ ಕುತ್ತಿಗೆಯ ಚರ್ಮವನ್ನೆತ್ತಿಹಿಡಿದು, ಅದನ್ನು ಪಾಗಾರದಾಚೆಗೆ ಎಸೆದುಬಿಡುತ್ತಿದ್ದರು. ಅದು ನೆಲಕ್ಕೆ ಬಿದ್ದ ಸದ್ದೂ ಕೇಳಿಸುತ್ತಿತ್ತು ನಮಗೆ. ಅಪ್ಪಯ್ಯ ಕೈಕಾಲು ತೊಳೆದುಕೊಂಡು 'ಅಪವಿತ್ರಃ ಪವಿತ್ರೋವಾ' ಎಂದು ಶ್ಲೋಕ ಪಠಿಸುತ್ತ ಮತ್ತೆ ಪೂಜೆಗೆ ಕುಳಿತುಕೊಳ್ಳುತ್ತಿದ್ದರು. ಒಂದೆರಡೇ ನಿಮಿಷಗಳ ಅಲ್ಪಾವಧಿಯಲ್ಲಿ ಮತ್ತೆ ಅದೇ ಬೆಕ್ಕು; ಅವರ ತೊಡೆಯ ಮೇಲೆಯೇ. ಪುಸ್ಸಿಯೆಂಬ ಹೆಸರಿರಬೇಕು ಆ ಬೆಕ್ಕಿನದು. ಎಲ್ಲಿಂದಲೋ ಇದ್ದಕ್ಕಿದ್ದಂತೆ ಒಂದು ದಿನ ನಮ್ಮ ಮನೆಗೆ ಬಂದು ಸೇರಿದ ಆ ಬೆಕ್ಕು ಬಂದ ಐದಾರು ತಿಂಗಳುಗಳಲ್ಲಿಯೇ ಅವಳಿ ಹೆಣ್ಣುಮರಿಗಳನ್ನು ಹಾಕಿತ್ತು. ಅದರ ಚೊಚ್ಚಲ ಬಾಣಂತಿತನವನ್ನು ಅಮ್ಮ ಚೆನ್ನಾಗಿಯೇ ಮಾಡಿದ್ದಳು. ಚೊಚ್ಚಲ ಮರಿಗಳ ಮೇಲೆ ಎಷ್ಟು ವ್ಯಾಮೋಹವಿದ್ದಿತ್ತು ಪುಸ್ಸಿಗೆ! ಆದು ಮರಿಗಳನ್ನು ಬಿಟ್ಟು ಕದಲುತ್ತಿರಲಿಲ್ಲ. ದಿನದ ಇಪ್ಪತ್ತನಾಲ್ಕು ಗಂಟೆ ಕಾಲವೂ ಮರಿಗಳ ಜೊತೆಗೇ ಅವುಗಳನ್ನು ನೆಕ್ಕುತ್ತ ಸುಖಿಸುತ್ತಿತ್ತು. ಅದಕ್ಕೆ ಹಾಲು ಅನ್ನಗಳನ್ನು ಅಮ್ಮ ಅದು ಇರುವಲ್ಲಿಗೇ ತೆಗೆದುಕೊಂಡು ಹೋಗಿ ಇಡಬೇಕು. ಆದರೆ ಎಲ್ಲ ಎರಡು ಮೂರು ವಾರಗಳ ಕಾಲ. ಮರಿಗಳು ಕಣ್ಣುಬಿಡಿಸಿಕೊಂಡು ಅತ್ತಿತ್ತ ಓಡಾಡತೊಡಗಿದಾಗ, ಪುಸ್ಸಿಗೂ ಅಕ್ಕರಾಸ್ತೆ ಕಮ್ಮಿಯಾಗುತ್ತ ಬಂತು. ಅದು ಹಿಂದಿನ ಮನೆಯ ಗಂಡುಬೆಕ್ಕು ಕಾಳನ ಜೊತೆ ಸ್ನೇಹ ಬೆಳೆಸಿ ಅದರೊಡನೆ ನಿಶಾಸಂಚಾರ-ವಿಹಾರ ಯಾತ್ರೆಗಳಲ್ಲಿ ತೊಡಗಿತು. ಒಂದು ದಿನ ಮನೆಯಿಂದ ಕಾಣೆಯಾಯಿತು ಕೂಡ. ಆದರೆ ಅದರ ಮರಿಗಳು ಮಾರ್ಜಾಲ ಸಂತಾನಾಭಿವೃದ್ಧಿ



ಕಾರ್ಯವನ್ನು ನಿರಂತರವಾಗಿ ಮುಂದುವರಿಸಿದವು. ಒಂದು ಕಾಲದಲ್ಲಿ ಹತ್ತುಹನ್ನೆರಡು ಬೆಕ್ಕುಗಳಿಂದ ನಮ್ಮ ಮನೆ ತುಂಬಿಕೊಂಡಿದ್ದ ನೆನಪು. ಬಿಸ್ಕತ್‌ಬಣ್ಣದ ಮರಿಗಳು ಎಷ್ಟು ಮುದ್ದುಮುದ್ದಾಗಿರುತ್ತಿದ್ದವೆಂದರೆ, ಅವುಗಳ ಆಟ ಮನೆಮಂದಿಗೆಲ್ಲ ಪುಕ್ಕಟೆ ಮನರಂಜನೆ ನೀಡುತ್ತಿತ್ತು. ಆಶ್ಚರ್ಯವೆಂದರೆ, ಮಾರ್ಜಾಲಕುಲದ್ವೇಷಿಯೆನಿಸಿದ ಅಪ್ಪಯ್ಯನೇ ತಮ್ಮ ಬಿಡುವಿನ ಅವಧಿಯಲ್ಲಿ ಬೆಕ್ಕಿನ ಮರಿಗಳನ್ನು ಆಟವಾಡಿಸತೊಡಗಿದ್ದು; ಇರಲಿ.

ಗುಬ್ಬಿಗಳದ್ದೂ ಇದೇ ಕಥೆ. ಅವುಗಳತ್ತ ನಾವು ಯಾವುದೇ ಲಕ್ಷ್ಯವನ್ನೂ ಹರಿಸಬೇಕಾಗಿರಲಿಲ್ಲ. ನಮ್ಮ ಮನೆಯ ಪಡಸಾಲೆಯ ಬಾಗಿಲಿನ ದಾರಂದದ ಮೇಲ್ಭಾಗದಲ್ಲಿ ಓರೆಯಾಗಿರಿಸಿದ ಲಕ್ಷ್ಮಿ-ಗಣೇಶ-ಸರಸ್ವತೀ ದೇವರುಗಳ ಕನ್ನಡಿ ಕಟ್ಟಿನ ಫೋಟೋಗಳ ಹಿಂದಿನ ಸ್ಥಳದಲ್ಲಿ ಅವೇ ತಮ್ಮ ಮನೆಕಟ್ಟಿಕೊಂಡಿದ್ದುವು-ಹುಲ್ಲು ಜೊಂಡು ಕಡ್ಡಿಗಳ ನೆರವಿನಿಂದ. ರೊಯ್ಯೆಂದು ಗೂಡಿನಿಂದ ಹೊರಗೆ ಹಾರಿ, ಎಲ್ಲಿಂದಲೋ ಕಾಳುಕಡಿಗಳನ್ನು ಸಂಗ್ರಹಿಸಿಕೊಂಡು ಬಂದು ಮರಿಗಳಿಗೆ ತಿನಿಸುವ ಗುಬ್ಬಿಗಳನ್ನು ನೆನೆದಾಗಲೆಲ್ಲ ಈಗಲೂ ನನಗೆ, ಇಪ್ಪತ್ತು ವರ್ಷಗಳ ಹಿಂದೆ ಯಮಧರ್ಮರಾಯನ ಪಾದ ಸೇರಿದ

ನನ್ನ ಅಮ್ಮ ನೆನಪಿಗೆ ಬರುತ್ತಾಳೆ. ಆದರೆ ತಾಯಿ ಗುಬ್ಬಿಗಿರುವ ಪ್ರೀತಿ ಮರಿಗಳಿಗೆಲ್ಲಿ? ರೆಕ್ಕೆಪುಕ್ಕ ಗಟ್ಟಿಯಾಗುತ್ತಲೇ ಅವು ತಾಯಿಗೆ ಟಾಟಾ ಹೇಳಿ ಅದೃಶ್ಯವಾಗುತ್ತಿದ್ದವು. ಆ ಗುಬ್ಬಿಗಳ ಉಪಟಳ, ಅವು ಮನೆಗೆ ತಂದುಹಾಕುವ ಕಸಗಳನ್ನು ನೋಡಿ ಲಕ್ಷ್ಮಿ-ಗಣೇಶ-ಸರಸ್ವತೀ ಚಿತ್ರಗಳನ್ನೇ ತೆಗೆದು ಬಿಡಬೇಕು ಎಂದು ಎಷ್ಟೋ ಸಲ ಅನಿಸುತ್ತಿತ್ತು ನಮಗೆ.

ವಿಷಜಂತುಗಳಾದ ಹಾವುಗಳೂ ನನ್ನ ಬಾಲ್ಯ ಸ್ನೇಹಿತರ ಗುಂಪಿಗೆ ಸೇರದೆ ಉಳಿದಿಲ್ಲ. ಮನೆಯ ಸಮೀಪದ ತೋಡುಗಳಲ್ಲಿ ನಾಗರಹಾವು, ನಾಗರಮರಿಗಳು ಯಾವಾಗಲೂ ಕಾಣಸಿಕೊಳ್ಳುತ್ತಿದ್ದವು. ಕೆಲವು ಸಲ ಮನೆಯೊಳಗೂ ಪ್ರವೇಶಿಸಿ ಮನೆಮಂದಿಯನ್ನು ಬುಸ್ ಎನ್ನುತ್ತ ಹೆದರಿಸುತ್ತಿದ್ದುದುಂಟು. ಅವು ಬುಟ್ಟಿಗೆ ಬರುವಂತೆ ಮಾಡಿ, ಅವುಗಳನ್ನು ಹೊರಗೆ ಸಾಗಿಸುವ ಕಲೆ ಅಪ್ಪಯ್ಯನಿಗೆ ಸಾಧಿಸಿತ್ತು. ಮಳೆಗಾಲದಲ್ಲಿ ನೀರು ಹಾವು ಕೇರೆ ಹಾವುಗಳ ದರ್ಶನವಂತೂ ಸಾಮಾನ್ಯವಾಗಿತ್ತು. ಹಸಿರು ಸಸ್ಯಗಳ ಕೊಂಬೆ ರೆಂಬೆಗಳಿಗೆ ಸುತ್ತಿಕೊಂಡಿರುವ ಎಲೆಹಾವುಗಳನ್ನು ನಿಧಾನವಾಗಿ ಹಿಡಿದು ಎತ್ತಿಕೊಂಡು ಈಶ್ವರನಂತೆ ನಾನು ಅವುಗಳನ್ನು ಕೊರಳಿಗೆ ಸುತ್ತಿಕೊಳ್ಳುತ್ತಿದ್ದುದುಂಟು. ನನಗಿಂತಲೂ ಚಿಕ್ಕವರಾದ ಮಕ್ಕಳನ್ನು ಹೆದರಿಸುತ್ತಿದ್ದುದೂ ಉಂಟು.

ಅಂದಿನ ಈ ಎಲ್ಲ ಸ್ನೇಹಿತರನ್ನು ನೆನಪಿಗೆ ತಂದುಕೊಳ್ಳುವಾಗ ಈ ನಗರ ಜೀವನವೇ ಬರುಡೆನಿಸುತ್ತದೆ ನನಗೆ. ಕಾಗೆಗಳ ಕಾಕಾ, ಕೋಳಿಗಳ ಕೊಕ್ಕೋ ಕೂಗುಗಳನ್ನೂ ಕೇಳುವ ಅವಕಾಶ ಇಲ್ಲಿಲ್ಲ. ಕೆಲವು ಮನೆಗಳಲ್ಲಿ ಸಾಕಿದ ನಾಯಿಗಳೂ, ಅಕ್ವೇರಿಯಮ್‌ನಲ್ಲಿನ ಮೀನುಗಳೂ ಇರಬಹುದು. ಆದರೂ ವಿವಿಧ ಜಾತಿಯ ಪಕ್ಷಿ ಪ್ರಾಣಿ ಕ್ರಿಮಿಕೀಟ ಹುಳು ಹುಪ್ಪಟೆಗಳ ಸ್ವಚ್ಛಂದ ಸ್ವತಂತ್ರ ನಡೆವಳಿಕೆಯನ್ನು ಕುತೂಹಲದಿಂದ ಪರಿಶೀಲಿಸಲು ಈ ಕಾಂಕ್ರೀಟ್ ಕಾಡಿನಲ್ಲಿ ಅದೆಂತು ಸಾಧ್ಯ?

ಪಾಕೆಟ್ ಟಿ.ವಿ

1980ರಲ್ಲಿ ಜಪಾನ್ ದೇಶದ ಚಾರ್ಲ್ಸ್ ಲೂಯಿ ಚಾಂಗ್ ಪ್ರಪ್ರಥಮವಾಗಿ 5X2.5'' ಅಳತೆಯ ಪರದೆ ಇರುವ ಪಾಕೆಟ್ ಟಿ.ವಿ.ಯನ್ನು ರೂಪಿಸಿದ. ಈ ಪಾಕೆಟ್ ಟಿ.ವಿ.ಯಲ್ಲಿದ್ದ ಲೋಪದೋಷಗಳನ್ನು ನಿವಾರಿಸಿ ಕಾಂಪ್ಯಾಕ್ಟಾಗಿ ಅತ್ಯಾಧುನಿಕ ತಂತ್ರಜ್ಞಾನಗಳನ್ನು ಅಳವಡಿಸಿ 1985ರಲ್ಲಿ ಮಾರುಕಟ್ಟೆಗೆ ಬಿಡುಗಡೆ ಮಾಡಿದವರು ಲೂಯಿ ಚುಂಗ್ ಪಿನ್ಸ್. ಇದಕ್ಕೆ ಮಡಚಬಲ್ಲ(Foldable) ಒಂದು ಸ್ಟ್ಯಾಂಡ್‌ನ್ನು ಸಹ ಜೋಡಿಸಲಾಗಿದೆ. ಇದರಿಂದಾಗಿ ಸ್ಟ್ಯಾಂಡನ್ನು ಟಿ.ವಿ. ಸಮೇತ ಮಡಿಸಿ ಜೇಬಿನಲ್ಲಿಟ್ಟು ಎಲ್ಲಿಂದರಲ್ಲಿ ತೆಗೆದುಕೊಂಡು ಹೋಗಬಹುದು. ವಿಶೇಷವೆಂದರೆ ಇದರ ಪರದೆ ತುಂಬಾ ಕಿರಿದಾಗಿರುವುದರಿಂದ ತೆರೆಯ ಗ್ಲಾಸಿನ ಮೇಲೆ ಎರಡು ವಿಶೇಷವಾದ ಮಸೂರಗಳನ್ನು (Lense) ಅಳವಡಿಸಲಾಗಿದೆ. ಒಂದು ಬೈನಾಕ್ಯುಲರ್ ಮತ್ತೊಂದು ತ್ರೀಡಿ ಲೆನ್ಸ್. ಈ ಏರ್ಪಾಡಿನಿಂದಾಗಿ ತೆರೆ ಕಿರಿದಾದರೂ ಟಿ.ವಿ.ಯಲ್ಲಿ ಮೂಡುವ ಚಿತ್ರಗಳನ್ನು ದೊಡ್ಡದಾಗಿ, ಸ್ಪಷ್ಟವಾಗಿ ನೋಡಬಹುದು. ಇದರ ಬೆಲೆ 7000.00 ರೂಪಾಯಿಗಳು. ಕಲರ್ ಟಿ.ವಿ.ಯಾದರೆ ಮತ್ತಷ್ಟು ದುಬಾರಿ!.

ಸಂಗ್ರಹ: ಜಿ.ವಿ. ಪ್ರಭು



ಪ್ರೇಮಪತ್ರ

ಪ್ರಣಯಿ ಬರೆಯುವ ಮಹಾಕಾವ್ಯ

● ರವಿ ಬೆಳಗೆರೆ

ಪ್ರೇಮ ಪತ್ರ: ಪ್ರಣಯಿ ಬರೆಯುವ ಮಹಾಕಾವ್ಯ

ರೀಡರ್ ಡಿಯರ್,

ನಿನ್ನೊಂದಿಗೆ ಮಾತು ನಿರಂತರ. ಮೌನ ಅಪರೂಪ. ಆಗಿಷ್ಟು ಈಗಿಷ್ಟು ಮುನಿಸು, ಜಗಳಗಳವೆ ನಿಜ. ಒಪ್ಪಿಕೊಳ್ಳೋಣ. ಆದರೆ ಯಾವ ಜಗಳವೂ ಗೆಳೆತನದ ತೇವ ಆರಿ ಹೋಗುವಷ್ಟು ಝಳ ಹುಟ್ಟಿಸಿಲ್ಲ. ಇಂಥ ರಣಬಿಸಿಲ ಬೇಸಗೆಯಲ್ಲೂ ಹೀಗೆ ನಾವಿಬ್ಬರೂ ಕೂತು ಆಡಿಕೊಳ್ಳುವ ನಾಲ್ಕು ಮಾತು ಇಬ್ಬನಿಯಲ್ಲಿ ಮುಳುಗಿ ತೇಲಿದಷ್ಟು ತಣ್ಣಗಿರುತ್ತವೆ. ನನಗದೇ ಸಂತೋಷ.

ನಿನಗಾಗಿ ಬರೆದ ಪುಟಗಳಲ್ಲೆಲ್ಲ ನಿನ್ನೆಡೆಗೆ ನನಗಿರುವ ಅದಮ್ಯ ಪ್ರೇಮದ ನೆರಳಿದ್ದೇ ಇರುತ್ತದಾದರೂ, ಈ ಪುಟಗಳನ್ನು ಮಾತ್ರ ಪ್ರೇಮ ಪಾತ್ರೆಯಲ್ಲದ್ದಿ ತೆಗೆದ ಬೆರಳುಗಳಿಂದಲೇ ಬರೆದು ನಿನಗೀಯುತ್ತಿದ್ದೇನೆ. ಏಕೆಂದರೆ, ನಮ್ಮ ಮಾತೀಗ ಪ್ರಣಯ-ಪ್ರೇಮಗಳ ಕಡೆಗೆ ತಿರುಗಿದೆ.

ಮೊಟ್ಟ ಮೊದಲ ಗಂಡು-ಹೆಣ್ಣು ನಿಷಿದ್ಧ ಫಲದ ಸವಿ ನೋಡಿದಾಗಿನಿಂದ ಪ್ರಾರಂಭವಾಗಿ ಈತನಕ ನಿರಂತರವಾಗಿ ಸಾಗಿ ಬಂದ ಪ್ರೇಮದ ದಾರಿಗೆ ಅಕ್ಷರ ಕಲಿತ ಮನುಷ್ಯ ಕೊಟ್ಟ ಮೊದಲ ತಿರುವು ಪ್ರೇಮ ಪತ್ರ. ಅದೆಷ್ಟು ಎದೆಯಾಳದ ಭಾವನೆಗಳನ್ನು ಬಿಚ್ಚಿಟ್ಟಿತೋ ? ಎಷ್ಟೆಷ್ಟು ದೂರಾತಿದೂರಗಳನ್ನು ಹಿಡಿದು ಒಂದುಗೂಡಿಸಿತೋ ? ಮತ್ತೆಷ್ಟು ಹಗರಣಗಳಿಗೆ ಕಾರಣವಾಯಿತೋ ? ನಾಲ್ಕೂ ಮುಕ್ಕಾಲು ಅಕ್ಷರಗಳ ಈ ವಸ್ತು ಒಬ್ಬ ವ್ಯಕ್ತಿ-ಕೇವಲ ಮತ್ತೊಬ್ಬನೇ ಒಬ್ಬ ವ್ಯಕ್ತಿಗಾಗಿ ಬರೆಯಲ್ಪಟ್ಟ ಕಾಗದದ ಕಂತೆಯೇ ಆದರೂ, ಸಾರ್ವಜನಿಕ ಚರ್ಚೆಗೆ ಇದು ಒದಗಿಸಿದಷ್ಟು ಗ್ರಾಸ ಮತ್ಯಾವ ಮಹಾಕಾವ್ಯವೂ ಒದಗಿಸಿರಲಾರದು, ಅಲ್ವೆ ?

ಮೊಟ್ಟಮೊದಲ ಪ್ರೇಮಪತ್ರ ಬಂದಾಗ ಆದರ ಸಂತಸ, ಉನ್ಮಾದ ಭೀಭತ್ಸತೆಗಳಿಂದ ಕಂಪಿಸುವ ಕೈಗಳು ಹೇಗಿರುತ್ತವೆಂಬ ಕಲ್ಪನೆ ನಿನಗಿದೆಯೋ ಇಲ್ಲವೋ ! ಅಂಥದೊಂದು ಕಂಪನವನ್ನು-ಈ ಪತ್ರಗಳ ಕಂತೆಯನ್ನು ನಿನಗೆ ಕೊಡುತ್ತಿರುವಾಗ ನಾನು ಅನುಭವಿಸುತ್ತಿದ್ದೇನೆ. ಓದಿಕೋ.

ನಿನ್ನ 'ಕಸ್ತೂರಿ'

"ನಿನ್ನ ಪತ್ರ ತಲುಪಿ ಅಭಿಪ್ರಾಯವಾಯಿತು. ನೀನು ಕೇಳಿದಷ್ಟು ಕಳಿಸಲಾಗುತ್ತಿಲ್ಲವಾದರೂ ಸಧ್ಯಕ್ಕಿಷ್ಟು ಕಳಿಸುತ್ತಿದ್ದೇನೆ. ಅಕ್ಕನ ಜ್ವರ ಹಾಗೇ ಇದೆ. ಮನೆಯ ಹಿಂದಿನ ಗೋಡೆ ಇವತ್ತಲ್ಲ ನಾಳೆ ಈ ಸಲದ ಮಳೆಗೆ ಬೀಳುವುದು ಗ್ಯಾರಂಟಿ. ಮಕ್ಕಳಿಗೆ ಆ।।ಗಳು. ಹಿರಿಯರಿಗೆ ನ।।ಗಳು."

"ಮುಂದಿನ ವಾಯಿದೆ ಹೊತ್ತಿಗೆ ಹಣ ಕಟ್ಟಲೇಬೇಕೆಂದು ವಕೀಲರು ತಿಳಿಸಿರುತ್ತಾರೆ. ಇಲ್ಲದಿದ್ದರೆ ಕೇಸು 'ಅವರಂತಲೇ' ಆಗಿ ಮನೆ ಜಪ್ತಾಗುವ ಸಂಭವವಿದೆಯೆಂದು ಹೇಳುತ್ತಾರೆ. ತಿಳಿಯಿರಿ. ಹಣ ಕಳಿಸಿರಿ. ಮತ್ತೆಲ್ಲ ಮುಖತಃ."

"ನೀವು ಲಾರಿಯ ಮೂಲಕ ಕಳಿಸಿದ ಮಾಲು ತಲುಪಿರುತ್ತದೆ. ಮಾರಾಟವಾದ ಕೂಡಲೆ ಮತ್ತೆ ಬರೆಯುತ್ತೇವೆ. ವ್ಯಾಪಾರದಲ್ಲಿ ನೀವು ಕೊಡುತ್ತಿರುವ ಸಹಕಾರಕ್ಕಾಗಿ ನಮ್ಮ ನಮಸ್ಕಾರಗಳು."

"ಊರ ಮುಂದಿನ ಬಯಲಲ್ಲಿ ಗ್ರಾಮಸ್ಥರು ಕಟ್ಟಲು ನಿರ್ಧರಿಸಿರುವ ಕಟ್ಟಡಕ್ಕೆ ನೀವು ದಾನಿಗಳಾಗಿ ಬಂದು, ನಿಮ್ಮ ಅಮೃತ ಹಸ್ತದಿಂದ ಅಡಿಗಲ್ಲು ಹಾಕಿ ಕಾರ್ಯಕ್ರಮ ನಡೆಸಿಕೊಡಬೇಕೆಂದು ವಿನಂತಿಸುತ್ತೇವೆ."

ಏನಿದೆ ಇಂಥ ಪತ್ರಗಳಲ್ಲಿ? ದಿನ ನಿತ್ಯ ಇಂಥ ಲಕ್ಷಾಂತರ, ಕೋಟ್ಯಂತರ ನಿರ್ಜೀವ ಪತ್ರಗಳನ್ನು ತನ್ನ ಖಾಕಿ ಚೀಲದಲ್ಲಿ ಶವಗಳಂತೆ ಹೊತ್ತು ತರುವ ಅರೆಹೊಟ್ಟೆಯ ಪೋಸ್ಟ್‌ಮ್ಯಾನ್ ಪರಮ ನಿರ್ಲಿಪ್ತತೆಯಿಂದ ಮನೆ, ಬ್ಯಾಂಕು, ಕಚೇರಿಗಳ ಹೊಸ್ತಿಲುಗಳ ಮೇಲಿಟ್ಟು ತಿರುಗಿಯೂ ನೋಡದೆ ಹೊರಟು ಹೋಗುತ್ತಾನೆ. ಅಪ್ಪಟ ಕಸ. ಇದರಲ್ಲಿ ಪ್ರೇಮವಿಲ್ಲ. ಹೃದಯಬಡಿತದ ಸದ್ದಿಲ್ಲ. ಸಣ್ಣ ಕಂಪನವೂ ಇಲ್ಲ. ಕಿರುನಗೆಯ, ಹಾಲುಗೆನ್ನೆಯ ಮಕ್ಕಳನ್ನು ಸ್ಮರಿಸುವಾಗಲೂ 'ಮಕ್ಕಳಿಗೆ ಆ।।ಳು' ಎಂಬ ಅಬ್ರಿವೇಷನ್ನುಗಳನ್ನು ಬಳಸುವ ಸೋಮಾರಿ

ಹಿರಿಯರ ವ್ಯವಹಾರಗಳಿವು. ಸದಾ ನಿಕಲ್ ನಾಣ್ಯಗಳು, ನಾಸಿಕ್ ನೋಟುಗಳು, ಬ್ಯಾಂಕಿನ ಡಿ.ಡಿ.ಗಳು ಪರಸ್ಪರ ಮಾತಾಡಿಕೊಳ್ಳುವ ಈ ವ್ಯಾವಹಾರಿಕ ಕರೆಸ್ಪಾಂಡೆನ್ಸು ಯಾವತ್ತಿಗೂ ಜೀವಂತ ಹೃದಯಗಳಾಡುವ ಭಾಷೆಗೆ ದಾಖಲೆಗಳಾಗಲಾರವು. ಸಿಡುಕುತ್ತ ಬರೆಯುವ-ಅಳುತ್ತ ಓದುವ ಈ ಅಕ್ಷರಸಮೂಹಕ್ಕೆ ಮನೆಯ ಮೂಲೆಯಲ್ಲಿ ಧೂಳು ತಿನ್ನುವ ಕೊಕ್ಕೆ ತಂತಿಯ ಕೈಲಿ ಚುಚ್ಚಿಸಿಕೊಂಡು ಗೋಡೆಗೊರಗುವ, ಅಥವಾ ಹರಿದು ತಿಪ್ಪೆಗೆ ಚೆಲ್ಲಲ್ಪಡುವ ನಿರಾಶಾದಾಯಕ ಭವಿಷ್ಯತ್ತಲ್ಲದೆ ಮತ್ತೇನಿಲ್ಲ.

ನಮ್ಮ ಚರ್ಚೆಗಿವು ಅನರ್ಹ!

ರಾತ್ರಿಯಿಡೀ ಕುಳಿತು ಕಣ್ಣೀರಿನಷ್ಟು ದುಂಡಗಿನ ಅಕ್ಷರಗಳಲ್ಲಿ ಪುಟಗಟ್ಟಲೆ ಬರೆಯುವ ಪ್ರೇಮಿ; ಮುಂಜಾನೆ ಲಕೋಟೆಗೆ ಸ್ಟ್ಯಾಂಪು ಹಚ್ಚುವುದನ್ನೇ ಮರೆತು ಕೆಂಪು ಡಬ್ಬಿಗೆ ಹಾಕಿ, ಡಬ್ಬಿಯನ್ನೊಮ್ಮೆ ಅಪ್ಯಾಯಮಾನ ಭಾವದಿಂದ ಸವರಿ ಬರುತ್ತಾನೆ. ಪೋಸ್ಟ್‌ಮ್ಯಾನ್ ನಗುತ್ತ ಕೇಳುವ 'ದಂಡ'ವನ್ನು ಪ್ರೀತಿಯಿಂದಲೇ ಕೊಟ್ಟು ಲಕೋಟೆ ಬಿಡಿಸಿಕೊಳ್ಳುವ ಹುಡುಗಿ, ಧಡ್ಡನೆ ತನ್ನ ಏಕಾಂತದೊಳಕ್ಕೆ ನುಗ್ಗಿ ಪತ್ರ ಬಿಡಿಸುತ್ತಾಳೆ. ನಡುಗುವ ಬೆರಳುಗಳಲ್ಲಿ ಆತ ಕಳಿಸಿದ ಲಕೋಟೆಯನ್ನೂ, ಅದರ ಮೇಲೆ ಇಂಡಿಯನ್ ಪೋಸ್ಟಲ್ ಡಿಪಾರ್ಟಮೆಂಟಿನ ಕಾರಕೂನರು ನಿರ್ದಯವಾಗಿ ಗುದ್ದಿದ ಕಪ್ಪನೆಯ ಸೀಲನ್ನೂ, ಸ್ಟ್ಯಾಂಪು ಹಚ್ಚದ ತನ್ನ ಪ್ರಿಯತಮನ ಮುಗ್ಧ ಮರೆವನ್ನು ಶಿಕ್ಷಿಸುವವರಂತೆ ಅದರ ಮೇಲೆ ಕೆಂಪು ಮಸಿಯಲ್ಲಿ 'ದಂಡ' ವಸೂಲಿ ಷರಾಗಳನ್ನೂ ಸವರುತ್ತಾಳ, 'ಸಧ್ಯ ವಿಳಾಸ ಬರೆಯುವುದು ಮರೆತಿಲ್ಲವಲ್ಲಾ' ಎಂದು ನೆಮ್ಮದಿಗೊಳ್ಳುತ್ತಲೇ ಪತ್ರದ ಮೊದಲ ಪುಟಕ್ಕೆ ಕಣ್ಣು ನೆಡುತ್ತಾಳೆ. ಮುಗಿಯಿತು! ಇನ್ನವಳು ಈ ವ್ಯಾವಹಾರಿಕ ಜಗತ್ತಿನಿಂದ ದೂರ. ಇಡೀ ಪತ್ರ ಹತ್ತತ್ತು ಸಲ ಓದಿ, ಎದೆಯ ಮಿದುವಿನಲ್ಲಿ ಕುಪ್ಪುಸದ ಸಂದಿಯಲ್ಲಿ ರಹಸ್ಯವಾಗಿ ಆದರೆ ಹೆಮ್ಮೆಯಿಂದ ಅಡಗಿಸಿಟ್ಟುಕೊಂಡು ಓಡಾಡುತ್ತ ಸಮಯ ಸಿಕ್ಕಾಗೆಲ್ಲ ಮತ್ತೆ ಮತ್ತೆ ಓದಿ, ಅದೇ ಶಬ್ದಗಳಲ್ಲಿ ಹೊಸದೇನಾದರೂ ಅರ್ಥ ಸಿಕ್ಕೀತೇ ಎಂದು ವಿಜ್ಞಾನಿಯಂತೆ ಪರೀಕ್ಷಿಸುತ್ತ-ಮತ್ತೊಂದು ಪತ್ರ ಬರುವ ತನಕ ಅದರೊಂದಿಗೆ ಕಾಲ ಕಳೆಯುತ್ತಾಳೆ. ಮತ್ತೊಂದು ಬರುವ ತನಕ ವರ್ಣನೆಗೆ ಸಿಕ್ಕದ ವೇದನೆಯಲ್ಲಿ ನಲುಗುತ್ತಾಳೆ.

ಅದು, ಪ್ರೇಮಪತ್ರ!

ವಾಙ್ಮಯದಲ್ಲಿ ಪತ್ರವೊಂದಕ್ಕೆ ಸ್ಥಾನ ಸಿಗಬೇಕಾದರೆ, ಅದು ಪ್ರೇಮಪತ್ರವಾಗಿರಬೇಕು. ಅಥವಾ Continuous Thought ಆಗಿಯಾದರೂ ಇರಬೇಕು. ಬಾಲ್ಯದ ಮಿತ್ರನೊಬ್ಬನೊಂದಿಗೆ ನದಿ ದಂಡೆಯ ಮರಳಿನಲ್ಲಿ ಕಾಲು ಹೂತು ಕುಳಿತು ಸಿಗರೇಟೆಳೆಯುತ್ತ ಆಡುವ ಮಾತಿನಂತೆ ಆತ್ಮೀಯವಾಗಿರಬೇಕು ಪತ್ರ. ಪತ್ರ ಬಂತೆಂದರೆ-ಬರೆದಾತನೇ ಬಂದಂಥ ಭಾವ ಮೂಡಿಬರಬೇಕು. ಓದುತ್ತ ಕೂತವರು ಒಂದಿಷ್ಟು ಹೊತ್ತಾದರೂ Day dreamsಗಳೊಳಕ್ಕೆ ಇಳಿಬೀಳದಿದ್ದರೆ-ಬರೆದವನು ಕೇವಲ ಅಕ್ಷರಸ್ಥ ಅಥವಾ ವ್ಯಾಕರಣ ಪಂಡಿತ. ಒಂದು ಸ್ನಿಗ್ಧ ಪ್ರೇಮ ಮತ್ತು ಸ್ವಚ್ಛ ಹೃದಯ ಇಲ್ಲದೆ ಹೋದರೆ ಮಧುರವಾದ ಪ್ರೇಮಪತ್ರಗಳು ಜನಿಸಲಾರವು.

ಸಾಮಾನ್ಯವಾಗಿ ಗಂಡ-ಹೆಂಡಿರ ಮಧ್ಯೆ, ಅದೂ ಭಾರತದಂತಹ ದೇಶದಲ್ಲಿ ಪ್ರೇಮಪತ್ರಗಳು ಹುಟ್ಟುವುದಿಲ್ಲ. ಯಾಕೆ ಬರೆಯಲಿಲ್ಲವೆಂದು ಕೇಳಿದರೆ, ಏನಿದೆ ಬರೆಯೋಕೆ ಎಂಬ ಉತ್ತರ ಎದುರಾಗುತ್ತದೆ. ತುಂಬು ಪ್ರೇಮದಿಂದ ಬರೆಯಬಲ್ಲ ಶಕ್ತಿಯಿದ್ದಾಗ್ಯೂ ಹೆಣ್ಣುಮಕ್ಕಳು ಬರೆಯಲು ಕೂಡುವುದಿಲ್ಲ. ಬರೆದರೂ ಸ್ಟ್ಯಾಂಪಿಗಾಗಿ ಅಪ್ಪನನ್ನೋ, ಅಣ್ಣನನ್ನೋ ಕೈಯೊಡ್ಡಿ ಕೇಳಬೇಕು. ಇಷ್ಟಕ್ಕೂ, ಬರೆಯಬಲ್ಲ ಅವಳ ಶಕ್ತಿಯನ್ನೆಲ್ಲ ಅವಳ ಗಂಡ ಪ್ರಸ್ಥದ ದಿನದಿಂದ ಈವತ್ತಿನ ತನಕ ತುಂಬ ವ್ಯವಸ್ಥಿತವಾಗಿ ಹಿಡಿದು ನಾಶಮಾಡಿ.... ಕಾಲಾಂತರದಲ್ಲಿ ಅವಳನ್ನೊಂದು ಹೆರುವ ಯಂತ್ರವನ್ನಾಗಿ ಪರಿವರ್ತಿತಗೊಳಿಸಿರುವಾಗ, ಅವಳ ಹೃದಯ ಯಾತನೆಯಿಂದ ಚೀರುವುದನ್ನು ನಿಲ್ಲಿಸಿರುವಾಗ -

ಏನೆಂದು ಬರೆದಾಳು, ಪಾಪ? ತವರು ಮನೆಯಿಂದ ಆಕೆ ಬರೆಯುವ ಅಂತರ್ದೇಶೀಯ ಪತ್ರದ ತುಂಬ ಆಜ್ಞೆಗಳಿರುತ್ತವೆ ಅಥವಾ ವಿನಂತಿಗಳಿರುತ್ತವೆ.

''ಜಾಡಿಯಲ್ಲಿರುವ ಉಪ್ಪಿನ ಕಾಯಿಗೆ ನೀರು ಹತ್ತಿದ ಸೌಟು ಅದ್ದಬೇಡಿ-ಹುಳು ಬೀಳ್ತವೆ! ದೇವರ ಮಂದಾಸನದ ಮೇಲೆ ಚಿಕ್ಕ ವಿಗ್ರಹಗಳನ್ನಿಡಬೇಡಿ-ಇಲಿ ಎಳೆದೊಯ್ಯುತ್ತವೆ. ಹಿತ್ತಲು ಬಾಗಿಲು ಹಾಕಿಕೊಳ್ಳದೆ ಮಲಗಬೇಡಿ-ಕಳುವಾಗುತ್ತದೆ. ಕೆಲಸದವಳು ಬಂದಾಗ 'ದೂರದಿಂದಲೇ' ಅವಳನ್ನು ಗಮನಿಸುತ್ತಿರಿ-ಅವಳ ಕೈ ಸುಮಾರು. ಆಫೀಸಿಗೆ ಹೋಗುವ ಮುಂಚೆ ಗ್ಯಾಸಿನ ಸಿಲೆಂಡರೂ, ನೀರಿನ ಬಾಯ್ಲರೂ ಆಫ್ ಮಾಡಿ ಹೋಗಿ-ಇಲ್ಲದಿದ್ರೆ ಅಪಾಯ!'' ಎನ್ನುವಂತಹ ಎಚ್ಚರಿಕೆ ಬೆರೆತ ಆದೇಶಗಳದೊಂದು ಪ್ಯಾರಾ.

''ಸಂಜೆ ಬೇಗ ಮನೆಗೆ ಬನ್ನಿ. ಆಫೀಸಿನ ಗೆಳೆಯರ ಜೊತೆಗೆ 'ತಡಮಾಡಿ' ಬರಬೇಡಿ. (ಗೊತ್ತಾಯಿತೆ?') ನಿಮ್ಮ ಆರೋಗ್ಯ ಚೆನ್ನಾಗಿಟ್ಟುಕೊಳ್ಳಿ. ಹೋಟೆಲೂಟ ನಿಮ್ಮ ಮೈಗಾಗುವುದಿಲ್ಲ ಪಕ್ಕದ ಮನೆ ಕೃಷ್ಣಾ ಬಾಯಿ(ಅರವತ್ತೆಂಟರ ವಿಧವೆ) ಅವರಿಗೆ ಸಾರು ಕೊಡಲು ಹೇಳಿದ್ದೇನೆ. ನೀವೊಂದು ಅನ್ನ ಮಾಡಿಕೊಂಡುಬಿಡಿರಿ. ಉಪ್ಪಿನ ಕಾಯಿ ಇದೆ. ಚಟ್ನಿಪುಡಿಯಿದೆ. ಹಾಲು ಅರ್ಧಲೀಟರು ಸಾಕು. ಹೆಪ್ಪಿಗಿಟ್ಟುಕೊಳ್ಳಿ. ಮನೆಯ ಮುಂದಿನ ಗಿಡಗಳಿಗೂ, ಹೂವಿನ ಕುಂಡಗಳಿಗೂ ದಿನಾ ನೀರು ಹಾಕಿರಿ. ನನ್ನ ಸೀರೆಗಳಿರುವ ಟ್ರಂಕಿನ ಬಾಗಿಲು ಸರಿಯಾಗಿ ಹಾಕಿರಿ-ಮನೆಯ ತುಂಬ ಇಲಿ ಓಡಾಡುತ್ತವೆ. ನಿಮ್ಮ ಆರೋಗ್ಯ ಸರಿಯಾಗಿಟ್ಟುಕೊಳ್ಳಿ'' ಎಂಬ ವಿನಂತಿಗಳದು ಮತ್ತೊಂದು ಪ್ಯಾರಾ.

''ನನಗೀಗ ಎಂಟು ತುಂಬಿದವು. ಕೊಟ್ಟ ಡೇಟಿಗೇ ಹೆರಿಗೆಯಾಗಬಹುದೊಂತ ಡಾಕ್ಟರು ಹೇಳಿದ್ದಾರೆ. ಅಪ್ಪನ ಕೆಮ್ಮು ಕಡಿಮೆಯಾಗಿಲ್ಲ. ಅಮ್ಮನಿಗೆ ಮೊಳಕಾಲು ನೋವು. ತಮ್ಮನ ಹೆಂಡತಿ ಕೆಲಸ ಮಾಡೋದಿಲ್ಲ. ಮಾತೂ ಅಷ್ಟಕ್ಕಷ್ಟೆ. ಎಲ್ಲರೂ ನಮ್ಮ ಹಾಗೇ ಎಲ್ಲಿರ್ತಾರೆ?'' ಎಂಬ ಅಂತಿಮ ವೇದಾಂತದೊಂದಿಗೆ ಆಕೆಯ ಪತ್ರ ಮುಗಿದೇ ಹೋಗುತ್ತದೆ.

ಪತ್ರದುದ್ದಕ್ಕೂ ಪ್ರೀತಿಯಿದೆ ನಿಜ. ಆದರೆ ಪ್ರೀತಿಯ ಜಾಗಕ್ಕೆ ಒಂದು ವ್ಯಾವಹಾರಿಕ ಕಾಳಜಿ ಬಂದು ಕೂತುಬಿಟ್ಟಾಗ ಭಾವುಕತೆಯೆಲ್ಲ ನಿರ್ನಾಮವಾಗಿ ಹೋಗಿ ಪತ್ರಗಳು ಆದೇಶಗಳಾಗುತ್ತವೆ. ವಿನಂತಿಗಳಾಗುತ್ತವೆ. ಅರ್ಜಿಗಳೋ, ಮೆಸೇಜುಗಳೋ ಆಗಿಹೋಗುತ್ತವೆ.

ಆಕಸ್ಮಾತ್ ಆಕೆಯೇನಾದರೂ ಅಷ್ಟಿಷ್ಟು ಕಾವ್ಯಮಯ, ಪ್ರೇಮಮಯ ಪತ್ರ ಬರೆದದ್ದೇ ಆದರೆ, ನಮ್ಮ ಮಧ್ಯಮ ವರ್ಗದ ಸರಕಾರಿ ನೌಕರ ಗಂಡ 'ಹೆಂಡತಿಗೇನೋ ಆಗಿದೆ. ತಾತ್ಕಾಲಿಕ ಮನೋವೈಕಲ್ಯದ ಮುನ್ಸೂಚನೆಯಿರಬೇಕು!' ಎಂದು ಗಾಬರಿಯಾಗುತ್ತಾನೇ ಹೊರತು ಆಕೆಯ ಭಾವುಕ ಅಭಿವ್ಯಕ್ತಿಯನ್ನೀತ ಸವಿದು ಆನಂದಿಸಲಾರ. ನೋಡಿ, ಯಾವ ಸ್ಥಿತಿಗೆ ತಂದಿದ್ದೇವೆ ಪ್ರೇಮ ಪತ್ರಗಳನ್ನ? ಇಷ್ಟಕ್ಕೂ ನಮ್ಮ ಸಮಾಜದಲ್ಲಿ ಹೆಂಗಸರು ದಕ್ಕಿಸಿಕೊಳ್ಳಬಹುದಾದ ಯಾವ ಸಾಹಿತ್ಯವನ್ನು ನಾವು ಸೃಷ್ಟಿಸಿದ್ದೇವೆ? ಯಾವ ಅನುಭವಗಳಿಗವರನ್ನು ಒಳಪಡಿಸಿದ್ದೇವೆ? ಏನು ತೋರಿಸಿದ್ದೇವೆ? ಯಾವ ಯೋಚನೆಗಳನ್ನೊದಗಿಸಿದ್ದೇವೆ. ಆಕೆ ಉಪ್ಪಿನ ಕಾಯಿ, ಚಟ್ನಿಪುಡಿ, ನಾದಿನಿಯ ಜಗಳ, ಅಮ್ಮನ ಮೊಳಕಾಲು ನೋವಿನ ಹೊರತಾಗಿ ಮತ್ತೇನು ಬರೆಯಬಲ್ಲಳು?

ಇದು ತವರಿಗೂ-ಗಂಡನ ಮನೆಗೂ ನಡುವಿನ ಪತ್ರವ್ಯವಹಾರದ ಮಾತಾಯಿತು. ತವರಿಗೆ ಹೋದಾಕೆ ಎಷ್ಟು ದಿನ ಹೋದಾಳು? ಹೆರಿಗೆಗಲ್ಲದೆ ಮತ್ಯಾವ ಮಹಾನ್ ಸಂದರ್ಭದಲ್ಲಿ ಆಕೆಯನ್ನು ಹೋಗಗೊಡುತ್ತಾನೆ-ಪುರುಷ ಮಹಾಶಯ? ಆಕಸ್ಮಾತ್ ಜಗಳವಾಡಿಕೊಂಡೇನಾದರೂ ಹೋದರೆ, ಅಲ್ಲಿಂದ ಪ್ರೇಮಪತ್ರಗಳು ಬಂದಾವಾದರೂ ಹೇಗೆ? ಹೀಗಾಗಿ ನಮ್ಮ ದೇಶದಲ್ಲಿ ವಿವಾಹಿತರ ನಡುವೆ ಸೃಷ್ಟಿಯಾಗುವ ಪ್ರೇಮಪತ್ರ ಸಾಹಿತ್ಯಕ್ಕೆ ತೀರ ಕಡಿಮೆ ಕಾಲಾವಕಾ

ಶವಿದೆ. ದೂರದಲ್ಲಿದ್ದಾಗಲೇ ಬರೆಯದವರು ಇನ್ನು ಒಂದೇ ಮನೆಯಲ್ಲಿದ್ದಾಗ ಬರೆದುಕೊಳ್ಳುತ್ತಾರಾ? ''ಬರೆಯೋಕೇನು ಹುಚ್ಚಾ?'' ಎಂದೂ ಕೇಳಿಯಾರು.

''ನನ್ನೆದುರಿಗೆ ನೀನು ಕುಳಿತಾಗ ಆಡಲಾಗದ, ಹೇಳಿಕೊಳ್ಳಲಾಗದ ಸಾವಿರ ಸಾವಿರ ಮಾತುಗಳನ್ನು ನಾನು ಪತ್ರದ ಮುಂದೆ ಕುಳಿತು ಆಡಬಲ್ಲೆ. ನಿನ್ನ ಕಣ್ಣುಗಳು ಸೂಸುವ ಅಚ್ಚರಿ, ಪ್ರಶ್ನೆ, ಅನುಮಾನಗಳ ಹೊಡೆತವಿಲ್ಲದೆ ನಿರರ್ಗಳವಾಗಿ ಬರೆಯಬಲ್ಲೆ. ಮಗುವಿನ ಪಕ್ಕದಲ್ಲಿ ನೀನು ನೆಮ್ಮದಿಯಾಗಿ ನಿದ್ದೆ ಹೋದಾಗ ಕಳ್ಳನಂತೆ ಎದ್ದು ಕುಳಿತು ನಾನು ರಾತ್ರಿಯನ್ನೇ ಉರಿಸಿ ದೀಪವಾಗಿಸಿಕೊಂಡು ಪ್ರೇಮ ಪತ್ರ ಬರೆಯಬಲ್ಲೆ. ಸದ್ದಿಲ್ಲದ ನಿನ್ನ ಅಸ್ತಿತ್ವ ನನಲ್ಲಿ ಕಾವ್ಯ ಮೂಡಿಸುತ್ತದೆ. ಜಾವಕ್ಕೊಮ್ಮೆ ಮಗ್ಗಲು ಬದಲಿಸುವ ನೀನು ನನಲ್ಲಿ ಕಲ್ಪನೆಯಾಗಿ ಕದಲುತ್ತೀ'' ಎಂದು ಯಾವನಾದರೂ ಗಂಡ ಪತ್ರವೊಂದನ್ನು ಬರೆದು ಮುಂಜಾನೆ ತನ್ನಾಕೆಯ ಕೈಗೆ ಕೊಡಬಲ್ಲವನಾದರೆ ಅಂಥ ದಾಂಪತ್ಯದ ಆಯುಷ್ಯ ಎಷ್ಟೊಂದು ಸಾರ್ಥಕ! ಆದರೆ ಎಷ್ಟು ಜನಕ್ಕಿದೆ ಈ ಸಹನೆ? ಇಷ್ಟರ ಮಟ್ಟಿಗೆ ಬರೆಯುವ ಸಹನೆಯಿದ್ದವನು ಯಾವುದಾದರೂ ಪತ್ರಿಕೆಗೆ ಬರೆದು ಹಣವನ್ನೂ, ಹೆಸರನ್ನೂ ಮಾಡಿಕೊಳ್ಳುತ್ತಾನೇನೋ, ಹೆಂಡತಿಗೆ ಬರೆದೇಕೆ 'ವ್ಯರ್ಥ'ವಾಗುತ್ತಾನೆ?

ಇನ್ನು ದಂಪತಿಯಲ್ಲದ ಸ್ತ್ರೀ ಪುರುಷ ಸಂಬಂಧಗಳಾದರೆ - ಅವುಗಳಲ್ಲಿ ಪ್ರೇಮಪತ್ರಗಳ ತನಕ ಸಂಬಂಧವನ್ನು ಬೆಳೆಸಿ, ಸಲಹುವ ವ್ಯವಧಾನವೆಲ್ಲಿಯದು? ರಹಸ್ಯ ಮಿಲನಗಳು, ಕಾತುರಗಳು, ದುಷ್ಟವಾಂಛೆಗಳ, ನಿಷಿದ್ಧ ಸಮಾಧಾನಗಳು! ಅಷ್ಟೆ. ಅಲ್ಲಿ ಭಾವುಕತೆ ಮೊಳೆಯುವುದೇ ಅಪರೂಪ. ಇಷ್ಟಕ್ಕೂ, ಪರಸ್ಪರರು ಬರೆದುಕೊಳ್ಳಬೇಕಾದದ್ದೇನಿರುತ್ತದೆ? ಎಂಬ ಭಾವ. ಹಾಗೊಮ್ಮೆ ಬರೆಯಲೇ ಬೇಕಾಗಿ ಬಂದರೆ- ಅದು ಅವರಿಬ್ಬರನ್ನು ಬಿಟ್ಟು ಮೂರನೆಯ ಮನುಷ್ಯಜೀವಿಗೆ ಶತಪ್ರಯತ್ನ ಮಾಡಿದರೂ ಅರ್ಥವಾಗದ Codeಗಳಲ್ಲೋ, ಸಂಜ್ಞೆಗಳಲ್ಲೋ ಪರ್ಯವಸಾನವಾಗಿರುತ್ತದೆ. ಒಂದು ನಿಷಿದ್ಧ ವ್ಯವಹಾರದ ಹೊಂದಾಣಿಕೆಗಳ ಕರಾರು ಪತ್ರದಂತಿರುತ್ತದೆ. ಅದರಲ್ಲೂ ಹೆಂಗಸರು!

ಮಾತಿಗೆ ಕೂತಾಗ ಬಹಿರಂಗ ಭಾಷಣಗಳನ್ನೇ ಮೀರಿಸುತ್ತಾರೆ. ಆದರೆ ಎಂಥ ಪರಿಸ್ಥಿಗಳಲ್ಲೂ ತುಂಡು ಕಾಗದದ ಮೇಲೆ ನಾಲ್ಕು ಸಾಲು ಬರೆದು 'ಕಮಿಟ್' ಆಗಲೊಲ್ಲದ ಜಾಣೆಯರು. ತುಂಬ ನಾನ್ ಕಮಿಟೆಡ್‌ಶೈಲಿಯಲ್ಲಿ ಪತ್ರ ಬರೆದು ಅದಕ್ಕೆ ಸಹಿಯನ್ನೂ ಹಾಕದೆ ಆತನಿಗೆ ತಲುಪಿಸಿಬಿಡುವ ಅವರಿಗೆ ಪ್ರೇಮಪತ್ರವೊಂದು ಜರೂರತ್ತೇ ಹೊರತು, ಅದು ಭಾವೋದ್ರೇಕದ ಆವಿಷ್ಕಾರವಲ್ಲ.

ಅಕಸ್ಮಾತ್ ಯಾವಳಾದರೂ ಹುಡುಗಿ ಭಾವೋದ್ರೇಕದ ಮರೆವಿನಲ್ಲೊಂದು ಸುದೀರ್ಘ ಪತ್ರ ಬರೆದಳೆಂದೇ ಇಟ್ಟುಕೊಳ್ಳಿ. ಅಕಸ್ಮಾತ್ ಅದನ್ನು ಕನ್ನಡದ ಕವಿಯೊಬ್ಬನಿಗೇ ಬರೆದಳೆಂದಿಟ್ಟುಕೊಳ್ಳಿ. ಮುಗಿಯಿತವಳ ಕತೆ! ಆ ಪತ್ರಕ್ಕೆ ಬೇಕಾದರೆ ಲ್ಯಾಮಿನೇಷನ್ನೂ ಮಾಡಿಸಿ, ಕಂಡಕಂಡವರಿಗೆ ಕಾಫಿ ಕುಡಿಸಿ ತೋರಿಸುತ್ತಾ, ತನ್ನ ಪುರುಷತ್ವವನ್ನೂ. ಸ್ತ್ರೀ ಆಕರ್ಷಣಾ ಕೌಶಲವನ್ನೂ ಪ್ರದರ್ಶಿಸುತ್ತ ಊರೂರು ತಿರುಗಿಬಿಡುತ್ತಾನೆ ಕವಿವರ್ಯ. ಹುಡುಗಿ ಯಾರೊಂದಿಗೋ ಮಾತಾಡಿದಳೆಂದು ಕೇಳಿದರೂ ಸಾಕು ಹಗರಣಗಳ ಧಾರಾವಾಹಿಯನ್ನೇ ನಿರ್ಮಿಸಿ ಅವಳ ಬದುಕನ್ನು ಹಾಳು ಮಾಡಿ ಹತ್ತಿ ಬಿತ್ತುವ ನಮ್ಮ ಸಮಾಜ, ಇನ್ನು ಅವಳು ಕೈಯಾರೆ ಬರೆದು ಕಮಿಟ್ ಆಗಿಬಿಟ್ಟರೆ ಸುಮ್ಮನಿದ್ದೀತೆ? ದೈವಕ್ಕಿಂತ, ಭಾವನೆಗಳಿಗಿಂತ ಹೆಚ್ಚಾಗಿ ಸಮಾಜಕ್ಕೆ ಹೆದರುವ, ಬದ್ಧಳಾಗಿರುವ ಹೆಣ್ಣುಮಗಳು ಬರೆಯುವುದೇ ಅಪರೂಪ. ಅಷ್ಟೇಕೆ, 'ನನಗೂ ದಯವಿಟ್ಟು ಬರೆಯಬೇಡಿ' ಎಂದು ಕೈ ಜೋಡಿಸುತ್ತಾಳೆ. ಬಂದ ಪತ್ರವನ್ನು ಅವಸರವಸರವಾಗಿ ಓದಿಕೊಂಡು ಹರಿದೆಸೆಯುತ್ತಾಳೆ. ಒಂದು ರವಿಕೆಯ ಸಂದಿಯ ಹೊರತಾಗಿ, ಅವಳಿಗೆ ಪತ್ರಗಳನ್ನಿಟ್ಟುಕೊಳ್ಳಲು ಮತ್ತಾವುದಾದರೂ ರಹಸ್ಯ

ಸ್ಥಳವನ್ನು ಈ ವ್ಯವಸ್ಥೆ ಕಲ್ಪಿಸಿದೆಯಾ? ಅಂಥ ಹೆಂಗಸು ಅಕಸ್ಮಾತ್ತು ಬರೆದಳೆಂದೇ ಇಟ್ಟುಕೊಳ್ಳಿ - "ಈ ಪತ್ರ, ತಲುಪಿದಕೂಡಲೆ ಇದನ್ನು ಹರಿದು ಹಾಕಿ. ಇಟ್ಟುಕೊಳ್ಳಬೇಡಿ. ನನ್ನ ಮೇಲಾಣೆ. ನಮ್ಮ ಪ್ರೇಮದ ಮೇಲಾಣೆ. ಯಾರ ಕಣ್ಣಿಗಾದರೂ ಬಿದ್ದರೆ ಮುಗಿದೇ ಹೋಯಿತು!" ಎಂದು ಅಂಗಲಾಚುತ್ತಾಳೆ. ಯಾವ ಪತ್ರದುದ್ದಕ್ಕೂ 'ನಿನ್ನ ಪ್ರೇಮದಿಂದಾಗಿ ಜಗತ್ತೇ ಹೊಸ ಬೆಳಕಿನಲ್ಲಿ ಹೊಳೆಯುತ್ತಿದೆ' ಎಂದು ಬರೆಯುತ್ತಾಳೋ ಅದೇ ಪತ್ರದ ಕೊನೆಯಲ್ಲಿ ಈ ಪತ್ರ ಬೆಳಕಿಗೆ ಬಾರದಿರಲಿ ಎಂದು ಅಂಗಲಾಚುವಂಥ ಬಲಹೀನಸ್ಥಿತಿ ಭಾರತದ ಹೆಂಗಸಿನದು.

ಇನ್ನೆಲ್ಲಿ ಮಹಾಕಾವ್ಯಗಳು ಹುಟ್ಟಿ ಬಂದಾವು, ಹೇಳಿ?

ಏಕಾಂತದಲ್ಲಿ ಕೈಗೆ ಸಿಕ್ಕ ವ್ಯಕ್ತಿಯನ್ನು ಸುಟ್ಟು ಕರಕಾಗಿಸಬಲ್ಲಂತಹ ಹಸೀ ಕಾಮ ಅನೇಕರಲ್ಲಿರಬಹುದು. ಆದರೆ ವಾಙ್ಮಯ ಲೋಕದಲ್ಲಿ ಶಾಶ್ವತವಾಗಿ ಉಳಿಯಬಲ್ಲ ಒಂದೇ ಒಂದು ಸುಂದರ ಪ್ರೇಮಪತ್ರ ಬರೆಯಲು ಎಷ್ಟೊಂದು ಸಹನೆ, ಜಾಣ್ಮೆ, ಸಂಸ್ಕಾರ ಮತ್ತು ಹೃದಯವಂತಿಕೆ ಬೇಕು! ಇವೆಲ್ಲ ಇದ್ದೂ, ವ್ಯಕ್ತಿಯೊಬ್ಬನನ್ನು ಅಗಾಧವಾಗಿ ಪ್ರೀತಿಸಬಲ್ಲ ಸ್ನಿಗ್ಧ ಹೃದಯವೂ ಇದ್ದು.... ಬರೆಯಲು ಕೂತಾಗ ಅಕ್ಷರಗಳ ಮಳೆಯನ್ನು ಅಂಗೈಲಿ ಹಿಡಿದು ಪುಟಗಳಿಗೆ ಚೆಲ್ಲಬಲ್ಲ ಕಾವ್ಯ ಶಕ್ತಿಯಿರದಿದ್ದರೆ....? ಅದೂ ಒಂದು ಶಾಪವೇ.

ಸುಂದರ ಪ್ರೇಮಪತ್ರಗಳು ಮೊಳೆತು ನಿಲ್ಲಬೇಕಾದರೆ ಅದನ್ನು ಬರೆದವನಿಗೂ, ಬರೆಸಿಕೊಂಡವಳಿಗೂ ಪರಸ್ಪರರ ಬಗ್ಗೆ ವ್ಯಾಮೋಹ ಮಾತ್ರ ಇದ್ದರೆ ಸಾಲದು. ಪರಸ್ಪರ ಗೌರವವಿರಬೇಕು. ತಮ್ಮ ಭಾವೋದ್ರೇಕ, ಆಕರ್ಷಣೆ, ಅನಿಸಿಕೆಗಳನ್ನೆಲ್ಲ ಅಕ್ಷರಗಳಲ್ಲಿ ಪೋಣಿಸಿಡುವ ಜಾಣ್ಮೆ ಬೇಕು. ಎಷ್ಟೋ ಸಲ ಅನೈತಿಕ ಮತ್ತು ಅರಾಜಕವೆನಿಸುವಂತಹ ಪ್ರೇಮಸಂಬಂಧಗಳಿಗೆ ಒಳಗಾದ ಮನಸ್ಸು ಕೂಡ ಕೊಂಚಮಟ್ಟಿಗಿನ ಸ್ನಿಗ್ಧತೆ ಮತ್ತು ಸೇರವಂತಿಕೆಗಳನ್ನು ಉಳಿಸಿಕೊಂಡಿದ್ದರೆ - ಅದು ಬರೆಸುವ ಪತ್ರಗಳು ಶ್ರೇಷ್ಠಮಟ್ಟದ್ದಾಗಿರುತ್ತವೆ. ಆದರೆ ಪ್ರೇಮವೇ ಇಲ್ಲದ, ಕೇವಲ ಉನ್ಮಾದದಿಂದಾಗಿ ಮೂಡುವ ಪತ್ರಗಳು ಅಪ್ಪಟ ಅಕ್ಷರದ ಹಾದರಗಳಾಗಿ ಬಿಡುತ್ತವೆ. ಹೆಚ್ಚಿನ ಸಲ ಇಂಥ ಪತ್ರಗಳೇ Scandal ಗಳಾಗಿ, ಅಪಕೀರ್ತಿಯ ಕಂತೆಗಳಾಗಿ ಪ್ರಚಾರವಾಗುತ್ತವೆ.

ಕನ್ನಡ ಸಾರಸ್ವತ ಪ್ರಪಂಚದಲ್ಲಿ ಪ್ರೇಮಪತ್ರಗಳಿನ್ನೂ Scandal ಗಳ ಹಂತದಿಂದ ಮುಂದಕ್ಕೆ ಹೋಗಿಲ್ಲ. ಅಪರೂಪಕ್ಕೊಂದೆರಡು ಒಳ್ಳೆಯ ಸಂಕಲನಗಳು ಬಂದಿವೆ. ಆದರೆ ಇಂಗ್ಲಿಷ್ ಭಾಷೆಯಲ್ಲಿ ಪ್ರೇಮಪತ್ರಗಳಿಗೆ ಅದ್ಭುತವಾದ ವೇದಿಕೆ ದೊರೆತಿದೆ. ಆ ದೇಶಗಳಲ್ಲಿ ಮದುವೆ ನಿಶ್ಚಯವಾದ ನಂತರ ಕೆಲಕಾಲ ಗಂಡು-ಹೆಣ್ಣು ಪರಸ್ಪರರನ್ನು ಅರಿಯುವ courting period ಎಂಬ ಕಾಲವೊಂದು ಲಭಿಸುತ್ತದೆ. ಆಗ ಬರೆದುಕೊಳ್ಳುತ್ತಾರೆ ಪತ್ರಗಳನ್ನ. ಇಂಥ ಪತ್ರಗಳ ಇತಿಹಾಸದಲ್ಲಿ Browning ದಂಪತಿಗಳದು ಅತ್ಯುತ್ತಮ ಉದಾಹರಣೆ. ಅವರು ಪರಸ್ಪರ ಪ್ರೀತಿಸಿದರು. ಆದರೆ ಅವರ ಮದುವೆಗೆ ತಂದೆ ಸಮ್ಮತಿಸಲಿಲ್ಲ. ಎಲ್ಲೋ ಅಪರೂಪಕ್ಕೊಮ್ಮೆ ಕದ್ದು ಭೇಟಿಯಾಗಬೇಕು. ಕಡೆಗೊಮ್ಮೆ ಅವರಿಬ್ಬರೂ ಮನೆಗಳಿಂದ ಓಡಿ ಹೋಗಿ ಮದುವೆಯಾದರು. ಅದಕ್ಕಿಂತ ಮುಂಚೆ ದಿನಕ್ಕೊಂದರಂತೆ, ದಿನಕ್ಕೆರಡರಂತೆ ನಿರಂತರವಾಗಿ ಪತ್ರಗಳನ್ನು ಬರೆದೇ ಬರೆದರು. ಮೊದಲೇ ಕವಿಗಳು! ಸಾಲದೆಂಬಂತೆ ಅಗಾಧ ವಿರಹವೊಂದು ಅವರಿಬ್ಬರ ಮಧ್ಯೆ ಕಾಲೂರಿ ನಿಂತಿತ್ತು. ಅವರು ಬರೆದ ಒಂದೊಂದು ಪತ್ರವೂ ಕಾವ್ಯವಾಯಿತು. ಮುಂದೆ ಮದುವೆಯಾದ ಬಳಿಕ ಆ ಪತ್ರಗಳನ್ನೆಲ್ಲ ಭಕ್ತಿಯಿಂದ ಒಂದೆಡೆಗೆ ತೆಗೆದಿರಿಸಿದರು. ಅಷ್ಟೆ! ಮದುವೆಯಾಗಿಹೋಗಿದ್ದರಿಂದ ಮತ್ತೆ ಪತ್ರ ಬರೆಯುವ ಅವಕಾಶ ಸಿಕ್ಕಲಿಲ್ಲ. ಸಾರಸ್ವತ ಲೋಕ ಅತ್ಯುತ್ತಮ ಸಾಹಿತ್ಯದಿಂದ ವಂಚಿತವಾಗಬೇಕಾಯಿತು.

Browning ದಂಪತಿಗಳಿಗೆ ಮದುವೆಯಾಗದೆ ಇದ್ದಿದ್ದರೆ.... ಇನ್ನೆಷ್ಟು ಒಳ್ಳೆಯ ಪತ್ರಗಳು

ಮೂಡುತ್ತಿದ್ದವೋ ಎಂದು ನಿಟ್ಟುಸಿರಿಟ್ಟರು ಜನ. ವಿರಹ ಯಾರಿಗೂ ತಪ್ಪಿದ್ದಲ್ಲ. ಆದರೆ ಎಲ್ಲ ವಿರಹಕ್ಕೂ ಕಾವ್ಯವಾಗುವ ವಿವೇಕವಿರಬೇಕಲ್ಲ? ಎಷ್ಟೋ ಸಲ ವಿರಹವು ಪ್ರೇಮವನ್ನೇ ಕೊಂದುಬಿಡುತ್ತದೆ.

ಕವಿಗಳು ಬರೆದ ಪ್ರೇಮಪತ್ರಗಳಿಗೆ ಸಾರಸ್ವತ ಲೋಕದಲ್ಲಿ ದೊಡ್ಡಸ್ಥಾನವಿದೆ. ಕವಿ ಆಗಸ ದೇಹಿ. ಅವನು ಮಾನಸ ಪುತ್ರ ಎಂಬ ಮಾತು ಸುಳ್ಳಲ್ಲ. ಆತನ ಬದುಕೆಲ್ಲ ಭಾವೋದ್ರೇಕಗಳ ಮೇಲೇ ಸಾಗುವ ದೋಣಿ. ಒಂದು ಕಡೆಯಿಂದ ಇಂಥ ಭಾವಗಳು ಅವನನ್ನು ಸಣ್ಣಗೆ ಸುಡುತ್ತಿದ್ದರೆ ವಾಸ್ತವ ಲೋಕವನ್ನು ಮರೆತು ಚೀರುವ ಅವನ ಆಕ್ರಂದನಗಳು, ನಿಟ್ಟುಸಿರುಗಳೇ ಪತ್ರಗಳಾಗುತ್ತವೆ. ಕವಿತೆಯಾಗುತ್ತವೆ. ಅವನದು ನಿರಂತರ ಅತೃಪ್ತಿ. ತೀರದ ಆತ್ಮದಾಹ. ಯಾವುದೋ ನತದೃಷ್ಟ ಮುಂಜಾವಿನಲ್ಲಿದ್ದು ತನಗೇ ಅರಿವಿಲ್ಲದೆ ಭಾವನೆಗಳೆಂಬ ಇರುವೆ ಗೂಡಿನೊಳಕ್ಕೆ ಕೈಯಿಟ್ಟುಬಿಡುವ ಮೂರ್ಖ, ಮೈತುಂಬ ಹುಚ್ಚೇರಿ ಅಶಾಂತಿಯಿಂದ ಕನಲುತ್ತಿದ್ದರೆ ಅವನ ನೆರವಿಗೆ ಬರಬಲ್ಲ ಏಕೈಕ ಜೀವಿ - ಸ್ತ್ರೀ! ಪ್ರತಿಯೊಬ್ಬ ಮಹಾಕವಿಯೂ ಹುಚ್ಚನೇ. ಯಾವ ಮಹಾಕವಿಯ ಬದುಕಿನಲ್ಲಿ ಇಣುಕಿ ನೋಡಿದರೂ ಅವನ ಭಾವನೆ, ಹುಚ್ಚು, ಉದ್ರೇಕಗಳನೆಲ್ಲ ಭರಿಸಿಕೊಂಡು ಅವನನ್ನು ವಾಸ್ತವತೆಯ ಕ್ರೌರ್ಯದಿಂದ ಕಾಪಾಡಿದ ಸ್ತ್ರೀಯೊಬ್ಬಳು ಖಂಡಿತ ಗೋಚರಿಸುತ್ತಾಳೆ.

ಅವಳಾದರೂ ಪಾಪ, ಸಾಮಾನ್ಯಳೇ ಅಲ್ಲವೆ? ತಾನು ಬದುಕನ್ನೆಲ್ಲ ಹಿಂಡಿ ಧಾರೆಯೆರೆದರೂ ಈ ಹುಚ್ಚ ಮತ್ತೇನನ್ನೋ ಹುಡುಕುತ್ತಾನಲ್ಲ! ಎಂಬ ನೋವಿನಿಂದ ನರಳುತ್ತಾಳೆ. ತನಗೇ ಗೊತ್ತಿಲ್ಲದೆ ಆತ ಸ್ತ್ರೀ ಮೂರ್ತಿಯೊಂದನ್ನು idealize ಮಾಡಿಕೊಂಡು ಆಕೆಯಲ್ಲಿ ಇಲ್ಲದ್ದನ್ನೆಲ್ಲಾ ಊಹಿಸಿ, ಕಲ್ಪಿಸಿ, ಆನಂದಿಸುತ್ತಾನೆಂಬ ರಹಸ್ಯ ಅವಳಿಗಾದರೂ ಏನು ಗೊತ್ತು? ಅವನ ಈ ಹುಚ್ಚು ಪ್ರಯತ್ನಗಳೇ ಅದ್ಭುತವಾದ ಪ್ರೇಮ ಪತ್ರಗಳಿಗೂ, ಲೈಲಾ, ಪಾರ್ವತಿ, ಜೂಲಿಯೆಟ್, ಹೆಲೆನ್, ತಾರಾ ಮುಂತಾದ ಅದ್ಭುತ ಪಾತ್ರಗಳ ಸೃಷ್ಟಿಗೂ ಕಾರಣವೆಂಬುದನ್ನಾಕೆ ಅರಿಯಲಾರಳು. ಈ ಎಲ್ಲ ಪಾತ್ರಗಳು ಕವಿಕಲ್ಪನೆಗಳ ಹುಚ್ಚಾಟಗಳಲ್ಲದೆ, ನಿಜ ಜೀವನದಲ್ಲಿ ಮೈ ಹೊತ್ತು ನಡೆದಾಡಬಲ್ಲ ಯಾವ ಪುಣ್ಯಾತ್ಮಳಲ್ಲಾದರೂ ಕವಿಗಳು ಆರೋಪಿಸಿದ ಈ ಗುಣಗಳಿರಲು ಸಾಧ್ಯವೆ? ಆತ ಪಾತ್ರಗಳೊಂದಿಗೆ ಆಡಿಕೊಳ್ಳುವ ಏಕಾಂತದ ಮಾತುಗಳೇ ಪತ್ರಗಳಾಗಿ, ಕವಿತೆಯಾಗಿ ಹರಿದು ಬರುವುದಷ್ಟೇ ಓದುಗರಿಗೆ ನಿಲುಕುವ ಮೊನೆಗಳು. ಇಂಥ ಕವಿಗಳು ತಮ್ಮ ಸೌಂದರ್ಯ ಕಲ್ಪನೆಗಳನ್ನೂ ದಾಟಿ ಮುಂದಕ್ಕೆ ನಡೆಯಬಲ್ಲವರಾದರೆ ಯೋಗಿಗಳಾಗುತ್ತಾರೆ. ಅವರಿಗಾಗ ಪತ್ರ ಬರೆಯಲೊಂದು object ಬೇಕಿಲ್ಲ. ಯಾರಿಗಾಗಿಯೋ ಬರೆಯಬೇಕಾದ ಪತ್ರಗಳನ್ನು ಅಸ್ತಿತ್ವದಲ್ಲೇ ಇಲ್ಲದ ಸೌಂದರ್ಯ ಮೂರ್ತಿಯೊಂದನ್ನು ಕಲ್ಪಿಸಿಕೊಂಡು ಬರೆಯತೊಡಗುತ್ತಾರೆ.

ಅವರು ಬರೆದ ಕತೆ, ಕಾದಂಬರಿಗಳಲ್ಲಿ ಸಂಕೋಚಗಳಿವೆ. ಓದುಗರೇನನ್ನುತ್ತಾರೋ, ಸಂಪಾದಕರಲ್ಲಿ ತಿರಸ್ಕರಿಸುತ್ತಾರೋ, ವಿಮರ್ಶಕರಲ್ಲಿ 'ನಮಗರ್ಥವೇ ಆಗಲಿಲ್ಲ'ವೆಂದು ಬಿಡುತ್ತಾರೋ ಎಂಬ ಅಪ್ರಜ್ಞಾಪೂರ್ವಕ ಭಯವಿರುತ್ತದೆ. ಇಷ್ಟಕ್ಕೂ ಅವರು ಬರೆಯುವುದು ಯಾರದೋ ಕತೆಯನ್ನ. ಯಾವದೋ ಪಾತ್ರದಲ್ಲಾಗುವ ಕದಲಿಕೆಯನ್ನ. ಎಲ್ಲೋ ಸಂಭವಿಸುವ ಘಟನೆಯನ್ನ. ಆದರೆ ಆತ ತಾನಾಗಿ ಕುಳಿತು ಕಣ್ಣಮುಂದೆ ಕದಲುವ ಗೆಳತಿಗೆ ಬರೆಯಲು ಕುಳಿತಾಗ ಸಂಕೋಚ, ಭಯ, ಮುಖವಾಡಗಳಿಲ್ಲದೆ ಬರೆಯುತ್ತಾನೆ. ಆನಂದವನ್ನು ಹಂಚಿಕೊಂಡಷ್ಟೇ easy ಆಗಿ ತನ್ನ ವಿಕಾರಗಳನ್ನು ಹೇಳಿಕೊಳ್ಳುತ್ತಾನೆ. ಬದುಕಿದ್ದ ವ್ಯಕ್ತಿಯನ್ನರಿಯಬೇಕೆಂದರೆ ಅವನ ಅವನ ಭಾಷಣಗಳನ್ನಲ್ಲ, ಖಾಸಗಿ ಮಾತುಗಳಲ್ಲಿ ಅವನನ್ನು ಹುಡುಕಬೇಕು. ಸತ್ತವನನ್ನರಿಯಬೇಕಾದರೆ ಬರವಣಿಗೆಯನ್ನಲ್ಲ, ಖಾಸಗಿ ಪತ್ರಗಳನ್ನೋದಬೇಕು. ಘಟಾಟ್ಟಲೆ ಆತ್ಮಕಥೆಗಳನ್ನು ಬರೆದು ಬೋರು ಹೊಡೆಸುವು

ದಕ್ಕಿಂತ. ಜೀವಿತ ಕಾಲದಲ್ಲಿ ತಾನು ಬರೆದ ಮತ್ತು ತನಗೆ ಬಂದ ಹತ್ತು ಪತ್ರಗಳನ್ನು ಪ್ರಕಟಿಸಿಬಿಡುವುದು ಹೆಚ್ಚು ಸಮಂಜಸ. ಇವತ್ತಿಗೂ ಓದಿನೋಡಿ, ಇಂಗ್ಲಿಷ್ ಕವಿ ಬೈರನ್, ತೆಲುಗಿನ ಕಾದಂಬರಿಕಾರ ಚಲಂ-ತಮ್ಮ ಖಾಸಗಿ ಪತ್ರಗಳಲ್ಲಿ ಹೆಚ್ಚು ಸ್ಪಷ್ಟವಾಗಿ ಅರ್ಥವಾಗುತ್ತಾರೆ. ಬೈರನ್‌ನ ಗರ್ವ, ಸ್ವಾರ್ಥ, ನಿರ್ಲಕ್ಷ್ಯಗಳು ಎಟುಕಿದಂತೆಯೇ ಚಲಂನ ವ್ಯಾಮೋಹ, ಅಸಹನೆ, ಒಬ್ಬಂಟಿತನ, ವೈರಾಗ್ಯಗಳು ಅವರ ಪತ್ರಗಳಲ್ಲಿ ಸಲೀಸಾಗಿ ನಿಲುಕುತ್ತವೆ.

''ಗೆಳತೀ, ನಿನಗೆ ಪ್ರತಿನಿತ್ಯವೂ ಒಂದು ಪತ್ರ ಬರೆಯಬೇಕೆನಿಸುತ್ತದೆ. ಆದರೆ ಹೆದರಿಕೆ! ಇದೇನು ಬಿಡು, ನಿತ್ಯ ಬರುವ ಕಾಗದ ಕಂತೆ ಅಂತ ಅಗ್ಗವಾಗಿಬಿಟ್ಟತೇನೋ ಎಂಬ ಆತಂಕ. ನೋಡು, ಸೂರ್ಯನಂಥ ಒಂದು ಮಹಾ ತೇಜಸ್ಸು ಪ್ರತಿನಿತ್ಯ ಉದಯಿಸುತ್ತಾನೆಂಬ ಕಾರಣಕ್ಕಾಗಿ ಆತನಂಥ ಆತನೇ ಅಗ್ಗವಾಗಿಬಿಟ್ಟದ್ದಾನೆ. ಒಂದು ಸೂರ್ಯನಮಸ್ಕಾರ ಹಾಕಿ, ಕೊಡೆ ಹಿಡಿದುಬಿಡುತ್ತಾರೆ ಜನ. ಇನ್ನು ಈ ಯಕಃಶ್ಚಿತ್ ಮನುಷ್ಯ ಬರೆಯುವ ಪತ್ರದ್ದೊಂದು ಲೆಕ್ಕವೇ?'' ಎಂದು ಬರೆದಾತ ತನ್ನ ಪತ್ರ, ಸೃಷ್ಟಿಯ ಅಂತಿಮ result ಬಗ್ಗೆಯೂ ಎಷ್ಟು ಕಾಳಜಿಯುಳ್ಳವನಾಗಿದ್ದನೆಂಬುದನ್ನು ನೀವೇ ಊಹಿಸಿ.

ಪ್ರೇಮದ ವಿಷಯದಲ್ಲಿ ಮಹಾ ಅರಾಜಕವಾದಿ ಚಲಂ. 1930ರ ದಶಕದಲ್ಲಿ ಆತನ ಕಾದಂಬರಿಗಳನ್ನೋದಿದ ಆಂಧ್ರದ ಹೆಣ್ಣುಮಕ್ಕಳಿಗೆ ಮದುವೆಯಾಗುವುದು ಕಷ್ಟವಿತ್ತು. ಆತ ಸ್ವೇಚ್ಛಾವಾದಿಯಾಗಿದ್ದ. ತನ್ನ ತಂಗಿಯ ಓರಗೆ ಹುಡುಗಿಯೊಬ್ಬಳನ್ನು ಮದುವೆಯಾಗಲು ತನಗೆ ಅನುಮತಿ ನೀಡಬೇಕೆಂದು ಶೃಂಗೇರಿ ಪೀಠಕ್ಕೆ ಪತ್ರ ಬರೆದಿದ್ದ! ಇಂಥ ಅರಾಜಕವಾದಿ ಲೇಖಕ ಆ ಕಾಲದ ಯುವಕರ ಪಾಲಿನ ಆರಾಧ್ಯದೈವವೂ ಆಗಿದ್ದ. ಎಷ್ಟೋ ಜನ ತಮ್ಮ ಮಡದಿಯರ ಸಮೇತ ಚಲಂ ದರ್ಶನಕ್ಕೆ ಹೋಗುತ್ತಿದ್ದರು.

''ಗೆಳತೀ, ಇಂದು ಬಂದ ಮೂವರು ಯುವಕರೊಂದಿಗೆ, ಅವರ ಹೆಂಡತಿಯರೊಂದಿಗೆ ತುಂಬ ಹೊತ್ತು ಹರಟುತ್ತಿದ್ದೆ. ಕಡೆಗೆ ಅವರು ಹೊರಟು ನಿಂತಾಗ 'ಇನ್ಮೇಲೆ ನಿಮ್ಮ ಮನೆಯವರನ್ನು ಕರೆದುಕೊಂಡು ಬರಬೇಡಿ. ನನ್ನ ಮನಸ್ಸು ಚಂಚಲ. ಆದರಿಂದಾಗಿ ಗೆಳೆತನ ಹಾಳಾಗಬಾರದು ನೋಡಿ' ಎಂದು ಹೇಳಿಬಿಟ್ಟೆ. ಯುವಕರು ವಿಚಿತ್ರವಾಗಿ ನನ್ನೆಡೆಗೆ ನೋಡಿದರು. ನಂಗೊತ್ತು, ನಾನು ಹಾಗೆ ಮಾತಾಡಬಾರದಿತ್ತು. ನನ್ನ ಬರಹಗಳನ್ನೋದಿ ಅಷ್ಟು ದೂರದಿಂದ ಬರುವ ಅವರಿಗಾಗಲೀ, ನನಗಾಗಲೀ ಘನತೆ ತರುವಂಥ ಮಾತುಗಳಲ್ಲ ಅವು. ಆದರೆ ಏನು ಮಾಡಲಿ? ಅಷ್ಟೊಂದು ಗೌರವವಿಟ್ಟುಕೊಂಡು ನನ್ನಲ್ಲಿಗೆ ಬಂದ ಅವರ ಮುಂದೆ ಸತ್ಯ ಹೇಳದೆ ಇರಲು ನನ್ನಿಂದಾಗಲಿಲ್ಲ. ಕ್ಷಮಿಸು, ಇಂಥ ಹುಚ್ಚಾಟಗಳಿಂದ ನಿನ್ನನ್ನೆಷ್ಟು ನೋಯಿಸುತ್ತಿದ್ದೇನೋ? ಇದನ್ನೆಲ್ಲ ಕಂಡು ನೀನೆಲ್ಲಿ ನನ್ನಿಂದ ದೂರವಾಗಿ ಬಿಡ್ತೀಯೊ? ಏನು ಸುಖಪಟ್ಟೆ ನನ್ನನ್ನು ಪ್ರೀತಿಸಿ? ನನ್ನ ಜೊತೆಯಲ್ಲಿ ನೀನು ಹಂಚಿಕೊಂಡದ್ದೆಲ್ಲ
ಲೋಕನಿಂದನೆಯೊಂದೇನಾ?

ಇರಲಿ ಬಿಡು, ನಾನೀಗ ಇಂಗ್ಲೀಷು ಕಾದಂಬರಿಯೊಂದನ್ನ ಅನುವಾದಿಸುತ್ತಿದ್ದೇನೆ. ನಿನ್ನೆ ಸಿಕ್ಕಿತು ಆ ಪುಸ್ತಕ. ಗೋದಾವರಿ ತೀರದಲ್ಲಿ ಕೂತು ಓದತೊಡಗಿದೆ. ಕತ್ತಲಾಯಿತು. ಅಲ್ಲೇ ಬಂಡೆಯ ಮೇಲೆ ಬುಡ್ಡಿದೀಪವಿರಿಸಿಕೊಂಡು ಓದಿ ಮುಗಿಸಿದೆ. ಅನುವಾದಕ್ಕೆ ಕೂಡುವ ಮುಂಚೆ ನಿನಗೀ ಪತ್ರ ಬರೆಯುತ್ತಿದ್ದೇನೆ. ನನ್ನ ಕಾಲಿಗೆ ಮುತ್ತಿಡುತ್ತಾಳೆ ಗೋದಾವರಿ. ಸಾಯಂಕಾಲವಂತೂ ನಿನ್ನ ನೆನಪು ವಿಪರೀತ ಕಾಡುತ್ತಿತ್ತು. ಆಕಾಶದಲ್ಲಿ ಸೂರ್ಯ ಅದೇನು ಗದ್ದಲ ಮಾಡಿದನೋ ಜಗತ್ತೇ ನಾಚಿ ಅದರ ಕೆನ್ನೆಗಳು ಕಿತ್ತಳೆಯಷ್ಟು ಕೆಂಪಾದವು. ಗೋದಾವರಿ ಹದಿನಾರರ ಹುಡುಗಿಯ ಸಡಗರದಲ್ಲಿ ಓಡಿದಳು. ಕಿತ್ತಳೆ ರಂಗು ನನ್ನಲ್ಲಿ ಬಾಲ್ಯದ ಸಂತಸವನ್ನೂ, ಹುಚ್ಚು ಬಯಕೆಗಳನ್ನೂ ನೆನಪಿಗೆ ತರುತ್ತದೆ. ಗೆಳತೀ, ನಿನ್ನನ್ನು ನಾನು ಪ್ರೀತಿಸುತ್ತೇನೆಂಬ

ಒಂದೇ ಒಂದು ವಾಕ್ಯ ಬರೆದು ಮುಗಿಸಬೇಕೆಂದಿದ್ದ ಪತ್ರ ಇಷ್ಟೆಲ್ಲ ನಿಡಿದಾಗಿ ಕಾಲು ಚಾಚಿಕೊಂಡದ್ದು ಅದೇ ಕಿತ್ತಳೆ ರಂಗನ್ನು ಆಕಾಶದಲ್ಲಿ ನೋಡಿದೆನೆಂಬ ಕಾರಣಕ್ಕಾಗಿ!

- ನಿನ್ನವನು 'ಚಲಂ'

ಇಂಥ ಒಂದು ಪತ್ರ ಸಾಕು, ಚಲಂನ ಅರಾಜಕ ಮನಸ್ಸು, ಕವಿ ಹೃದಯದ ಮುಗ್ಧತೆ, ಬದುಕಿನಲ್ಲಿ ಆತನಿಗಿದ್ದ ನೇರವಂತಿಕೆ ಮತ್ತು ಮಾಡಿದ ತಪ್ಪುಗಳ ನಡುವೆಯೂ ಉಳಿದಿದ್ದ ಒಂದು ಸಂಭಾವಿತ ಪ್ರಜ್ಞೆಯ ಪರಿಚಯ ಮಾಡಿಸಲಿಕ್ಕೆ. ಅದಕ್ಕೆಂದೇ ಹೇಳಿದ್ದು, ಸತ್ತವನನ್ನು ಅರ್ಥಮಾಡಿಕೊಳ್ಳಲು ಅವನ ಪ್ರೇಮಪತ್ರಗಳನ್ನೋದಿ ಅಂತ.

★

ನೊಬೆಲ್ ಪ್ರಶಸ್ತಿ ಪಡೆದ ಮಹಾನ್ ಲೇಖಕನೊಬ್ಬನಿಗೆ ಅತ್ಯಂತ ಜರೂರಾಗಿ ಒಂದು ತೀರ ವಿಭಿನ್ನವಾದ ಕಾದಂಬರಿಯನ್ನು ಬರೆಯಬೇಕಾಗಿ ಬಂತು. ಆತ ಪ್ರೇಮದಂತಹ ಒಂದು ಸಾಮಾನ್ಯ ವಿಷಯದ ಮೇಲೆ ಮುನ್ನೂರ ನಲವತ್ತೇಳೂವರೆ ಪುಟಗಳ ಬೃಹತ್ ಕಾದಂಬರಿಯನ್ನು ಬರೆಯಲು ನಿಶ್ಚಯಿಸಿದ. ಕೇವಲ ಮೂರು ವರ್ಷಗಳ ಕೆಳಗೆ ತಾನು ಬರೆದ ಕಾದಂಬರಿಗೆ ನೊಬೆಲ್ ಪಾರಿತೋಷಕ ಸಿಕ್ಕಿದೆ. ಈತ ಮತ್ತೇನು ಅದ್ಭುತವಾದದ್ದನ್ನು ಬರೆದಿಡುತ್ತಾನೋ ಎಂದು ಜಗತ್ತೇ ತನ್ನೆಡೆಗೆ ನೋಡುತ್ತಿದೆ. ಅಂಥ ಸಂದರ್ಭದಲ್ಲಿ, ಪ್ರೇಮದಂತಹ ಪುರಾತನ, ಸರ್ವೇಸಾಮಾನ್ಯ ಹಾಗೂ ಎಲ್ಲರೂ ಕೈಹಾಕಿ ತಮಗೆ ಸಿಕ್ಕದ್ದನ್ನು ಹಿರಿದುಕೊಂಡು ಕೈಬಿಟ್ಟ ಹುತ್ತದಲ್ಲೇ ತಾನೂ ಕೈ ಹಾಕಿ ಹೊಸ ಕೊವೆ ಕೊರೆಯಬೇಕು. ಹೇಗೆ? ಆತ ಐವತ್ತೊಂದು ವರ್ಷ, ಒಂಬತ್ತು ತಿಂಗಳು, ನಾಲ್ಕು ದಿನಗಳ ಕಾಲ ಅವ್ಯಾಹತವಾಗಿ ಹೆಂಗಸೊಬ್ಬಳನ್ನು ಪ್ರೀತಿಸಿದವನ ಕತೆಯನ್ನು ಬರೆಯಲು ನಿಶ್ಚಯಿಸಿದ. ಅದರಲ್ಲೇನು ದೊಡ್ಡಸ್ತಿಕೆಯಿದೆ ಎಂದು ನೀವು ಕೇಳಬಹುದು. ಐವತ್ತೊಂದೇಕೆ, ತೊಂಬತ್ತೊಂದು ವರ್ಷಗಳಾದರೂ ಇನ್ನೂ ಪ್ರೀತಿಸುತ್ತಲೇ ಇರುವ ವೃದ್ಧರು ನಮ್ಮ ಬೀದಿಯಲ್ಲಿದ್ದಾರೆ ಅನ್ನಬಹುದು. ಆದರೆ ನೊಬೆಲ್ ಪ್ರಶಸ್ತಿ ವಿಜೇತನ ಕಾದಂಬರಿಯ ಹೀರೋ ಪ್ರೀತಿಸಿದ್ದು ತನ್ನ ಕಣ್ಣೆದುರಿಗಿದ್ದ, ಒಂದೇ ಮನೆಯಲ್ಲಿ ವಾಸಿಸುತ್ತಿದ್ದ ಖಾಸಾ ಹೆಂಡತಿಯನ್ನಲ್ಲ! ಒಂದು ಕಾಲಕ್ಕೆ ತನ್ನನ್ನು ಪ್ರೀತಿಸಿ, ವಿನಾಕಾರಣ ಕೈಬಿಟ್ಟು ಮತ್ಯಾರನ್ನೋ ಮದುವೆಯಾಗಿದ್ದ ಅತ್ಯಂತ ಕ್ಲಿಷ್ಟ ವ್ಯಕ್ತಿತ್ವದ ಹುಡುಗಿಯನ್ನ!

ಪ್ರೀತಿಸಿದ್ದೆಂದರೆ ಸುಮ್ಮನೆ ಒಂದು ಮೂಲೆಯಲ್ಲಡಗಿ ಕೂತು ಆರಾಧಿಸಿದ್ದಲ್ಲ! ಐವತ್ತೊಂದು ವರ್ಷ, ಒಂಬತ್ತು ತಿಂಗಳು, ನಾಲ್ಕು ದಿನಗಳ ಕಾಲ ತನ್ನ ಪ್ರೇಯಸಿಗಾಗಿ ಕ್ಷಣಕ್ಷಣವೂ ಕಾದು, ಆ ನಿರೀಕ್ಷೆಯಲ್ಲೇ ಬದುಕಿ, ಅವಳಿಗಾಗಿ ತನ್ನ ಎಪ್ಪತ್ತಾರನೆಯ ಇಳಿವಯಸ್ಸಿನಲ್ಲೂ ತಾರುಣ್ಯವುಳಿಸಿಕೊಂಡು ಕಾಯುತ್ತ ಕುಳಿತ ಮಹಾನ್ ಪ್ರೇಮಿಯೊಬ್ಬನ ಬಗ್ಗೆ ಈತ ಕಾದಂಬರಿಯೊಂದನ್ನು ಬರೆಯಲು ಕುಳಿತಾಗ; ನೊಬೆಲ್ ಪ್ರಶಸ್ತಿ ವಿಜೇತನ ನೆರವಿಗೆ ಬಂದ ವಸ್ತು 'ಪ್ರೇಮಪತ್ರ'ವೆಂದರೆ ನಂಬಿ.

ನಾನು ಸ್ಪ್ಯಾನಿಶ್ ಕಾದಂಬರಿಕಾರ ಗ್ಯಾಬ್ರಿಯಲ್ ಗಾರ್ಸಿಯಾ ಮಾರ್ಕ್ವೆಜ್ ಬರೆದ Love in the time of Cholera ಎಂಬ ಕಾದಂಬರಿಯ ಬಗ್ಗೆ ಬರೆಯುತ್ತಿದ್ದೇನೆಂಬುದು ನಿಮ್ಮ ಗುಮಾನಿಯಾಗಿದ್ದರೆ ಅದು ನಿಜ. ಎಂದೋ ಚಿಕ್ಕವನಿದ್ದಾಗ ರಾಜ್‌ಕಪೂರ್ - ನರ್ಗಿಸ್ ನಟಿಸಿದ 'ಆಹ್' ಎಂಬ ಹಿಂದಿ ಸಿನೆಮಾದ ಕಥೆಯ ಹಂದರಕ್ಕೆ ಪ್ರೇಮಪತ್ರಗಳೇ ಬೆನ್ನೆಲುಬಾಗಿದ್ದವು ಎಂಬ ಕಾರಣಕ್ಕಾಗಿ ಅದನ್ನು ಕಣ್ಣರಳಿಸಿ ನೋಡಿದ್ದ ನನಗೆ .... Cholera ಕಾದಂಬರಿಯನ್ನೋದಿ ಬಿಕ್ಕಿ ಬಿಕ್ಕಿ ಅಳುವಷ್ಟು ಆನಂದವಾಗಿತ್ತು. ಇಡೀ ಕಾದಂಬರಿಯೇ ಒಂದು ಪ್ರೇಮಪತ್ರ! ಬಾಲ್ಯ, ಯೌವನ, ನಡುವಯಸ್ಸು, ಸಂಜೆ ಬದುಕಿನ ಮುದಿತನ, ಕಡೆಗೆ ಗೋರಿಯೊಳಗೊಂದು ಕಾಲನ್ನಿರಿಸಿಕೊಂಡಂತಹ ಸ್ಥಿತಿಯಲ್ಲೂ ಮನುಷ್ಯನೊಬ್ಬ ತಾನು ಬರೆಯಬಲ್ಲ ಪ್ರೇಮಪತ್ರಗಳ ಧೀಶಕ್ತಿಯನ್ನು ನಂಬಿಕೊಂಡು ಮುಗುಳ್ನಗುತ್ತಾನೆಂದರೆ ಅದಿನ್ನೆಂತಹ

ಸತ್ಯ

ನಿನ್ನ
ಕವಿತೆಯ
ನಾದ
ನಿನ್ನಲ್ಲಿ
ಕೇಳದಿದ್ದರೆ
ನಿನ್ನ
ಕವಿತೆ
ಕಾಗದದ
ಹೂವಿನಂತೆ

● *ಜ್ಯೋತಿ ಗುರುಪ್ರಸಾದ್*

ಸ್ವಪ್ನಗಳವು! ಅವನಿನ್ನೆಂತಹ ಪ್ರಣಯ ಸಾಧಕ?

ಮಾರ್ಕ್ವೆಜ್‌ನ ಕಾದಂಬರಿ [Love in the time of Cholera] ಯ ನಾಯಕ ತೀರ ಸಾಮಾನ್ಯ ರೂಪಿನ, ಸೋಡಾಬುಡ್ಡಿ ಕನ್ನಡಕದ, ಇಳಿಬಿದ್ದ ಕೆನ್ನೆಗಳ, ನಿಸ್ತೇಜ ಮುಖದ, ಸಣಕಲ! ಮೇಲಾಗಿ ಅಧಿಕೃತ ತಂದೆಯಿಲ್ಲದೆ ಹುಟ್ಟಿದವ. ಆಸ್ಪತ್ರೆಯವರು ಬಳಸಿ ಬಿಸಾಡಿದ ಹಳೆಯ ಅರಿವೆಗಳನ್ನು ರಿಪೇರಿ ಮಾಡಿ ಮಾರುವ ಹಾಗೂ ಜೊತೆಯಲ್ಲೇ ಬಡ್ಡಿವ್ಯಾಪಾರವನ್ನೂ ಮಾಡಿಕೊಂಡು ಮಗನಮೇಲೆ ಆಕಾಂಕ್ಷೆಗಳನ್ನು ರಿಸಿ ಕೊಂಡ ಸೀದಾಸಾದಾ ಹೆಂಗಸೊಬ್ಬಳ ಅವಸರದ ಸಂತಾನ. ಟೆಲಿಗ್ರಾಫ್ ಕಚೇರಿಯೊಂದರಲ್ಲಿ ಮಾಮೂಲಿ ಗುಮಾಸ್ತ. ಅಂಥವನ ಕನ್ನಡಕದ ಕಂಗಳಿಗೆ ಅಪಘಾತವೆಂಬಂತೆ ಕಾಣಿಸಿಕೊಳ್ಳುವ ಅನುರೂಪ ಸುಂದರಿ ಅವನಲ್ಲಿ ಕನಸೊಂದರ ಬೀಜ ಹೂಳುತ್ತಾಳೆ. ಹುಡುಗಿ ಸುಂದರಿ. ಮೇಲಾಗಿ ಶ್ರೀಮಂತೆ. ಶಾಲದಂತೆ ತಂದೆಯ ಒಬ್ಬಳೇ ಮಗಳು. ಈ ಹುಡುಗ ಅವಳ ಹಿಂದೆಯೇ ಸುತ್ತುತ್ತಾನೆ. ಅವಳ ಬಂಗಲೆಯ ಮುಂದಿನ ಕೈತೋಟದಲ್ಲಿ ಕೂತು ಹೊಂಚುತ್ತಾನೆ. ಅವಳು ತನ್ನ ನೆರಿಗೆಗಳ ತುಂಡುಲಂಗವನ್ನು ತೊಡೆಗಳಲ್ಲಿ ಒದೆಯುತ್ತ ಚಕಚಕನೆ ನಡೆಯುತ್ತಿದ್ದರೆ ಅವಳ ಕಡುಗಪ್ಪು ಕಣ್ಣುಗಳು ಪಾತರಗಿತ್ತಿಗಳಂತೆ ಅತ್ತಿತ್ತ ತಾರಾಡುತ್ತವೆ. ಹುಡುಗ ಕುಳಿತಲ್ಲೇ ಕನಸಾಗುತ್ತಾನೆ. ಎದ್ದು ಹೋಗಿ ಅವಳಿಗೆ 'ಹಲೋ' ಅನ್ನುವಂತಿಲ್ಲ. ಎದೆಯ ಪ್ರೀತಿ ಮಾತಾಗಿ ಹೊರಬೀಳುವಂತಿಲ್ಲ. ಶ್ರೀಮಂತ ಸುಂದರಿಗೆ ಸದಾ ಅವಳ ಸೋದರತ್ತೆಯೊಬ್ಬಳ ಸರ್ಪಗಾವಲು. ನಲವತ್ತು ವಸಂತಗಳನ್ನು ಕಾಲಬೂಟಿನಡಿ ತುಳಿದಿಟ್ಟುಕೊಂಡೇ ಆಸೆಗಳನ್ನು ಕೊಂದುಕೊಂಡು ಬದುಕಿನ ಆ ಅವಿವಾಹಿತ ಸೋದರತ್ತೆಗೆ ಒಳಗೇ ಈ ಹುಡುಗನ್ನ ಕಂಡರೆ ಮರುಕ. ಆದರೆ ಅಣ್ಣನ ಮಗಳೆಲ್ಲಾದರೂ ಪ್ರೇಮ-ಗೀಮದ ಸೋಂಕು ತಗುಲಿಸಿಕೊಂಡದ್ದು ಗೊತ್ತಿದ್ದರೆ ತನಗೆ ಅಣ್ಣನ ಮನೆಯಲ್ಲಿ ಸಿಗುವ ಒಪ್ಪತ್ತಿನೂಟಕ್ಕೂ ಮುಳುವಾದೀತೆಂದು ಅಂಜುತ್ತಾಳೆ ಸೋದರತ್ತೆ.

''ಅತ್ತೇ ಆ ಹುಡುಗ ಯಾಕೆ ದಿನಾ ಬರ್‍ತಾನೆ?'' ಕೇಳುತ್ತಾಳೆ ಸುಂದರಿ.

''ನಿನ್ನನ್ನ ಪ್ರೀತಿಸ್ತಾನೇಂತ ಕಾಣತ್ತೆ'' ಅತ್ತೆ ಉತ್ತರಿಸುತ್ತಾಳೆ.

''ಮತ್ತೆ ಮಾತೇ ಆಡಿಸಲ್ಲವಲ್ಲ?''

''ನಾನಿದೀನೀಂತ ಹೆದರ್‍ತಾನೆ. ಅವನ ಪ್ರೀತಿ ನಿಜವಾದದ್ದೇ ಆದ್ರೆ, ಇವತ್ತಲ್ಲ ನಾಳೆ ಅವನು ನಿನಗೊಂದು ಪತ್ರ ಬರೀತಾನೆ ನೋಡ್ತಿರು!'' ಎಂದು ನಗೆಯಾಡುತ್ತಾಳೆ ಅತ್ತೆ. ಆಗಸದ ದೇವತೆಗಳ್ಯಾರೋ 'ತಥಾಸ್ತು' ಅಂದಿರಬೇಕು, ಹುಡುಗ ಅವತ್ತೇ ರಾತ್ರಿ ಕುಳಿತು ಕಣ್ಣೀರಿನಷ್ಟು ದುಂಡಗಿನ ಅಕ್ಷರಗಳಲ್ಲಿ ಹಾಳೆಯ ಎರಡೂ ಬದಿಗೆ ಒಂದು ಮುದ್ದಾದ ಪ್ರೇಮಪತ್ರವನ್ನು ಬರೆಯುತ್ತಾನೆ.

ಬರೆಯುತ್ತಾನೆ - ಅಷ್ಟೆ! ಸರ್ಪಗಣ್ಣಿನ ಸೋದರತ್ತೆ ಪ್ರತಿನಿತ್ಯ ಹುಡುಗಿಯೊಂದಿಗಿರುವಾಗ ಅದನ್ನವಳಿಗೆ ಹೇಗೆ ತಲುಪಿಸಬೇಕೆಂಬುದು ಅರ್ಥವಾಗದೆ ಹಗಲುರಾತ್ರಿ ಕೈತೋಟದ ಕಲ್ಲು ಬೆಂಚಿನ ಮೇಲೆ ಚಡಪಡಿಸುತ್ತ ಕೂಡುವವನ ಜೇಬಿನಲ್ಲಿ ಆ ಪುಟ್ಟ ಪತ್ರ, ದಿನಗಳೆದಂತೆಲ್ಲ ಇಷ್ಟಿಷ್ಟೇ ಬೆಳೆದು, ಹಾಳೆಗೆ ಹಾಳೆ ಸೇರಿಕೊಂಡು, ಖಾಯಿಲೆಯಂತೆ ಬೆಳೆದು, ಮರಿಹಾಕಿ ಕಡೆ

ಗೊಂದು ದಿನ ಎಪ್ಪತ್ತು ಪುಟಗಳ ಖಂಡ ಕಾವ್ಯವೇ ಆಗಿ ಬಿಡುತ್ತದೆ. ಹುಡುಗ ಅದನ್ನವಳಿಗೆ ತಲುಪಿಸುವ ದಾರಿಕಾಣದೆ, ಜೇಬಿನಲ್ಲಿ ಗಂಧಕದಂತಹ ಆ ಪತ್ರವನ್ನಿಟ್ಟುಕೊಂಡು ತಿರುಗಾಡಲೂ ಆಗದೆ ಹತಾಶನಾದಾಗ ಕಂಗೆಟ್ಟ ಮಗನನ್ನು ಕರೆದು ತಾಯಿ ಕೇಳುತ್ತಾಳೆ,

''ಆರೋಗ್ಯ ಸರಿಯಿಲ್ಲವೇ ಮಗನೇ?''

''ಇದೆ!''

''ರಾತ್ರಿ ಕನಸು ಬೀಳುತ್ತದೇನೋ?''

''ಇಲ್ಲ!''

''ಹಗಲು ಕಣ್ಣು ಉರೀತವೇನೋ?''

''ಹೌದಮ್ಮಾ....'' ಅನ್ನುತ್ತಾನೆ.

''ಪ್ರೀತಿಸುತ್ತಿರಬೇಕಲ್ಲ?'' ಎಂದಾಕೆ ತರ್ಕಬದ್ಧವಾಗಿ ಕೇಳಿದಾಗ ಹೌದೆಂಬಂತೆ ಬಲಹೀನವಾಗಿ ನಗುತ್ತಾನೆ. ''ಹುಡುಗಿ ಯಾರೋ?'' ಎಂದು ಕೇಳಿದ್ದಕ್ಕೆ ಜೇಬಿನಿಂದ ಆ ಎಪ್ಪತ್ತು ಪುಟಗಳ ಖಂಡ ಕಾವ್ಯವನ್ನು ಬಿಚ್ಚಿ ಬುಡ್ಡಿದೀಪದ ಸುತ್ತ ಹರವುತ್ತಾನೆ. ಮಗನ ಉನ್ಮಾದ ಕಂಡು ತಾಯಿ ನಗುತ್ತಾಳೆ. ಇಂಥದೊಂದು ವಯಸ್ಸು ಹಿಂದೊಮ್ಮೆ ಅವಳಿಗೂ ಬಂದಿತ್ತಲ್ಲ?

''ಈ ಗಾತ್ರದ ಪ್ರೇಮಪತ್ರ ಒಯ್ದು ಕೊಟ್ಟರೆ ಯಾವ ಹುಡುಗಿಯಾದರೂ ಗಾಬರಿಯಾಗದೆ ಇರುತ್ತಾಳೇನಯ್ಯಾ? ಪುಟ್ಟದಾಗಿ, ಮಟ್ಟಸವಾಗಿ ಬರಿ. ಅದನ್ನ ಕೊಡೋಕೆ ಮುಂಚೆ ಅವಳ ಮೇಲೆ ನಿನಗೆ ಆಸಕ್ತಿಯಿದೆಯೆಂಬುದನ್ನು ಗೊತ್ತು ಮಾಡು. ಇಷ್ಟಕ್ಕೂ ಮೊದಲು ನೀನು ಗೆಲ್ಲಬೇಕಾದುದು ಅವಳನ್ನಲ್ಲ. ಅವಳ ಸೋದರತ್ತೆಯ ವಿಶ್ವಾಸವನ್ನ!'' ಎಂದು ಹಿರಿಯ ಗೆಳತಿಯಂತೆ ಮಗನಿಗೆ ಬುದ್ಧಿ ಹೇಳುತ್ತಾಳೆ.

ಮರುದಿನ ಅವನು ಬಂಗಲೆಯಂಗಳದಲ್ಲಿ ಕುಳಿತ ಹುಡುಗಿಯನ್ನು ನೇರವಾಗಿ ಸಮೀಪಿಸುತ್ತಾನೆ. ಎದುರಿಗಿರುವ ಸೋದರತ್ತೆಯನ್ನು ಒಳಕ್ಕೆದ್ದು ಹೋಗೆಂದು ಆಜ್ಞಾಪಿಸಿ, ಹುಡುಗಿಯ ಕೈಗೆ ಆ ಖಂಡ ಕಾವ್ಯದಿಂದ ಆಯ್ದ ಒಂದೇ ಒಂದು ಹಾಳೆಯನ್ನು ಕೊಟ್ಟು,

''ತಗೋ....ಪ್ಲೀಸ್! ಇಲ್ಲವೆನ್ನಬೇಡ.... ಇದು ನನ್ನ ಸಾವು ಬದುಕಿನ ಪ್ರಶ್ನೆ'' ಎಂದು ಅಂಗಲಾಚುತ್ತಾನೆ. ಹುಡುಗಿ ಕೊಂಚ ಹಿಂದೇಟು ಹಾಕಿದರೂ ಕಡೆಗೆ ಅದನ್ನಿಸಿದುಕೊಂಡು,

''ಸರಿ, ತಗೊಂಡಿದೀನಿ - ಆಯ್ತಾ? ಇದಕ್ಕೆ ನಾನು ಉತ್ತರ ಕೊಡೋತನಕ ಮನೇಹತ್ರ ಬರಬೇಡ'' ಎಂದು ಹೇಳಿ ಕಳಿಸುತ್ತಾಳೆ. ಅವನು ಉತ್ತರಕ್ಕಾಗಿ ಕಾಯುತ್ತ ಕೂಡುತ್ತಾನೆ. ಊಟ, ನಿದ್ರೆ, ಮಾತು, ಕೆಲಸ ಯಾವುದೂ ಬೇಡವಾಗುತ್ತದೆ. ಉತ್ತರ ಬರುವುದೇ ಇಲ್ಲ. ಕಡೆಕಡೆಗೆ ಅವನ ಆರೋಗ್ಯ ಕೆಟ್ಟು ಮೊದಲೇ ಒಣಗಿಕೊಂಡಿದ್ದ ಅಸ್ಥಿಪಂಜರದಂತಹ ಮೈಯ್ಯಿಂದ ಬೆಳ್ಳಗಿನ ತರಕು ತರಕಾದ ವಾಂತಿ ಕಾರಂಜಿಯಂತೆ ಚಿಮ್ಮತೊಡಗಿದಾಗ ಅಮ್ಮ ಗಾಬರಿಯಾಗುತ್ತಾಳೆ. ಮಗನಿಗೆಲ್ಲೋ ಕಾಲರಾ ಬಂತೆಂಬ ಗುಮಾನಿಯಲ್ಲಿ ವೈದ್ಯರಲ್ಲಿಗೆ ಓಡುತ್ತಾಳೆ.

''ಇದು ಕಾಲರಾ ಅಲ್ಲಮ್ಮಾ.... ಪ್ರೇಮ! ಎರಡೂ ಒಂದೇ ಥರದವು....'' ಎಂದು ಹೇಳಿಕಳಿಸುತ್ತಾನಾತ. ಕಡೆಗೊಂದು ದಿನ ಹುಡುಗ ಮತ್ತೆ ಅಂಗಳದೊಳಕ್ಕೆ ನುಗ್ಗುತ್ತಾನೆ.

''ಎಲ್ಲಿ ನಿನ್ನ ಉತ್ತರ?'' ಕೇಳುತ್ತಾನೆ.

''ಬರೀಲಿಲ್ಲ'' ನಸುಗುತ್ತಾಳೆ ಸುಂದರಿ.

''ಮಾತು ಕೊಟ್ಟವಳು.....ತಪ್ಪಿಸಬಾರದಿತ್ತು'' ರೇಗುತ್ತಾನೆ. ''ಯಾಕೆ ಬರೀಲಿಲ್ಲ?'' ದಬಾಯಿಸುತ್ತಾನೆ.

''ಬರಿಯೋದು ಹ್ಯಾಗೇಂತ ಗೊತ್ತಾಗಲಿಲ್ಲ....'' ಪೆದ್ದು ಪೆದ್ದಾಗಿ ಹೇಳುತ್ತಾಳೆ.

ಆದರೆ ವಯಸ್ಸು ಬರೆಯೋದನ್ನಷ್ಟೇ ಅಲ್ಲ, ಅದನ್ನವನಿಗೆ ತಲುಪಿಸುವುದನ್ನೂ ಕಲಿಸುತ್ತದೆ. ಜಗತ್ತಿನ ಕಣ್ಣಿಂದ ಬಚಾವಾಗುವುದೂ ಕಲಿಸುತ್ತದೆ. ಅವನು ರಾತ್ರಿಯಿಡೀ ನಿದ್ರೆಗೆಟ್ಟು ಬುಡ್ಡಿದೀಪದ ಹೇಗೆ ಕುಡಿಯುತ್ತ ತನ್ನ ಕಣ್ಣು-ಕನ್ನಡಕಗಳನ್ನು ನೋಯಿಸಿಕೊಂಡು ಪುಟಗಟ್ಟಲೆ ಬರೆಯುತ್ತಾನೆ. ಅವಳು ತನ್ನ ಹಿಸ್ಟರಿ ಪಾಠದಿಂದ, ಜಾಮೆಟ್ರಿ ಪರೀಕ್ಷೆಯಿಂದ, ಕೆಮಿಸ್ಟ್ರಿಯ ಬೋರಿನಿಂದ ಅವನಿಗಾಗಿ ಇಷ್ಟಿಷ್ಟೇ ಸಮಯ

ಪ್ರಿಯ ಓದುಗರೆ,

ನಿಮ್ಮಿಂದೊಂದು ಉಪಕಾರವಾಗಬೇಕಿದೆ. ದಿವಂಗತ ಟಿ.ಪಿ. ಕೈಲಾಸಂ ಅವರು ಬರೆದ 'ಕೀಚಕ'ನ ಕುರಿತಾದ ನಾಟಕ (ಇಂಗ್ಲಿಷ್ ಅಥವಾ ಕನ್ನಡ)ದ ಪ್ರತಿ ತಮ್ಮಲ್ಲಿದ್ದರೆ ದಯವಿಟ್ಟು ನಮ್ಮ ವಿಳಾಸಕ್ಕೆ ಕಳಿಸಿಕೊಡುತ್ತೀರಾ ? ಪುಸ್ತಕ ಕಳಿಸಲಾಗ ದಿದ್ದಲ್ಲಿ ಅದರ ಜೆರಾಕ್ಸ್ ಪ್ರತಿ ಕಳಿಸಿದರೂ ಜೆರಾಕ್ಸ್ ವೆಚ್ಚ ಮತ್ತು ಅಂಚೆ ಖರ್ಚು ವಹಿಸಿಕೊಳ್ಳುತ್ತೇವೆ. ನಿಮ್ಮ ಉಪಕಾರ ಸ್ಮರಿಸುತ್ತೇವೆ.

-ಸಂಪಾದಕರು

ವನ್ನು ಕದ್ದು, ಶಾಲೆಯ ಟೀಚರುಗಳ ಕಣ್ಣು ತಪ್ಪಿಸಿ ಪುಟ್ಟ ಪುಟ್ಟ ಪ್ರೇಮಪತ್ರಗಳನ್ನು ಬರ ಯುತ್ತಾಳೆ. ಅವಳ ಪತ್ರಗಳೇನಿದ್ದರೂ ತನ್ನ ನೋಟುಬುಕ್ಕಿನ ಕಡೆಯ ಪುಟಗಳಲ್ಲಿ ಅವಸರ ದಿಂದ ಬರೆದು, ಹಾಳೆ ಹರಿದು ಮಡಚಿಕೊಟ್ಟಂ ಥವು. ಕೈ ಸುಡಬಾರದು, ಆದರೆ ಪ್ರೇಮಾಗ್ನಿ ಜಾಗೃತವಾಗಿರಬೇಕು ಎಂಬ ಜಾಣತನದ ಬರವ ಣಿಗೆ ಅವಳದು. ಇವನು ಹಾಗಲ್ಲ. ಪ್ರತಿ ರಾತ್ರಿಯೂ ಒಂದೊಂದು ಯಜ್ಞ! ತನ್ನ ಮೈಯ್ಯ ಮೂಳೆ, ಮಾಂಸ, ಮಜ್ಜೆಗಳನ್ನೆಲ್ಲ ಸಮಿಧೆಗಳನ್ನಾಗಿ ಸುಟ್ಟು, ತಾನೇ ಬೆಂಕಿಯಾಗಿ ಉರಿದು ಹೋಗಿ ಪ್ರೇಮವನ್ನು ನಿರಂತರವಾಗಿ ಜಾರಿಯಲ್ಲಿಡಬೇಕೆಂಬ ಹುಚ್ಚು ಹಂಬಲದ ಹುಡುಗ. ಅವಳು ಬರೆಯುತ್ತಿದ್ದುದಾದರೂ ಏನು? ಅಂಗಡಿ ಶೆಟ್ಟಿಯ ಲೆಕ್ಕದಂತೆ, ಹಾಲು ಮಾರುವ ಗೌಳಿಯ ಗುರುತಿನ ಬೊಟ್ಟುಗಳಂತೆ - ಅವಳ ಬರವಣಿಗೆ. ಬೆಳಗ್ಗೆ ಎದ್ದೆ, ಹಲ್ಲುಜ್ಜಿದೆ, ಸ್ನಾನ ಮಾಡಿ ಬಂದು ಕನ್ನಡಿ ನೋಡಿಕೊಂಡೆ - ನೀನು ನೆನಪಾದೆ. ಅಪ್ಪ ಹೊಸ ಪುಸ್ತಕ ತಂದುಕೊಟ್ಟ, ಅತ್ತೆ ಹುಶಾರಾಗಿರು ಎಂದಳು. ಬಯಾಲಜಿಯ ಪಾಠದಲ್ಲಿ ಪರಾಗಸ್ಪರ್ಶವೆಂಬ ಪಾಠವಿದೆ. ಓದುವಾಗ ನೀನು ನೆನಪಾದೆ. ಸಂಜೆ ಹಿಸ್ಟರಿ ಓದಿದೆ. ಮಲಗುವ ಮುನ್ನ ಭೂಗೋಳ. ಈಗ ರಾತ್ರಿ, ಹತ್ತೂವರೆಯಾಗಿದೆ, ನಿದ್ದೆ ಬರ್‍ತಿದೆ - ಕನಸಿಗೆ ನೀನು ಬಾ. ಗುಡ್‌ನೈಟ್!

ಅಷ್ಟೇ. ಅವಳ ಪತ್ರಗಳೇ ಅಷ್ಟು. ಅವಳ ಪ್ರಪಂಚವೇ ಅಷ್ಟು. ತನ್ನದೇ ಪಿಚ್ [Pitch] ನಲ್ಲಿ ನಿಂತು ತಾನೇ ಚಿಮ್ಮಿದ ಬಾಲನ್ನು ಬೌಂಡ ರಿಗಟ್ಟುವ ಕಡು ಜಾಣೆ. ಅವಳಿಗೆ ಚೆಂಡು ಕಳೆದೀತೆಂಬ ದುಗುಡವಿಲ್ಲ. ಹೇಗಿದ್ದರೂ ಅವನು ಬೌಂಡರಿ ಕಾಯುತ್ತಾನೆಂಬ ಕುರುಡು ವಿಶ್ವಾಸ.

ಆದರೆ ಹುಡುಗ ಹಾಗಲ್ಲ. ತಾನಿದ್ದ ಬಯಲ ಬೀದಿಯಿಂದ ಹೊರಟು, ಅವಳ ಕತ್ತಲ ಕುಹರ ದಂತಹ ಶ್ರೀಮಂತ ಕೋಟೆಯ ದಿಡ್ಡಿಬಾಗಿಲನ್ನು ಬರಿಗೈಯ್ಯಲ್ಲಿ ತಡವಿ, ಹೇಗೋ ಒಳಹೊಕ್ಕು, ಮುತ್ತುಗಳ ಮಂಚದಲ್ಲಿ ಹೂವಾಗಿ ಮಲಗಿದ ವಳ ಮನಸ್ಸುಗೆಲ್ಲಬೇಕು. ಅವನು ಬರೀ ದಿನ ಚರಿ ಬರೆದರೂ ಅದು ಪುಟಗಟ್ಟಲೆಯಾಗುತ್ತದೆ. ಪ್ರೇಮ - ಅವನ ಪಾಲಿಗೆ ಪಾರ್ಟ್‌ಟೈಂ ನೌಕರಿಯಲ್ಲ. ಅದು ವೃದ್ಧಾಪ್ಯದ ಸಂತಸಕ್ಕಾಗಿ ದುಡಿಯುವ ಗ್ರಾಚ್ಯುಟಿ! ಬರವಣಿಗೆಯೊಂದು ಶ್ರದ್ಧಾವಂತ ತಪಸ್ಸು. ಬರೆದು ಬರೆದು ಸೋತು ಹೋಗುತ್ತಿದ್ದ ಹುಡುಗ ಕಡೆಗೆ ತನ್ನ ಪಾಲಿಗೆ ಇನ್ನು ಅಕ್ಷರಗಳೇ ಸಿಗವು ಎನಿಸತೊಡಗಿದಾಗ ಪುಸ್ತಕಗಳ ಮೊರೆ ಹೋಗುತ್ತಾನೆ. ಪ್ರೇಮ - ಓದಲು ಕಲಿಸುತ್ತದೆ. ಪ್ರೇಮಸಾಹಿತ್ಯದ ಹೆಸರಿ ನಲ್ಲಿ ತಾನು ಎಲ್ಲ ಭಾಷೆಗಳಲ್ಲೂ ಬಂದ ಕತೆ, ಕವಿತೆ, ಪುರಾಣ, ಪುಣ್ಯಕತೆಗಳನ್ನೆಲ್ಲ ಓದಿ - ಅದರೊಳಗಿನ ಪ್ರೇಮದ ಸಾಲುಗಳನ್ನೆಲ್ಲ ಕದ್ದು ಕದ್ದು ಅವಳ ಪತ್ರಗಳೊಳಕ್ಕೆ ತುಂಬುತ್ತಾನೆ. ನಿರ್ಜೀವ ಕರುವಿನ ಮೈಯ್ಯಲ್ಲಿ ಬತ್ತದ ಹುಲ್ಲು ತುಂಬಿ ಹಸುವಿನ ಕೆಚ್ಚಲಿಗದರ ಮೂತಿ ತಾಕಿಸಿ ಹಾಲು ಕರೆಯುವ ಗೌಳಿಯಂತೆ, ಯಾರೋ ಕಂಡ ಕನಸುಗಳನ್ನೆಲ್ಲ ಕದ್ದು ತಂದು ಅವಳ ಕಣ್ಣುಗಳಿಗೆ ತುಂಬುತ್ತಾನೆ. ಅವಳಿಗಾಗಿ ಓದುತ್ತ ಓದುತ್ತ ತನ್ನೊಳಗೊಂದು ಲೈಬ್ರರಿಯನ್ನೇ ಗರ್ಭೀಕರಿಸಿಕೊಳ್ಳುತ್ತಾನೆ.

ಇಷ್ಟೆಲ್ಲ ಬರೆದರೂ ಅವರು ನೇರವಾಗಿ ಒಬ್ಬರ ಕೈಗೊಬ್ಬರು ಪತ್ರಗಳನ್ನು ಕೊಟ್ಟುಕೊ ಳ್ಳುವಂತಿಲ್ಲ. ನಿಂತು ಮಾತಾಡುವಂತಿಲ್ಲ. ಕುಳಿತು ಮೈಮರೆಯುವಂತಿಲ್ಲ. ಮೊಳೆತು ನಿಂತ

ನಿಷಿದ್ಧ ಪ್ರೇಮಕ್ಕೆ ಸಂವಹನದ ಸಮಸ್ಯೆ. ಹುಡುಗಿ ತನ್ನ ಪತ್ರವನ್ನು ಮರದ ಪೊಟರೆಯೊಂದರಲ್ಲಿಟ್ಟು ಹೋಗುತ್ತಾಳೆ. ಅವನು ಆನಂತರ ಬಂದು ಅದನ್ನು ಎತ್ತಿಕೊಳ್ಳುತ್ತಾನೆ. ತನ್ನ ಪತ್ರಕ್ಕೆ ಉತ್ತರ ಬರೆದು ಯಾವ ಜಾಗದಲ್ಲಗಿಸಿಡಬೇಕೆಂಬುದನ್ನು ಅವಳೇ ಸೂಚಿಸಿರುತ್ತಾಳೆ. ಈತ ತಪ್ಪದೆ ಉತ್ತರವನ್ನಿಟ್ಟು ಬರುತ್ತಾನೆ. ದಿನಕ್ಕೊಂದು ಜಾಗ ಬದಲಾಯಿಸಬೇಕು. ಹೊಸ ಜಾಗ ಹುಡುಕಬೇಕು! ಹೀಗಾಗಿ ಆ ಊರಿನ ಮರದ ಪೊಟರೆಗಳು, ಗೋಡೆಯ ಬಿರುಕುಗಳು, ಬಾಗಿಲ ಸಂದಿಗಳು, ಬಂಡೆಗಳ ಕೊರಕಲುಗಳು, ಹಾದಿಯಲ್ಲಿನ ತೆಗ್ಗುಗಳು, ತೋಟದಲ್ಲಿನ ಮೊಗ್ಗುಗಳು..... ಎಲ್ಲವೂ ಅವರಿಬ್ಬರ ಅದಮ್ಯ ಪ್ರೇಮದ ಅಸಂಖ್ಯ ಪತ್ರಗಳನ್ನಡಗಿಸಿಟ್ಟುಕೊಂಡು ಸಮಯಕ್ಕೊದಗುವ ಮೂಕ ಸಾಕ್ಷಿಗಳಾಗುತ್ತವೆ.

ಎಷ್ಟೋ ಪತ್ರಗಳು ಕೊಳೆಯಾಗಿ, ಮಣ್ಣಾಗಿ, ಬಿಸಿಲಲ್ಲಿ ಒಣಗಿ, ಮಳೆಗೆ ತೊಯ್ದು, ಇಬ್ಬನಿಗೆ ಮಂಕಾಗಿ, ಕೆಲವೊಮ್ಮೆ ಹರಿದು ಹೋಗಿ, ಇನ್ನೊಮ್ಮೆ ಕಾರಣವೇ ಇಲ್ಲದೆ ಕಳೆದು ಹೋಗಿ.... ಅಂತೂ ಅವರಿಬ್ಬರ ಕೈಗೆ ನಾನಾ ರೂಪದಲ್ಲಿ ದೊರಕುತ್ತವೆ. ಆ ನಿಷಿದ್ಧ ಪ್ರೇಮವನ್ನು ಅದ್ಹೇಗೋ ಒಟ್ಟಿನಲ್ಲಿ ಜೀವಂತವಾಗಿರಿಸುತ್ತದೆ.

ಮಾರ್ಕ್ವೆಜ್ ಸೃಷ್ಟಿಸುವ ಪ್ರೇಮಪತ್ರಗಳು ಕೇವಲ ಕಾಗದದ ಕಂತೆಗಳಲ್ಲ. ಅವುಗಳಲ್ಲಿ ಹದಿನಾಲ್ಕರ ಹುಡುಗಿಯೊಬ್ಬಳು ಹದಿನೆಂಟರ ಯುವಕನೊಂದಿಗೆ ಮಾಡಿಕೊಂಡ ಮುಗ್ಧ ಒಪ್ಪಂದಗಳಿವೆ. ಕಟ್ಟಿಕೊಂಡ ಬಣ್ಣದ ಕನಸುಗಳಿವೆ. ತೋಡಿಕೊಂಡ ದುಗುಡಗಳಿವೆ. ಭಾವೋದ್ರೇಕದ ಮಡುವುಗಳಿವೆ. ಅವಳು ಕೇವಲ ಪತ್ರ ಕೊಡುವುದಿಲ್ಲ. ಅದರೊಂದಿಗೊಂದು ಮಣಿ, ಒಂದು ನವಿಲಗರಿ, ಎಂಥದೋ ಬಣ್ಣದ ಕಲ್ಲು, ಕೆಲವೊಮ್ಮೆ ಬಳಪ, ಮತ್ತೊಮ್ಮೆ ಬೆಳ್ಳಿಯ ಬ್ಯಾಗಡಿ, ಚಿನ್ನಾರಿ ಕಾಗದ, ಕೊರಳ ಚೈನು, ಬೆಳ್ಳಿದಾರ, ಒಣಗಿದೆಲೆ, ಎಲೆಯ ನರಗಳು ಪುಸ್ತಕದಲ್ಲಿ ಅಡಗಿಸಿಟ್ಟ ದೇವರ ಫೋಟೋ.....ಒಂದೇ ಎರಡೇ? ಸುತ್ತಲಿನ ವ್ಯಾವಹಾರಿಕ ಜಗತ್ತಿನ ದೃಷ್ಟಿಯಲ್ಲಿ ಯಾತಕ್ಕೂ ಕೆಲಸಕ್ಕೆ ಬಾರದ ಅದೆಲ್ಲ ವಸ್ತುಗಳು ಪ್ರೇಮಿಗಳ ಪಾಲಿಗೆ ಭಾರತವು ಅಡವಿಟ್ಟ ಕೇಜಗಟ್ಟಲೆ ಚಿನ್ನಕ್ಕಿಂತ ಹೆಚ್ಚು ಪ್ರಶಸ್ತವಾದವು. ಅವುಗಳ ಪೈಕಿ ಒಂದನ್ನೂ ಕಳೆಯದೆ, ಅಕಸ್ಮಾತ್ತಾಗಿ ದೊರಕುವ ಏಕಾಂತದಲ್ಲಿ ಒಂದೊಂದನ್ನೇ ಪ್ರೀತಿಯಿಂದ ನೇವರಿಸುತ್ತ ಮಧುರವಾದ ನೋವನ್ನೂ, ಒರಟಾದ ಪುಳಕವನ್ನೂ ಅನುಭವಿಸುತ್ತಾರೆ.

ಅದೊಮ್ಮೆ ಹುಚ್ಚು ಹುಡುಗಿ ತನ್ನ ತಲೆಗೂದಲ ಎಳೆಯೊಂದನ್ನು ಪತ್ರದ ಬೆನ್ನಿಗೆ ಪ್ರೀತಿಯಿಂದ ಅಂಟಿಸಿ ಕಳಿಸುತ್ತಾಳೆ. ಕೆಲವೇ ದಿನಗಳಲ್ಲಿ ತಂದೆಯ ಕೈಗೆ ಸಿಕ್ಕು ಬೀಳುವ ಹುಡುಗಿ ಪ್ರೇಮಿಯಿಂದ ಬೇರ್ಪಟ್ಟ ಆಕ್ರೋಶದಲ್ಲಿ ತನ್ನಿಡೀ ಜಡೆಯನ್ನು ಕತ್ತರಿಸಿ ಮಖಮಲ್ ಬಟ್ಟೆ ಸುತ್ತಿದ ಬಾಕ್ಸೊಂದರಲ್ಲಿ ಹಾಕಿ 'ಇದು ಕೊನೆಯ ಕೊಡುಗೆ'ಯೆಂದು ಬರೆದು ಕಳಿಸುತ್ತಾಳೆ.

ಅಲ್ಲಿಗೆ ಮುಗಿಯಿತೆಂದುಕೊಳ್ಳುತ್ತೇವೆ - ಮಾರ್ಕ್ವೆಜ್‌ನ ಕಾದಂಬರಿಗೆ ಪ್ರೇಮ ಪತ್ರಗಳ ನೆರವು. ಇಲ್ಲ, ಏಳು ಟೆಲಿಗ್ರಾಫ್ ಕೇಂದ್ರಗಳನ್ನು ಬಳಸಿ ಮೈಲುಗಟ್ಟಲೆ ದೂರದಲ್ಲಿರುವ ತನ್ನ ಹುಡುಗಿಯ ಸಂಪರ್ಕವನ್ನು ಸಾಧಿಸಿ ಕುಳಿತಲ್ಲಿಂದಲೇ ಟೆಲಿಗ್ರಾಫಿಕ್ ಕೋಡ್‌ಗಳಲ್ಲಿ ಗೆಳತಿಯೆದುರು ತನ್ನ ಪ್ರೇಮ, ವಿರಹ, ಯಾತನೆಗಳನ್ನೆಲ್ಲ

ಎಲ್ಲಿ ?

ತಾಯಾಗಲಿರುವ ನನ್ನವಳು ಕೇಳಿದಳು
''ಮಹೋನ್ನತ ಕಲ್ಪನೆಗಳಿರುವದು
ಅನಂತವಾದ ಆಕಾಶದ ಎದೆಯಲ್ಲಿಯೋ:
ಭೋರ್ಗರೆವ ಕಡಲ ಒಡಲಲ್ಲಿಯೊ
ಅಥವಾ ಕವಿಯ ಕಣ್ಣಲ್ಲಿಯೋ?''
ಪಾಪ ಅವಳಿಗೆ ಗೊತ್ತಿಲ್ಲ
ತನ್ನ ಬಸಿರಲ್ಲಿಯೆಂದು

● ಎಂ.ಡಿ. ವಕ್ಕುಂದ

ಉಮ್ಮಳ

ಹೇಸಿ ನನ್ನ ಜನುಮ ಹಕ್ಕಿಯಾಕಾಗಲಿಲ್ಲ।
ಕೋಗಿಲ್ಹಂಗ
ನನ್ನ ಉಮ್ಮಳ ಉಕ್ಕೇರಿ ಹಾಡಾಕ।
ಹಾರ್ಹೋಗಿ ನಲ್ಲನ ಕೂಡಾಕ।

● ಬಸವರಾಜ ಹಂಜೆ

ಗುಡ್ಡೆಯಾಗಿ ಸುರುವುತ್ತಾನೆ ಹುಡುಗ. ಸಿಕ್ಕು ಬಿದ್ದಾಗ ಅವಳ ತಂದೆ ಬಲವಂತವಾಗಿ ಕಿತ್ತುಕೊಂಡ ಮೂರುವರ್ಷಗಳ ಕರೆಸ್ಪಾಂಡೆನ್ಸು ಈಗ ಒಂದೇ ವರ್ಷದಲ್ಲಿ ಅದರ ದುಪ್ಪಟ್ಟಾಗಿ ಬೆಳೆಯುತ್ತದೆ. ಅದೂ ಟೆಲಿಗ್ರಾಮುಗಳ ರೂಪದಲ್ಲಿ. ಇದಲ್ಲವೇನ್ರೀ ಪ್ರೇಮದ ಹುಚ್ಚಾಟದ ಪರಾಕಾಷ್ಠೆ?

ಮುಂದೆ ಕಾದಂಬರಿಗೆ ಹತ್ತಾರು ತಿರುವು. ಅಷ್ಟೊಂದು ಪ್ರೀತಿಸಿದ ಹುಡುಗನನ್ನು ವಿನಾಕಾರಣ ನಿರ್ದಾಕ್ಷಿಣ್ಯವಾಗಿ 'Shit! ನೀನು ನನಗೆ ಬೇಡ' ವೆಂದುಬಿಡುತ್ತಾಳೆ. ಮತ್ತೊಬ್ಬನನ್ನು ಮದುವೆಯಾಗುತ್ತಾಳೆ. ಇವನನ್ನು ಪ್ರಶ್ನೆ ಪತ್ರಿಕೆಯ ಉತ್ತರಿಸದ ಪ್ರಶ್ನೆಯೆಂಬಂತೆ ಮರೆತೂಬಿಡುತ್ತಾಳೆ.

ಆಗ ಶುರುವಾಗುತ್ತದೆ; ಇವನ ಐವತ್ತೊಂದು ವರ್ಷ, ಒಂಬತ್ತು ತಿಂಗಳು, ನಾಲ್ಕು ದಿನಗಳ ಅಖಂಡ ನಿರೀಕ್ಷೆಯ ಕಾಲ. ಅದೇ ನಿಜವಾದ ಪ್ರೇಮ ಕಾಲವು ಕೂಡ. ಯಾರದೋ ಹೆಂಡತಿಯಾಗಿ, ಅವನ ಮಕ್ಕಳ ತಾಯಿಯಾಗಿ, ಗೌರವಯುತ ಹೆಣ್ಣು ಮಗಳಾಗಿ ಜೀವಿಸುತ್ತಿರುವ ಅವಳು ಒಂದಲ್ಲ ಒಂದುದಿನ ತನ್ನಲ್ಲಿಗೆ ಬರುತ್ತಾಳೆ. ಬಂದೇ ತೀರಬೇಕು! ಎಂಬ ಹುಚ್ಚು ನಿರ್ಧಾರದೊಂದಿಗೆ ಬ್ರಹ್ಮಚಾರಿಯಾಗೇ ಉಳಿದು ಬಿಡುವ ಈತ ಬದುಕಿಗಾಗಿ, ಮಳೆಗಾಗಿ, ಅದೃಷ್ಟಕ್ಕಾಗಿ, ಹೊಸಬೆಳಕಿಗಾಗಿ ಕಾಯುವ ಇಡೀ ಮನುಕುಲದಂತೆ ಅವಳಿಗಾಗಿ ಕಾಯುತ್ತ ಕೂಡುತ್ತಾನೆ.

ಆದರೆ ಎದೆಯಲ್ಲಿ ಉಜಿಕಿ ಬರುವ ಹುಚ್ಚು ಭಾವಗಳನ್ನೇನು ಮಾಡಬೇಕು? ಯಾರಿಗೆ ಬರೆಯಬೇಕು? ಬರೆದೇನು ಮಾಡಬೇಕು? ಅದಕ್ಕೂ ಉತ್ತರ ದೊರಕಿಸಿಕೊಳ್ಳುತ್ತಾನೆ. ಮತ್ತೆ ಪ್ರೇಮಪತ್ರ ಬರೆಯತೊಡಗುತ್ತಾನೆ.

ತನಗಾಗಿ ಅಲ್ಲ. ತಾನು ಪ್ರೇಮಿಸಿದ ವಯಸ್ಸಿನಲ್ಲಿ ಈಗಿರುವ ಹುಡುಗರು ಅವನ ಗೆಳೆಯರು. ಅವರ ಪ್ರಿಯತಮೆಯರಿಗಾಗಿ ಪತ್ರಗಳನ್ನು ಬರೆದು ಬರೆದುಕೊಡುತ್ತಾರೆ. ಬರೆಯಲು ಕೂತರೆ ಸಾಕು, ಅವನಿಗೆ ತನ್ನವಳದೇ ನೆನಪು. ಕಣ್ಣು ಎಂಥದೋ ದಿಗಿಲಿನಿಂದ ಬೆಳಗತೊಡಗುತ್ತವೆ. ತುಟಿಗಳು ಪ್ರೇಮದ ಭೀಭತ್ಸತೆಯಿಂದ ಅದುರತೊಡಗುತ್ತವೆ. ನೆತ್ತಿಯ ಮೇಲೆ ಪ್ರೇಮದ ಭೂತಸವಾರಿಯಾಗುತ್ತಿದ್ದರೆ ಆತ ಪುಟಗಟ್ಟಲೆ ಬರೆಯುತ್ತಾನೆ. ಆ ವಯಸ್ಸಿನ ಹುಡುಗಿಯ ಅನರ್ಘ್ಯ ಮನಸ್ಸನ್ನು ಎಷ್ಟೊಂದು ಹಗುರಾಗಿ, ಎಷ್ಟು ದೂರದಲ್ಲಿ ನಿಂತು, ಯಾವ ಬೆರಳಿಂದ ತಾಕಬೇಕೆಂಬುದನ್ನು ಅರಿತ ಆ ಬ್ರಹ್ಮಚಾರಿ ತನಗಿಂತ ತುಂಬ ಚಿಕ್ಕವರಾದ ಹುಡುಗರಿಗೆ ನೂರಾರು, ಸಾವಿರಾರು ಪತ್ರಗಳನ್ನು ಬರೆದುಕೊಡುತ್ತಾನೆ. ಕೆಲವೇ ದಿನಗಳಲ್ಲಿ ಆತ ಎಷ್ಟು ಪ್ರಖ್ಯಾತನಾಗುತ್ತಾನೆಂದರೆ, ಆತನಿಂದ ಬರೆಸಿಕೊಂಡು ಹೋದ ಪತ್ರ ಕೊಟ್ಟರೆ ಎಂಥ ಹುಡುಗಿಯೂ ಒಲಿಯುತ್ತಾಳೆಂಬುದು ಆ ಊರಿನ ಹುಡುಗರೆಲ್ಲರ ಖಾಸಾ ನಂಬುಗೆಯಾಗಿ ಪರಿಣಮಿಸುತ್ತದೆ. ಅವನನ್ನು ಭೇಟಿಯಾಗಬೇಕಾದರೆ ಒಂದು ವಾರದ ಮುಂಚೆಯೇ 'ಅಪಾಯಿಂಟ್‌ಮೆಂಟು' ತೆಗೆದುಕೊಳ್ಳಬೇಕಾಗುವ ಸ್ಥಿತಿ ಬಂದೊದಗುತ್ತದೆ.

''ಅಂಕಲ್!'' ಅದೊಂದು ದಿನ ಹುಡುಗಿಯೊಬ್ಬಳು ಅವನನ್ನು ಕೂಗಿ ನಿಲ್ಲಿಸುತ್ತಾಳೆ.

''ಏನಮ್ಮಾ?''

''ನನಗೊಂದು ಪತ್ರ ಬಂದಿದೆ. ಉತ್ತರ ಬರೆದು ಕೊಡ್ತೀರಾ? ಪ್ಲೀಸ್'' ಎಂದು ಅಂಗಲಾಚುವ ಹುಡುಗಿಯ ಕೈಯ್ಯಲ್ಲಿ ಅವಳ ಗೆಳೆಯ ಬರೆದ ಪತ್ರ ಮುದುರಿ ಕೂತಿದೆ. ಅವಳ ಕಂಗಳಲ್ಲಿ ಇಂಥ ಸುಂದರ ಪತ್ರಕ್ಕೆ ಉತ್ತರ ಬರೆಯದೆ

ಇರಲಾರೆನೆಂಬ ಖಚಿತವಾದ ಆತುರತೆಯಿದೆ. ಇವನು ಪತ್ರ ಇಸಿದುಕೊಳ್ಳುತ್ತಾನೆ. ಅವನಿಗೆ ಆಶ್ಚರ್ಯವಾಗುವುದು ಹುಡುಗಿಯ ಧೈರ್ಯ ಕಂಡು ಅಲ್ಲ. ಅವಳು ಕೊಟ್ಟ ಪತ್ರ ನೋಡಿ!

ಅದು, ಹಿಂದಿನ ದಿನವಷ್ಟೇ ತಾನೇ ಕೂತು ಹುಡುಗನೊಬ್ಬನಿಗೆ ಬರೆದ ಪತ್ರ! ಅದಕ್ಕೀಗ ತಾನೇ ಉತ್ತರ ಬರೆದುಕೊಡಬೇಕು.

''ಸರಿಯಮ್ಮಾ'' ಎಂದು ಆ ಪುಟ್ಟ ಹುಡುಗಿಯ ಕೆನ್ನೆ ತಟ್ಟಿ ಕಳಿಸಿ ಅದಕ್ಕೆ ಉತ್ತರ ಬರೆಯಲು ಕುಳಿತಾಗ....ಓ, ತನ್ನ ಹುಡುಗಿಗೆ ಮೊಟ್ಟ ಮೊದಲ ಪತ್ರ ಬರೆದಾಗ ಅವಳೂ ಇದೇ ಹುಡುಗಿಯ ವಯಸ್ಸಿನವಳಾಗಿದ್ದಳಲ್ಲವೆ? ಎನಿಸುತ್ತದೆ. ಶುರುವಾಯಿತು ಪರಕಾಯ ಪ್ರವೇಶ. ಅವನೀಗ 'ಅವಳಾ'ಗುತ್ತಾನೆ. ಅದೇ ಹುಡುಗಾಟದ ಮಾತುಗಳು. ದಿನಚರಿಯಂತಹ ಸಾಲುಗಳು. ಗುಡ್‌ನೈಟುಗಳು.... ಹಾರುವ ಮುತ್ತುಗಳು! ಆದರೆ ಇಡೀ ಪತ್ರದಲ್ಲಿ ಎಲ್ಲೆಡೆಗೂ ಹರಡಿಕೊಂಡ ಎಂಥದೋ ವೇದನೆ. ಯಾವುದೋ ತಹತಹಿಸುವಿಕೆ. ಏನೋ ಕಲ್ಪನೆ.

ಊಹಿಸಿದಂತೆಯೇ ಅದರ ಮರುದಿನ ತಾನು ಬರೆದ ಪತ್ರವನ್ನೇ ಅಂಗೈಯ್ಯಲ್ಲಿ ಹಿಡಿದುಕೊಂಡು ಓಡಿಬರುವ ಹುಡುಗ,

''ಅಂಕಲ್, ಎಷ್ಟು ಚೆನ್ನಾಗಿ ಬರೆದಿದ್ದಾಳೆ ನೋಡಿ! ನಂಗೆ ಇದಕ್ಕಿಂತ ಒಳ್ಳೆ ಉತ್ತರ ಬರೆದು ಕೊಡಿ'' ಎಂದು ಗೋಗರೆಯುತ್ತಾನೆ.

ಹೀಗೆ ಆ ಬ್ರಹ್ಮಚಾರಿ ಎರಡೂ ಕಡೆಯಿಂದ ತಾನೇ ಬರೆಯುವ ಪತ್ರಗಳ ನಡುವೆ ಸಿಕ್ಕು ಕಂಗಾಲಾಗುತ್ತಾನೆ. ಅವನ ಅದೃಷ್ಟಕ್ಕೆ ಆ ಹುಡುಗ-ಹುಡುಗಿ ಬೇಗನೆ ಮದುವೆಯಾಗುತ್ತಾರೆ. ತೀರ ಒಂದು ಮಗುವಾದ ನಂತರ ತುಂಬ ಆಕಸ್ಮಿಕವಾಗಿ ತಮ್ಮಿಬ್ಬರ ಪತ್ರಗಳನ್ನು ಬರೆದು ಕೊಡುತ್ತಿದ್ದ 'ಪತ್ರಕರ್ತ(?)' ಒಬ್ಬನೇ ಎಂಬುದು ಗೊತ್ತಾದಾಗ ಮೊದಲಬಾರಿಗೆ ಇಬ್ಬರೂ ಒಟ್ಟಾಗಿ ಹೋಗಿ ಅಕ್ಕರೆಯಿಂದ 'ಅಂಕಲ್'ಗೆ ನಮಸ್ಕರಿಸುತ್ತಾರೆ. ಅವರ ಮಗುವಿನ ಕೆನ್ನೆ ಸವರುವಾಗ ತನ್ನ ಪ್ರೀತಿಯೇ ಸಾರ್ಥಕಗೊಂಡಿತೆಂಬ ನೆಮ್ಮದಿಯ ಭಾವ ಇವನಲ್ಲಿ!

ಹಿಂದೆಯೇ, ತಾನು ಅವರಿವರಿಗೆ ಬರೆದು ಕೊಟ್ಟ ಪತ್ರಗಳನ್ನೆಲ್ಲ ಪುಸ್ತಕವಾಗಿಸಿ ಪ್ರಕಟಿಸುವ ಹಂಬಲ ಮೂಡುತ್ತದೆ. ಕೈಯ್ಯಲ್ಲಿ

ನೀವು ವ್ಯಂಗ್ಯಚಿತ್ರಕಾರರೆ?

'ಕಸ್ತೂರಿ'ಯಲ್ಲಿ ಪ್ರಕಟಣೆ ಕೋರಿ ದಿನವೂ ನಮ್ಮ ಕೈಸೇರುವ ವ್ಯಂಗ್ಯಚಿತ್ರಗಳು ಅಸಂಖ್ಯ. ಇದಕ್ಕಾಗಿ ವ್ಯಂಗ್ಯಚಿತ್ರಕಾರರಿಗೆ 'ಕಸ್ತೂರಿ' ಕೃತಜ್ಞ.

ಆದರೆ, ಕೆಲವು ಅಂಶಗಳತ್ತ ನಮ್ಮ ವ್ಯಂಗ್ಯಚಿತ್ರಕಾರ ಮಿತ್ರರು ಗಮನಹರಿಸುವುದೊಳಿತು. ನೀವು ಕಳಿಸುವ ಚಿತ್ರದ ಆಕಾರದ ಬಗ್ಗೆ ಖಚಿತತೆ ಇರಲಿ. ನಮ್ಮ ಕಾಲಮ್ಮುಗಳ ಅಳತೆಗೆ ಮೀರುವ ವ್ಯಂಗ್ಯ ಚಿತ್ರಗಳು ಕೆಲವಾದರೆ, ಅದರ ಅಡಿಟಿಪ್ಪಣಿಯನ್ನು ಬರೆಯುವಾಗ ಭಾಷೆ, ವ್ಯಾಕರಣಗಳ ಸ್ಖಾಲಿತ್ಯಗಳೂ ಕೆಲವದರಲ್ಲಿ ಕಂಡುಬರುತ್ತವೆ. ಇನ್ನು ವ್ಯಂಗ್ಯ ಚಿತ್ರಕಾರರನೇಕರು ತಮ್ಮ ಹೆಸರು ಢಾಳಾಗಿ ಕಾಣುವಂತೆ ಬರೆಯುತ್ತಾರೆ. ಚಿತ್ರಕ್ಕಿಂತ ಹೆಸರೇ ಮುಖ್ಯವಾಗಿಬಿಡುವುದು ಸರಿಯಲ್ಲ, ಅಲ್ಲವೆ?

ಹೀಗೆ ಮಾಡಿ: ಒಂದು ಡೆಮಿ ಆಕಾರದ ಡ್ರಾಯಿಂಗ್ ಪೇಪರಿನಲ್ಲಿ ಸರಿಯಾಗಿ ೩೨ ಭಾಗಮಾಡಿಕೊಳ್ಳಿ. ಒಂದೊಂದು ಭಾಗವೂ ನಮ್ಮ ಪೋಸ್ಟ್‌ಕಾರ್ಡ್ ಸೈಜಿನದಾಗುತ್ತದೆ. ಇಂಥದೊಂದು ಭಾಗದಲ್ಲಿ ಸ್ಫುಟವಾಗಿ ಬಿಡಿಸಿದ ವ್ಯಂಗ್ಯಚಿತ್ರ ನಮ್ಮ ಎರಡು ಕಾಲಂ ಅಳತೆಗೆ ಸರಿಹೊಂದುತ್ತದೆ. ಒಂದು ಕಾಲಂ ಚಿತ್ರ ಬಿಡಿಸಬಯಸುವಿರೋ-ಆ ಭಾಗದಲ್ಲಿ ಎರಡು ಚಿತ್ರ ಬಿಡಿಸಿ ಸಾಕು. ಹಾಂ, ಎಲ್ಲೂ ತಿದ್ದುಪಡಿಗಳು ಬೇಡ. ಅಡಿಟಿಪ್ಪಣಿಯನ್ನು ಬೇಕಾದರೆ ಹಿಂಭಾಗದಲ್ಲಿ ಬರೆಯಬಹುದು. ಚಿತ್ರ ಬಿಡಿಸಲು ಇಂಡಿಯನ್ ಇಂಕನ್ನೇ ಬಳಸಿ.

ಇಂಥ ಪರಿಪೂರ್ಣ ವ್ಯಂಗ್ಯಚಿತ್ರಗಳಾದರೆ ಶೀಘ್ರ ನಿರ್ಧಾರಕ್ಕೆ ಅನುಕೂಲ. ಗಮನಿಸುವಿರಲ್ಲವೆ?

-ಸಂಪಾದಕ

ದುಡ್ಡಿಲ್ಲ. ಪ್ರಕಾಶಕರು ಈ 'ಪ್ರೇಮ ನಿಘಂಟ' ನಂತಹ ಬೃಹತ್ ಬರಹವನ್ನು ಪ್ರಕಟಿಸಲು ಸುತರಾಂ ಒಪ್ಪುವುದಿಲ್ಲ. ಮುಂದೆಂದೋ ಅವನಿಗೇ ಅವುಗಳನ್ನು ಸ್ವತಂತ್ರವಾಗಿ ಪ್ರಕಟಿಸುವ ಆರ್ಥಿಕ ತಾಕತ್ತು ಬಂದಾಗ ''ಈ ಕಾಲದ ಪ್ರೇಮಿಗಳು ಮೊದಲಿನವರಂತೆ ಹುಚ್ಚಿಗೆ ಬಿದ್ದು ಪ್ರೇಮಪತ್ರಗಳನ್ನು ಬರೀತಾ ಇಲ್ಲ. ಅದು ಹಳೆಯ ಫ್ಯಾಷನ್ನು!'' ಎಂಬ ಕಠೋರ ಸತ್ಯವನ್ನು ಆತ ನುಂಗಬೇಕಾಗುತ್ತದೆ.

ಕಾದಂಬರಿಯ ಕೊನೆಯನ್ನು ನೀವ್ಯಾರೂ ಊಹಿಸಲಾರಿರಿ. ಅವಳಿಗೆ ಎಪ್ಪತ್ತೊಂದು ವರ್ಷಗಳಾಗಿವೆ. ಇವನಿಗೆ ಎಪ್ಪತ್ತಾರು. ಅವಳ ಗಂಡ ಆಗ ಸಾಯುತ್ತಾನೆ. ಈ ಭೂಪ, ಅವಳ ಗಂಡನನ್ನು ಗೋರಿಗಿಟ್ಟು ಬಂದ ಕೆಲವೇ ಗಂಟೆಗಳಲ್ಲಿ ಅವಳ ಮುಂದೆ ಹಾಜರಾಗುತ್ತಾನೆ ಮತ್ತು ಅರ್ಧ ಶತಮಾನದಿಂದ ಹೇಳಬೇಕೆಂದು ಕಾದಿರಿಸಿದ ಶಬ್ದಗಳನ್ನು ನಿರ್ಭಯವಾಗಿ ಹೇಳುತ್ತಾನೆ.

"I have waited for this opportunity for more than half a century, to repeat to you once again my vow of eternal fidelity and everlasting love!''

ಅವರಿಬ್ಬರೂ ನಿಂತ ಅಂಗಳದಲ್ಲಿ ಗಾಳಿಯೊಂದೇ ಏಕೆ, ಕಾಲವೂ ಸ್ತಂಭಿಸುತ್ತದೆ. ಎಪ್ಪತ್ತೊಂದರ ಮುದುಕಿ ತನ್ನ ಹದಿನೆಂಟರ ಹರಯದ ಉನ್ಮಾದವಿನ್ನೂ ಅವನ ಕಣ್ಣುಗಳಲ್ಲಿ ವೃದ್ಧ ಸರ್ಪದಂತೆ ಜೀವಂತವಾಗಿರುವುದನ್ನು ಕಂಡು ಕಂಪಿಸಿಬಿಡುತ್ತಾಳೆ.

"Get out of here!'' ಎಂದು ಚೀರುತ್ತಾಳೆ.

ಅವನು ಹೋಗುತ್ತಾನೆ.

ಮತ್ತದೇ ಉನ್ಮತ್ತ ಪ್ರೇಮದ ದಿನಗಳನ್ನು ಮೆಲುಕು ಹಾಕುತ್ತ, ಅವಳಿಗಾಗಿ ಕಾಯುತ್ತ ಒಬ್ಬಂಟಿ ಬದುಕನ್ನು ಮುಂದುವರೆಸುತ್ತಾನೆ. ತೀರ ಗಂಡ ಸತ್ತು ಮಣ್ಣಾದ ದಿನದಂದೇ ತನ್ನ ಮುಂದೆ ಬಂದು ನಿಂತು ಹುಚ್ಚು ಪ್ರೇಮವನ್ನು ಪುನರ್‌ಪ್ರಕಟಿಸಿದವನ ಉದ್ಧಟತನದ ಮೇಲೆ ವಿಪರೀತ ಸಿಟ್ಟು ಬಂದು, ಅವನನ್ನು ವಾಚಾಮಗೋಚರವಾಗಿ ಬಯ್ದು ಒಂದು ಪತ್ರ ಬರೆಯುತ್ತಾಳೆ ವೃದ್ಧೆ. ಆ ಹುಚ್ಚ, ಖುಷಿಯಿಂದ ಮನೆ ತುಂಬ ಓಡಾಡಿಬಿಡುತ್ತಾನೆ. ಅವನ ಪಾಲಿಗೆ ಅದೂ ಪ್ರೇಮ ಪತ್ರವೇ!

ಬಯ್ದರೇನಂತೆ? ಸದ್ಯ ಬರೆದಳಲ್ಲ....

ನಿಧಾನವಾಗಿ ಮತ್ತೆ ಪ್ರೇಮಪತ್ರದ ಸೃಷ್ಟಿಗೆ ತೊಡಗುತ್ತಾನೆ. ಬೆರಳುಗಳಿಗೀಗ ಮೊದಲಿನಂತೆ ಅಚ್ಚುಕಟ್ಟಾಗಿ ಬರೆಯುವ ಶಕ್ತಿಯಿಲ್ಲ. ಅದಕ್ಕೀಗ ಎಪ್ಪತ್ತಾರರ ಮುದಿತನ ಬಂದಿದೆ. ಆದರೆ ಮನಸ್ಸಿನ್ನೂ ಅವತ್ತವಳು ಬಿಟ್ಟು ಹೋದ ದಿನ ಇದ್ದಂತೆಯೇ ಇದೆ. ತನ್ನ ಕಚೇರಿಯಿಂದ ಟೈಪ್‌ರೈಟರೊಂದನ್ನು ಹೊತ್ತು ತರುತ್ತಾನೆ. ''ಈ ವಯಸ್ಸಿನಲ್ಲೇನು ಟೈಪಿಂಗ್ ಕಲಿಯುತ್ತೀ?'' ಎಂದು ಗೆಳೆಯರು ಗೇಲಿ ಮಾಡಿದಾಗ, 'ಪ್ರೇಮಕ್ಕಾಗಿ ಏನನ್ನಾದರೂ ಕಲಿಯುತ್ತೇನೆ'' ಎಂದುತ್ತರಿಸಿ ಬಂದು, ರಾತ್ರಿಯಿಡೀ ಕೂತು ಒಂದೇ ಬೆರಳಿನಿಂದ ಕುಟುಕುಟು ಕುಟ್ಟುತ್ತಾನೆ.

ಎಪ್ಪತ್ತಾರರ ವೃದ್ಧ ಬರೆದ ಪ್ರೇಮಪತ್ರ!

ಆದರೆ ಅದರಲ್ಲೀಗ ಹುಚ್ಚು ಹರೆಯದ ಉನ್ಮಾದವಿಲ್ಲ. ಅದೆಂದೋ ಸತ್ತ ಪ್ರಣಯದ ಸುದ್ದಿಯಿಲ್ಲ. ತನಗಾದ ಅವಮಾನ, ಕಷ್ಟ-ನಷ್ಟ, ಒಬ್ಬಂಟಿತನಗಳ ಉಲ್ಲೇಖವೂ ಇಲ್ಲ. ಉಳಿದೆಲ್ಲರಿಗಿಂತ ವಿಲಕ್ಷಣವಾದ ಒಬ್ಬಂಟಿತನವನ್ನು ಬದುಕಿನುದ್ದಕ್ಕೂ ಅನುಭವಿಸಿದ ಮಹಾವೇದಾಂತಿಯ ಅನಿಸಿಕೆಗಳವು. ಎಪ್ಪತ್ತೊಂದರ ಸಂಜೆಯಲ್ಲಿ ಗಂಡನನ್ನು ಕಳೆದುಕೊಂಡು ಕಂಗಾಲಾಗಿರುವ ವೃದ್ಧಗೆಳತಿಗೆ ಆತ ನೀಡುವ ಪವಿತ್ರ ಸಾಂತ್ವನಗಳು. ಒಂದು, ಎರಡು, ಮೂರು... ಹದಿನಾರು...ಇಪ್ಪತ್ತಾರು... ನೂರು.... ಆತ ಎಷ್ಟು ಪತ್ರಗಳನ್ನು ಒಂದಾದ ಮೇಲೊಂದರಂತೆ ಅವಳಿಗೆ ಬರೆದು ಕಳಿಸಿದನೆಂದರೆ, ಕೆಲವು ತಿಂಗಳುಗಳ ನಂತರ ಆಕೆ ಅನಿರೀಕ್ಷಿತವಾಗಿ ಭೇಟಿಯಾದಾಗ ತನ್ನ ಸಿಟ್ಟು, ಸಿಡುಕನ್ನೆಲ್ಲ ಮರೆತು,

''ಮಿತ್ರಾ, ನಿನ್ನ ಪತ್ರಗಳು ನನ್ನ ವೈಧವ್ಯದ ನೋವನ್ನೆಲ್ಲ ಮರೆಸುತ್ತಿವೆ... ದಯಪಟ್ಟು ಬರೆಯುತ್ತಿರು'' ಎಂದು ಕೋರುತ್ತಾಳೆ. ಅವನನ್ನು

ಮನೆಗೂ ಕರೆಯುತ್ತಾಳೆ.

ಮುಂದೆ ಕಾದಂಬರಿ ನಿಮ್ಮನ್ನು ನಿಂತಲ್ಲಿ ನಿಲ್ಲಗೊಡದೆ, ಕೂತಲ್ಲಿ ಕೂಡಲು ಬಿಡದೆ ಓದಿಸಿ ಕೊಂಡು ಕಡೆಗೊಂದು ರೋಮಾಂಚನ, ಆನಂದ ಗಳಿಂದ ಕೂಡಿದ ಶೂನ್ಯಕ್ಕೆ ನೂಕಿ ಬಿಡುತ್ತದೆ. ಓದಿ ಮುಗಿಸಿದ ಮೇಲೊಂದು ಧನ್ಯಭಾವ ನಿಮ್ಮನ್ನು ಆವರಿಸಿಕೊಳ್ಳುತ್ತದೆ. ಒಂದೇ ಉಸುರಿ ನಲ್ಲಿ ಕೆಲವು ಸಾವಿರ ಸಾವಿರ ಪ್ರೇಮಪತ್ರಗಳನ್ನು ಓದಿ ಮುಗಿಸಿದ ಆನಂದ/ ಪ್ರೇಮ ಪತ್ರಗಳ ಬೆನ್ನಲುಬಿನ ಮೇಲೆ ಚಿರಕಾಲ ನಿಲ್ಲಬಲ್ಲ ಕಾದಂ ಬರಿ Love in the time of Cholera* - ಓದುವ ಆರ್ದ್ರ ಹೃದಯ ನಿಮಗಿರಬೇಕಷ್ಟೆ. ಅದು - ಪ್ರೀತಿಸಿದವರಿಗೆಲ್ಲ ಇದ್ದೇ ಇರುತ್ತ ದೆಂದು ಮಾರ್ಕ್ವೆಜ್ ನಂಬುತ್ತಾನೆ. ಇಷ್ಟಾದರೂ ಇಡೀ ಕಾದಂಬರಿಯಲ್ಲಿ ಒಂದೇ ಒಂದು ಪ್ರೇಮ ಪತ್ರವೂ ಪ್ರಕಟವಾಗಿಲ್ಲ. ಯಾವುದೋ ಪಾತ್ರದ ಬಗ್ಗೆ ಮಾತಾಡುತ್ತ, ಆಡುತ್ತ ಕತೆ ಮುಗಿಸಿಬಿ ಡುವ ಲೇಖಕ ಕಡೆಗೂ ಆ ಪಾತ್ರವನ್ನು ಸೃಷ್ಟಿಸು ವುದೇ ಇಲ್ಲ ನೋಡಿ? ಆ ಶೈಲಿಯಲ್ಲಿ ಮಾರ್ಕ್ವೆಜ್ ಪತ್ರಗಳನ್ನು ಕಲ್ಪಿಸುತ್ತಾನೇ ಹೊರತು ಅವುಗಳನ್ನು ನಮಗೆ ಓದಲು ಕೊಡು ವುದಿಲ್ಲ. ಆದರೆ ಅನುಭೂತಿಯನ್ನೊದಗಿಸು ತ್ತಾನೆ. ಎಪ್ಪತ್ತಾರರ ತನಕ ಬದುಕಿರುತ್ತೇವೋ ಇಲ್ಲವೋ, ಕಣ್ಣು ಭದ್ರವಿರುವ ಈ ಇಪ್ಪತ್ತಾರ ರಲ್ಲೇ Cholera ಓದಿಬಿಡುವುದು ಸೇಫ್.

★

ಅಪ್ಪಟ ವಿಕ್ಷಿಪ್ತ ಜೀವಿ ಗುಡಿಪಾಟು ವೆಂಕಟ ಚಲಂ ಬದುಕಿನುದ್ದಕ್ಕೂ ಅಸಂಖ್ಯ ಪ್ರೇಯಸಿಯ ರಿಗೆ ಬರೆದ ಪೈಕಿ ಸುಮಾರು 300 ಪತ್ರಗಳನ್ನು 'ಪ್ರೇಮಲೇಖಲು' ಎಂಬ ಹೆಸರಿನ ಪುಸ್ತಕದಲ್ಲಿ 1982ರಲ್ಲಿ ಪ್ರಕಟಿಸಲಾಗಿದೆ. ಮೇಲ್ನೋಟಕ್ಕೆ ಆತ ತನ್ನ ಪ್ರಿಯತಮೆಯರ ಹೆಸರುಗಳನ್ನು ಗುಪ್ತವಾ ಗಿರಿಸಲೆಂದೇ ಅವರಿಗೆ 'ರ', 'ಕ', 'ವೇ' - ಎಂಬ ಒಂಟಿ ಅಕ್ಷರಗಳ ಸಾಂಕೇತಿಕ ಶಬ್ದಗಳನ್ನು ಬಳ ಸುತ್ತಿದ್ದನೆಂಬಂತೆ ಕಂಡರೂ, ಆತನ ಜೀವನ

> ## ತಂತಿ ?
>
> ಇಂದು ಹುಣ್ಣಿಮೆ ರಾತ್ರಿ
> ಕಡಲು ಅಬ್ಬರಿಸುತ್ತಿದೆ.
> ಉಚ್ಛ್ವಸಪಡುತ್ತ ಚಂದ್ರ
> ಸೂರ್ಯನಿಗೊಂದು ತಂತಿ ಕಳಿಸಿದ
> 'ಇನ್ನೆಂದು ಇನ್ನೊಂದು ಹಗಲನ್ನು
> ಮಾಡಬೇಡ'
> ತಂತಿ ಮುಟ್ಟುವ ಮೊದಲೆ
> ಮೂಡಣದ ಅಂಚಿಲ್ಲಿ ನಿಂತು ಸೂರ್ಯ
> ನಗುತ್ತಿದ್ದ.
>
> ● *ಎಂ.ಡಿ. ವಕ್ಕುಂದ*

ಚರಿತ್ರೆ ಓದಿದವರಿಗೆ ಮತ್ತು ಆತನನ್ನು ಭೇಟಿ ಯಾದವರಿಗೆ ಈ ಅಕ್ಷರಗಳಲ್ಲೂ ಆತನ ವಿಕ್ಷಿಪ್ತ ತೆಯಿರುವುದು ಅರ್ಥವಾಗುತ್ತದೆ. ತನ್ನ ಮಗಳ ನ್ನಾತ 'ಚೇ' ಎಂದು ಕರೆಯುತ್ತಿದ್ದ. ಸಾಕಿದ ಮಗಳ ಹೆಸರು 'ಪಕಪಕ'. ಹೆಂಡತಿಯ ಪೂರ್ತಿ ಹೆಸರು ಚಿಟ್ಟಿ ರಂಗನಾಯಕಮ್ಮ ಎಂದಿದ್ದರೆ ಮಹಾ ಸೋಮಾರಿಯಾದ ಈತ ಆಕೆಯನ್ನು ಕೇವಲ 'ಟಿ' ಎಂದು ಕರೆಯುತ್ತಿದ್ದ!

1982ರಲ್ಲಿ ಮೊದಲ ಮುದ್ರಣ ಕಂಡ 'ಪ್ರೇಮಲೇಖಲು' ಸಂಗ್ರಹಕ್ಕೆ ಮುನ್ನುಡಿಯಂತೆ ಒಂದು ಪತ್ರವನ್ನೇ ಬಳಸಿಕೊಳ್ಳಲಾಗಿದೆ. ಅದ ನ್ನಾತ ಬರೆದದ್ದು 1922ರಲ್ಲಿ! ಅದರ ಒಕ್ಕಣೆ ಹೀಗಿದೆ:

''ಗೆಳತೀ,

ವಿರಹವೆಂಬ ವಸ್ತುವು ತನ್ನ ಮಾಧುರ್ಯದ ಭಾರವನ್ನು ತಾನೇ ತಾಳಲಾಗದೆ ನಮ್ಮಿಬ್ಬರನ್ನೂ ಪ್ರಸವಿಸಿತು. ಜನ್ಮವೆತ್ತಿದ ಆ ಒಂದು ಮುಹೂರ್ತ ಮಾತ್ರ ನಾವಿಬ್ಬರೂ ಒಟ್ಟಿಗಿದ್ದೆವು ಅಷ್ಟೆ. ಹುಟ್ಟಿದ ಸಡಗರದಲ್ಲಿ ಬಸವಳಿದು ಹೋದ ನಮ್ಮಿಬ್ಬರನ್ನೂ ಮೇಘ ಶಯ್ಯೆಗಳ ಮೇಲೆ ಮಲಗಿಸಿ, ಪ್ರೇಮಗೀತಗಳನ್ನು ಹಾಡುತ್ತ, ನಕ್ಷತ್ರ ಮಾರ್ಗಗಳಲ್ಲಿ ತೀರ ಮರೆವ

---

* ಇದರ ಕನ್ನಡಾನುವಾದ : ರವಿ ಬೆಳಗೆರೆ

ವಾಕ್

walk
ಬೇಕು
ಆರೋಗ್ಯಕ್ಕೆ.
ವಾಕ್
ಚಾತುರ್ಯ
ಬೇಕೆ ಬೇಕು
ಬದುಕಿ
ಉಳಿಯುವುದಕ್ಕೆ.

● *ಜರಗನಹಳ್ಳಿ ಶಿವಶಂಕರ್*

ಜಗೆಯಲ್ಲಿ ಕರೆತಂದು, ನಮ್ಮಿಬ್ಬರ ಮಧ್ಯೆ ಒಂದು ಅಗಾಧವಾದ ವ್ಯವಧಿಯನ್ನು ಕಲ್ಪಿಸಿ... ಈ ಲೋಕಕ್ಕೆ ಕಳಿಸಿಬಿಟ್ಟರು ದೇವತೆಗಳು. ನೆಲಕ್ಕೆ ಬಿದ್ದೊಡನೆಯೇ ನನ್ನ ಕೊರಳಿಂದ ಹೊರಟದ್ದು, ಹೆಸರಿಲ್ಲದ ನಿನ್ನ ಹೆಸರು! ಈ ಮೂರ್ಖಲೋಕ ಅದನ್ನರ್ಥ ಮಾಡಿಕೊಳ್ಳದೆ ನಾನು ತಾಯಿ ಮೊಲೆ ಹಾಲಿಗಾಗಿ ಹಸಿವಿನಿಂದ ಅಳುತ್ತಿದ್ದೇನೆಂದುಕೊಂಡರು.

ಅವತ್ತಿನ ಆ ಕ್ಷಣದಿಂದ ನಿನ್ನನ್ನು ಹುಡುಕುತ್ತಿದ್ದೇನೆ. ಗೆಳತೀ, ಬಾಲ್ಯದಲ್ಲಿ ನಾನು ಆಡಿಕೊಂಡ ಬೊಂಬೆಗಳಲ್ಲಿ ನಿನ್ನನ್ನು ಹುಡುಕಿದೆ. ಓದಿದ ಪುಸ್ತಕಗಳಲ್ಲೆಲ್ಲಾದರೂ ನಿನ್ನ ಚಿತ್ರವಿದೆಯೇನೋ ಎಂದರಸಿದೆ. ಕವಿಗಳೇನಾದರೂ ನಿನ್ನ ಕುರಿತು ಹಾಡಿದ್ದಾರೇನೋ ಎಂದು ಕಾವ್ಯಗಳನ್ನೆಲ್ಲ ಓದಿದೆ. ಕಂಡವರ ಮುಖಗಳಲ್ಲೆಲ್ಲ ನಿನ್ನನ್ನೇ ಹುಡುಕುತ್ತ ದೇಶ ದೇಶಗಳನ್ನೆಲ್ಲ ಅಲೆದೆ.

ನೀನು ಕಾಣುವುದಿಲ್ಲ. ಆದರೆ ನೀನು ಚಿರಪರಿಚಿತಳು. ನಿನಗಿಂತ ಹೃದ್ಗತವಾದದ್ದು ನನಗೆ ಮತ್ತೊಂದಿಲ್ಲ. ನನ್ನನ್ನು ಹುಡುಕುತ್ತ ಬರುವ ನಿನ್ನ ಹೆಜ್ಜೆಸದ್ದು ಸದಾ ನನ್ನ ಗುಂಡಿಗೆಯಡಿಯಲ್ಲಿ ಧ್ವನಿಸುತ್ತದೆ. ನೀನು ನನ್ನ ಪರಮಾವಧಿ.

ನೀನಿದ್ದೀಯೆಂದೇ ಈ ಜಗತ್ತಿಷ್ಟು ಸುಂದರವಾಗಿದೆ. ಇಲ್ಲದಿದ್ದರೆ ಈ ಲೋಕಕ್ಕೂ ನನಗೂ ಏನು ಸಂಬಂಧ? ಲೋಪದ ಬಿಳಿಗಳನ್ನೂ, ನೀತಿ, ಪ್ರತಿಷ್ಠೆಗಳನ್ನೂ ಆರಾಧಿಸುವ ಈ ಜನಕ್ಕೂ ನನಗೂ ಎಂಥ ಆಪ್ಯಾಯತೆ? ಇವರ್ಯಾರೋ ನಾನರಿಯೆ. ನಾನಿವರಿಗೆ ಅರ್ಥವಾಗುವದಿಲ್ಲ. ನಿನ್ನನ್ನು ಹೀಗೇಕೆ ನಾನು ನಿರಂತರವಾಗಿ ಹುಡುಕುತ್ತೇನೆ ಎಂಬುದು ಇವರಿಗರ್ಥವೇ ಆಗದು.

ನಿನ್ನ ಪ್ರಣಯ ಮಾಧುರ್ಯ, ನಿನ್ನ ಲೀಲಾ ವಿನೋದಾಸಕ್ತಿ, ನಿನ್ನ ಆನಂದ ಪರವಶತೆ, ಮತ್ತು ನಿನ್ನ ಮಾತೃ ಮಾರ್ದವಗಳನ್ನು ಕಂಡು ಆಕರ್ಷಿತನಾಗಿದ್ದೇನೆ. ಅನುಭವಿಸಿದ್ದೇನೆ. ಆನಂದಿಸಿದ್ದೇನೆ. ನೀನು ಇದ್ದೀಯೆಂಬುದಾಗಲೀ, ನಾವಿಬ್ಬರೂ ಒಂದೊಮ್ಮೆ ಬೆಸೆದ ಜೀವಗಳೆಂದಾಗಲೀ, ನಿನಗಾಗಿ ನಾನು ಸದಾ ಹುಡುಕುತ್ತಲೇ ಇರುತ್ತೇನೆಂದಾಗಲೀ, ನಿನ್ನಿಂದ ನನಗೆ ನಿರಂತರ ಸಂದೇಶಗಳು ಬರುತ್ತಲೇ ಇರುತ್ತವೆಂಬುದಾಗಲೀ, ನಾನು ಎಲ್ಲಿ - ಯಾರನ್ನು ಪ್ರೀತಿಸಿದರೂ ಅದು ನಿನಗೇ ಸಲ್ಲುತ್ತದೆಂದಾಗಲೀ ಈ ಲೋಕಕ್ಕೇನು ಗೊತ್ತು? ಅವರನ್ನು ಕ್ಷಮಿಸಿಬಿಡು.


1922 **ಚಲಂ**

ಆಕರ ಗ್ರಂಥಗಳು:

1. ಪ್ರೇಮಲೇಖಲು: ಗುಡಿಪಾಟಿ ವೆಂಕಟಚಲಂ (ತೆಲುಗು)
2. Love in the time of Cholera: Gabriel Garcia Marquez (ಸ್ಪ್ಯಾನಿಶ್)
3. ನಿದಾ ಫಜಲಿಯ ಉರ್ದು ಗಜಲುಗಳು ಮತ್ತು
4. ಅಸಂಖ್ಯ ಪ್ರೇಮ ಪತ್ರಗಳು

ನಿಮ್ಮ ಆರೋಗ್ಯಕ್ಕಾಗಿ
'ಕಸ್ತೂರಿ'ಯ ಕಾಣಿಕೆ

ಅನುವಂಶೀಯತೆ



ಡಾ. ಕರವೀರಪ್ರಭು ಕ್ಯಾಲಕೊಂಡ
ವೈದ್ಯಾಧಿಕಾರಿಗಳು
ಪ್ರಾಥಮಿಕ ಆರೋಗ್ಯ ಕೇಂದ್ರ,
ಪಟ್ಟದಕಲ್ಲು
ಜಿಲ್ಲೆ : ವಿಜಾಪುರ

ಅನುವಂಶೀಯತೆ

● ಡಾ. ಕರವೀರಪ್ರಭು ಕ್ಯಾಲಕೊಂಡ

ಆಸ್ಟ್ರೇಲಿಯಾದಲ್ಲಿ ಜಪುಣಾಗ್ರೇಸ ಮಾಲಿಕನಿದ್ದ. ಅವನಲ್ಲಿ ಕುರಿ ಕಾಯಲು ಒಬ್ಬ ಕುರುಬನಿದ್ದ. ಕುರುಬನ 'ಭೋಳೆ' ಸ್ವಭಾವದ ದುರುಪಯೋಗವನ್ನು ಮಾಲಿಕ ಧಾರಾಳವಾಗಿ ಮಾಡಿಕೊಂಡು ಕಿರಿ ಕಿರಿ ಕೊಡುತ್ತಿದ್ದ. ತನ್ನ ಹಿಂಡಿನಲ್ಲಿ ಕರಿಬಣ್ಣದ ಕುರಿಗಳು ಹೆಚ್ಚಾಗಿದ್ದುದನ್ನು ಮನಗಂಡ ಮಾಲಿಕ ನಾಲ್ಕು ಜನರು ಕೂಡಿದಾಗ ಒಂದು ವಿಚಾರವನ್ನು ಸ್ಪಷ್ಟಪಡಿಸಿದ. ವರ್ಷದ ಕೊನೆಯಲ್ಲಿ ಮರಿಗಳನ್ನು ಹಂಚುವಾಗ ಕಪ್ಪು ಬಣ್ಣದ ಮರಿಗಳೆಲ್ಲ ತನಗೆ, ಚುಕ್ಕೆ ಚುಕ್ಕೆ ಬಣ್ಣದ ಮರಿಗಳು ಕುರುಬನಿಗೆ ಅಂದ. ಮಾಲೀಕನ ಮೋಸದ ಜಾಲ ಮುಗ್ಧ ಕುರುಬನಿಗೆ ತಿಳಿಯಲಿಲ್ಲ. ಒಪ್ಪಿದ ಪರಿಶ್ರಮದಿಂದ, ಪ್ರಾಮಾಣಿಕತೆಯಿಂದ ಕುರಿಗಳನ್ನು ಕಾಯಹತ್ತಿದ. ಸೋಜಿಗದ ಸಂಗತಿಯೊಂದು ಜರುಗಿತು. ಕರಿಯ ಬಣ್ಣದ ಕುರಿಗಳು ಚುಕ್ಕೆ ಚುಕ್ಕೆ ಬಣ್ಣದ ಮರಿಗಳಿಗೆ ಜನ್ಮವಿತ್ತಿದ್ದವು! ಕುರುಬ ಐಶ್ವರ್ಯವಂತನಾಗಿ ಬೆಳೆದ......

ಬೈಬಲ್‌ನ 'ಬುಕ್ ಆಫ್ ಜೆನೆಸಿಸ್'ನಲ್ಲಿ ಹೇಳಲಾದ ಈ ಕಥೆ ಸಾಕಷ್ಟು ಹಳೆಯದಾದರೂ ಅರ್ಥ ಪೂರ್ಣವಾಗಿದೆ.

ಜೀವಿಗಳು ದೈಹಿಕ ಗುಣಲಕ್ಷಣಗಳನ್ನು ವಂಶಾನುಗತವಾಗಿ ಪಡೆಯುವುದರ ಅಥವಾ ಪಡೆಯದಿರುವ ಬಗ್ಗೆ ಇರುವ ಪುರಾಣ ಕಥೆ ಮತ್ತು ಮೂಢನಂಬಿಕೆಗಳಿಗೆ ಬರವೇನಿಲ್ಲ. ಹೊಸದಾಗಿ ಹುಟ್ಟಿದ ಜೀವಿಗಳು ಕೆಲ ಸಮಯದ ನಂತರ ತಮ್ಮ ಹೆತ್ತವರನ್ನು ಹೋಲುವುದು ಆಶ್ಚರ್ಯಕಾರಕವಲ್ಲವೆ? ವಿಜ್ಞಾನವು ಜೀವಿಗಳ ಹುಟ್ಟು ಮತ್ತು ಅನುವಂಶೀಯತೆಯ ಗುಟ್ಟಿನ ಮೊಟ್ಟೆಯನ್ನು ಇತ್ತೀಚಿಗೆ ಒಡೆದಿದೆ. ಕಲ್ಪನೆಯ ಕಟ್ಟುಕತೆಗಳ ಹುಟ್ಟಿಗೆ ತೆರೆ ಎಳೆದಿದೆ.

ಯುರೋಪಿನ ಬಿಳಿಯರು, ಆಫ್ರಿಕದ ಹಬಸಿಗಳು, ನೀಗ್ರೋಗಳು, ಅರಬರು, ಹಳದಿ ತೊಗಲಿನ ಚೀನೀಯರು, ಜಪಾನಿಯರು, ಕಂದು ತೊಗಲಿನ ಭಾರತೀಯರು, ಮಲೇಶಿಯಾದವರು, ಶಾಂತಸಾಗರದ ಪೊಲಿನೇಸ್ಯನರು ಇವರೆಲ್ಲರೂ ಮನುಷ್ಯ ಬಳಗಕ್ಕೆ ಸೇರಿದವರೇ. ಇವರ ಗಾತ್ರ, ಮೈಬಣ್ಣ, ಮೈಕಟ್ಟು, ತಲೆಗೂದಲಿನ ಬಣ್ಣವೆಲ್ಲವೂ ಬೇರೆ ಬೇರೆ. ಅವರಲ್ಲ ಇಂಥದೇ ವರ್ಣದವರು, ಇಂಥದೇ ದೇಶದವರು, ಇಂಥದೇ ಬಳಗದವರೆಂದು ಹೇಳಬಹುದಾದ ವ್ಯತ್ಯಾಸಗಳನ್ನು ನಾವು ಅವರಲ್ಲಿ

ಕಾಣುತ್ತೇವೆ. ಹೀಗೆ ಆಕಾರದಲ್ಲಿ ಮಾತ್ರವಲ್ಲ, ಸ್ವಭಾವ ಮತ್ತು ಹುಟ್ಟುಗುಣಗಳಲ್ಲಿಯೂ ವಂಶಪರಂಪರೆಯಿಂದ ಬರುವ ಗುಣಗಳನ್ನು ಕಾಣುತ್ತೇವೆ.

ಅನುವಂಶೀಯತೆಯ ಅರಿವು

ಮಕ್ಕಳು ತಂದೆ ತಾಯಿಯರನ್ನೇ ಹೋಲುತ್ತವೆ ಎಂಬುದು ನಮಗೆ ಮೊದಲಿನಿಂದಲೂ ತಿಳಿದಿರುವ ವಿಷಯ. ಇದು ಹೇಗೆ ನಡೆಯುತ್ತದೆ ಎಂಬುದು ತಿಳಿದಿರಲಿಲ್ಲ. ತಿಳಿಯುವ ಕುತೂಹಲವೂ ಆಗ ಜನರಲ್ಲಿ ಜಾಗೃತವಾಗಿರಲಿಲ್ಲ. ಆಗಿನ ಜ್ಞಾನದ ಆಧಾರದಿಂದ ಇದನ್ನು ಹೇಳುವುದು ಸಾಧ್ಯವಿರಲಿಲ್ಲ. ಜೀವಕೋಶಗಳನ್ನು ಶೋಧಿಸಿ ಅವುಗಳ ಗುಣವಿಶೇಷಗಳನ್ನು ಅರಿತಮೇಲೆಯೇ ಅದರ ಗುಟ್ಟು ರಟ್ಟಾಗಲು ಸಾಧ್ಯವಿತ್ತು.

ಮಗುವಿನ ಜನನಕ್ಕೆ ತಂದೆಯೊಬ್ಬನೇ ಕಾರಣನಲ್ಲ. ಅದರ ಜನನಕ್ಕೆ ತಂದೆ ತಾಯಿ ಇಬ್ಬರೂ ಕಾರಣರು, ಇಬ್ಬರೂ ಸಮಭಾಗಿಗಳು. ವೀರ್ಯಾಣುಗಳನ್ನು ಪುರುಷ ಉತ್ಪತ್ತಿ ಮಾಡುತ್ತಾನೆ. ಇವು ವೀರ್ಯದ ಮೂಲಕ ಸಂಭೋಗ ಸಮಯದಲ್ಲಿ ಸ್ತ್ರೀಯ ಗರ್ಭಕೋಶವನ್ನು ತಲುಪುತ್ತವೆ. ಸ್ತ್ರೀಯು ಅಂಡಾಣುವನ್ನು ಉತ್ಪತ್ತಿ ಮಾಡುತ್ತಾಳೆ. ಇವೆರಡೂ ಕೂಡಿ ಸಂಯುಕ್ತ ಜೀವಕಣ [Zygote] ಉಂಟಾಗುತ್ತದೆ. ಈ ಜೀವಕಣದಿಂದ ಮಗು ಮೊಳೆಯುತ್ತದೆ. ಹೀಗೆ ಮಗುವಿನ ಜನನಕ್ಕೆ ತಾಯಿ ತಂದೆಯರಿಬ್ಬರೂ ಕಾಣಿಕೆ ಸಲ್ಲಿಸುತ್ತಾರೆ. ಈ ಕಾಣಿಕೆಯ ಮೂಲಕ ತಂದೆ ತಾಯಿಯರ ಗುಣಧರ್ಮಗಳು ಮಗುವನ್ನು ಸೇರುತ್ತವೆ. ತಾಯಿ ಕೆಂಪಿರಬಹುದು. ತಂದೆ ಕಪ್ಪಿರಬಹುದು. ತಂದೆ ಉದ್ದವಾಗಿರಬಹುದು. ತಾಯಿ ಗಿಡ್ಡಗಿರಬಹುದು. ಮಗು ಈ ಎರಡೂ ಗುಣಗಳಲ್ಲಿ ಒಂದನ್ನು ಮಾತ್ರ ಪ್ರಕಟಮಾಡುತ್ತದೆ. ಅಂದರೆ ಉದ್ದವಾಗಿ ಬೆಳೆದು ಕೆಂಪು ವರ್ಣವನ್ನು ಹೊಂದಬಹುದು. ಹಾಗಾದರೆ ಕುಳ್ಳ ಮತ್ತು ಕಪ್ಪು ಗುಣ ಏನಾಯ್ತು? ಅವು ಏಕೆ ಪ್ರಕಟಗೊಳ್ಳಲಿಲ್ಲ? ಇದನ್ನು ಹಿಂದಿನವರು ತಪ್ಪು ತಿಳಿದುಕೊಂಡಿದ್ದರು. 60 ಮೊಟ್ಟೆಯಿಡುವ ಕೋಳಿಗೂ, 40 ಮೊಟ್ಟೆಯಿಡುವ ಕೋಳಿಗೂ ತಳಿ ಸಮ್ಮಿಶ್ರಣ ನಡೆಸಿದರೆ, ಹುಟ್ಟುವ ಕೋಳಿ 50 ಮೊಟ್ಟೆಗಳನ್ನಿಡುತ್ತದೆ; ನಾಲ್ಕು ಸೇರು ಹಾಲು ಕೊಡುವ ದನದ ತಳಿಗೂ, 8 ಸೇರು ಹಾಲು ಕೊಡುವ ತಳಿಗೂ ತಳಿ ಸಮ್ಮಿಶ್ರಣ ನಡೆಸಿದರೆ ಹುಟ್ಟುವ ಕರು ಬೆಳೆದು 6 ಸೇರು ಹಾಲು ಕೊಡುತ್ತದೆ ಎಂದು ಅವರು ಲೆಕ್ಕಾಚಾರ ಹಾಕಿದರು. ತಾಯಿ ತಂದೆಯರಿಂದ ಎರಡು ಬಗೆಯ ದ್ರವಗಳು ಮಗುವಿನಲ್ಲಿ ಕೂಡಿ ಮಿಶ್ರಫಲಗಳನ್ನು ಕೊಡುತ್ತವೆ ಎಂದು ಭಾವಿಸಿದ್ದರು. ಅನುವಂಶೀಯತೆ ಆಕಸ್ಮಿಕ ಎಂಬ ಭಾವನೆಯೂ ಜನರ ಅಂತರಾಳದಲ್ಲಿ ಬೇರುಬಿಟ್ಟಿತ್ತು.


ಅನುವಂಶೀಯತೆ ಆಕಸ್ಮಿಕವಲ್ಲ. ಅದೂ ಒಂದು ನಿಯಮವನ್ನು ಅನುಸರಿಸುತ್ತದೆ ಎಂಬುದನ್ನು ಮೊಟ್ಟಮೊದಲು ತೋರಿಸಿ ಕೊಟ್ಟವನು ಗ್ರಿಗರಿ ಜೋಹಾನ್ ಮೆಂಡಲ್. ಆತನ ಪ್ರಯೋಗಗಳನ್ನು ಅಂದು (1856) ಯಾರೂ ಅರ್ಥಮಾಡಿಕೊಳ್ಳಲಿಲ್ಲ. ಹೊಸದೊಂದು ವಿಷಯವನ್ನೇ ದೃಢೀಕರಿಸಿದ ವ್ಯಕ್ತಿ ಲೋಕಕ್ಕೆ ಹೊಸದೊಂದು ಜ್ಞಾನವನ್ನೇ ಎತ್ತಿ ತೋರಿದರೂ, ಅಂದು ಯಾರೂ ಆತನನ್ನು ಗಮನಿಸಲಿಲ್ಲ. ಮಾನವನ ಜೀವನದಲ್ಲಿ ಕ್ರಾಂತಿ ಎಬ್ಬಿಸಬಲ್ಲ ಸತ್ಯವೊಂದನ್ನು ಕಂಡು ಹಿಡಿದ ವ್ಯಕ್ತಿಯೂ

ಅದರ ಸಾಕಾರ ರೂಪವನ್ನೂ ಕಾಣದೆ ಈ ಲೋಕದಿಂದ ಕಣ್ಮರೆಯಾದ. ಈ ಜ್ಞಾನಿ ಅಳಿದ ನೂರು ವರ್ಷಗಳ ಮೇಲೆ ಮಾನವ ಜನಾಂಗ, ವಿಜ್ಞಾನ ಸಂಘಗಳು ತಮ್ಮ ತಪ್ಪನ್ನು ತಿಳಿದವು. ಆಗ ಜ್ಞಾನದೆಡೆಗೆ ಧಾವಿಸಿ ಬಂದರು. ಮೆಂಡಲ್‌ನನ್ನು ಬಾಯ್ತುಂಬ ಹೊಗಳಿದರು. ಆತನಿಗೊಂದು ಸ್ಮಾರಕವನ್ನು ನಿರ್ಮಿಸಿದರು. ಅಂದು ಆತ ಕಂಡು ಹಿಡಿದ ಅಂಶ ಇಂದು ಅನುವಂಶೀಯ ಶಾಸ್ತ್ರಕ್ಕೆ ಅಡಿಗಲ್ಲು. ಮೆಂಡಲ್ ಕಂಡು ಹಿಡಿದುದು ಅನುವಂಶೀಯತೆಯ ನೀತಿಯನ್ನು. ಅದು ಪ್ರಕೃತಿಯಲ್ಲಿ ಹಿಡಿದಿರುವ ಜಾಡನ್ನು .

ಮೆಂಡಲ್‌ನ ಪ್ರಯೋಗಗಳು

ಗ್ರಿಗರ್ ಮೆಂಡಲ್‌ನು ತನ್ನ ಪ್ರಯೋಗಕ್ಕಾಗಿ ಬಟಾಣಿ ಸಸ್ಯಗಳನ್ನು ಬೆಳೆಸಿ, ಅವುಗಳ ಅನುವಂಶೀಯ ಗುಣಗಳನ್ನು ತನಿಖೆ ಮಾಡಿದನು. ಈ ಗುಣಗಳು ಸಸ್ಯಗಳಿಗೆ ಬರುವುದರಲ್ಲಿ ಏನಾದರೂ ಕ್ರಮ ಅಥವಾ ನಿಯಮ ಇದೆಯೇ ಎಂದು ಆಲೋಚಿಸಿ ಪ್ರಯೋಗಗಳನ್ನು ನಡೆಸಿದನು.

ಬೆಳೆಸಿದ ಎರಡು ಬಟಾಣಿಗಳಲ್ಲಿ ಒಂದು ಎತ್ತರವಾಗಿತ್ತು [TT] ಇನ್ನೊಂದು ಗಿಡ್ಡಾಗಿತ್ತು [tt]. ಮೊದಲನೆಯದು ಎತ್ತರಕ್ಕೆ ಕಾರಣವಾದ ಗುಣಾಂಶವನ್ನೂ ಇನ್ನೊಂದು ಗಿಡ್ಡತನಕ್ಕೆ ಕಾರಣವಾದ ಗುಣಾಂಶವನ್ನೂ ಹೊಂದಿದವು. ಇವು ಬೆಳೆದು ಹೂ ಬಿಟ್ಟವು. ಅನಂತರ ಒಂದರ ಪರಾಗರೇಣುಗಳನ್ನು ಇನ್ನೊಂದರ ಶಲಾಕಾಗ್ರದ ಮೇಲೆ ಹಾಕಿ ಪರಕೀಯ ಪರಾಗಸ್ಪರ್ಶ ಆಗುವಂತೆ ಮಾಡಿದನು. ಕಾಯಿಗಳಾದವು. ಕಾಯಿಗಳಿಂದ ದೊರೆತ ಬೀಜಗಳನ್ನು ನೆಟ್ಟಾಗ, ಮೊಳೆತು ಬೆಳೆದವು. ಇವೆಲ್ಲ ಎತ್ತರವಾಗಿದ್ದವು. ಇವು ಮೊದಲನೆಯ ಪೀಳಿಗೆಯ ಸಸ್ಯಗಳು.




ಇದೇ ರೀತಿ ಇತರ ಎತ್ತರ ಮತ್ತು ಗಿಡ್ಡ ಸಸ್ಯಗಳನ್ನು ಆರಿಸಿ ಮೇಲೆ ಹೇಳಿದಂತೆ ಅನೇಕ ಪ್ರಯೋಗಗಳನ್ನು ಮಾಡಿ ನೋಡಿದನು. ಎಲ್ಲ ಪ್ರಯೋಗಗಳಲ್ಲೂ ಮೊದಲನೆಯ ಪೀಳಿಗೆಯ ಸಸ್ಯಗಳು ಎತ್ತರವಾಗಿಯೇ [Tt] ಇದ್ದವು. ಇದರಿಂದ ಸಸ್ಯದೊಳಗೆ ಎತ್ತರ

ಗುಣವನ್ನು ನಿಯಂತ್ರಿಸುವ ಒಂದು ಅಂಶವಿದೆಯೆಂದು ಊಹಿಸಿಕೊಂಡು ಅದನ್ನು 'ಗುಣಾಂಶ' ಎಂದು ಕರೆದನು.

ಮೊದಲನೆಯ ಪೀಳಿಗೆಯ ಸಸ್ಯಗಳಲ್ಲಿ ಎತ್ತರಕ್ಕೆ ಕಾರಣವಾದ ಗುಣಾಂಶ ಮತ್ತು ಗಿಡ್ಡತನಕ್ಕೆ ಕಾರಣವಾದ ಗುಣಾಂಶಗಳೆರಡೂ ಇದ್ದವು. ಆದ್ದರಿಂದ ಅವು ಮಿಶ್ರತಳಿಗಳು (Tt). ಆದರೆ ಎತ್ತರಕ್ಕೆ ಕಾರಣವಾದ ಗುಣಾಂಶವು ಪ್ರಬಲವಾಗಿದೆ. ಪ್ರಬಲವಾದ ಗುಣಾಂಶವು ಹಿಂಜರಿಯುವ (Recessive) ಗುಣಾಂಶವನ್ನು ಮರೆಮಾಡುತ್ತದೆ. ಇದು ಪ್ರಬಲತೆಯ ನಿಯಮ.

ಮೊದಲನೆಯ ಪೀಳಿಗೆಯ ಸಸ್ಯಗಳು (Tt) ಸ್ವಕೀಯ ಪರಾಗ ಸ್ಪರ್ಶ ಹೊಂದಲು ಅವಕಾಶ ಕೊಟ್ಟನು. ಇವುಗಳಿಂದ ಉತ್ಪತ್ತಿಯಾದ ಬೀಜಗಳು ಬೆಳೆದಾಗ ಪ್ರತಿ ನಾಲ್ಕು ಸಸ್ಯಗಳಲ್ಲಿ ಮೂರು ಸಸ್ಯಗಳು ಎತ್ತರವಾಗಿದ್ದವು. ಒಂದು ಸಸಿ ಮಾತ್ರ ಗಿಡ್ಡಾಗಿತ್ತು. ಇವು ಎರಡನೆಯ ಪೀಳಿಗೆಯ ಸಸ್ಯಗಳು. ಇವುಗಳಲ್ಲಿ ಗಿಡ್ಡತನ ಪುನಃ ಕಂಡು ಬಂದಿತು. ಮೊದಲನೆಯ ಪೀಳಿಗೆಯ ಸಸ್ಯಗಳಲ್ಲಿ ಅಂಡಕೋಶ ಮತ್ತು ಪರಾಗರೇಣುಗಳು ಉತ್ಪತ್ತಿಯಾದಾಗ ಗುಣಾಂಶಗಳು ಪ್ರತ್ಯೇಕವಾಗಿವೆ. ಇದು 'ಪ್ರತ್ಯೇಕತಾ' ನಿಯಮ.

ಮೊದಲನೇ ಪೀಳಿಗೆಯ ಸಸ್ಯಗಳು



ಪ್ರತಿ ಅಂಡಕೋಶ ಅಥವಾ ಪರಾಗುರೇಣುವಿನಲ್ಲಿ ಎತ್ತರಕ್ಕೆ ಕಾರಣವಾದ ಗುಣಾಂಶ ಅಥವಾ ಗಿಡ್ಡತನಕ್ಕೆ ಕಾರಣವಾದ ಗುಣಾಂಶ ಯಾವುದಾದರೂ ಒಂದು ಮಾತ್ರ ಬಂದು ಸೇರುತ್ತದೆ. ಇವುಗಳ ಪರಸ್ಪರ ಸಂಯೋಗವಾಗಿ ಬೀಜದಲ್ಲಿ ಎತ್ತರಕ್ಕೆ ಕಾರಣವಾದ ಎರಡು ಗುಣಾಂಶಗಳು ಸೇರಿದಾಗ ಸಸ್ಯವು ಎತ್ತರವಾಗಿರುತ್ತದೆ. ಇದು ಶುದ್ಧ ಎತ್ತರ ಗುಣದ ಸಸ್ಯ. ಗಿಡ್ಡತನಕ್ಕೆ ಕಾರಣವಾದ ಎರಡು ಗುಣಾಂಶಗಳು ಸೇರಿದರೆ ಸಸ್ಯವು ಗಿಡ್ಡಗಿರುತ್ತದೆ. ಇದು ಶುದ್ಧ ಗಿಡ್ಡತನದ ಸಸ್ಯ (tt). ಪ್ರತಿ ನಾಲ್ಕು ಸಸ್ಯಗಳಲ್ಲಿ ಒಂದು ಶುದ್ಧ ಎತ್ತರ (TT), ಎರಡು ಮಿಶ್ರತಳಿ (Tt) ಮತ್ತು ಒಂದು ಶುದ್ಧ ಗಿಡ್ಡತನದ

ಸಸ್ಯವಾಗಿರುತ್ತದೆ (tt). ಇದರ ಪರಿಮಾಣ 1:2:1

ಎರಡು ಜೀವಿಗಳಲ್ಲಿ ಒಂದಕ್ಕಿಂತಲೂ ಹೆಚ್ಚು ಜೋಡಿ ಅಂಶಗಳಿರುವಾಗ ಪ್ರತಿ ಜೋಡಿ ಲಕ್ಷಣವೂ ಇತರ ಜೋಡಿಗಳಿಂದ ಸ್ವತಂತ್ರವಾಗಿ ಗ್ಯಾಮೆಟ್‌ಗಳಾಗುವಾಗ ಚಲಿಸುತ್ತವೆ. ಇದರಿಂದ ಪಿತೃವಿನಲ್ಲಿಲ್ಲದೆ ಇದ್ದ ಗುಣ ಸಂಯುಕ್ತಗಳು ಮುಂದಿನ ಪೀಳಿಗೆಯ ಜೀವಿಗಳಲ್ಲಿ ಕಾಣಿಸಿಕೊಳ್ಳುತ್ತವೆ. ಇದು ಜೀನ್‌ಗಳ ಸ್ವತಂತ್ರ ಹಂಚಿಕೆಯ ನಿಯಮ.

ಅಂದು ಸೂಕ್ಷ್ಮದರ್ಶಕವೇ ಇರಲಿಲ್ಲ. ಜೀವಕೋಶಗಳನ್ನಾಗಲಿ, ವರ್ಣತಂತುಗಳನ್ನಾಗಲಿ ತಿಳಿಯದೇ ಅನುವಂಶಿಕ ಸಿದ್ಧಾಂತಗಳನ್ನು ರೂಪಿಸಿದುದು ಮೆಂಡಲ್‌ನ ವೈಜ್ಞಾನಿಕ ಪ್ರತಿಭೆಗೆ ಸಾಕ್ಷಿ.

ಈ ನಿಯಮಗಳನ್ನು ಎಲ್ಲಾ ಪ್ರಾಣಿಗಳ, ಸಸ್ಯಗಳ ಪ್ರತಿನಿತ್ಯದ ಬೆಳವಣಿಗೆಯಲ್ಲಿ ಕಾಣಬಹುದು. ಶಾಸ್ತ್ರೀಯ ದೃಷ್ಟಿಯಿಂದ ನೋಡುವವನಿಗೆ ಇದು ನಿಯಮವನ್ನನುಸರಿಸಿ ನಡೆಯುತ್ತದೆ. ಆದರೆ ಎಂದೋ ನೋಡಿ ಮರೆಯುವವನಿಗೆ, ಶಾಸ್ತ್ರೀಯ ಜ್ಞಾನದ ಒಸ್ನಲೆಯಿಲ್ಲದವನಿಗೆ ಇದೊಂದು ಸೋಜಿಗ. ಇಲ್ಲವೆ ದೈವನಿಯಾಮಕ. ನಮಗೆ ಅರ್ಥವಾಗದೇ ಹೋದುದಕ್ಕೆಲ್ಲ ದೇವರೇ ಗುರಿ!

ಭ್ರೂಣ ಶಾಸ್ತ್ರದ ಪ್ರಕಾರ ಪ್ರತಿಯೊಂದು ಜೀವಿಯೂ ತನ್ನ ಜೀವಿತವನ್ನು ಬೀಜಾಣುವಿನಿಂದ ಆರಂಭಿಸುತ್ತದೆ. ಈ ಬೀಜಾಣುವು ವಾಸ್ತವವಾಗಿ ಒಂದು ಜೀವಕಣ. ಎರಡು ಜೀವಾಣುಗಳು ಕೂಡಿ ಬೀಜಾಣು ಉಂಟಾಗುತ್ತದೆ. ಈ ಕ್ರಿಯೆಗೆ ಗರ್ಭಾಂಕುರತೆ (Fertilization) ಎಂದು ಹೆಸರು.

ಜೀವಕಣಗಳು ಜೀವಿಗಳ ರಚನೆಯ ಕನಿಷ್ಠ ಭಾಗಗಳು. ಇವು ಗಾತ್ರದಲ್ಲಿ ಬಹಳ ಸೂಕ್ಷ್ಮ. ಜೀವಿಗಳ ದೇಹ ಒಂದೇ ಒಂದು ಜೀವಕಣದಿಂದಾಗಿರಬಹುದು. ಅಥವಾ ಕೋಟ್ಯಾಂತರ ಜೀವಕಣಗಳನ್ನೊಳಗೊಂಡಿರಬಹುದು.

ಕಣ್ಣೆವೆಯ ಕೂದಲನ್ನು ಕಿತ್ತು ಸೂಕ್ಷ್ಮದರ್ಶಕದಡಿಯಲ್ಲಿಟ್ಟು ನೋಡಿದಾಗ ಹತ್ತಿಪ್ಪತ್ತು ಜೀವಂತ ಜೀವಕೋಶಗಳು ಕೂದಲಿನ ಬುಡಕ್ಕೆ ಅಂಟಿಕೊಂಡಿರುವುದು ಸ್ಪಷ್ಟವಾಗುತ್ತದೆ. ಅದರಲ್ಲಿ ಯಾವುದಾದರೂ ಒಂದು ಜೀವಕೋಶವನ್ನು ಹೋಳುಮಾಡಿ, ಇನ್ನೂ ಶಕ್ತಿಶಾಲಿ ಸೂಕ್ಷ್ಮದರ್ಶಕದಡಿಯಲ್ಲಿಟ್ಟು ನೋಡಲು, ಜೀವಕೋಶದ ಹೋಳಿನ ಮಧ್ಯ ಒಂದು ಕೋಶಕೇಂದ್ರ, (Nucleus) ಕಾಣುತ್ತದೆ. ಕೋಶಕೇಂದ್ರ, ಇಲ್ಲದೆ ಜೀವಕೋಶ ಹೆಚ್ಚುಕಾಲ ಚಟುವಟಿಕೆಯಿಂದಿರಲಾರದು. ಕೋಶಕೇಂದ್ರವನ್ನು ಸೂಕ್ಷ್ಮವಾಗಿ ಗಮನಿಸಿದಾಗ ಪುಟ್ಟಪುಟ್ಟ ಗುಣಾಕಾರ ಚಿಹ್ನೆಯಾಕಾರದ (xx) ರಚನೆಗಳು ಕಾಣುತ್ತವೆ. ಇವಕ್ಕೆ 'ವರ್ಣತಂತು'ಗಳು ಎನ್ನುತ್ತಾರೆ. ಈ ವರ್ಣತಂತುಗಳ ಸಂಖ್ಯೆ ಒಂದು ಪ್ರಭೇದದ ಪ್ರಾಣಿಗಳಲ್ಲಿ ನಿಶ್ಚಿತವಾಗಿರುತ್ತವೆ. ಉದಾ: ಜಂತು ಹುಳು-2, ಕಪ್ಪೆ-20, ಮನುಷ್ಯ-46(ಬಡವ-ಬಲ್ಲಿದ, ಗಂಡು-ಹೆಣ್ಣು, ಬಣ್ಣ ಭೇದವಿಲ್ಲದೇ, ಪ್ರಪಂಚದ ಎಲ್ಲ ಮಾನವ ಜನಾಂಗದಲ್ಲಿಯ ಜೀವಕೋಶಗಳಲ್ಲಿಯ ವರ್ಣತಂತುಗಳ ಸಂಖ್ಯೆ 46. ಪ್ರಸ್ತಾತೀತ 'ಸಮಾನತೆ' ಸ್ಪಷ್ಟವಾಗಿ ಕಾಣುವುದು ಇಲ್ಲಿ ಮಾತ್ರವೇನೋ!)

ಈ ವರ್ಣತಂತುಗಳು ಸಾಮಾನ್ಯವಾಗಿ ಜೋಡಿಯಾಗಿರುತ್ತವೆ. ಒಂದು ಜೊತೆಯ ಎರಡು ವರ್ಣತಂತುಗಳು ಆಕಾರ, ಉದ್ದ, ಗಾತ್ರದಲ್ಲಿ ಒಂದೇ ರೀತಿ ಇರುತ್ತವೆ.

ಇವಕ್ಕೆ ಅನುರೂಪ (Homologus) ವರ್ಣತಂತುಗಳೆಂದು ಹೆಸರು. ಅವುಗಳಲ್ಲಿ ಒಂದು ತಾಯಿಯಿಂದ ಮತ್ತೊಂದು ತಂದೆಯಿಂದ ಬರುತ್ತವೆ. ಇನ್ನೂ ಸಮೀಪದಿಂದ ನೋಡಿದರೆ ಈ ಗುಣಾಕಾರದ ಚಿಹ್ನೆಗಳು ಟೊಳ್ಳಾದ ಸಣಕಲು ಬದನೆಕಾಯಿಯಹಾಗೆ ಕಾಣುತ್ತವೆ. ಇವುಗಳನ್ನು ಬಿಚ್ಚಬಹುದು-ಸಣಬಿನ ಸುರಳಿ ಬಿಚ್ಚಿದಹಾಗೆ. ಆಗ ಹೊರಡುವ ಎಳೆಗಳಿಗೆ 'ಕ್ರೋಮ್ಯಾಟಿಡ್' ಎನ್ನುವರು.


ವಂಶವಾಹಿನಿಯ ಘಟಕ

ವರ್ಣತಂತುಗಳ ರಚನೆ ಮಣಿಯ ಸರದಂತಿರುತ್ತದೆ. ಈ ಮಣಿಗಳಿಗೆ 'ಜೀನ್' (Gene)ಗಳೆಂದು ಹೆಸರು. ಜೀವಿಗಳಲ್ಲಿ ಪ್ರಕಟಗೊಳ್ಳುವ ಗುಣಗಳಿಗೆ ಈ ಜೀನ್‌ಗಳೇ ಕಾರಣ ಎಂದು ಥಾಮಸ್ ಹಂಟ್ ಮೋರ್ಗನ್ (Thomas Hunt Morgan) ಅವರು ತಮ್ಮ ಪ್ರಭಾವಶಾಲಿ ಪ್ರಯೋಗಗಳಿಂದ ತೋರಿಸಿ ಕೊಟ್ಟರು. ಇವರ ಈ ಸಂಶೋಧನೆಗಳನ್ನು ಮೆಚ್ಚಿ 1939ರಲ್ಲಿ ಅವರಿಗೆ ನೊಬೆಲ್ ಬಹುಮಾನವನ್ನು ಕೊಡಲಾಯಿತು. 'ಜೀನ್'ಗಳ ಸಂಶೋಧನೆಯ ಕೆಲಸ ಕಷ್ಟಕರವಾದುದು. ಏಕೆಂದರೆ ನಿಸರ್ಗವು ವಂಶಾವಾಹಿನಿಗಳ ಮರ್ಮವನ್ನು ಅಷ್ಟೊಂದು ಆಳದಲ್ಲಿ ಅಡಗಿಸಿಟ್ಟಿದೆ.

ಜೀವಿಯ ಪ್ರತಿಯೊಂದು ಕಣದಲ್ಲೂ ವಂಶವಾಹಿನಿಯ ಒಂದು ಸಂಪೂರ್ಣ ಸಮುದಾಯವೇ ಇದೆ. ಹೊರ ಆವರಣದ ಪ್ರಭಾವಕ್ಕೀಡಾಗದಂತೆ ಲೈಂಗಿಕ ಕೋಶಗಳು ದೇಹದೊಳಗೆ ಹುದುಗಿಸಿ ರಕ್ಷಿಸಲ್ಪಟ್ಟಿವೆ. ಲೈಂಗಿಕ ಕೋಶಗಳು, ಕೋಶಕೇಂದ್ರಗಳನ್ನು, ಕೋಶಕೇಂದ್ರಗಳು ವರ್ಣತಂತುಗಳನ್ನು, ವರ್ಣತಂತುಗಳು ಜೀನ್‌ಗಳನ್ನು ಸಂರಕ್ಷಿಸುತ್ತವೆ!

ಒಂದು ಜೀವಿಯ ರಚನೆಯಲ್ಲಿ ಕಾಣಬರುವ ಒಂದೊಂದು ಗುಣಕ್ಕೂ ಒಂದು ಅಥವಾ ಹಲವು ಜೀನ್‌ಗಳು ಕಾರಣ. ಜೀವಿಗಳ ಗುಣಗಳನ್ನು ನಿರ್ದಿಷ್ಟವಾಗಿ ಪಟ್ಟಿ ಮಾಡುವುದು ಕಷ್ಟ. ಜೀವಿಯ ಪ್ರತಿಯೊಂದು ಜೀವಕ್ರಿಯೆಯನ್ನು ಇವು ನಿಯಂತ್ರಿಸುತ್ತವೆ. ದೇಹದ ರಚನೆ, ದೈಹಿಕ ಮತ್ತು ಮಾನಸಿಕ ಕ್ರಿಯೆಗಳು ಸಹ ಇವುಗಳ ನಿಯಂತ್ರಣಕ್ಕೊಳಪಟ್ಟಿವೆ. ಈ ಜೀನ್‌ಗಳು ವರ್ಣತಂತುಗಳ ಉದ್ದಕ್ಕೂ ಹರಡಿವೆ. ಬೆಳವಣಿಗೆಯ ಪ್ರತಿಯೊಂದು ಹೆಜ್ಜೆಯಲ್ಲಿಯೂ ಗುಣಗಳು ಪ್ರಕಟಗೊಳ್ಳುವುದನ್ನು ನಿಯಂತ್ರಿಸುತ್ತವೆ. ಜೀವಕೋಶಗಳು ಸಂಖ್ಯೆಯಲ್ಲಿ ಹೆಚ್ಚುವುದು ಹೊಸ ಜೀವಕೋಶಗಳ ಸೃಷ್ಟಿಯಿಂದಲ್ಲ; ಮೊದಲೇ ಇರುವ ಜೀವಕೋಶಗಳ ವಿಭಜನೆಯಿಂದ. ಈ ವಿಭಜನೆಯಲ್ಲಿ ನಿರ್ದಿಷ್ಟವಾದ ಯೋಜನೆಯುಂಟು. ಇದು ಒಂದು ಕಾಗದವನ್ನು ಹರಿದು ಎರಡು ಮಾಡಿದಂತಲ್ಲ. ವಿಭಜನೆಯಿಂದ ಉತ್ಪತ್ತಿಯಾಗುವ ಜೀವಕೋಶಗಳಲ್ಲಿಯೂ ವರ್ಣತಂತುಗಳು ಮೊದಲಿನ ಸಂಖ್ಯೆಯಲ್ಲಿರಬೇಕು. ಆದುದರಿಂದ ವಿಭಜನೆಯ ಕಾಲದಲ್ಲಿ ವರ್ಣತಂತುಗಳು ಉದ್ದುದ್ದಾಗಿ ಸೀಳುತ್ತವೆ. ಸೀಳಿದ ವರ್ಣತಂತುಗಳೊಂದೊಂದೂ ಮೊದಲಿನ ವರ್ಣತಂತುವಿನ ನಕಲು. ಇದರಿಂದ ಕೇವಲ ಸಂಖ್ಯೆಯೇ ಅಲ್ಲದೆ ಪ್ರತಿಯೊಂದು ನಡತೆಯಲ್ಲೂ ತದ್ರೂಪ ವರ್ಣತಂತುಗಳುಳ್ಳ ಜೀವಕೋಶಗಳು ಉಂಟಾಗುತ್ತವೆ. ವರ್ಣತಂತುಗಳು ಉದ್ದುದ್ದಾಗಿ ಸೀಳಲು ಕಾರಣ ಇಲ್ಲದಿಲ್ಲ. ವರ್ಣತಂತುಗಳು ಒಂದೇ ರೀತಿಯ ಮಣಿಗಳ ಸರಗಳಲ್ಲ. ಒಂದೊಂದು ಮಣಿಯು


ಒಂದೊಂದು ಬಣ್ಣ ಒಂದೊಂದು ಆಕಾರವೆಂದುಕೊಂಡರೆ, ಅವನ್ನು ನಡುವೆ (ಅಡ್ಡಾಗಿ) ಹರಿದರೆ ಸರಿಯಾದ ವಿಭಜನೆ ಉಂಟಾದಂತಾಗಲಿಲ್ಲ. ಒಂದು ವರ್ಣತಂತುವಿನಲ್ಲಿ ಅ, ಆ, ಇ, ಈ, ಉ, ಊ, ಎ, ಏ ಎಂಬ ಎಂಟು ಜೀನುಗಳಿವೆ ಎಂದು ಊಹಿಸಿಕೊಳ್ಳೋಣ. ಈ ಒಂದೊಂದು ಜೀನ್ ಒಂದೊಂದು ಗುಣಕ್ಕೆ ಕಾರಣ ಎಂದು ಇಟ್ಟುಕೊಳ್ಳೋಣ.



ಅ-ಚರ್ಮದ ಬಣ್ಣ, ಆ-ಕೂದಲಿನ ಬಣ್ಣ, ಇ-ಕಣ್ಣಿನ ಆಕಾರ, ಈ-ಮೂಗಿನ ಆಕಾರ, ಉ-ಕಣ್ಣಿನ ಬಣ್ಣ, ಊ-ಕಿವಿಯ ಆಕಾರ, ಎ-ಕೂದಲಿನ ರಚನೆ (ನೇರ ಅಥವಾ ಗುಂಗುರ), ಏ-ವ್ಯಕ್ತಿಯ ಎತ್ತರ ಎಂದು ಊಹಿಸಿದರೆ, ಇದನ್ನು ಅಡ್ಡಾಗಿ ನಡುವೆ ಹರಿದರೆ 'ಅಆಇಈ'ಗಳು ಒಂದು ಭಾಗಕ್ಕೂ, 'ಉಊಎಏ'ಗಳು ಮತ್ತೊಂದು ಭಾಗಕ್ಕೂ ಹಂಚಿ ಹೋಗುತ್ತವೆ. ಇದರಿಂದ ಉಂಟಾಗುವ ಜೀವಕೋಶಗಳು ಮೂಲದ ನಕಲುಗಳಾಗಿರುವುದಿಲ್ಲ. ಕೆಲವು ಸಾರಿ ಜೀವಿಗಳಲ್ಲಿ ಆಕಸ್ಮಿಕವಾಗಿ ಹೀಗಾಗಬಹುದು. ಇದರಿಂದಲೇ ಕಣ್ಣು, ಕಿವಿಗಳಿಲ್ಲದ, ಕೈಕಾಲು ಬೆಳೆಯದ, ಸೊಟ್ಟಮೋತಿಯ, ಊನದೇಹದ ಅಷ್ಟವಕ್ರದ ಜೀವಿಗಳು ಬೆಳೆಯುತ್ತವೆ. ಇದು ಸಹಜವಾಗಿ ನಡೆಯುವುದಿಲ್ಲ. ಆಕಸ್ಮಿಕವಾಗಿ ಆದಾಗಲೂ ಮಾರಕವಾಗಿ ಪರಿಣಮಿಸುತ್ತದೆ. ವರ್ಣತಂತುಗಳು ಉದ್ದುದ್ದಾಗಿ ವಿಭಜನೆಗೊಂಡಾಗ ಪ್ರತಿಯೊಂದು ಜೀನಿನ ನಕಲೂ ಹೊಸ ಜೀವಕೋಶದ ವರ್ಣತಂತುಗಳ ಮೇಲೆ ಆಕ್ರಮಿಸುವ ಸ್ಥಳಗಳೂ ಮೊದಲಿನ ಅಚ್ಚನ್ನೇ ಅನುಸರಿಸುತ್ತವೆ. ಕೆಲವು ಸಾರಿ ಜೀನ್‌ಗಳ ಸ್ಥಾನಪಲ್ಲಟವಾದರೂ ಗುಣಲಕ್ಷಣಗಳಲ್ಲಿ ವ್ಯತ್ಯಾಸವಾಗುತ್ತದೆ.

ಡಿ. ಎನ್. ಎ.

1940ರಲ್ಲಿ ಬೀಡಲ್ ಮತ್ತು ವಂಟಾ ಎಂಬ ವಿಜ್ಞಾನಿಗಳು ಜೀನ್ ಎಂದರೆ ಒಂದು ನಿರ್ದಿಷ್ಟ ಕ್ರಮದಲ್ಲಿ ಅಮೈನೋ ಆಮ್ಲಗಳ ಸರಣಿಯಾದ ಪ್ರೋಟೀನಿನ ಸಂಶ್ಲೇಷಣಾ ಸಾಮರ್ಥ್ಯವಿರುವ ಜೀವಧಾತುವಿನ ಅಂಗವೆಂದು ವ್ಯಾಖ್ಯಾನಿಸಿದರು. ವರ್ಣತಂತುಗಳು ಗುಣನಿರ್ಧಾರಕಗಳಾದ ಜೀನ್‌ಗಳನ್ನು ಸಾಗಿಸುವ ವಾಹಕಗಳೆಂದು ಗೊತ್ತಾಯಿತು. 1944ರಲ್ಲಿ ಓ.ಟಿ. ಅಮೇರಿ, ಮೆಕ್ಲಿನ್, ಮೆಕಂದ್ರೆ ಮತ್ತು ಮೆಕಾರ್ಲ್ಡ್ ಎಂಬ ವಿಜ್ಞಾನಿಗಳು ಡಿ ಆಕ್ಸಿರೈಬೋ ನ್ಯೂಕ್ಲಿಕ್ ಆಮ್ಲ (D.N.A)ವೇ ಅನುವಂಶಿಕ ವಸ್ತು ಎಂದು ಅತ್ಯಂತ ಸಮರ್ಥವಾಗಿ ಸಾಬೀತು ಪಡಿಸಿದರು.




ಡಿ.ಎನ್.ಎ. ಸುರುಳಿ

ಅನುವಂಶಿಕ ಮಾಹಿತಿಯನ್ನು ಹೊತ್ತಿರುವ ವರ್ಣತಂತುಗಳನ್ನು ರೂಪಿಸಿರುವ ಪದಾರ್ಥವನ್ನು ರಸಾಯನಿಕ ಶಾಸ್ತ್ರಜ್ಞರು ನೂಕ್ಲಿಯೋ ಪ್ರೋಟೀನ್ ಎಂದು ಕರೆಯುತ್ತಾರೆ. ಅದು ನ್ಯೂಕ್ಲಿಕ್ ಆಮ್ಲ ಮತ್ತು ಪ್ರೋಟೀನ್‌ಗಳ ಸಂಯೋಗದಿಂದ ಉಂಟಾದದ್ದು. ಇವೆರಡರಲ್ಲಿ ನ್ಯೂಕ್ಲಿಕ್ ಆಮ್ಲವೇ ಅನುವಂಶಿಕ ಮಾಹಿತಿಯನ್ನು ಹೊತ್ತು ತರುವುದು ಎಂಬುದರಲ್ಲಿ ಯಾವ ಸಂದೇಹವಿಲ್ಲ. ಬಹುಶಃ ಒಂದೊಂದು ಜೀನ್‌ಗಳೂ ಒಂದೊಂದು ನ್ಯೂಕ್ಲಿಕ್ ಆಮ್ಲ. ಅದು ಯಾವದೋ ಒಂದು ನಿರ್ದಿಷ್ಟ ಅನುವಂಶಿಕ ಲಕ್ಷಣಕ್ಕೆ ಕಾರಣ. ಅಂದರೆ ಆ ಲಕ್ಷಣಕ್ಕೆ ಸಂಬಂಧಿಸಿದ ಮಾಹಿತಿಯನ್ನು ಅದು ಹೊತ್ತಿರುತ್ತದೆ. ಈ ಲೆಕ್ಕದಲ್ಲಿ ಒಂದಕ್ಕೊಂದು ವ್ಯತ್ಯಾಸವಿರುವ ಕೋಟ್ಯಾಂತರ ಬಗೆಯ

ನ್ಯೂಕ್ಲಿಕ್ ಆಮ್ಲಗಳಿರಬೇಕಷ್ಟೆ!

ವರ್ಣತಂತುವನ್ನು ಬಿಚ್ಚುತ್ತ ಹೋದರೆ ಸುಂದರವಾದ ತಿರುಪಣಿ ಏಣಿಯ ಹಾಗೆ ಸುರಳಿ ಸುರಳಿಯಾದ ಜೋಡಿ ಎಳೆಯ ಡಿ.ಎನ್.ಎ. ಹೊರಬರುತ್ತದೆ. ಇದನ್ನು ಬಿಚ್ಚುತ್ತಾ ಪೋಗಬಹುದು. ಉದ್ದಕ್ಕೆ..... ಎಂದರೆ ಎಷ್ಟುದ್ದಕ್ಕೆ? ಈ ಡಿ.ಎನ್.ಎ.ಗೆ ಒಟ್ಟು ಸುಮಾರು 350 ಕೋಟಿ ಪಾವಟಿಗೆಗಳಿವೆ. ಅದನ್ನು ರೇಲ್ವೆ ಹಳಿಯ ಹಾಗೆ ಮಲಗಿಸಿ, ಸುರಳಿಯನ್ನು ಎಳೆಯುತ್ತಾ ಎಳೆಯುತ್ತಾ ಇಡೀ ಭೂಮಿಯನ್ನು ಸುಮಾರು ಒಂದು ನೂರು ಬಾರಿ ಸುತ್ತು ಹಾಕಬಹುದು. ಇಂದು ವಿಜ್ಞಾನಿಗಳು ಇದನ್ನು ಅಳೆಯಲು ಹೊರಟಿದ್ದಾರೆ. ಅಳೆಯುವುದೆಂದರೆ ಕೇವಲ ಉದ್ದ ಅಳೆಯುವುದಲ್ಲ. ಹಿಂದಿನ ಕಾಲದ ಶಾನುಭೋಗರು ಜಮೀನು, ಮನೆ, ಮಠ, ಹಳ್ಳ, ಹೊಳೆ, ಹಾದಿ 'ಮೋಜಣಿ' ಮಾಡಿದ ಹಾಗೆ ಈ ವರ್ಣತಂತುವಿನಲ್ಲಿ ಎಲ್ಲಿ ಏನೇನಿದೆ ಅದರ ಚಹರೆ ಏನೇನು ಎಂಬುದನ್ನು ವಿವರಿಸುವ ನಕ್ಷೆ ತಯಾರಿಸುವುದು. ಮನುಷ್ಯನ ಜೀವಕೋಶದ ಈ ಬ್ರಹ್ಮಸೂತ್ರವನ್ನು ಅಳೆಯುವ ಕೆಲಸಕ್ಕೆ 'ಹ್ಯೂಮನ್ ಜಿನೋಮ್ ಮ್ಯಾಪಿಂಗ್' ಎನ್ನುತ್ತಾರೆ. (ಚಿತ್ರ ನೋಡಿ) ಇದಕ್ಕೆ ಬ್ರಹ್ಮಸೂತ್ರ ಎನ್ನಲು ಕಾರಣವಿಷ್ಟೆ: ನಮ್ಮದಷ್ಟೇ ಅಲ್ಲ, ತಾತ ಮುತ್ತಾತ, ಮುತ್ತಜ್ಜಿ, ಮಕ್ಕಳು, ಮರಿಮಕ್ಕಳು, ಗಿರಿಮಕ್ಕಳದಷ್ಟೇ ಅಲ್ಲ ಇಡೀ ಮಾನವ ಕುಲದ ಸೃಷ್ಟಿ ಸೂತ್ರ ಇದರಲ್ಲಡಗಿದೆ. ವಿಜ್ಞಾನ ತೀರಾ ಮುಂದುವರೆದರೆ, ನಮ್ಮ ಕಣ್ಣು ರೆಪ್ಪೆಯ ಕೂದಲಿನ ಬುಡಕ್ಕೆ ಅಂಟಿಕೊಂಡ ನೂರಾರು ಜೀವಕೋಶಗಳ ಪೈಕಿ ಒಂದನ್ನೇ ಎತ್ತಿಕೊಂಡು 'ತದ್ರೂಪು' ವ್ಯಕ್ತಿಗಳನ್ನು ತಯಾರಿಸಬಹುದು. ವಿಜ್ಞಾನ ಇನ್ನೂ ಮುಂದುವರಿದರೆ ಅದೊಂದು ಜೀವಕೋಶದ ಬ್ರಹ್ಮಸೂತ್ರವನ್ನು ಕತ್ತರಿಸಿ, ಬಾಗಿಸಿ, ಜೋಡಿಸಿ ಇಲಿ, ಹುಲಿ, ಹಲ್ಲಿ, ಹಾಗಲಬಳ್ಳಿಗಳನ್ನು ಸೃಷ್ಟಿಸಬಹುದು..... ಎಷ್ಟೆಂದರೂ ಇದು ಊಹೆಯ ಮಾತು ಬಿಡಿ.



ಹ್ಯೂಮನ್ ಜಿನೋಮ್ ಮ್ಯಾಪಿಂಗ್

ಉದ್ದನೆ ಜೋಡಿ ಸರಪಳಿಯಂಥ ಉಪವಿಭಾಗಗಳು ಪ್ರತ್ಯಾಮ್ಲಗಳಿಂದ ಮಾಡಲ್ಪಟ್ಟಿರುತ್ತವೆ. ಜೀವವಿಜ್ಞಾನಿ ಜೇಮ್ಸ್ ಡಿ-ವಾಟ್ಸನ್ ಮತ್ತು ಭೌತವಿಜ್ಞಾನಿ ಫ್ರಾನ್ಸಿಸ್ ಕ್ರಿಕ್ ಎಂಬುವರು ಡಿ.ಎನ್.ಎ. ಜೋಡಿ ಸುರಳಿಯ ರಚನೆಯನ್ನು 1953ರಲ್ಲಿ ಕಲ್ಪಿಸಿದರು. ಡಿ.ಎನ್.ಎ.ಯಲ್ಲಿರುವ ಪ್ರತ್ಯಾಮ್ಲಗಳೆಂದರೆ ಅಡಿನೈನ್ (Adenine-'ಅ'), ಗುಅನೈನ್(Guanine-'ಗು'), ಥೈಮಿನ್ (Thymine-'ಥೈ'), ಮತ್ತು ಸೈಟೋಸಿನ್ (Cytocine-'ಸಿ')ಗಳು. ಡಿ.ಎನ್.ಎ.ಯ ಒಂದು ಎಳೆಯಲ್ಲಿ

'ಅ' ಇದ್ದರೆ ಅದರ ಜೋಡಿ ಸುರಳಿಯಲ್ಲಿ 'ಥೈ'ನೊಡನೆ ಬಂಧಿತವಾಗಿರುತ್ತದೆ. ಅದೇ ರೀತಿ 'ಗು''ಸಿ'ಯೊಡನೆ ಬಂಧಿತವಾಗಿರುತ್ತದೆ. ಈ ರೀತಿಯಲ್ಲಿ ಅವು ಪೂರಕ ಜೋಡಿಗಳಾಗಿ ಮೆಟ್ಟಿಲುಗಳ ರೀತಿಯಲ್ಲಿ ಡಿ.ಎನ್.ಎ. ಸುರಳಿಯ ಎರಡು ಎಳೆಗಳನ್ನು ಕೊಂಡಿಯಂತೆ ಬಂಧಿಸಿರುತ್ತವೆ.

ಅನುವಂಶೀಯ ಮಾಹಿತಿಯನ್ನು ತಮ್ಮ ಅಣುರಚನೆಯ ರೂಪದಲ್ಲಿ ಹೊತ್ತು ತರುವುದು ನ್ಯೂಕ್ಲಿಕ್ ಆಮ್ಲಗಳಾದರೆ, ಆ ಮಾಹಿತಿಯನ್ನು ಉಪಯೋಗಿಸಿ ನಿರ್ದಿಷ್ಟ ಗುಣಲಕ್ಷಣವನ್ನು ಜೀವಿಯಲ್ಲಿ ಮೂಡಿಸುವ ಕಾರಕಗಳೇ (Agent) ಪ್ರೋಟೀನುಗಳು. ನ್ಯೂಕ್ಲಿಕ್ ಆಮ್ಲಗಳಲ್ಲಿ ಹೇಗೋ ಹಾಗೆಯೇ ಪ್ರೋಟೀನ್‌ಗಳಲ್ಲೂ ಬೇರೆ ಬೇರೆ ಅಣುರಚನೆಯಿರುವ ಕೋಟ್ಯಾಂತರ ಪ್ರೋಟೀನ್‌ಗಳು ಉತ್ಪತ್ತಿಯಾಗಿ ವಿವಿಧ ಜೀವ ರಾಸಾಯನಿಕ ಕ್ರಿಯೆಗಳನ್ನು ನಡೆಸಿಕೊಡುವವು.

ಅಣು ರಚನೆಯ ರೂಪದಲ್ಲಿ ಅನುವಂಶೀಯ ಮಾಹಿತಿ ಸಂಕೇತ ಭಾಷೆಯಲ್ಲಿ ಅಡಗಿರುವುದು ನ್ಯೂಕ್ಲಿಕ್ ಆಮ್ಲಗಳಲ್ಲಿ ಎಂಬುದನ್ನು; ಆ ಮಾಹಿತಿಯನ್ನು ಉಪಯೋಗಿಸಿಕೊಂಡು ಜೀವಿಗಳಲ್ಲಿ ನಿರ್ದಿಷ್ಟ ಲಕ್ಷಣವನ್ನು ಮೂಡಿಸುವ ಮಾಧ್ಯಮಗಳು ಕಿಣ್ವ (Enzyme)ಗಳೆಂಬ ಪ್ರೋಟೀನ್‌ಗಳು ಎಂಬುದನ್ನು ಒಪ್ಪಿಕೊಂಡರೆ ಒಂದು ತೀರ್ಮಾನ ಸಹಜವಾಗಿ ಹೊರಡುವುದು. ಪ್ರತಿಯೊಂದು ಜೀನ್ ಅಂದರೆ ನ್ಯೂಕ್ಲಿಕ್ ಆಮ್ಲವೂ ತನ್ನ ವಿಶಿಷ್ಟ ರಚನೆಯನ್ನು ಅವಲಂಬಿಸಿದಂತೆ ಒಂದು ನಿರ್ದಿಷ್ಟ ರಚನೆಯುಳ್ಳ ಪ್ರೋಟಿನ್ ಕಿಣ್ವವನ್ನು ಉತ್ಪಾದಿಸಿದಾಗ ಸಂಕೇತ ಭಾಷೆಯಲ್ಲಿದ್ದ ಮಾಹಿತಿಯು ಉಪಯುಕ್ತ ಭಾಷೆಗೆ ರೈಬೋ ನ್ಯೂಕ್ಲಿಕ್ ಆಮ್ಲ (R.N.A)ದಿಂದ ತರ್ಜುಮೆಯಾಗಿ ಅದರ ಮೂಲಕ ಜೀವಿಯ ಮೇಲೆ ಒಂದು ನಿರ್ದಿಷ್ಟ ಅನುವಂಶಿಕ ಲಕ್ಷಣವನ್ನು ಪ್ರಕಟಿಸುವುದೆಂಬುದು ಸ್ಪಷ್ಟ.

ಡಿ.ಎನ್.ಎ. ಚೂರುಗಳ ಬೆಸುಗೆ

ಡಿ.ಎನ್.ಎ. ತಂತುವು ಅತಿ ಸೂಕ್ಷ್ಮವಾಗಿ ಕಂಡರೂ ಅದರಲ್ಲಿ ಸಾವಿರ ಸಂಪುಟಗಳ ಗ್ರಂಥದಲ್ಲಿ ಶೇಖರಿಸಿಡಬಲ್ಲಷ್ಟು ಮಾಹಿತಿಯ ಸಂಗ್ರಹವಾಗಿರುತ್ತದೆ. ಇಂದಿನ ಜೀವ ತಾಂತ್ರಿಕ (Micro-biotechnology) ವಿಜ್ಞಾನದ ಬೆಳವಣಿಗೆಯಿಂದಾಗಿ ಡಿ.ಎನ್.ಎ.ಗಳನ್ನು ವಿಭಾಗಿಸಲು ನಿರ್ಬಂಧಕ ಕಿಣ್ವಗಳನ್ನು (Restriction Endonucleases) ಬಳಸಲಾಗುತ್ತದೆ. ಈ ತುಣುಕುಗಳನ್ನು ಒಂದರೊಡನೊಂದು ಸೇರಿಸಲು ಅಥವಾ ಬೇರೆ ಜೀವಿಯ ಡಿ.ಎನ್.ಎ.ತುಣುಕಿನೊಡನೆ ಬೆಸೆಯಲು ಅಥವಾ ಮಿಶ್ರತಳಿ ಅಣುವನ್ನು ಪಡೆದುಕೊಳ್ಳಲು ಸಾಧ್ಯವಾಗಿದೆ. ಈ ರೀತಿ ಬೆಸೆಯುವ ಅಥವಾ ಒಂದು ತುಣುಕು ಡಿ.ಎನ್.ಎ. ಮತ್ತೊಂದು ಚೂರು ಡಿ.ಎನ್.ಎ.ಯೊಡನೆ ಸೇರಿಕೊಳ್ಳುವಂತೆ ಮಾಡಲು ಬ್ಯಾಕ್ಟೀರಿಯಾಗಳಿಂದ ಉತ್ಪಾದಿಸಿಕೊಂಡ ಡಿ.ಎನ್.ಎ.'ಲಿಗೇಜ' ಎಂಬ ಕಿಣ್ವವನ್ನು ಬಳಸಲಾಗುತ್ತದೆ. ಈ 'ಬೆಸುಗೆ' ಕಿಣ್ವಗಳು, ಡಿ.ಎನ್.ಎ. ಚೂರುಗಳ ತುದಿಗಳನ್ನು ಗ್ರಹಿಸಿ ಅವುಗಳನ್ನು ಒಟ್ಟಿಗೆ ಸೇರಿಸಿ, ಸ್ವಲ್ಪವೂ ಗುರುತು ಸಿಗದಂತೆ ಎರಡನ್ನೂ ಸೇರಿಸಿ ಬೆಸೆಯುತ್ತದೆ ಅಥವಾ ಒಂದು ಗೂಡಿಸುತ್ತದೆ.

ಮಾನವ ಜೀವಕೋಶದ ವರ್ಣತಂತುವಿನಲ್ಲಿ ಅಡಕವಾದ ಎಲ್ಲ ರಹಸ್ಯಗಳನ್ನೂ

ಹೊರಕ್ಕೆ ಎಳೆಯುವುದು ಅಸಂಭವ ಎಂದೇ ಹತ್ತು ವರ್ಷಗಳ ಹಿಂದೆ ಭಾವಿಸಲಾಗಿತ್ತು. ಕ್ರಮೇಣ ಇಲಿ, ಮೊಲ, ಕುರಿ, ಕೋಳಿ, ಬಟಾಣಿ, ಬತ್ತ ಮುಂತಾದ ಜೀವಿಗಳ ಡಿ.ಎನ್.ಎ.ಗಳನ್ನು ಕತ್ತರಿಸಿ, ವಿವಿಧ ಕ್ರಮಗಳಲ್ಲಿ ಮರು ಜೋಡಿಸಿ ಹೈಬ್ರಿಡ್ ತಳಿಗಳನ್ನು ಸೃಷ್ಟಿಸುತ್ತ ಮನುಷ್ಯರ ತಳಿಸೂತ್ರದಲ್ಲೂ ವಿಜ್ಞಾನಿಗಳು ಕೈಯಾಡಿಸಿದರು. ಅನುವಂಶೀಯ ರೋಗಗಳಲ್ಲಿ ರೈಲುಹಳಿ ಎಲ್ಲಿ ತಿರುಚಿಕೊಂಡಿದೆ ಎಂಬುದನ್ನು ಪತ್ತೆ ಹಚ್ಚಿದರು. ಅಡ್ಡ ಪಟ್ಟಿಗಳು ಅದ್ಲಿಬದ್ಲಿಯಾಗಿ ಜೋಡಿಸಲ್ಪಟ್ಟಿರುವುದನ್ನು ಗುರುತಿಸಿದರು. ಡಿ.ಎನ್.ಎ. ಚೂರುಗಳ ಬೆಸುಗೆ ಹಾಕಿ 'ರಿಪೇರಿ' ಮಾಡಿದರು.

ಮಾನವ ತಳಿನಕ್ಷೆ

ಮಾನವ ತಳಿನಕ್ಷೆಯ ದಾಖಲೆಗೆಂದೇ ಪ್ರತ್ಯೇಕ ಕಂಪ್ಯೂಟರ ಜಾಲ ಇದೀಗ ಸಜ್ಜಾಗಿದೆ. ಟೋಕಿಯೋ, ಆಮಸ್ಟರ್ಡಾಂ, ಹಾರ್ವರ್ಡ್, ಕೇಂಬ್ರಿಜ್, ಚಿಕಾಗೊ, ಟೊರೆಂಟೊಗಳಲ್ಲಿ ಪ್ರತಿನಿತ್ಯ ಪತ್ತೆಯಾಗುತ್ತಿರುವ ಮಾನವ ಬ್ರಹ್ಮಸೂತ್ರದ ತುಣುಕುಗಳು ಮಹಾಕಂಪ್ಯೂಟರಿನ ನರಕೇಂದ್ರದಲ್ಲಿ ಸೇರುತ್ತವೆ. ಒಟ್ಟು ಸುಮಾರು 3500 ಕಂಪ್ಯೂಟರ್‌ಗಳು ಪರಸ್ಪರ ಸಂಭಾಷಿಸಿ, ಮಾಹಿತಿಯ ಸರಮಾಲೆ ಪೋಣಿಸಲು ಸಜ್ಜಾಗಿವೆ. ಮನುಷ್ಯ ಮನುಷ್ಯನ ಮಧ್ಯೆ ವಿಶ್ವಾಸ ಕುಂದಿದ ಈ ಸಂದರ್ಭದಲ್ಲಿ ಮನುಷ್ಯನ ಗುಣಸ್ವಭಾವ ತಿಳಿಸುವ ತಳಿಸೂತ್ರಗಳೆಲ್ಲ ಯಂತ್ರದ ನರವ್ಯೂಹದ ಮೂಲಕ ವ್ಯಕ್ತವಾಗುತ್ತಿವೆ!

ಇಡೀ ತಳಿನಕ್ಷೆ ಯೋಜನೆಯೇ ಅನೈತಿಕವೆಂದೂ ಅದನ್ನು ಕೈಬಿಡಬೇಕೆಂದೂ ವಾದಿಸುವ ಜನರು ಅಮೇರಿಕದಲ್ಲಿ ಬೀದಿ ಮೆರವಣಿಗೆ ಮಾಡುತ್ತಿದ್ದಾರೆ. ಮಾನವ ತಳಿನಕ್ಷೆ ತಯಾರಾದ ಮೇಲೆ ನಮ್ಮ ಅಯೋಗ್ಯತೆ ನಿರ್ಣಯಿಸುವ ಹೊಸ ಅಳತೆಗೋಲು ಬರುತ್ತದೆ. ಒಂದು ಹನಿ ರಕ್ತ ಪರೀಕ್ಷೆ ಮಾಡಿ ಯಾರು ಮೇಲು, ಯಾರು ಕೀಳೆಂಬುದನ್ನು ನಿರ್ಧರಿಸುವ ಹೊಸ ವರ್ಣ(ತಂತು)ಭೇದ ನೀತಿ ಬರುತ್ತದೆ. 'ಬೇಡವೇ ಬೇಡ, ನಮ್ಮ ಜನ್ಮರಹಸ್ಯ ನಮ್ಮಲ್ಲೇ ಇರಲಿ' ಎಂದು ಪ್ರತಿಭಟನೆ ನಡೆಯತೊಡಗಿದೆ. ಅಮೇರಿಕ ಸರ್ಕಾರ ಸಧ್ಯದಲ್ಲೇ ರಾಷ್ಟ್ರೀಯ ಮಟ್ಟದಲ್ಲಿ ಈ ಕುರಿತು ಮತಗಣನೆ ನಡೆಸಲಿದೆ.

ವಾದವಿವಾದ ಹೇಗೇ ಇರಲಿ, ನಮ್ಮ ತಲೆಮಾರಿನಲ್ಲೇ ಈ ವಂಶವಾಹಿ ಸುರಳಿಯ ಗುಳಿವು ಸಿಕ್ಕಿದ್ದು ನಮ್ಮ ಅದೃಷ್ಟವೇ ಸರಿ. ಭೂಮಿ ಹುಟ್ಟಿ ನೂರು ವರ್ಷಗಳಾದವೆಂದು ಪರಿಗಣಿಸಿದರೆ, ಕೇವಲ ಎರಡು ನಿಮಿಷಗಳ ಹಿಂದೆಯಷ್ಟೇ ಪ್ರಪಂಚಕ್ಕೆ ವಿದ್ಯುತ್ ಬೆಳಕು ಬಂತು, ಟಿ.ವಿ. ಬಂತು, ಫ್ಯಾಕ್ಸ್ ಬಂತು. ನಮ್ಮವರು ಥಕ್ಕೆಂದು ಚಂದ್ರನತ್ತ ನೆಗೆಯುವ ಅವಕಾಶ ಬಂತು./ ಆದರೆ ಅಲ್ಲೇನಿದೆ? ಮಣ್ಣು! ವಿಶ್ವದ ಅತ್ಯಂತ ಮಹಾವಿಸ್ಮಯ ನಮ್ಮ ಅಂತರಾಳದಲ್ಲಿಯೇ ಇದೆ. ಈ ಜೀನ್ ಎಲ್ಲಿಂದ ಬಂತು? ಅದಕ್ಕೆ ತನ್ನದೇ ಆದ ತರ್ಕ ಶಕ್ತಿ, ಬುದ್ಧಿಮತ್ತೆ ಇದೆಯೆ? ಈ ಬರಡು ಭೂಮಿಯನ್ನೇ ತನ್ನ ಅಧಿಪತ್ಯಕ್ಕೆ ಆಯ್ದುಕೊಂಡು ಇಲ್ಲಿ ಚಿತ್ರವಿಚಿತ್ರ ಕೋಟ್ಯಾನುಕೋಟಿ ಜೀವಿಗಳನ್ನು ಏಕೆ ನಿರ್ಮಿಸಿತು?


ಮಹಾಸ್ವಾರ್ಥಿ ಈ ಜೀನ್. ಇವು ತಮ್ಮ ರಕ್ಷಣೆಗೆ ಏನೇನೋ ಮಾಡುತ್ತವೆ. ಮೀನುಗಳನ್ನು ನೀರಿನಲ್ಲಿ ಮುಳುಗಿಸಿ ಇಡುತ್ತವೆ. ಕೋತಿಗಳನ್ನು ಮರಕ್ಕೇರಿಸುತ್ತವೆ.

ನಮ್ಮನ್ನೇ ಹೈಜಾಕ್ ಮಾಡಿ ರಾಕೆಟ್ ಮೇಲೆ ಕೂರಿಸಿ ಚಂದ್ರಲೋಕಕ್ಕೆ ರವಾನಿಸುತ್ತವೆ. ಬದುಕುವ ದಾರಿ ಅಲ್ಲಿ ಸುಲಭವಾಗಿ ಕಾಣದಿದ್ದಾಗ ಮನುಷ್ಯನ ಕೈಗೆ ಮೈಕ್ರೋಸ್ಕೋಪ್ ಕೊಟ್ಟು ನಮ್ಮೆದುರು ತಮ್ಮನ್ನು ತಾವೇ ತೆರೆದು ತೋರಿಸುತ್ತವೆ. 'ನೋಡಿ, ಆದರೆ ಕೈ ಹಚ್ಚಬೇಡಿ' ಎಂದು ಎಚ್ಚರಿಕೆ ನೀಡುತ್ತವೆ!

ಕೆಲವು ಜೀನ್‌ಗಳು ಹಾನಿಕಾರಕ ಪರಿಣಾಮಗಳನ್ನುಂಟು ಮಾಡುತ್ತವೆ. ಅವಕ್ಕೆ 'ಹೀನ ಜೀನ್' ಎಂದು ಹೆಸರು. ದೇಹದ ಕ್ರಿಯೆಗಳನ್ನು ಅಡ್ಡಿಪಡಿಸುವಂತಹ ನ್ಯೂನತೆಗಳು, ಸಮಾಜ ಜೀವನಕ್ಕೆ ಹೊಂದಿಕೊಳ್ಳಲು ಕಷ್ಟವಾಗುವಂತಹ ದೇಹದ ವೈಪರೀತ್ಯಗಳು ಮತ್ತು ಅಕಾಲ ಮರಣವನ್ನುಂಟು ಮಾಡುವುದು ಇವೇ ಮೊದಲಾದವು ಹೀನಜೀನ್‌ಗಳ ಹಾನಿಕಾರಕ ಪರಿಣಾಮಗಳು. ವಿಕಾರವಾದ ಕಿವಿ, ಹಲ್ಲು, ಬಾಗಿದ ಬೆನ್ನು ಮೂಳೆ, ಹೆಚ್ಚು ಬೆರಳುಗಳು ಮುಂತಾದ ನ್ಯೂನತೆಗಳನ್ನು ಉಂಟು ಮಾಡುವುದು ಹೀನ ಜೀನ್‌ಗಳು.

ಲಿಂಗ ಸಂಬಂಧ ರೋಗಗಳು

ಕೆಲವು ಕಾಯಿಲೆಗಳು ಮತ್ತು ಗುಣಗಳು ಒಂದೇ ಲಿಂಗದವರಲ್ಲಿ ಕಾಣಿಸಿಕೊಳ್ಳುತ್ತವೆ; ಮತ್ತೊಂದು ಲಿಂಗದವರಲ್ಲಿ ಹೆಚ್ಚಾಗಿ ಕಾಣಿಸಿಕೊಳ್ಳುವುದಿಲ್ಲ. ಇದಕ್ಕೆ ಸೆಕ್ಸ್ ಲಿಂಕ್ಡ್ (Sex linked) ರೋಗಗಳೆಂದು ಹೆಸರು.



ಸಾಮಾನ್ಯವಾಗಿ ಲಿಂಗ ನಿರ್ಧಾರಕ ವರ್ಣತಂತುಗಳ ಮೇಲಿರುವ ಈ ಜೀನಗಳು ಅನುವಂಶೀಯವಾಗಿ ಬರುತ್ತವೆ. ಉದಾ: ಹಿಮೋಫೀಲಿಯಾ, ಬಣ್ಣ ಕುರುಡುತನ (Colour blindness) ಮುಂತಾದವು ಸಾಮಾನ್ಯವಾಗಿ ಪುರುಷರಲ್ಲಿ ಮಾತ್ರ ಕಾಣಿಸಿಕೊಳ್ಳುತ್ತವೆ.

ಹೆಣ್ಣುಮಕ್ಕಳಲ್ಲಿ ಈ ರೋಗಗಳು ಕಾಣಿಸಿಕೊಳ್ಳಬೇಕಾದರೆ ಆಕೆಯ ತಂದೆ ತಾಯಿಯರಿಬ್ಬರಿಗೂ ಈ ರೋಗವಿದ್ದು, ಆಕೆ ಪಡೆಯುವ ಎರಡೂ ವರ್ಣತಂತುಗಳ ಮೇಲೆ 'ಹೀನ ಜೀನ್' ಇರಬೇಕು. ಆದರೆ ಇದುವರೆಗೆ ಈ ರೋಗದಿಂದ ಬಳಲಿದ ಸ್ತ್ರೀಯರು ಇಲ್ಲವೆಂದೇ ಹೇಳಬಹುದು. ಇದಕ್ಕೆ ಕಾರಣವೂ ಉಂಟು. ಎರಡು ಹೀನಜೀನ್‌ಗಳು ಒಂದೇ ವ್ಯಕ್ತಿಯಲ್ಲಿ ಸೇರಿದಾಗ ಮಗು ಜನನಕ್ಕೆ ಮೊದಲೇ ಸತ್ತು ಹೋಗುತ್ತದೆ. ಕೇವಲ ಒಂದು ಲಿಂಗದಲ್ಲಿ ಮಾತ್ರ ಪ್ರಕಟಗೊಳ್ಳುವ ಈ (ಹೀನ) ನಡತೆಗಳಿಗೆ ಲಿಂಗ ಸಂಬಂಧ ನಡತೆಗಳೆಂದು ಹೆಸರು. 'X' ವರ್ಣತಂತುವಿನ ಮೇಲೆ ನಮಗೆ ತಿಳಿಯದ ಇನ್ನೆಷ್ಟು ಜೀನ್‌ಗಳಿವೆಯೋ! ಅವುಗಳ ಪತ್ತೆ ಮುಂದುವರೆದಂತೆ ಈ 'ಪುರುಷರೋಗ'ಗಳ ಸಂಖ್ಯೆಯೂ ಹೆಚ್ಚಬಹುದು!

ಲಿಂಗ ಸೀಮಿತ ರೋಗಗಳು (Sex-Limited diseases)

ಈ ಜೀನ್‌ಗಳು ಲಿಂಗ ನಿರ್ಧಾರಕ ವರ್ಣತಂತುಗಳ ಮೇಲಿರುವುದಿಲ್ಲ. ಬದಲಾಗಿ ಯಾವುದಾದರೂ ಆಟೋಸೋಮುಗಳ (Autosomes) ಮೇಲಿರುತ್ತವೆ. ಇವು ಸ್ತ್ರೀಪುರುಷರಿಬ್ಬರಲ್ಲಿಯೂ ಒಂದೇ ರೀತಿಯಾಗಿರುತ್ತವೆ. ಇಬ್ಬರೂ ಸರಿಸಮನಾಗಿ ಪಡೆಯುತ್ತಾರೆ. ಆದರೆ ಈ ಜೀನ್‌ಗಳು ಇಬ್ಬರಲ್ಲಿಯೂ ಒಂದೇ ಸಮನಾಗಿ ವರ್ತಿಸುವುದಿಲ್ಲ. ಉದಾ: ಬೋಳುತಲೆ. ಈ ಗುಣ ಪುರುಷರಲ್ಲಿ ಪ್ರಬಲವಾಗಿ ವರ್ತಿಸುತ್ತದೆ. ಆಗ ಇದರ ಒಂದು ಜೀನ್ ಇದ್ದರೂ ಸಾಕು ಪುರುಷರಲ್ಲಿಪ್ರಕಟಗೊಳ್ಳುತ್ತದೆ. ಆದರೆ, ಸ್ತ್ರೀಯರಲ್ಲಿ ಪ್ರಕಟಗೊಳ್ಳಬೇಕಾದರೆ ಈ ನಡತೆಯ ಎರಡೂ ಜೀನ್‌ಗಳು ಇರಬೇಕಾಗುತ್ತದೆ. ಜೀನಿನ ಈ ತಾರತಮ್ಯ ವರ್ತನೆಗೇನನ್ನಬೇಕು?!

ಭ್ರೂಣದ ಲಿಂಗ ಬದಲಿಸುವ ಜೀನ್

ಗಂಡು ಬೇಕೆಂದು ಹೆಣ್ಣು ಭ್ರೂಣ ಹೊಸಕಿ ಹಾಕುವ ಹೊಸ ಹಿಡುಗು ಇದೀಗ ಪ್ರಾರಂಭವಾಗಿದೆ. ಭ್ರೂಣದ ಲಿಂಗವನ್ನು ಗಂಡನ್ನಾಗಿ ಪರಿವರ್ತಿಸುವ ಜೀನ್‌ನ್ನು ಯು.ಕೆ.ಯ ಇಂಪಿರಿಯಲ್ ಕ್ಯಾನ್ಸರ್ ರಿಸರ್ಚ್ ಫಂಡ, ಮೆಡಿಕಲ್ ರಿಸರ್ಚ ಕೌನ್ಸಿಲ್ ಜಂಟಿಯಾಗಿ ಸಂಶೋಧಿಸಿದ್ದು ಅದರ ಹೆಸರು ಸೆಕ್ಸ್ ಡಿಟರ್ಮಿನಿಂಗ್ ರಿಜನ್ Y ಜೀನ್. (SRY).


ಗರ್ಭಧಾರಣೆಯಾಗುವಾಗ 'X' ವರ್ಣತಂತುವನ್ನು ಹೊಂದಿದ ಅಂಡಾಣು 'X' ಅಥವಾ 'Y' ವರ್ಣತಂತುವನ್ನು ಹೊಂದಿದ ವೀರ್ಯಾಣುವಿನೊಂದಿಗೆ ಸಂಯೋಗ ಹೊಂದುತ್ತದೆ. ಎರಡು ಎಕ್ಸ್ (XX) ವರ್ಣತಂತುವಿನ ಭ್ರೂಣ ಹೆಣ್ಣಾದರೆ, XY ವರ್ಣತಂತುವಿನ ಭ್ರೂಣ ಗಂಡಾಗುತ್ತದೆ. ಅಪರೂಪಕ್ಕೆ ಎರಡು ಎಕ್ಸ್ ವರ್ಣತಂತುಗಳನ್ನು ಹೊಂದಿದ ಗಂಡಸರು ಸಿಗುತ್ತಾರೆ(XXY). ಮೊದಲಿನ ಎಂಟು ವಾರಗಳ ವರೆಗೆ ಭ್ರೂಣದಲ್ಲಿ ಲಿಂಗ ಬದಲಾವಣೆಗಳು ಕಂಡು ಬರುವುದಿಲ್ಲ. ಎಂಟು ವಾರಗಳ ನಂತರ ವೃಷಣ ಅಂಕುರಗೊ

ಳ್ಳುವುದು. ಆದ್ದರಿಂದ ಎಂಟು ವಾರಗಳ ಪೂರ್ವದಲ್ಲಿSRY ಜೀನ್‌ನ್ನು ಭ್ರೂಣದಲ್ಲಿಸೇರಿಸಿದರೆ ಆ ಭ್ರೂಣ ಗಂಡಾಗಿ ರೂಪಿತಗೊಳ್ಳುವುದು. ಇದು ಕೇವಲ ಸಿದ್ಧಾಂತವಾಗಿ ಉಳಿದಿಲ್ಲ. ಇಲಿ ಮತ್ತು ಮಂಗಗಳ ಮೇಲೆ ಪ್ರಯೋಗ ಮಾಡಿ ಸಕಾರಾತ್ಮಕ ಫಲಿತಾಂಶಗಳನ್ನು ಈಗಾಗಲೇ ಪಡೆಯಲಾಗಿದೆ. ಅನುವಂಶಿಕ ಶಾಸ್ತ್ರವು ಬೇಕಾದ ಗುಣಲಕ್ಷಣಗಳಿರುವ ಮಕ್ಕಳನ್ನು ಪಡೆಯುವ ಅವಕಾಶವನ್ನು ಸಹ ಒದಗಿಸಿದೆ. ಮುಂಬರುವ ದಿನಗಳಲ್ಲಿ 'ಜೀನ್ ರಿಪೇರ್ ಕ್ಲಿನಿಕ್‌ಗಳು' ಹುಟ್ಟಿಕೊಳ್ಳಬಹುದು. ''ಗ್ರಹಗತಿಗಳ ಮೇಲೆ ನಮ್ಮ ಹಣೆಬರಹ ರೂಪಿತಗೊಳ್ಳುವುದೆಂದು ನಾವು ಇಲ್ಲಿಯವರೆಗೆ ಭಾವಿಸಿದ್ದೆವು. ಇದು ತಪ್ಪು. ನಮ್ಮಲ್ಲಿಯ ಜೀನ್‌ಗಳ ಮೇಲೆ ಇದು ಅವಲಂಬಿತವಾಗಿರುವುದು ಶಾಸ್ತ್ರೋಕ್ತ ಸತ್ಯ'' ಎಂದು ಜೇಮ್ಸ್ ವಾಟ್ಸನ್ ಹೇಳಿರುವುದು ಔಚಿತ್ಯಪೂರ್ಣವಾಗಿದೆ.

ಅನುವಂಶೀಯವಾಗಿ ಹರಡುವ ಇತರ ಕಾಯಿಲೆಗಳು

ಮಧುಮೇಹ, ಥೆಲಿಸೀಮಿಯಾ, ಅಸ್ತಮಾ, ಅರ್ಬುದ, ಕಣ್ಣಪೊರೆ, ಹೃದ್ರೋಗ, ಕಿವುಡುತನ, ದೂರದೃಷ್ಟಿ, ಸಮೀಪದೃಷ್ಟಿ, ದುರ್ಬಲ ಅಸ್ಥಿ, ಅಲ್ಜೆ ಹೆಮ್ಸ್‌ರೋಗ, ಸೀಳಂಗಳ, ಸಿಸ್ಟಿಕ್ ಫೈಬ್ರೊಸಿಸ್, ಪುಪ್ಪುಸ, ಸ್ತನ ಮತ್ತು ಕರುಳಿನ ಗಡ್ಡೆಗಳು ಮುಂತಾದವು ಅನುವಂಶೀಯವಾಗಿ ಬರಬಲ್ಲ ಕಾಯಿಲೆಗಳು. ಮನೋದೌರ್ಬಲ್ಯ ಕೂಡ ಪೀಳಿಗೆಯಿಂದ ಪೀಳಿಗೆಗೆ ಮುಂದುವರೆಯುತ್ತದೆ. ದುರ್ಬಲ ಮನಸ್ಸಿನವರ ಕುಟುಂಬಗಳಲ್ಲಿ ಹುಚ್ಚರ ಸಂಖ್ಯೆ ಅಧಿಕವಾಗಲು ಅನುವಂಶೀಯ ಗುಣವೇ ಕಾರಣ.

ಕೋಟ್ಯಂತರ ಜನಸಂಖ್ಯೆಯ ಈ ಭೂಮಿಯ ಮೇಲೆ ಶೇಕಡಾ ೨ರಷ್ಟು ಶಿಶುಗಳು ವಂಶವಾಹಿ ರೋಗವನ್ನು ಹೊತ್ತುಕೊಂಡೇ ಹುಟ್ಟುತ್ತವೆ. ಅವುಗಳಲ್ಲಿ ಐದನೆ ಒಂದು



ಪಾಲಿನಷ್ಟು ಶಿಶುಗಳು ಹುಟ್ಟುತ್ತಲೇ ಮರಣಕ್ಕೀಡಾಗುತ್ತವೆ. ವಂಶಾವಾಹಿ ನ್ಯೂನತೆಯಿಂದಾಗಿ ಬೆಳೆಯುತ್ತಿರುವ ಭ್ರೂಣಗಳು ಪ್ರಪಂಚದಾದ್ಯಂತ 5% ಗರ್ಭ ಸ್ರಾವಕ್ಕೊಳಗಾಗುತ್ತವೆ. ಮುಂದುವರೆದ ದೇಶಗಳಲ್ಲಿ ಪ್ರತಿ ಐದರಲ್ಲಿ ಒಂದು ಹಾಸಿಗೆಯು ತಳಿಜನಕ ನ್ಯೂನತೆಯನ್ನು ಪಡೆದ ಮಗುವಿನಿಂದ ತುಂಬಿರುವುದೆಂದು ಅಂದಾಜು ಮಾಡಲಾಗಿದೆ. ಈ ಎಲ್ಲ ಶಿಶುಗಳಲ್ಲಿ ಅರ್ಧಪಾಲಿನಷ್ಟು ಶಿಶುಗಳು ವಂಶವಾಹಿ ರೋಗದಿಂದಾಗಿ ಕುರುಡು ಮತ್ತು ಕಿವುಡುತನಗಳಿಗೆ ಗುರಿಯಾಗುತ್ತವೆ. ನವೀನ ವೈದ್ಯಕೀಯ ವಿಭಾಗದಲ್ಲಿ 2000ಕ್ಕಿಂತಲೂ ಹೆಚ್ಚು ವಂಶಾವಾಹಿ ರೋಗಗಳು ಗುರುತಿಸಲ್ಪಟ್ಟಿವೆ.

ಈಗಿನ ಜೀವತಾಂತ್ರಿಕ ವಿಧಾನಗಳಿಂದ ತನುವಿನ ಜೀವಕೋಶಗಳು-ಚರ್ಮದ ಜೀವಕೋಶಗಳ ಮತ್ತು ಅಸ್ಥಿಮಜ್ಜೆಯ ಜೀವಕೋಶಗಳೊಳಗೆ ಪ್ರತಿರೂಪಿ ಪುನರುತ್ಪಾದಕ ಗುಣಾಣುಗಳನ್ನು ಸೇರಿಸಬಹುದು. ಈ ಗುಣಾಣುಗಳು ದೃಢವಾಗಿದ್ದು ವಿಕೃತವಾದ ಜೀವಕೋಶಗಳೊಳಗಿನ ನ್ಯೂನಗುಣಾಣುಗಳಿಗೆ ವಿರುದ್ಧವಾಗಿ ವರ್ತಿಸಿ ಆರೋಗ್ಯಯುತವಾದ ರೀತಿಯಲ್ಲಿ ಕಾರ್ಯನಿರ್ವಹಿಸುತ್ತವೆ. ಮಾನವನ ಸಂತಾನ ಜನಕ ಜೀವಕೋಶ(ಅಂಡಾಣು, ವೀರ್ಯಾಣು)ಗಳೊಳಕ್ಕೆ ಪ್ರತಿರೂಪ ಪುನರುತ್ಪಾದಕಗಳನ್ನು ಸೇರಿಸುವುದು ಈ ದಶಕದೊಳಗೆ ಸಾಧ್ಯವಾದರೆ ರೋಗಪೀಡಿತ ವ್ಯಕ್ತಿಯ ಮುಂದಿನ ಸಂತಾನದಲ್ಲಿ ಆ ನ್ಯೂನತೆಗಳು ಮುಂದುವರೆಯದಂತೆ ಮಾಡಲು ಸಾಧ್ಯವಾಗುವುದು. ಮಾನವನ ಲೈಂಗಿಕ ಜೀವಕೋಶಗಳ ಮೂಲಕ ಅವನ ಮುಂದಿನ ಸಂತಾನವನ್ನು ಉತ್ತಮಗೊಳಿಸುವ ಯೋಜನೆಗಳನ್ನು ರೂಪಿಸಬಹುದು. ಬುದ್ಧಿವಂತಿಕೆಯ ಮೇಲೆ ಪರಿಣಾಮ ಬೀರುವ ಗುಣಾಣುಗಳನ್ನು, ದೇಹದ ಆಕರ್ಷಕ ಆಕಾರದ ಮೇಲೆ ಪರಿಣಾಮ ಬೀರುವ ಗುಣಾಣುಗಳನ್ನು ಮುಂದಿನ ದಶಕದಲ್ಲಿ ಕಂಡು ಹಿಡಿಯುವ ಸಾಧ್ಯತೆಯಿದೆ. ಆದರೆ ಆ ಪಯಣ ಹೆಚ್ಚು ಕಷ್ಟಸಾಧ್ಯವಾಗಿರುವುದೆಂದು ರಾಬರ್ಟ್ ಎ. ವೆಯನ್ ಬರ್ಗ್‌ರವರು ಹೇಳುತ್ತಾರೆ. ಅಕಸ್ಮಾತ್ ಅದು ಸಾಧ್ಯವಾದರೆ ಯಾವುದೇ ವ್ಯಕ್ತಿಯ ಮುಂದಿನ ಸಂತತಿಯು ನಿಸ್ಸಂದಿಗ್ಧವಾಗಿ ಪ್ರತಿಭಾಯುಕ್ತ ಹಾಗೂ ಸುರೂಪವುಳ್ಳದ್ದಾಗಿರಲು ಸಾಧ್ಯ. ಹೆಚ್ಚು ವೆಚ್ಚದ ಪರೀಕ್ಷೆಗಳಿಗಿಂತ ಅವರ ವಂಶಚಾರಿತ್ರ್ಯವನ್ನು ತಿಳಿದು ಇದರ ಮೂಲಕ ಸರಿಯಾದ ರೋಗ ಪರೀಕ್ಷೆಯನ್ನು ಮಾಡಲು ಸಾಧ್ಯ. ಇದೇ ರೀತಿ ಮುಂದುವರೆದ ಸಂಶೋಧನೆಗಳಿಂದ ನಾವು ಅನುವಂಶಿಕ ರೋಗಗಳನ್ನು ತಡೆಯಬಹುದಾಗಿದೆ. ಸುಸಂತತಿಗೆ (Eugenics) ಸೋಪಾನ ಹಾಕಬಹುದಾಗಿದೆ. ಅನುವಂಶೀಯ ನಿಯಮಗಳು ಮಾನವನನ್ನು ಅವನ ಕಲ್ಯಾಣದೆಡೆಗೆ ಕರೆದೊಯ್ಯುವ ಆಶಾಜ್ಯೋತಿಯಾಗಿವೆ. ●

Printed and Published by **B.S.SAVANOOR** on behalf of Loka Shikshana Trust at 'Samyukta Karnataka Press', Koppikar Road, Hubli - 580020. (Phone: 64303): No. 2, Residency Road, Bangalore - 560025 (Phone: 213265)

Managing Editor: K.SHAMARAO

Registered with the Registrar of Newspapers for India under No. 3633/57

ASTURI, Kannada Digest Reg.No KRNG-43, Licence No L 2120/WPP No.33 Price: Rs. 5.00

